ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 2
ಸಂಚಿಕೆ 2
ಏಪ್ರಿಲ್ – ಜೂನ್ 1973

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore.
Vol. 2. No. 2. April-June 1973. pp. 176+iv.

Chief Editor: Dr. G. S. Sivarudrappa

ವಾರ್ಷಿಕ ಚಂದಾ : ರೂ. 6-00
ರೂ. 4-00 [ವಿದ್ಯಾರ್ಥಿಗಳಿಗೆ]

ಪ್ರಕಾಶಕರು : ಕೆ. ಸಿ. ಶಿವಪ್ಪ
ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560039

ಮುದ್ರಕರು : ಎಂ. ಎಸ್. ಚಿಂತಾಮಣಿ, ಈಸ್ಟರ್ನ್ ಪ್ರೆಸ್, ಬೆಂಗಳೂರು-560029

ಪರಿವಿಡಿ

ಕವನ ಹುಟ್ಟುವ ಸಮಯ (ಕವನ) 1

ಕೆ. ಎಸ್. ನ.

ಅಗ್ನಿ ಪುರಾಣದಲ್ಲಿ ಕಾವ್ಯ ಮೀಮಾಂಸೆ 2

ರಂ. ಶ್ರೀ. ಮುಗಳಿ

ವಿಕ್ರಮೋರ್ವಶೀಯದಲ್ಲಿ ನಾಲ್ಕನೆಯ ಅಂಕದ ಪ್ರಕ್ಷಿಪ್ತ ಭಾಗಗಳು 14

ಸಿ. ರಾಮನಾಥನ್

ಇದ್ದಂತೆ ನೀನು ಬಾ (ಕವನ) 22

ನಾಗಲಕ್ಷ್ಮಿ ಹರಿಹರೇಶ್ವರ

ಕವಿರಾಜಮಾರ್ಗದಲ್ಲಿ ಕಾರಕ ವಿಚಾರ 24

ಎ. ಕೃಷ್ಣಸ್ವಾಮಿ ಅಯ್ಯಂಗಾರ್

ಹಾಯಿ (ಕವನ) 44

ಮೇಗರವಳ್ಳಿ ರಮೇಶ್

ಸಮಾಜವಾದ 46

ಟಿ ಕೆ. ಲಕ್ಷ್ಮಣ್

ಉಂಗುರ (ಕವನ) 54

ಶಶಿಧರ ಕುಲಕರ್ಣಿ

ಕನ್ನಡ ಗ್ರಂಥಸೂಚಿ-ಸಂಪುಟ 1 : ಒಂದು ವಿಮರ್ಶೆ 55

ಎಂ. ಚಿದಾನಂದಮೂರ್ತಿ

ಸೀಮಾಬದ್ಧ (ಕವನ) 61

ಜಯಸುದರ್ಶನ

ಸಂಸ್ಕೃತ ಸಾಹಿತ್ಯ ವಿಮರ್ಶೆ ಮತ್ತು ನವ್ಯ ವಿಮರ್ಶೆ 63

ಎನ್. ಬಾಲಸುಬ್ರಹ್ಮಣ್ಯ

ಕಲಸು (ಕವನ) 74

ಎನ್. ವಿ. ಭಾಗ್ಯಲಕ್ಷ್ಮಿ

ಬಳ್ಳಿಗಾವೆಯ ಕೋಡಿಮಠ 75

ದೇವರಕೊಂಡರೆಡ್ಡಿ

ಅನಿಷೇಕಜನನ 86
ಬ. ನಂ. ಚೋಳೇಗೌಡ

ಕದಂಬರ ವಂಶಮೂಲ-ಒಂದು ಜಿಜ್ಞಾಸೆ 124
ಎಚ್. ವಿ. ಶ್ರೀನಿವಾಸಮೂರ್ತಿ

ಬೈಜಿಕ ಕಾಂತತ್ವ ಮತ್ತು ಬೈಜಿಕ ಕಾಂತ ಅನುನಾದ 129
ಎಸ್. ವಿ. ಭಟ್

ಇಂಗ್ಲಿಷ್ ಭಾಷೆ: ಹುಟ್ಟು-ಬೆಳವಣಿಗೆ
(ಅಮೆರಿಕನ್ ಇಂಗ್ಲಿಷೂ ಸೇರಿ) 145
ಎಸ್. ಕೃಷ್ಣಭಟ್

ಮಂಥನ

1. ಲಾವಣಿ: ಒಂದು ಸ್ಪಷ್ಟನೆ 151
ಎಂ. ಎಂ. ಕಲಬುರ್ಗಿ

2. ಕಾವ್ಯಾವಲೋಕನದ ಒಂದು ಪದ್ಯ 153
ಹಂಪ. ನಾಗರಾಜಯ್ಯ

3. ಸಾಂಗತ್ಯ-ಷಟ್ಪದ 156
ಎಚ್. ದೇವೀರಪ್ಪ

ಪಂಪನನ್ನು ಕುರಿತ ವಿಚಾರ ಸಂಕಿರಣ 167

ಈ ಸಂಚಿಕೆಯ ಲೇಖಕರು 174

ಕವನ ಹುಟ್ಟುವ ಸಮಯ

ಕೆ. ಎಸ್. ನ.

ಬಿದಿರ ತಡಿಕೆಯ ಹಿಂದೆ ಬಿಚ್ಚಲಾಗದ ಕಣ್ಣು
'ಕವನ ಹುಟ್ಟಿತೆ?' ಎಂದು ಕೇಳುತ್ತಿದೆ,
ನಾನೀಗ ತುಟಿಯಂಚಿನಲ್ಲಿ ಹೇಳಿದ್ದಿಷ್ಟೆ:
"ಇನ್ನೊಂದು ದಿವಸ ಕಾದರೆ ನಷ್ಟವೆ?

ಅನುಭವದ ಆಯ್ಕೆ ಮುಗಿದಿತ್ತು. ಒದಗಿರಲಿಲ್ಲ
ತಕ್ಕಂಥ ಮಾತು. ಕಾಯುತ್ತ ನಿಂತೆ,
ಅಬ್ಬರಗಳನ್ನು ದಾಟಿದ ಗಟ್ಟಿ ಪಂಕ್ತಿಗಳ
ಸಹಜ ಸಂಚಾರಗಳ ಕನಸ ಕಂಡೆ.

ಆಳದನುಭವವನ್ನು ಮಾತು ಕೈ ಹಿಡಿದಾಗ,
ಕಾವು ಬೆಳಕಾದಾಗ, ಒಂದು ಕವನ.
ನಾನು ಬಯಲಿಗೆ ಬಂದು ಕಾದು ನಿಂತಿದ್ದೇನೆ;
ಬರುವುದಿದೆ ಸರಿಯಾದ ವರ್ತಮಾನ.

"ಇಂಥ ಅಂಗಡಿಯಲ್ಲಿ ಈ ಮಾತಿಗಿಷ್ಟೆ ಬೆಲೆ
ಎನ್ನುವುದು ಮೊದಲು ಗೊತ್ತಾಗಲಿಲ್ಲ,
ಒಂದೊಂದು ಮಾತಿಗೊಂದೊಂದು ಇತಿಹಾಸವಿದೆ;
ನಾನು ಬೇರಿನ ತನಕ ಹೋಗಲಿಲ್ಲ.

ಕಾಯುವುದು ಕಷ್ಟವೂ ಅಲ್ಲ, ನಕ್ಷತ್ರಗಳು
ಆದಿಯಿಂದಲು ಹೀಗೆ ಕಾಯುತ್ತಿವೆ.
ಕವನ ಹುಟ್ಟುವ ಸಮಯದಲ್ಲಿ ನನ್ನಿಂದಲೇ
ಆಗಬೇಕಾದ್ದಿಲ್ಲಿ ನೂರಾರಿವೆ. —

ನನ್ನ ತೊಡಕುಗಳನ್ನೆ ಅರಿಯದೆ ಪರೀಧಾವಿ
ಧಾವಿಸುತ್ತಿದೆ ತನ್ನ ಶಿಶಿರದೆಡೆಗೆ.
ಅಶರೀರ ಭಾವಕ್ಕೆ ಇಷ್ಟರೂಪವ ಕೊಡಿಸಿ
ಕಳಿಸಿ ಕೊಡಲಾದೀತೆ ನಾಳೆಯೊಳಗೆ?

ಅಗ್ನಿಪುರಾಣದಲ್ಲಿ ಕಾವ್ಯ ಮೀಮಾಂಸೆ

ರಂ. ಶ್ರೀ. ಮುಗಳಿ

ಅಗ್ನಿಪುರಾಣವು ಈಗಿರುವ ಸ್ವರೂಪದಲ್ಲಿ ಬಹು ವಿಷಯ–ಸಾರಸಂಗ್ರಹವಾದ ವಿಶ್ವಕೋಶದಂತಿದೆ. ಪರಾ, ಅಪರಾ ಈ ಎರಡು ವಿದ್ಯೆಗಳಲ್ಲದೆ ಸರ್ವ ವಿದ್ಯೆಗಳೂ ಇದರಲ್ಲಿ ಪ್ರದರ್ಶಿತವಾಗಿದೆಯೆಂದು ಈ ಪುರಾಣದ ಕೊನೆಯ ಅಧ್ಯಾಯದಲ್ಲಿ ಹೇಳಿದೆ. ದಶಾವತಾರ, ರಾಮಾಯಣ, ಹರಿವಂಶ, ಭಾರತ, ಆಗಮ ಮುಂತಾದ ತಾತ್ವಿಕ, ಧಾರ್ಮಿಕ, ಲೌಕಿಕ ವಿಷಯಗಳನ್ನು ಈ ಪುರಾಣವು ಒಳಗೊಂಡಿದೆ. ಇದರಲ್ಲಿ ಕಾವ್ಯಾಂಗಗಳಾದ ಛಂದಸ್ಸು, ವ್ಯಾಕರಣ, ಅಲಂಕಾರ, ನಿಘಂಟು, ಶಿಕ್ಷಾ, ಕಲ್ಪ ಇವಲ್ಲದೆ ಕಾವ್ಯಲಕ್ಷಣ, ರಸ ಸ್ವರೂಪ ಮುಂತಾದ ವಿಷಯಗಳೂ ಬಂದಿವೆ. ಈ ಲೇಖನವು ಕಾವ್ಯಮೀಮಾಂಸೆಗೆ ಸೀಮಿತವಾದ ಕಾರಣ **337–347** ಈ ಅಧ್ಯಾಯಗಳಲ್ಲಿ ಅಡಕವಾಗಿರುವ ಪ್ರಮುಖ ಅಂಶಗಳನ್ನು ಎತ್ತಿ ತೋರಿಸುವುದು ಇದರ ಉದ್ದೇಶವಾಗಿದೆ.[1] ಸೀಮಿತವಾದ ಈ ವಿವೇಚನೆಯಲ್ಲಿಯೂ ಅಗ್ನಿಪುರಾಣದ ಪ್ರಾಚೀನ ಮೂಲ, ಕಾಲವಿಚಾರ, ಅಗ್ನಿಪುರಾಣದ ಕಾವ್ಯ ಮೀಮಾಂಸಾ ಭಾಗಕ್ಕೂ ಸಂಸ್ಕೃತ ಆಲಂಕಾರಿಕರ ಕಾವ್ಯಮೀಮಾಂಸೆಗೂ ಇರುವ ಸಂಬಂಧ ಮುಂತಾದ ವಿಷಯಗಳ ಸಮಾವೇಶವಾಗುತ್ತದೆ. ಅಗ್ನಿಪುರಾಣದ ಪಠ್ಯದಲ್ಲಿ ಪದರುಗಳೂ ಕಲಬೆರಕೆಗಳೂ ಇದ್ದಿರುವ ಸಂಭವವಿರುವುದರಿಂದ ಅವು ಸಹ ಚರ್ಚೆಗೆ ಒಳಗಾಗುತ್ತವೆ. ಆದರೆ ಇಂಥ ಆನುಷಂಗಿಕ ವಿಷಯಗಳ ಕೂಲಂಕಷವಾದ ವಿವೇಚನೆಯನ್ನು ಕೈಕೊಳ್ಳದೆ ಕೆಲವು ಅಧಿಕಾರಿ ವಿದ್ವಾಂಸರ ಅಭಿಪ್ರಾಯಗಳನ್ನು ಸಂಗ್ರಹವಾಗಿ ನಿರೂಪಿಸಿ ನಾವು ನಮ್ಮ ಪ್ರತಿಕ್ರಿಯೆಗಳನ್ನು ತಿಳಿಸಲು ಪ್ರಯತ್ನಿಸುತ್ತೇವೆ. ಮುಖ್ಯವಾಗಿ ಅಗ್ನಿಪುರಾಣದ ಕಾವ್ಯಮೀಮಾಂಸೆಯಲ್ಲಿ ಗಮನಿಸಬೇಕಾದ ಅಂಶಗಳ ವಿವರಣೆಯನ್ನು ಮಾಡಬಯಸುತ್ತೇವೆ.

ಅಗ್ನಿಪುರಾಣವು ಅತ್ಯಂತ ಪ್ರಾಚೀನವಾದ ಪುರಾಣಗಳಲ್ಲಿ ಒಂದೆಂಬ ತಿಳುವಳಿಕೆ ಹಿಂದೆ ಇತ್ತು. ಆದರೆ ಪ್ರಚಲಿತ ಸ್ವರೂಪದಲ್ಲಿ ಅದು ಪ್ರಾಚೀನವಾದುದಲ್ಲ, ಮಧ್ಯಯುಗೀನವಾದ ಕೃತಿ ಎಂಬ ಅಭಿಪ್ರಾಯವನ್ನು ಆಧುನಿಕ ವಿದ್ವಾಂಸರು ಸಾಧಾರಣವಾಗಿ ವ್ಯಕ್ತಪಡಿಸಿದ್ದಾರೆ. ಸಂಸ್ಕೃತ ಅಲಂಕಾರ ಶಾಸ್ತ್ರದ ಇತಿಹಾಸವನ್ನು ಅಧಿಕಾರಯುತ

---

1. ಕ್ರಿ. ಶ. 1900 ರಲ್ಲಿ ಪ್ರಕಟವಾದ ಆನಂದಾಶ್ರಮ ಸಂಸ್ಕೃತ ಗ್ರಂಥಾವಲಿಯ ಅಗ್ನಿಪುರಾಣದ ಆವೃತ್ತಿಯನ್ನು ಈ ಲೇಖನದಲ್ಲಿ ಉಪಯೋಗಿಸಲಾಗಿದೆ.

ವಾಗಿ ಬರೆದಿರುವ ಪಿ. ವಿ. ಕಾಣೆಯವರು ಇವರಲ್ಲಿ ಒಬ್ಬರು. ಅವರ ಅಭಿಪ್ರಾಯದ ಸಾರ ಹೀಗಿದೆ: ಕೆಲವು ಪುರಾಣಗಳ ಪ್ರಕಾರ ಅಗ್ನಿಪುರಾಣವು 16,000 ಶ್ಲೋಕಗಳುಳ್ಳದಾಗಿತ್ತು. ಪ್ರಚಲಿತ ಅಗ್ನಿಪುರಾಣದಲ್ಲಿ 12,000 ಶ್ಲೋಕಗಳು ಮಾತ್ರ ಇರುತ್ತವೆ. ಮೂಲ ಅಗ್ನಿಪುರಾಣದಲ್ಲಿದ್ದ ಭಾಗಗಳು ಯಾವುವು, ಅಮೇಲೆ ಪ್ರಕ್ಷಿಪ್ತ ಭಾಗಗಳು ಯಾವುವು ಎಂಬುದನ್ನು ನಿರ್ಧರಿಸಲು ಯಾವ ಆಧಾರಗಳೂ ಇಲ್ಲ. ಮಮ್ಮಟನ ಕಾವ್ಯ ಪ್ರಕಾಶಕ್ಕೆ ಬರೆದ ತನ್ನ ಟೀಕೆಯಲ್ಲಿ ಮಹೇಶ್ವರನು ಅಗ್ನಿಪುರಾಣವು ಭರತನಾಟ್ಯಶಾಸ್ತ್ರಕ್ಕಿಂತ ಪೂರ್ವದಲ್ಲಿದ್ದಿತೆಂದು ಉಲ್ಲೇಖ ಮಾಡಿದ್ದಾನೆ. ಅದರಿಂದ ಉದ್ಧೃತಿಗಳನ್ನು ತೆಗೆದುಕೊಂಡು ರಾಜಕುಮಾರರ ವ್ಯಾಸಂಗಕ್ಕಾಗಿ ಭರತಮುನಿ ಅಲಂಕಾರ ಶಾಸ್ತ್ರವನ್ನು ರಚಿಸಿದನೆಂದು ಅವನ ಹೇಳಿಕೆ. ಅದೇ ರೀತಿ, ವಿದ್ಯಾಭೂಷಣನ ಸಾಹಿತ್ಯ ಕೌಮುದಿಯ ಟೀಕೆಯಲ್ಲಿಯೂ ವಹ್ನಿಪುರಾಣವೊಂದರ ಆಧಾರದಿಂದ ಭರತನು ಸಾಹಿತ್ಯ ಪ್ರಕ್ರಿಯೆಯನ್ನು ನಿರೂಪಿಸಿದನೆಂದು ಹೇಳಿದೆ. ಇವೆರಡೂ ಟೀಕೆಗಳು ಅಗ್ನಿಪುರಾಣ ಮತ್ತು ವಹ್ನಿಪುರಾಣಗಳಲ್ಲಿ ಯಾವ ವ್ಯತ್ಯಾಸವನ್ನೂ ಕಲ್ಪಿಸಿದಂತೆ ಕಾಣುವುದಿಲ್ಲ. ಆದರೆ ಪ್ರಚಲಿತವಾದ ಅಗ್ನಿಪುರಾಣದಿಂದ ಬೇರೆಯಾದ ವಹ್ನಿಪುರಾಣವಿರುವುದೆಂದು ಕೆಲವು ಆಧಾರಗಳಿಂದ ತಿಳಿದು ಬಂದಿದೆ. ಇದರಿಂದ ಹಳೆಯ ಅಗ್ನಿಪುರಾಣವು ಪುನರ್ರಚಿತವಾಯಿತೆಂದೂ ಅಮೇಲೆ ಅದಕ್ಕೆ ಈಗಿನ ರೂಪವು ಬಂದಿತೆಂದೂ ತೋರುತ್ತದೆ. ಈ ಪುರಾಣದ ಕಾಲ ನಿರ್ಧಾರಕ್ಕೆ ಇದರಮೇಲೆ ಪ್ರಭಾವ ಬೀರಿದ ಗ್ರಂಥಗಳನ್ನು ಗಮನಿಸಬೇಕಾಗುತ್ತದೆ. ರಾಮಾಯಣ, ಹರಿವಂಶ, ಭಗವದ್ಗೀತೆಗಳಲ್ಲದೆ ಅಮರಕೋಶದಿಂದಲೂ ಇದು ಉಪಕೃತವಾಗಿದೆ. ಅಮರ ಕೋಶವು ಕ್ರಿ. ಶ. 6 ಅಥವಾ 7 ಕ್ಕಿಂತ ಮುಂಚಿನದಾಗಿರಲಾರದು ಎಂದ ಮೇಲೆ ಅಗ್ನಿಪುರಾಣದ ಕಾಲವು ಅದರ ತರುವಾಯದ್ದಾಗುತ್ತದೆ.

ಅಗ್ನಿಪುರಾಣದಲ್ಲಿ ಭರತನ ಉಲ್ಲೇಖವಿರುವುದಲ್ಲದೆ ಅವನ ನಾಟ್ಯ ಶಾಸ್ತ್ರದಿಂದ ಎತ್ತಿಕೊಂಡಿರಬಹುದಾದ ಅನೇಕ ಪದ್ಯಗಳಿರುತ್ತವೆ. ಕೆಲವು ಅಲಂಕಾರಗಳ ಲಕ್ಷಣಗಳೂ ಉಕ್ತಿಗಳೂ ದಂಡಿಯ ಕಾವ್ಯಾದರ್ಶವನ್ನು ಅನುಕರಿಸಿ ಬಂದಿವೆ. ಅದೇ ರೀತಿ ಕೆಲವು ಅಲಂಕಾರ ಲಕ್ಷಣಗಳು ಭಾಮಹನ ಕಾವ್ಯಾಲಂಕಾರಕ್ಕೆ ಬಹುಶಃ ಸಂವಾದಿಯಾಗಿರುತ್ತವೆ. ಧ್ವನ್ಯಾಲೋಕದಲ್ಲಿ ಪ್ರತಿಪಾದಿತವಾದ ಧ್ವನಿತತ್ತ್ವವು ಅಗ್ನಿಪುರಾಣಕಾರನಿಗೆ ಗೊತ್ತಿರಬೇಕೆಂದು ತೋರುತ್ತದೆ. ಅಲ್ಲದೆ 339ನೇ ಅಧ್ಯಾಯದ 10–11 ಈ ಅಗ್ನಿಪುರಾಣದ ಪದ್ಯಗಳು ಆನಂದವರ್ಧನನ ಧ್ವನ್ಯಾಲೋಕದಲ್ಲಿಯೂ ಇರುತ್ತವೆ. ಆನಂದವರ್ಧನನೇ ಅಗ್ನಿಪುರಾಣದಿಂದ ಇವನ್ನು ಎರವಲಾಗಿ ತೆಗೆದುಕೊಂಡಿರಬೇಕೆಂದು ಸಬಲಕಾರಣವಿಲ್ಲದೆ ಡಾ. ಎಸ್. ಕೆ. ಡೇ ಅವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಧ್ವನಿತತ್ತ್ವವನ್ನಲ್ಲದೆ ಈ ಪದ್ಯಗಳನ್ನೂ ಅಗ್ನಿಪುರಾಣಕಾರನು ಧ್ವನ್ಯಾಲೋಕದಿಂದಲೇ ಎತ್ತಿಕೊಂಡಿರಬೇಕೆಂಬುದು ಸಯುಕ್ತಿಕವಾಗಿದೆ. ಭೋಜನು ತನ್ನ ಸರಸ್ವತೀಕಂಠಾಭರಣ ಮತ್ತು ಶೃಂಗಾರ ಪ್ರಕಾಶದಲ್ಲಿ ವಿಸ್ತಾರವಾಗಿ ಪ್ರತಿಪಾದಿಸಿದ ರಸಸಿದ್ಧಾಂತವನ್ನು ಅಗ್ನಿಪುರಾಣವು ಸಂಕ್ಷಿಪ್ತ

ವಾಗಿ ನಿರೂಪಿಸಿದೆ. ಅಗ್ನಿಪುರಾಣದ ಕಲಸುಮೇಲೋಗರವಾದ ಪದ್ಯಗಳಿಂದ ಭೋಜನು ಸ್ಫೂರ್ತಿಹೊಂದಿ ತನ್ನ ಸಿಂದ್ಧಾಂತವನ್ನು ರಚಿಸಿಕೊಂಡನೆಂದು ಡಾ. ಡೇಯವರ ಹಾಗೆ ನಂಬುವುದು ಸಾಧ್ಯವಿಲ್ಲ. ಒಟ್ಟಿನಲ್ಲಿ ಅಗ್ನಿಪುರಾಣವು ಕ್ರಿ. ಶ. 7ನೆಯ ಶತಕದ ತರುವಾಯ ರಚಿತವಾದದ್ದೆಂದೂ ಅದರಲ್ಲಿಯ ಕಾವ್ಯಮೀಮಾಂಸಾಭಾಗವು ಕ್ರಿ. ಶ. 900 ರ ಸುಮಾರಿಗೆ ಬಹುಶಃ ಕ್ರಿ. ಶ 1050ರಲ್ಲಿ ಬರೆದುದಾಗಿರಬೇಕೆಂದೂ ಮೇಲ್ಕಾಣಿಸಿದ ಆಧಾರಗಳು ತಿಳಿಸುತ್ತವೆ. ಪ್ರಾಚೀನ ಆಲಂಕಾರಿಕರಲ್ಲಿ ಯಾರೂ ಅಗ್ನಿಪುರಾಣವನ್ನು ಉಲ್ಲೇಖಿಸಿಲ್ಲ. ಅದರಿಂದ ಪದ್ಯಗಳನ್ನೂ ಎತ್ತಿಕೊಂಡಿಲ್ಲ. 14ನೆಯ ಶತಕದ ವಿಶ್ವನಾಥನು ತನ್ನ ಸಾಹಿತ್ಯದರ್ಪಣದಲ್ಲಿ ಮೊದಲಸಲ ಕಾವ್ಯಮೀಮಾಂಸೆಗೆ ಅಧಿಕೃತ ಗ್ರಂಥವೆಂದು ಅಗ್ನಿಪುರಾಣವನ್ನು ಹೆಸರಿಸಿ ಅದರಿಂದ ಅವತರಣಿಕೆಗಳನ್ನು ಕೊಟ್ಟಿದ್ದಾನೆ. 12ನೆಯ ಶತಕದ ಧರ್ಮಶಾಸ್ತ್ರಗ್ರಂಥಗಳೂ ಅಗ್ನಿಪುರಾಣವನ್ನು ಉಲ್ಲೇಖಿಸಿರುತ್ತವೆ. ಪುರಾಣಗಳ ಬಗ್ಗೆ ತಮಗಿರುವ ಗೌರವಭಾವದಿಂದ ಪ್ರೇರಿತರಾಗಿ ಕೆಲವರು ಅಗ್ನಿಪುರಾಣವು ಅತ್ಯಂತ ಪ್ರಾಚೀನವಾದ ಅಲಂಕಾರಶಾಸ್ತ್ರ ಗ್ರಂಥವೆಂದು ಭಾವಿಸಿದರು. ಆದರೆ ವಸ್ತುತಃ ಅದು ಭರತ, ಭಾಮಹ, ದಂಡಿ, ಆನಂದವರ್ಧನ, ಭೋಜ ಇವರೆಲ್ಲರ ನಂತರದ ಕಾಲದಲ್ಲಿ ರಚಿತವಾದ ಗ್ರಂಥವಾಗಿದೆ. ಅಲಂಕಾರ ಶಾಸ್ತ್ರವನ್ನು ಕುರಿತು ಮೂಲ, ಪ್ರಾಚೀನ ಗ್ರಂಥವೆಂದು ಹೇಳಿಕೊಳ್ಳಲು ಅದಕ್ಕೆ ಹಕ್ಕಿಲ್ಲ.[2]

ಡಾ. ಕಾಣೆಯವರ ಈ ಅಭಿಪ್ರಾಯವನ್ನು ಗಮನದಲ್ಲಿರಿಸಿ ಅಗ್ನಿಪುರಾಣದ ವಿಚಾರದಲ್ಲಿ ಡಾ. ಡೇಯವರ ಅಭಿಪ್ರಾಯವನ್ನು ಈಗ ತಿಳಿದುಕೊಳ್ಳೋಣ. ಅಗ್ನಿಪುರಾಣಕಾರನು ಕಾವ್ಯ ಮೀಮಾಂಸಾಭಾಗವನ್ನು ಅವರಿಂದ ಇವರಿಂದ ಆಯ್ದುಕೊಂಡು ಜೋಡಿಸಿದ ಬಗೆಯುಲ್ಲಿ ನಿರೂಪಿಸುವ ಪ್ರಯತ್ನಮಾಡಿದ್ದಾನೆ. ಆದರೆ ಅದು ಹೆಚ್ಚು ಪೂರ್ಣವೂ ವ್ಯವಸ್ಥಿತವೂ ಆಗಿದೆ. ಆನಂದವರ್ಧನನ ಕಾಶ್ಮೀರ ಪಂಥಕ್ಕಿಂತ ಬೇರೆಯಾದ ಮತ್ತು ಅದಕ್ಕಿಂತ ಪ್ರಾಚೀನವಾದ ಒಂದು ಪರಂಪರೆಯನ್ನು ಅದು ಅನುಸರಿಸಿದಂತೆ ಕಾಣುತ್ತದೆ. ಹದಿನೆಂಟು ಪುರಾಣಗಳಲ್ಲಿ ಒಂದೆಂದು ಎಣಿಸಲಾದ ಈ ಪುರಾಣದ ಕರ್ತೃತ್ವವು ಸಂದೇಹಗ್ರಸ್ತವಾಗಿರುವಂತೆ ಕಾಲವೂ ಅನಿಶ್ಚಿತವಾಗಿದೆ. ಸದ್ಯದ ಅಗ್ನಿಪುರಾಣವು ಅದಕ್ಕೆ ಮೊದಲಿನ ಮತ್ತು ಮೂಲ ಅಗ್ನಿಪುರಾಣದ ರೂಪಾಂತರವೆಂದೂ ಮತ್ಸ್ಯ ಮತ್ತು ಸ್ಕಂದಪುರಾಣಗಳಲ್ಲಿ ವರ್ಣಿತವಾದ ಹಾಗೂ ಧರ್ಮಶಾಸ್ತ್ರಗಳಲ್ಲಿ ಉದ್ಧೃತವಾದ ಪಠ್ಯವು ಮೂಲ ಅಗ್ನಿಪುರಾಣದ್ದೆಂದೂ ಹೇಳಲಾಗುತ್ತದೆ. ಇದೇನೇ ಇರಲಿ, ಇದರ ಅಲಂಕಾರ ವಿಭಾಗವನ್ನು ನೋಡಿದರೆ ಅದರ ಲೇಖಕನು ಸ್ವತಃ ದೊಡ್ಡ ಸಿದ್ಧಾಂತಿಯಾಗಿರದೆ ಯಾವೊಂದು ವಿಶಿಷ್ಟ ತತ್ತ್ವವನ್ನು ಅನುಸರಿಸದೆ ಎಲ್ಲ ಆಕರಗಳಿಂದ ಸಾಮಗ್ರಿಯನ್ನು ಸಂಕಲಿಸಿ ಒಂದು ಪ್ರಯೋಜನಕಾರಿಯಾದ ಸಾರಾಂಶವನ್ನು ಕೊಡುವ ಸಂಗ್ರಾಹಕನಾಗಿದ್ದನೆಂದು ತಿಳಿಯಲು ಸಾಕಷ್ಟು ಆಧಾರವಿದೆ. ಸಡಿಲಾಗಿ ಜೋಡಿಸಿದ

[2] P. V. Kane: History of Sanskrit Poetics, pp 3–10.

ಮತ್ತು ವಿಮರ್ಶೆಗೆ ಒಳಗಾಗದ ಅದರ ಸ್ವತಂತ್ರ ಕ್ರಮದಿಂದಲೂ ಭರತ, ದಂಡಿ, ಭಾಮಹ ಮತ್ತು ಬಹುಶಃ ಇತರ ಅಜ್ಞಾತ ಪ್ರಾಚೀನ ಲಾಕ್ಷಣಿಕರು ಇವರ ಗ್ರಂಥಗಳಿಂದ ಹೆಕ್ಕಿಕೊಂಡ ಪದ್ಯಗಳಿಂದಲೂ ಇದು ಸ್ಪಷ್ಟವಾಗುತ್ತದೆ. ಆನಂದವರ್ಧನನ ಧ್ವನ್ಯಾಲೋಕದಿಂದ ಎರಡು ಪದ್ಯಗಳನ್ನು ಅಗ್ನಿಪುರಾಣವು ತೆಗೆದುಕೊಂಡಿರಬೇಕೆಂದು ಗ್ರಹಿಸಬಹುದು.[3] ಇಡಿಯಾಗಿ ಈ ಪುರಾಣದ ಕಾಲವಾವುದೇ ಇರಲಿ, ಅದು ಅನೇಕ ಜ್ಞಾನಶಾಖೆಗಳಿಂದ ವಿಷಯಗಳನ್ನು ಸಂಗ್ರಹಿಸಿ ರೂಪಗೊಂಡ ಮಹತ್ವಾಕಾಂಕ್ಷೆಯಾದ ಒಂದು ವಿಶ್ವಕೋಶವಾಗಿದೆ. ಅದರ ಅಲಂಕಾರ ವಿಭಾಗವು 9ನೆಯ ಶತಕಕ್ಕಿಂತ ನಂತರದ್ದೆಂದು ಮಾತ್ರ ಹಿಂದೆ ಹೇಳಿದ ಆಧಾರಗಳಿಂದ ನಾವು ಸಮರ್ಥಿಸಬಹುದು. ಆಕ್ಷೇಪಾಲಂಕಾರದಲ್ಲಿ ಪ್ರಾಸಂಗಿಕವಾಗಿ ಧ್ವನಿವಿಚಾರವನ್ನು ಸೇರಿಸಲಾಗಿದೆ. ಆದರೆ ಅದಕ್ಕೆ ಪ್ರಾಮುಖ್ಯ ಬರುವುದಕ್ಕಿಂತ ಹಿಂದಿನ ಕಾಲದ ಲೇಖಕರಿಂದ ಅದನ್ನು ಸ್ವೀಕರಿಸಬಹುದು. ಆನಂದವರ್ಧನನ ಧ್ವನಿತತ್ತ್ವವು ಅಗ್ನಿಪುರಾಣಕಾರನಿಗೆ ಬಹುಶಃ ಗೊತ್ತಿದ್ದಿತಾದರೂ ಅದನ್ನು ಅವನು ಒಪ್ಪಿರಲಿಲ್ಲವೆಂದು ಕಾಣುತ್ತದೆ.[4]

ಈ ಇಬ್ಬರೂ ವಿದ್ವಾಂಸರ ಅಭಿಪ್ರಾಯಗಳನ್ನು ಮನದಂದು ಅಗ್ನಿಪುರಾಣದ ಪ್ರಚಲಿತ ಸ್ವರೂಪದಲ್ಲಿಯ ಕಾವ್ಯಮೀಮಾಂಸಾಭಾಗವನ್ನು ಪರೀಕ್ಷಿಸಿದರೆ ಅದು ಬೇರೆ ಬೇರೆಯವರ ಕೈವಾಡಕ್ಕೆ ಒಳಗಾಗಿ ಪಡೆದ ಹಳೆಯ ಹೊಸ ಪದರುಗಳ ಜೋಡಣೆಗಳನ್ನೂ ಹೊಂದಲಾರದ ಕಲಬೆರಕೆಗಳನ್ನೂ ಮೊದಲಿಂದ ಕೊನೆಯವರೆಗೆ ಅಲ್ಲಲ್ಲಿ ಕಾಣುತ್ತೇವೆ. ಅನ್ಯಲಾಕ್ಷಣಿಕರ ಅಭಿಪ್ರಾಯಗಳೂ ಉಕ್ತಿಗಳೂ ಇಡಿಯಾಗಿ ಅಥವಾ ಬಿಡಿಯಾಗಿ ತೇಪೆಹಚ್ಚಿದಂತೆ ಬಂದಿರುತ್ತವೆ. ಇದರಿಂದ ಕೆಲವೆಡೆಗೆ ಅರ್ಥವು ಕಷ್ಟವಾಗುತ್ತದೆ. ಉದಾಹರಣೆಗೆ, ಅ. 337ರಲ್ಲಿ ತೀರ ಮೊದಲು 'ಕಾವ್ಯನಾಟಕಾದಿಗಳ ಅಲಂಕಾರಗಳನ್ನು ಹೇಳುತ್ತೇನೆ' ಎಂದಕೂಡಲೆ 'ಧ್ವನಿ, ವರ್ಣ, ಪದ, ವಾಕ್ಯ ಇದೆಲ್ಲ ವಾಙ್ಮಯವೆಂದು ಮತ, ಶಾಸ್ತ್ರ, ಇತಿಹಾಸ, ಕಾವ್ಯ ಈ ಮೂರು ಅದರಲ್ಲಿ ಸಮಾಪ್ತವಾಗುತ್ತದೆ' ಎಂದು ಮುಂತಾದ ಮಾತು ಬಂದಿದೆ. ಅಲಂಕಾರಗಳ ವಿಚಾರ ಈ ಅಧ್ಯಾಯದಲ್ಲಿ ಎಲ್ಲಿಯೂ ಬಂದಿಲ್ಲ. ಮುಂದೆ ಬೇರೆ ಅಧ್ಯಾಯಗಳು ಅದಕ್ಕೆ ಮೀಸಲಾಗಿವೆ. ಕವಿತ್ವದ ಬಗ್ಗೆ ಎರಡು ಮೂರು ಪದ್ಯಗಳಲ್ಲಿ ಹೇಳಿದೊಡನೆ ಇದ್ದಕ್ಕಿದ್ದಹಾಗೆ 'ಆದಿವರ್ಣ, ದ್ವಿತೀಯ, ಮಹಾಪ್ರಾಣ, ತುರೀಯಕ' ಇತ್ಯಾದಿ ವರ್ಣಮಾಲೆಯ ವಿವರಗಳು ನಡುನುಸುಳಿದಿರುತ್ತವೆ. ತಕ್ಷಣ 'ಸಂಕ್ಷೇಪಾತ್ಕಾವ್ಯಂ ಇಷ್ಟಾರ್ಥವ್ಯವಚ್ಛಿನ್ನಾ ಪದಾವಲೀ' ಎಂದೂ 'ಕಾವ್ಯಂ ಸ್ಫುರದಲಂಕಾರಂ ಗುಣವದ್ದೋಷವರ್ಜಿತಂ' ಎಂದೂ ದಂಡಿ ಮುಂತಾದ ಆಲಂಕಾರಿಕರ ಅವತರಣಿಕೆಗಳ ಜೋಡಣೆ ಕಂಡುಬರುತ್ತದೆ. ಮುಂದೆಯೂ ಇಂಥ ಕಲಸು

---

3 1960ರ 2ನೆಯ ಆವೃತ್ತಿಯಲ್ಲಿ ಈ ವಾಕ್ಯವು ಬಂದಿರುವುದರಿಂದ ಡಾ. ಕಾಣೆಯವರ ವಾದವೂ ಡಾ. ಡೇ ಅವರಿಗೆ ಆಮೇಲೆ ಮನವರಿಕೆಯಾಯಿತೆಂದು ಕಾಣುತ್ತದೆ

4 S. K. De: History of Sanskrit Poetics, pp. 97–100.

ಮೇಲ್ಲೋಗರಕ್ಕೆ ಉದಾಹರಣೆಗಳನ್ನು ನೋಡಬಹುದು. ಇಷ್ಟಾದರೂ ಕಾವ್ಯಶಾಸ್ತ್ರಕ್ಕೆ ಸಂಬಂಧಿಸಿದ ಪೂರ್ವಿಕರ ಅಭಿಪ್ರಾಯಗಳ ಮಂಡನೆಯುಳ್ಳ ಬಹುಭಾಗದೊಂದಿಗೆ ಇದರಲ್ಲಿ ಬೆಲೆಯುಳ್ಳ ಸ್ವಲ್ಪ ಸ್ವತಂತ್ರವಿಚಾರಗಳ ಸೇರ್ಪಡೆಯಿದೆ. ಆದರಿಂದಲೇ ಅಗ್ನಿಪುರಾಣದ ಈ ಭಾಗಕ್ಕೆ ಮಹತ್ವವಿದೆ. ಹಾಗೂ ಈ ಪುರಾಣದ ಪ್ರಾಚೀನ ಮೂಲ ಸ್ವರೂಪವೊಂದು ಇರಬೇಕೆಂದೂ ಅದರ ರಚಯಿತನು ವಿಶ್ವಕೋಶದ ರೀತಿಯಲ್ಲಿ ಸಂಕಲನಕಾರನಾಗಿದ್ದಂತೆ ಸ್ವತಂತ್ರ ಪ್ರಜ್ಞಾವಂತನೂ ಆಗಿರಬೇಕೆಂದೂ ನಮಗೆ ತೋರುತ್ತದೆ. ಯಾವುದು ಮೂಲ ಸ್ವರೂಪ, ಯಾವುದು ಆ ಮೇಲಿನ ಆರೋಪ ಎಂಬುದನ್ನು ವಿಂಗಡಿಸಿ ಅರಿತುಕೊಳ್ಳುವುದು ಕಷ್ಟಸಾಧ್ಯ. ಆದರೂ ಕೆಲವು ಊಹೆಗಳನ್ನು ಮಾಡುವುದಕ್ಕೆ ಆಧಾರಗಳಿವೆ ಎಂಬುದನ್ನು ಮುಂದೆ ವಿವರಿಸಲಾಗಿದೆ.

ಇಲ್ಲಿಯ ಕಾವ್ಯಮೀಮಾಂಸೆಯಲ್ಲಿ ಅಡಕವಾಗಿರುವ ವಿಷಯಗಳು ಅನುಕ್ರಮವಾಗಿ ಹೀಗಿರುತ್ತವೆ: ಅಧ್ಯಾಯ 337 ರಲ್ಲಿ ಕಾವ್ಯಾದಿ ಲಕ್ಷಣ. 338 ರಲ್ಲಿ ನಾಟಕ ನಿರೂಪಣ, 339 ರಲ್ಲಿ ಶೃಂಗಾರಾದಿ ರಸ ನಿರೂಪಣ. 340 ರಲ್ಲಿ ರೀತಿ ನಿರೂಪಣ. 341ರಲ್ಲಿ ನೃತ್ಯ ವಿಚಾರ, 342 ರಲ್ಲಿ ಅಭಿನಯಾದಿ ನಿರೂಪಣ. 343 ರಲ್ಲಿ ಶಬ್ದಾಲಂಕಾರ. 344 ರಲ್ಲಿ ಅರ್ಥಾಲಂಕಾರ, 345 ರಲ್ಲಿ ಶಬ್ದಾರ್ಥಾಲಂಕಾರ. 346 ರಲ್ಲಿ ಕಾವ್ಯಗುಣ ವಿವೇಕ, 347 ರಲ್ಲಿ ಕಾವ್ಯದೋಷ ವಿವೇಕ. ಅಂತೂ ನಾಟಕ-ನೃತ್ಯ ಸಹಿತವಾಗಿ ವಿಶಾಲವಾದ ಅರ್ಥದಲ್ಲಿ ಕಾವ್ಯಮೀಮಾಂಸೆಗೆ ಸಂಬಂಧಪಟ್ಟ ಪ್ರಮುಖ ವಿಷಯಗಳು ಇಲ್ಲಿ ಎಡೆಪಡೆದಿರುತ್ತವೆ. ಒಟ್ಟಿನಲ್ಲಿ ಲಕ್ಷಣ, ವರ್ಗೀಕರಣ. ವಿವರಣ ಈ ಎಲ್ಲದರಲ್ಲಿ ಬೇರೆಯವರ ಅವತರಣಗಳ ಸಂಕಲನವೇ ಬಹುಭಾಗದಲ್ಲಿದೆ. ಹೀಗಾಗಿ ಯಾರಿಂದ ಯಾವುದು ಸ್ವೀಕೃತ ಎಂಬುದನ್ನು ಕೆಲವೆಡೆಗೆ ನಿಚ್ಚಳವಾಗಿ ಗುರುತಿಸಬಹುದು. ಬೇರೆಡೆಗೆ. ಮೂಲ ಯಾವುದು ಅಮೂಲ ಯಾವುದು ಎಂಬುದನ್ನು ಅರಿತುಕೊಳ್ಳುವುದು ಕಷ್ಟವಾಗುತ್ತದೆ. ಆದರೆ ಸ್ಥೂಲವಾಗಿ ಬೇರೆ ಅವತರಣ ಅಥವಾ ಅಭಿಪ್ರಾಯಗಳು ಕಂಡು ಬರದಿರುವ ಭಾಗದಲ್ಲಿ ಅಮೂಲವಾದ ಅಂಶಗಳು ಇರಬಹುದೆಂದು ಊಹಿಸಿದರೆ ತಪ್ಪಾಗದು. ಸ್ವೀಕೃತ ಅಂಶಗಳನ್ನು ಕಾಣೆ ಮುಂತಾದವರು ವಿವರವಾಗಿ ಗುರುತಿಸಿದ್ದಾರೆ. ಅವಲ್ಲದೆ ನಮಗೆ ಗೊತ್ತಿರದ ಮೂಲಗಳಿಂದ ಸ್ವೀಕಾರವಾದ ಅಂಶಗಳೂ ಇದರಲ್ಲಿ ಇರುವ ಸಂಭವವಿದೆ. ಇದನ್ನು ಗಮನದಲ್ಲಿಟ್ಟುಕೊಂಡು ತಾತ್ಪೂರ್ತಿಕವಾಗಿ ಇದು ಅಮೂಲ. ಸ್ವತಂತ್ರ ಎಂದು ಊಹಿಸುವ ಪ್ರಯತ್ನ ಮಾಡುತ್ತೇವೆ. ಅಧ್ಯಾಯ 337 ರಲ್ಲಿ ಶಾಸ್ತ್ರ. ಇತಿಹಾಸ. ಕಾವ್ಯ ಈ ಮೂರರ ವೈಶಿಷ್ಟ್ಯಗಳನ್ನು ಹೇಳತೊಡಗಿ. ಶಾಸ್ತ್ರ ಶಬ್ದ ಪ್ರಧಾನ. ಇತಿಹಾಸಗಳಲ್ಲಿ 'ನಿಷ್ಠತೆ' ಮುಖ್ಯ, ಕಾವ್ಯದಲ್ಲಿ 'ಅಭಿಧಾ' ಇದರ ಪ್ರಾಧಾನ್ಯ ಎಂದು ತಿಳಿಸಲಾಗಿದೆ. ವೇದ. ಶಾಸ್ತ್ರ ಇವು ಶಬ್ದಪ್ರಧಾನ: ಇತಿಹಾಸ.ಪುರಾಣ ಇವು ಅರ್ಥ ಪ್ರಧಾನ. ಕಾವ್ಯ ಇದು ಶಬ್ದಾರ್ಥ ಪ್ರಧಾನ ಅಥವಾ ರಸ ಪ್ರಧಾನ: ಅಂತೇ ಅನುಕ್ರಮವಾಗಿ ಪ್ರಭುಸಮ್ಮಿತ. ಮಿತ್ರ ಸಮ್ಮಿತ. ಕಾಂತಾ ಸಮ್ಮಿತ ಎಂದು ಅವುಗಳನ್ನು

ವರ್ಣಿಸುವ ರೂಢಿ ಅಲಂಕಾರಿಕರಲ್ಲಿ ಬೆಳೆದು ಬಂದಿದೆ. ಇಲ್ಲಿ ಶಾಸ್ತ್ರ ಶಬ್ದಪ್ರಧಾನ ಎಂಬ ಮಾತಿನಲ್ಲಿ ಈ ರೂಢಿಯ ಅನುಸರಣವಿದ್ದರೂ ಇತಿಹಾಸ ಕಾವ್ಯಗಳ ವಿಚಾರದಲ್ಲಿ ತೋರಿರುವ ವೈಶಿಷ್ಟ್ಯ ಬೇರೆಯಾಗಿದೆ. ಇತಿಹಾಸಗಳಲ್ಲಿ ನಿಷ್ಠತೆ ಎಂದರೇನು ಎಂಬುದು ಸ್ಪಷ್ಟವಿಲ್ಲ. ಬಹುಶಃ ನಡೆದ ಸಂಗತಿಗಳಿಗೆ ಇತಿಹಾಸವು ನಿಷ್ಠವಾಗಿರುತ್ತದೆ, ಯಥಾವತ್ತಾದ ನಿರೂಪಣೆ ಮಾಡುತ್ತದೆ ಎಂಬ ಅರ್ಥದಲ್ಲಿ ನಿಷ್ಠತೆ ಎಂಬುದನ್ನು ಬಳಸಿರಬೇಕು. ಕಾವ್ಯದಲ್ಲಿ ಅಭಿಧೆಯ ಪ್ರಾಧಾನ್ಯ ಎಂಬ ಹೇಳಿಕೆ ಅಚ್ಚರಿಯನ್ನುಂಟುಮಾಡುತ್ತದೆ. ಅಭಿಧೆ ಎಂದರೆ ವಾಚ್ಯಾರ್ಥ. ಕಾವ್ಯದಲ್ಲಿ ವಾಚ್ಯಾರ್ಥವು ಪ್ರಧಾನ ಅಂದರೆ ಈ ಮಾತನ್ನು ಹೇಳಿದವರಿಗೆ ಕಾವ್ಯದ ಲಕ್ಷಣವೇ ಗೊತ್ತಿಲ್ಲ ಎನ್ನಬೇಕಾಗುತ್ತದೆ. ಅಥವಾ ಸಾಧಾರಣ ಕಾವ್ಯದ ಲಕ್ಷಣವನ್ನು ಎಲ್ಲ ಕಾವ್ಯಕ್ಕೆ ಅನ್ವಯಗೊಳಿಸಿದಂತಾಗುತ್ತದೆ. ಬಹುಶಃ 'ಅಭಿಧೆ' ಎಂದರೆ ಅಭಿವ್ಯಕ್ತಿ ಎಂಬ ಸಾಮಾನ್ಯ ಅರ್ಥವು ಇಲ್ಲಿ ಸೂಚಿತವಾಗಿರುವಂತಿದೆ. ಇದು ವಾಚ್ಯಾರ್ಥವೆಂಬ ಪಾರಿಭಾಷಿಕ ವಿಶೇಷಾರ್ಥವು ರೂಢವಾಗುವುದಕ್ಕಿಂತ ಮುಂಚಿನ ಕಾಲದ ಅರ್ಥವಿರಬೇಕು. ಇದನ್ನು ಒಪ್ಪಿದರೆ ಅಗ್ನಿಪುರಾಣದ ಪ್ರಾಚೀನ ಮೂಲದಲ್ಲಿ ಇದ್ದಿರಬಹುದಾದ ಭಾಗವಿದೆಂದು ಊಹಿಸಬಹುದು. ಇದಾದ ಮೇಲೆ, ಲೋಕದಲ್ಲಿ ನರತ್ವ ಅಂದರೆ ಮನುಷ್ಯಜನ್ಮ ದುರ್ಲಭ. ಅದರಲ್ಲಿ ವಿದ್ಯೆ ಸುದುರ್ಲಭ, ಅದರಲ್ಲಿಯೂ ಕವಿತ್ವ ದುರ್ಲಭ, ಅದರಲ್ಲಿ ಶಕ್ತಿ ದುರ್ಲಭ, ವ್ಯುತ್ಪತ್ತಿ ದುರ್ಲಭ, ಅದರಲ್ಲಿ ವಿವೇಕ ದುರ್ಲಭ ಎಂಬ ಉತ್ತರೋತ್ತರ ಪ್ರಕರ್ಷದ ಉಕ್ತಿಯಿದೆ. ಇದು ಬಹುಶಃ ಸಾಂಪ್ರದಾಯಿಕ ಧಾಟಿಯಲ್ಲಿದ್ದರೂ ಕವಿತ್ವಕ್ಕಿಂತ ಶಕ್ತಿ ದುರ್ಲಭ. ಉತ್ಪತ್ತಿಗಿಂತ ವಿವೇಕ ದುರ್ಲಭ ಎಂಬ ಮಾತಿನಲ್ಲಿ ವಿಶೇಷವಿರುವಂತೆ ತೋರುತ್ತದೆ. ಇಲ್ಲಿ ಕವಿತ್ವವೆಂದರೆ ಪದ್ಯರಚನೆಯ ಸಾಮರ್ಥ್ಯವೆಂದೂ ಶಕ್ತಿಯೆಂದರೆ ಪ್ರತಿಭಾನವೆಂದೂ ಸೂಚಿತವಾಗುತ್ತದೆ. ಹಾಗೇ ಉತ್ಪತ್ತಿ ಬರೀ ಪಾಂಡಿತ್ಯವೆಂದೂ ಅದು ಲಭ್ಯವಾದರೂ ವಿವೇಕ ದುರ್ಲಭವೆಂದೂ ಸೂಚಿತವಾಗಿರುತ್ತದೆ. ಈ ಭಾಗವೂ ಪ್ರಾಚೀನ ಮೂಲದ್ದಾಗಿರಬಹುದು. ತರುವಾಯ ಕಾವ್ಯಾದಿ ಗ್ರಂಥಗಳಲ್ಲಿ ಗದ್ಯ. ಪದ್ಯ. ಮಿಶ್ರ ಎಂದು ತ್ರಿವಿಧವೆಂದು ಹೇಳಲಾಗಿದೆ. ಗದ್ಯಲಕ್ಷಣ, ಚೂರ್ಣಕ. ಉತ್ಕಲಿಕಾ ಮತ್ತು ವೃತ್ತಗಂಧಿ ಎಂಬ ಅದರ ಮೂರು ರೂಪ: ಆಖ್ಯಾಯಿಕಾ. ಕಥಾ. ಖಂಡಕಥಾ. ಪರಿಕಥಾ. ಕಥಾನಿಕಾ ಎಂದು ಗದ್ಯಕಾವ್ಯದ ಪಂಚಪ್ರಕಾರ: ಪದ್ಯಲಕ್ಷಣ. ಮಹಾಕಾವ್ಯ, ಪರ್ಯಾಬಂಧ. ವಿಶೇಷಕ, ಕುಲಕ, ಮುಕ್ತಕ ಕೋಷ ಈ ಏಳು ಪದ್ಯಕುಟುಂಬಕ ಇದೆಲ್ಲ ವರ್ಣಿತವಾಗಿದೆ. ಲಕ್ಷಣ ಸಹಿತವಾಗಿ ಇವನ್ನೆಲ್ಲ ಪ್ರಚಲಿತ ಅಗ್ನಿಪುರಾಣವು ತನಗೆ ಆಧಾರಭೂತವಾದ ಗ್ರಂಥಗಳಿಂದ ಎತ್ತಿ ಕೊಂಡಿರಬಹುದು. ಇತರತ್ರ ಇವುಗಳ ಉಲ್ಲೇಖವಿದೆ. ಗದ್ಯಕಾವ್ಯವು ಆಖ್ಯಾಯಿಕೆ, ಕಥೆ ಎಂಬುದಾಗಿ ಎರಡು ವಿಧವೆಂದು ಹೇಳಿ ಕೊನೆಗೆ ಇವುಗಳಿಗೂ ಹೆಚ್ಚು ಭೇದವಿಲ್ಲವೆಂದೂ, ಎರಡೂ ಒಂದೇ ಎಂದೂ ತೋರಿಸಿ ಮಿಕ್ಕ 'ಆಖ್ಯಾನಜಾತಿ' ಗಳೆಲ್ಲಾ ಇದರಲ್ಲಿಯೇ ಅಡಕವಾಗಿರುವುವೆಂದು ದಂಡಿ ಹೇಳಿದ್ದಾನೆ (1–23). ಸಂಸ್ಕೃತ ಲಾಕ್ಷಣಿಕರ ಆಧಾರದ ಮೇಲೆ ಕಾವ್ಯಾವಲೋಕನಕಾರನಾದ ನಾಗವರ್ಮನು ಸೂತ್ರ 240–2ರಲ್ಲಿ

ಈ ಬಗೆಯ ಗದ್ಯಪದ್ಯ ವಿಭಾಗಗಳನ್ನು ವಿವರಿಸಿದ್ದಾನೆ. ಇದರಿಂದ ಅಗ್ನಿಪುರಾಣದ ಪ್ರಾಚೀನ ಮೂಲದಲ್ಲಿಯೇ ಇವೆಲ್ಲ ಇದ್ದುವೆಂದು ಹೇಳಲು ಖಚಿತ ಪ್ರಮಾಣವಿಲ್ಲ. ಕೆಲವುಭಾಗವು ಮಾತ್ರ ಮೂಲದಲ್ಲಿರಬಹುದೆಂದು ಊಹಿಸಲು ಸಾಧ್ಯ. ಉದಾಹರಣೆಗೆ ಮಹಾಕಾವ್ಯದ ಬಗ್ಗೆ ಬಂದಿರುವ ವಿವರವಾದ ನಿರೂಪಣೆ ಕೇವಲ ಸಾಂಪ್ರದಾಯಿಕವಾಗಿಲ್ಲ. ಮಹಾಕಾವ್ಯವು ಸರ್ಗಬಂಧವಾಗಿರಬೇಕು. ಸಂಸ್ಕೃತದಲ್ಲಿರಬೇಕು. ಇತಿಹಾಸಕಥೆಯಿಂದ ಉದ್ಭೂತವಾಗಿರಬೇಕು. ಇಂಥಿಂಥ ವೃತ್ತಗಳಿರಬೇಕು. ಹದಿನೆಂಟು ವರ್ಣನೆಗಳಿರಬೇಕು. ಇವೆಲ್ಲ ಸಾಂಪ್ರದಾಯಿಕ. ಅಸ್ವಮೂಲ ಎಂದು ಹೇಳಬಹುದು. ಆದರೆ 'ಸರ್ವವೃತ್ತಿ ಪ್ರವೃತ್ತವೂ ಸರ್ವಭಾವ ಪ್ರಭಾವಿತವೂ ಸರ್ವರೀತಿ ರಸಗಳಿಂದ ಸ್ಪಷ್ಟವೂ ಗುಣ ವಿಭೂಷಣಗಳಿಂದ ಪುಷ್ಟವೂ ಆಗಿರುವುದು ಮಹಾಕಾವ್ಯ. ಅದರ ಕರ್ತೃ ಮಹಾಕವಿ. ವಾಕ್‌ವೈದಗ್ಧ್ಯ ಪ್ರಧಾನವಾದರೂ ರಸವೇ ಇದರಲ್ಲಿ ಜೀವಿತ. (ಅಧ್ಯಾಯ 337. ಪದ್ಯ 31–32) ಎಂಬ ನಿರೂಪಣೆ ಮೌಲಿಕವೂ ಅರ್ಥಸಂಪನ್ನವೂ ಆಗಿದೆ. ಮುಂದಿನ ಭಾಗದಲ್ಲಿ ಕಾವ್ಯ ಸ್ವರೂಪದ ಬಗ್ಗೆ ಮೂಲ ಅಗ್ನಿಪುರಾಣಕಾರನು ಉನ್ನತ ಪ್ರಜ್ಞೆಯುಳ್ಳವನು ಎಂದು ನಾವು ತೋರಿಸುವವರಿದ್ದೇವೆ. ಅದರೊಡನೆ ಇದನ್ನು ಅನುಗೊಳಿಸಿದರೆ ಇದು ಸ್ವತಂತ್ರವೆಂದು ಊಹಿಸಬಹುದು. ಮಹಾಕಾವ್ಯದಲ್ಲಿ ಗುಣಗಾತ್ರಗಳಲ್ಲಿ ಸಮಗ್ರ ಜೀವನದ ವೈವಿಧ್ಯ–ಸಾಕಲ್ಯ ದರ್ಶನವಾಗುತ್ತದೆ. ಅದರಲ್ಲಿ ವಾಕ್ ವೈದಗ್ಧ್ಯ ಅಥವಾ ವಾಣಿಯ ಪಾಂಡಿತ್ಯ–ಚಮತ್ಕಾರಗಳಿದ್ದರೂ ಅವೇ ಅಂತಿಮ ಸಿದ್ಧಿಯಲ್ಲ. ಜೀವಿತ ಸ್ವರೂಪವಾದ ರಸಕ್ಕೆ ಅವು ಅಧೀನವಾಗಿರಬೇಕು. ಪೋಷಕವಾಗಿರಬೇಕು. ಇಲ್ಲಿ ರಸ ಎಂಬುದು ವ್ಯಾಪಕವಾದ ಅರ್ಥದಲ್ಲಿ ಆನಂದದಾಯಕವಾದ ಸೌಂದರ್ಯ ನಿರ್ಮಿತಿ. ಸ್ಥಾಯಿಭಾವವು ಸಕಲ ಪರಿಕರ ಸಂಯೋಗದಿಂದ ಪಡೆಯುವ ರಸತ್ವವು ಇದರಲ್ಲಿ ಒಳಗೊಳ್ಳುತ್ತದೆ. 'ಸರ್ವವೃತ್ತಿಪ್ರವೃತ್ತ' ಮುಂತಾದ ಪದ್ಯದಲ್ಲಿ ಪುನರುಕ್ತವಾಗಿ ಬಂದಿರುವ 'ಸರ್ವ' ಪದವು ಸಮಗ್ರ ಜೀವನದ ವೈವಿಧ್ಯ ಮತ್ತು ಸಾಕಲ್ಯ ಈ ಎರಡನ್ನೂ ಸೂಚಿಸುತ್ತದೆ.

ಮುಂದಿನ 'ನಾಟಕ ನಿರೂಪಣ' ಎಂಬ ಅಧ್ಯಾಯದಲ್ಲಿ 27 ನಾಟಕ ಪ್ರಕಾರಗಳು. ನಾಟಕ ರಚನೆಯ ಕ್ರಮ. ನಾಟಕ ವಿಷಯ ಇವೆಲ್ಲಾ ಬಹುಮಟ್ಟಿಗೆ ಸಾಂಪ್ರದಾಯಿಕ ರೀತಿಯಲ್ಲಿವೆ. ಇಲ್ಲಿ ದಶರೂಪಕ್ಕಿಂತ ಹೆಚ್ಚಿನ ಪ್ರಕಾರಗಳ ಉಲ್ಲೇಖವಿದೆ ಎಂಬುದನ್ನು ಗಮನಿಸಬೇಕು. ಇಷ್ಟಾರ್ಥ ರಚನೆ. ವೃತ್ತಾಂತದ ಅನುಪಕ್ಷಯ. ಪ್ರಯೋಗದ ರಾಗ ಪ್ರಾಪ್ತಿ. ಗುಹ್ಯವಾದದ್ದರ ಗೂಹನ. ಆಶ್ಚರ್ಯವೆಂದು ಹೇಳಬಹುದಾದ ಪ್ರಕಾರಗಳ ಪ್ರಕಾಶನ ಇವು ನಾಟಕ ತಂತ್ರದಲ್ಲಿ ಅವಶ್ಯವೆಂದು ಈ ಅಧ್ಯಾಯದಲ್ಲಿ ಹೇಳಿದೆ. ನಾಟಕಕ್ಕೆ ಮಾತ್ರವಲ್ಲ ಎಲ್ಲ ನಿರ್ಮಿತಿಗೂ ಇವು ಅನ್ವಯಿಸುತ್ತವೆ. ಬಚ್ಚಿಡಬೇಕಾದ್ದನ್ನು ಬಚ್ಚಿಡುವುದು. ಪ್ರಕಟಗೊಳಿಸಬೇಕಾದ್ದನ್ನು ಪ್ರಕಟಮಾಡುವುದು ಈ ಅಂಶಗಳು ಯಾವುದೇ ಕಾಲದ ಒಳ್ಳೆಯ ಕಲಾಕೃತಿಯಲ್ಲಿ ನಿರೀಕ್ಷಿಸಬೇಕಾದ ಗುಣಗಳಾಗಿರುತ್ತವೆ. ಕೊನೆಗೆ

ಅದಿಲ್ಲದೆ ಇದ್ದರೆ ಅಂಗಹೀನ ಮನುಷ್ಯನಂತೆ ಕಾವ್ಯವು ಶ್ರೇಷ್ಠವಾಗುವುದಿಲ್ಲ ಎಂದು ಹೇಳಿದ್ದು ಉಚಿತವಾಗಿದೆ. 'ದೇಶಕಾಲ ವಿರಹಿತವಾಗಿ ಯಾವ ಇತಿವೃತ್ತವೂ ಪ್ರವರ್ತಿಸುವುದಿಲ್ಲ. ಆದ್ದರಿಂದ ದೇಶಗಳಲ್ಲಿ ಭಾರತವರ್ಷ, ಕಾಲದಲ್ಲಿ ಕೃತಯುಗ ತ್ರಯದಲ್ಲಿ ಒಂದು ಆಗಿರಬೇಕು. 'ದೇಶಕಾಲ ಪರಿಮಿತಿಯಲ್ಲಿ ಪ್ರಾಣಿಗಳ ಅಂದರೆ ಮನುಷ್ಯರ ಸುಖದುಃಖೋದಯವು ಚಿತ್ರಿತವಾಗಬೇಕು' (ಅಧ್ಯಾಯ 338 ಪದ್ಯ 26–27) ಎಂದು ನಿರೂಪಿಸಲಾಗಿದೆ. ಈ ದೇಶಕಾಲ ಪ್ರಜ್ಞೆ ಮತ್ತು ಮಾನವೀಯ ದೃಷ್ಟಿ ಇವು ಇಲ್ಲಿಯ ವಿಶೇಷಗಳಾಗಿವೆ. ಮೂಲ ಅಗ್ನಿಪುರಾಣಕಾರನ ವ್ಯಾಪಕ ದರ್ಶನದ ದ್ಯೋತಕವಾಗಿ ಇವು ಇರುತ್ತವೆನ್ನಬಹುದಾದರೂ ಹಾಗೆ ನಿಯತವಾಗಿ ಹೇಳಲು ಬರುವಂತಿಲ್ಲ. ಇತರ ಗ್ರಂಥಗಳಿಂದ ಪ್ರಚಲಿತ ಅಗ್ನಿಪುರಾಣಕಾರನು ಮಾಡಿದ ಸಂಕಲನದ ಭಾಗವು ಇವಾಗಿರಬಹುದು.

ನಮಗೆ ಬಹು ಮುಖ್ಯವೆಂದು ತೋರಿದ ಆಲೋಚನೆಗಳು ಶೃಂಗಾರಾದಿ ರಸನಿರೂಪಣವೆಂಬ ಅಗ್ನಿಪುರಾಣದ 339ನೆಯ ಅಧ್ಯಾಯದಲ್ಲಿ ಅಡಕವಾಗಿವೆ. ಅದರ ಪ್ರಾರಂಭ ಪದ್ಯಗಳ ತಾತ್ಪರ್ಯ ಹೀಗಿದೆ: 'ಅಕ್ಷರವೂ ಸನಾತನವೂ ಅಜವೂ ವಿಭುವೂ ಆದ ಪರಮಬ್ರಹ್ಮವನ್ನು ವೇದಾಂತದಲ್ಲಿ, ಏಕಚೈತನ್ಯ, ಜ್ಯೋತಿ, ಈಶ್ವರ ಎಂದು ಕರೆಯುತ್ತಾರೆ. ಅದರ ಸಹಜವಾದ ಆನಂದವು ಯಾವಾಗಾದರೊಮ್ಮೆ ವ್ಯಕ್ತವಾಗುತ್ತದೆ. ಆ ವ್ಯಕ್ತಿ (ಅಭಿವ್ಯಕ್ತಿ) ಚೈತನ್ಯ ಚಮತ್ಕಾರ ರಸವೆಂಬ ಹೆಸರುಳ್ಳದು. ಅದರ ಆದ್ಯ ವಿಕಾರವು ಅಹಂಕಾರವೆಂದು ಹೇಳಲಾಗಿದೆ. ಅದರಿಂದ ಅಭಿಮಾನ. ಅದರಲ್ಲಿ ಈ ಭುವನತ್ರಯವು ಸಮಾಪ್ತವಾಗಿದೆ. ಅಭಿಮಾನದಿಂದ ರತಿ ಹುಟ್ಟಿ ಪರಿಪೋಷವನ್ನು ಹೊಂದುತ್ತದೆ. ಅದು ವ್ಯಭಿಚಾರಿ ಮುಂತಾದ ಸಾಮಾನ್ಯದಿಂದ ಶೃಂಗಾರ ಎಂದಾಗುವುದಾಗಿ ಹೇಳುತ್ತಾರೆ.' (ಪದ್ಯ 1–4). ಸರಸ್ವತೀಕಂಠಾಭರಣದ 5ನೆಯ ಅಧ್ಯಾಯದ ಮೊದಲ ನಾಲ್ಕು ಪದ್ಯಗಳಲ್ಲಿ ಭೋಜನು ತನ್ನ ಶೃಂಗಾರರಸವೊಂದೇ ಎಂಬ ತತ್ತ್ವವನ್ನು ಪ್ರತಿಪಾದಿಸಿದ್ದಾನೆ. ಈ ಪದ್ಯಗಳ ಆಶಯ ಹೀಗಿರುತ್ತದೆ: 'ಅಭಿಮಾನ, ಅಹಂಕಾರ ಎಂದರೆ ಶೃಂಗಾರರಸವೆಂದು ಹೇಳಲಾಗಿದೆ. ಯಾವುದು ಅರ್ಥವೋ ಅದರ ಅನ್ವಯದಿಂದ ಕಾವ್ಯವು ಕಮನೀಯವಾಗುತ್ತದೆ. ಪ್ರಾಣಿಗಳ ಅಂತರಾತ್ಮಗಳಲ್ಲಿ ವಿಶಿಷ್ಟ ಅದೃಷ್ಟದಿಂದ ಜನ್ಮತಾಳಿದ ಮತ್ತು ಆತ್ಮದ ಸಮ್ಯಕ್ ಗುಣದಿಂದ ಉದ್ಭೂತವಾದದ್ದರ ಏಕಹೇತು ಪ್ರಕಾಶಿಸುತ್ತದೆ. ಕವಿ ಶೃಂಗಾರಿಯಾಗಿದ್ದರೆ ಕಾವ್ಯದಲ್ಲಿ ಜಗತ್ತು ರಸಮಯವಾಗುತ್ತದೆ. ಅಶೃಂಗಾರಿಯಾಗಿದ್ದರೆ ಅದೆಲ್ಲ ನೀರಸವಾಗುತ್ತದೆ.'[5] [illegible] ಎಂದು ವಾಕ್ಯದಲ್ಲಿ ನೋಡಿದರೆ ರಸವು

---

5 ಈ ಅಧ್ಯಾಯದ ಮೂಲ ಪದ್ಯ 'ಶೃಂಗಾರೀ ಚೇತ್ಕವಿಃ' ಆನಂದವರ್ಧನನ ಧ್ವನ್ಯಾಲೋಕದಲ್ಲಿದ್ದು ಅದೇ ಭೋಜನ ಸರಸ್ವತೀಕಂಠಾಭರಣದಲ್ಲಿ ಕಾಣಿಸಿಕೊಳ್ಳುತ್ತದೆ. ಧ್ವನ್ಯಾಲೋಕದಿಂದಲೇ ಅಗ್ನಿಪುರಾಣವು ಇನ್ನೊಂದು ಪದ್ಯದೊಡನೆ ಇದನ್ನು ಎರವಲಾಗಿ ತೆಗೆದುಕೊಂಡಿರಬೇಕೆಂದು ಕಾಣೆಯವರು ಅಭಿಪ್ರಾಯಪಟ್ಟಿದ್ದಾರೆ.

ಹೊಳೆಯುವುದಿಲ್ಲ. ಕಾಂತಾ ಎಂದು ನೋಡಿದಲ್ಲಿ ಅದು ವ್ಯಕ್ತವಾಗಿ ಪ್ರತೀಯಮಾನವಾಗುತ್ತದೆ' (1–4). ಕಾಣೆಯವರು ಈ ಎರಡೂ ಕೃತಿಗಳಲ್ಲಿಯ ತೌಲನಿಕ ಅಂಶಗಳನ್ನು ಎತ್ತಿತೋರಿಸಿ ಅಗ್ನಿಪುರಾಣವು ಭೋಜನ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ನಿರೂಪಿಸಿರುತ್ತದೆ ಎಂದಿದ್ದಾರೆ. ಆದರೆ ಬೇರೆ ಬೇರೆ ಸಿದ್ಧಾಂತಗಳ ಸಾರವನ್ನು ಕೊಡುವುದರಲ್ಲಿ ಮಾತ್ರ ಆಸಕ್ತಿಯುಳ್ಳ ಅಗ್ನಿಪುರಾಣವು ಪದ್ಯ 7–9 ರಲ್ಲಿ ಆನಂದ–ಅಹಂಕಾರ–ಅಭಿಮಾನ–ರತಿಯ ಸಿದ್ಧಾಂತವನ್ನು ಭರತನ ನಾಟ್ಯಶಾಸ್ತ್ರದ ಎಂಟು ಅಥವಾ ಒಂಬತ್ತು ರಸಗಳ ಪ್ರಸ್ತಾವದಿಂದ ಮುಗಿಸಿ ಬಿಟ್ಟಿರುತ್ತದೆ ಎಂದು ಅವರ ಮತ. ಅಗ್ನಿಪುರಾಣದ ಕಲಬೆರಕೆಯಾದ ಪದ್ಯಗಳ ಆಧಾರದ ಮೇಲೆ ಭೋಜನು ತನ್ನ ಸಿದ್ಧಾಂತವನ್ನು ಪ್ರತಿಪಾದಿಸಿರುವನೆಂದು ನಂಬುವುದು ಸಾಧ್ಯವಿಲ್ಲ. ಅಗ್ನಿಪುರಾಣದಲ್ಲಿ ಉಕ್ತವಾದ ಪಾಂಚಾಲಿ. ವೈದರ್ಭಿ, ಗೌಡಿ ಮತ್ತು ಲಾಟಿ ಈ ನಾಲ್ಕು ರೀತಿಗಳ ವಿವರಣೆ ಭೋಜನ ಶೃಂಗಾರ ಪ್ರಕಾಶದ ವಿವರಣೆಯನ್ನು ನಿಕಟವಾಗಿ ಹೋಲುತ್ತದೆ. ಆದ್ದರಿಂದ ಯಾವುದೇ ವಿಷಯವನ್ನು ಕುರಿತು ಮೂಲಕೃತಿಯಲ್ಲದ ಮತ್ತು ಕೇವಲ ಒಂದು ವಿಶ್ವಕೋಶ ರೀತಿಯ ಸಂಕಲನವಾದ ಅಗ್ನಿಪುರಾಣವೇ ಭೋಜನಿಂದ ಬಹುಶಃ ಸ್ಫೂರ್ತಿ ಪಡೆದಿದೆಯೆಂದು ಹೇಳುವುದು ಯುಕ್ತವೆಂದು ಕಾಣೆಯವರ ತೀರ್ಮಾನವಾಗಿದೆ.

ಮೊದಲಾಗಿ, ಅಗ್ನಿಪುರಾಣದ 339ನೆ ಅಧ್ಯಾಯದ ಪ್ರಾರಂಭದ ಎರಡು ಪದ್ಯಗಳು ಭೋಜನ ಸರಸ್ವತೀ ಕಂಠಾಭರಣದಲ್ಲಿಯೂ ಇಲ್ಲ. ಬೇರಾವ ಉಪಲಬ್ಧ ಕೃತಿಯಲ್ಲಿಯೂ ಇಲ್ಲ. ಉಪಲಬ್ಧವಲ್ಲದ ಕೃತಿಯಲ್ಲಿರಬಹುದು ಎಂಬುದು ದೂರದ ಸಂಭವವೆಂದು ತಿಳಿಯಬೇಕಾಗುತ್ತದೆ. ನಮ್ಮ ಮಟ್ಟಿಗೆ ಈ ಪದ್ಯಗಳು ಪ್ರಾಚೀನ ಮೂಲದ ಅಗ್ನಿಪುರಾಣಕಾರನಿಂದ ರಚಿತವಾಗಿರಬೇಕೆಂದೂ ಅವು ಕಾವ್ಯಲಕ್ಷಣಕ್ಕೆ ಮತ್ತು ಕಾವ್ಯಪ್ರಕ್ರಿಯೆಗೆ ಮಹತ್ವದ ಹಾಗೂ ಮೌಲಿಕವಾದ ಕಾಣಿಕೆಯನ್ನು ಸಲ್ಲಿಸಿರುತ್ತವೆ ಎಂದೂ ತೋರುತ್ತದೆ. ಪರಮಬ್ರಹ್ಮನ ಸಹಜವಾದ ಆನಂದವು ಕ್ವಚಿತ್ತಾಗಿ ಚೈತನ್ಯ ಚಮತ್ಕಾರ ರಸಗಳ ರೂಪ ಹೊಂದಿ ಅಭಿವ್ಯಕ್ತವಾಗುತ್ತದೆ ಎಂಬುದು ಇವುಗಳ ತಾತ್ಪರ್ಯ. ಇದರಲ್ಲಿ ಏನೋ ಆಧ್ಯಾತ್ಮಿಕ ಗೂಢವಿರುವುದೆಂದು ಕೆಲವರು ಕಡೆಗಣಿಸಬಹುದು. ಆದರೆ ಇದು ಎಲ್ಲ ಒಳ್ಳೆಯ ಕಾವ್ಯಕ್ಕೆ ಮತ್ತು ತನ್ನ ಉತ್ಕಟತೆಯಲ್ಲಿ ಶ್ರೇಷ್ಠ ಕಾವ್ಯಕ್ಕೆ ಅನ್ವಯಿಸುವ ಅರ್ಥಪೂರ್ಣವಾದ ಸೂತ್ರವಾಗಿದೆ. ಪರಮಬ್ರಹ್ಮನ ಸಹಜವಾದ ಆನಂದವೆಂದರೆ ಕಲಾನಿರ್ಮಿತಿಗೆ ಮುಖ್ಯವಾಗಿ ಕಾರಣವಾಗುವ. ಸಹಜಸ್ಫೂರ್ತವಾದ ಶುದ್ಧ ನಿರ್ಮಿತಿಯ ಆನಂದ. ಅದು ಕ್ವಚಿತ್ತಾಗಿ ಮನುಷ್ಯತರ್ಕಕ್ಕೆ ನಿಲುಕದ ಸನ್ನಾಹದಿಂದ ಕವಿಯಲ್ಲಿ ವ್ಯಕ್ತವಾಗುವುದರಿಂದ ಅಚಿಂತ್ಯ. ದೈವಪ್ರೇರಿತ: ಅಂತೇ ಅದು ಪರಮಬ್ರಹ್ಮಮೂಲದಿಂದ ಉದಯವಾದದ್ದು. ಕೃತಿಯನ್ನು ಓದಿ ಅಂತಹದೇ ಸಹಜಾನಂದವನ್ನು ಅನುಭವಿಸುವ ಸಹೃದಯನು ಪ್ರತ್ಯಕ್ಷಕೃತಿಯಿಂದ ಅಪ್ರತ್ಯಕ್ಷವಾದ ಮೂಲ ಪ್ರೇರಣೆಯನ್ನು ಅನುಮಿಸುತ್ತಾನೆ. 'ಅರಾರೇರರ್ ಶಾಸ್ತ್ರಿರೋಃಮಾಗಿರಿಯುಂ' ಎಂತಾದ ಪದ್ಯದಲ್ಲಿ ಮಾರಾರಿಯ

ಕೃಪೆಯಿಂದಲೇ ಕವಿತಾಚಿಂತಾರತ್ನವು ದೊರೆಯುವುದೆಂದು ಷಡಕ್ಷರಕವಿ ಹೇಳಿದ್ದರ ತಾತ್ಪರ್ಯವು ಇದೇ ಆಗಿದೆ. ಇಂಥ ಅಭಿವ್ಯಕ್ತಿ ಚೈತನ್ಯ, ಚಮತ್ಕಾರ, ರಸ ಈ ಮೂರರ ಮುಪ್ಪುರಿಯಾಗಿ ಹೊರಬರುತ್ತದೆ. ಚೈತನ್ಯ ಇದು ಕವಿಯ ಪ್ರಾಮಾಣಿಕ ಜೀವನದರ್ಶನದ ಹಾಗೂ ವಿಶಿಷ್ಟ ವ್ಯಕ್ತಿತ್ವದ ಮೂಲದಿಂದ ಬರುವ ಆತ್ಮಿಕ ಗುಣ. ಚಮತ್ಕಾರ ಇದು ಕಲ್ಪಕತೆಯ ಮೂಲದಿಂದ ಹೊರಹೊಮ್ಮುವ ಕಲ್ಪನಾಗುಣ. ರಸವೆಂದರೆ ಸೌಂದರ್ಯ ಮತ್ತು ಭಾವಲೋಕದಿಂದ ಪರಿಣತವಾಗಿ ಪ್ರಕಟವಾಗುವ ಭಾವನಾಗುಣ. ಈ ಮೂರು ಗುಣಗಳ ಸಮವಾಯದಲ್ಲಿ ಕಾವ್ಯದ ಅಭಿವ್ಯಕ್ತಿ ಮೈದಾಳುತ್ತದೆ. ಚೈತನ್ಯವು ಅಗ್ರ ಸ್ಥಾನದಲ್ಲಿದ್ದು ಕವಿಯ ವ್ಯಕ್ತಿತ್ವ ಸಂಪತ್ತಿ, ಜೀವನದರ್ಶನ, ಚಿಂತನಶೀಲತೆ ಇವುಗಳನ್ನು ಸೂಚಿಸುವುದರಿಂದ ಇದನ್ನು ದರ್ಶನಾಂಗ ಅಥವಾ ಚಿಂತನಾಂಗ ಎನ್ನಬಹುದು. ಚಮತ್ಕಾರವು ಕಲ್ಪನಾಂಗ, ರಸವು ಭಾವನಾಂಗವೆಂದು ಹೇಳಬಹುದು. ಈ ಮೂರು ಅಂಗಗಳ ಅಂಗೀಕರಣ ಅಥವಾ ಸಮಗ್ರೀಕರಣದಲ್ಲಿ ಕಾವ್ಯದ ಸಾರ್ಥಕತೆಯಿರುತ್ತದೆ. ದೈವೀ ಸಹಜ ಆನಂದದ 'ಕದಾಚನ' ಅಭಿವ್ಯಕ್ತಿಯಾದಾಗಲೇ ಇದು ಸಾಧ್ಯವಾಗುತ್ತದೆ. ಸಹೃದಯನಿಗೆ ಇಂಥ ನಿರ್ಮಿತಿಯ ಆಸ್ವಾದವು ದೊರೆತಾಗಲೇ ಅದರ ಮೂಲ ಪ್ರೇರಕವು ದೈವೀ ಸಹಜ ಆನಂದವೆಂಬುದು ಅನುಮೇಯವಾಗುತ್ತದೆ. ಇಷ್ಟು ಅರ್ಥಪೂರ್ಣವಾದ ಕಾವ್ಯಮೀಮಾಂಸೆಯನ್ನು ಅಗ್ನಿಪುರಾಣದ ಈ ಎರಡು ಪದ್ಯಗಳ ಹೊರತಾಗಿ ಬೇರಾವ ಕಾವ್ಯ ಮೀಮಾಂಸೆಯ ಗ್ರಂಥದಲ್ಲಿ ನಾವು ಕಂಡಿಲ್ಲ.[6]

ಎರಡನೆಯದಾಗಿ, ಮೇಲಿನ ಎರಡು ಪದ್ಯಗಳ ಮುಂದುವರಿಕೆಯಾಗಿ ಮುಂದಿನ ಪದ್ಯಗಳು ಅಗ್ನಿಪುರಾಣದಲ್ಲಿ ಬಂದಿರುವ ಕಾರಣ ಅವನ್ನು ಭೋಜನಿಂದ ಅಗ್ನಿಪುರಾಣ ಕಾರನು ಸ್ವೀಕಾರಮಾಡಿರುವನೆಂಬುದಕ್ಕಿಂತ ಮೂಲ ಅಗ್ನಿಪುರಾಣದಲ್ಲಿಯೇ ಅವು ಇರ ಬೇಕೆಂಬುದು ಹೆಚ್ಚು ಸಮಂಜಸವಾಗಿ ತೋರುತ್ತದೆ. ಪರಮಬ್ರಹ್ಮನ ಆದ್ಯವಿಕಾರವು ಅಹಂಕಾರ, ಅದರಿಂದ ಅಭಿಮಾನ, ಅಭಿಮಾನದಿಂದ ರತಿ. ರತಿ ಪರಿಪೋಷಹೊಂದಿ ಶೃಂಗಾರರಸವಾಗುತ್ತದೆ ಎಂದು ಅಗ್ನಿಪುರಾಣದ ನಿರೂಪಣಾಕ್ರಮವಾಗಿದೆ. ಭೋಜನ ಸರಸ್ವತೀಕಂಠಾಭರಣದಲ್ಲಿ ಅಭಿಮಾನ, ಅಹಂಕಾರ ಇದೇ ಶೃಂಗಾರರಸವೆಂದಿದೆ. ಪರ ಬ್ರಹ್ಮನ ಆದ್ಯವಿಕಾರವು ಅಹಂಕಾರ ಎಂದು ಮುಂತಾದ ಮಾತಿಲ್ಲ. ಹಾಸ್ಯ ಮುಂತಾದ ಇತರ ರಸಗಳು ಶೃಂಗಾರದ ಭೇದಗಳೆಂದೂ ತಮ್ಮ ತಮ್ಮ ಸ್ಥಾಯಿ ವಿಶೇಷಗಳಿಂದ ಕೂಡಿರುವವೆಂದೂ ಸತ್ವ ಮುಂತಾದ ಪರಮಾತ್ಮನ ಗುಣಗಳಿಂದ ಅವು ಜನಿಸಿರುತ್ತ ವೆಂದೂ ಅಗ್ನಿಪುರಾಣದಲ್ಲಿದೆ. ಆ ಪ್ರಕಾರ ಆತನ ರಾಗದಿಂದ ಶೃಂಗಾರ, ತೈಕ್ಷ್ಣ್ಯದಿಂದ ರೌದ್ರ, ಅವಷ್ಟಂಭದಿಂದ ವೀರ, ಸಂಕೋಚದಿಂದ ಬೀಭತ್ಸ ಎಂದು ಹೇಳಲಾಗಿದೆ. ಜೊತೆಗೆ ಶೃಂಗಾರದಿಂದ ಹಾಸ್ಯ, ರೌದ್ರದಿಂದ ಕರುಣ, ವೀರದಿಂದ ಅದ್ಭುತ,

---

6 ಇದರ ಇನ್ನಷ್ಟು ವಿವರಣೆಗಾಗಿ ಈ ಲೇಖಕನ 'ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರ ಗಳು' ಈ ಪುಸ್ತಕದ 119-20 ಪುಟಗಳನ್ನು ನೋಡಬಹುದು.

ಬೀಭತ್ಸದಿಂದ ಭಯಾನಕ ಎಂಬ ನಿಷ್ಪತ್ತಿಯೂ ಬಂದಿದೆ. ಮುಂದೆ ಎಲ್ಲ ಒಂಬತ್ತು ರಸಗಳ ಉಲ್ಲೇಖವಿದೆ. ಇವರಲ್ಲಿ ಏನೋ ಕಲಬೆರಕೆ. ವಿಸಂಗತಿಯಿದೆಯೆಂದು ಕಾಣೆಯವರು ಅಭಿಪ್ರಾಯಪಟ್ಟಿದ್ದಾರೆ. ಶೃಂಗಾರದಿಂದ ಭಿನ್ನ ಭಿನ್ನ ರಸಗಳ ನಿಷ್ಪತ್ತಿಯನ್ನು ಹೇಳಿದ ಮೇಲೆ ಮಾಡಿದ ಎಲ್ಲ ರಸಗಳ ನಾಮನಿರ್ದೇಶವು ವಿಸಂಗತಿಯನ್ನು ತೋರಿಸುತ್ತದೆ ಎಂದು ಸಿದ್ಧವಾಗುವುದಿಲ್ಲ. ಆದರೂ ಈ ನಿರ್ದೇಶವು ಶಾಂತರಸವನ್ನು ಒಳಗೊಂಡ ಕಾರಣ ಇದು ಪ್ರಾಚೀನ ಅಗ್ನಿಪುರಾಣದಲ್ಲಿ ತರುವಾಯ ಸೇರಿಸಿದ ಸೇರ್ಪಡೆಯಾಗಿರಬಹುದು. ಭರತನ ನಾಟ್ಯಶಾಸ್ತ್ರದಲ್ಲಿ ಎಂಟೇ ರಸಗಳನ್ನು ಹೇಳಿದೆ. ಕ್ರಿ. ಶ. 8–9 ರಲ್ಲಿದ್ದ ಉದ್ಭಟ–ರುದ್ರಟರಲ್ಲಿ ಮೊಟ್ಟಮೊದಲು ಶಾಂತರಸದ ಉಲ್ಲೇಖವಿದ್ದು ಆನಂದವರ್ಧನನ ಧ್ವನ್ಯಾಲೋಕದಲ್ಲಿ ಅದಕ್ಕೆ ಹೆಚ್ಚಿನ ಮಹತ್ವ ಬಂದಿದೆ.

339ನೇ ಅಧ್ಯಾಯದ ಮುಂದಿನ ಭಾಗದಲ್ಲಿ ರಸನಿರೂಪಣೆಗೆ ಸಂಬಂಧಿಸಿದ ಸಾಂಪ್ರದಾಯಿಕ ವಿವರಗಳು ಹೆಚ್ಚಾಗಿದ್ದು ಭರತನಾಟ್ಯಶಾಸ್ತ್ರದ ಅನುಸರಣವು ಅವುಗಳಲ್ಲಿ ಎದ್ದುಕಾಣುತ್ತದೆ. ಆದರೂ ಎಂಟು ಸ್ಥಾಯಿಭಾವಗಳಿಗೆ ಮೂಲವಾದ ಮನಃಸ್ಥಿತಿಯನ್ನು ಅಗ್ನಿಪುರಾಣಕಾರನು ಸಂಕ್ಷೇಪವಾಗಿ ಹೇಳಿದ ರೀತಿ ಮನನೀಯವಾಗಿದೆ. 'ರತಿಯೆಂದರೆ ಮನಸ್ಸಿಗೆ ಅನುಕೂಲವಾದದ್ದರ ವಿಷಯದಲ್ಲಿ ಸುಖದ ಅನುಭವ. ಹರ್ಷ ಮುಂತಾದ್ದರಿಂದ ಮನಸ್ಸಿನ ವಿಕಾಸವೇ ಹಾಸ. ಇಷ್ಟಕ್ಷಯ ಮುಂತಾದ್ದರಿಂದ ಉಂಟಾಗುವ ಮನೋವೈಕ್ಲವ್ಯ ಅಥವಾ ದುಃಖಭಾರವೇ ಶೋಕ. ಪ್ರತಿಕೂಲವನ್ನು ಮಾಡುವ ವಸ್ತುವಿನ ಬಗ್ಗೆ ತೀಕ್ಷ್ಣತೆ ಮತ್ತು ಪ್ರಬೋಧ ಎಂಬುದು ಕ್ರೋಧ. ಪುರುಷಾನುಸಮವಾದ ಅರ್ಥವೆಂದರೆ ಉತ್ಸಾಹ (ಒಂದು ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ಮನಸ್ಸು ಪ್ರಕಟಗೊಳಿಸುವ ಅಸಾಧಾರಣ ಶಕ್ತಿಯೆಂದರೆ ಉತ್ಸಾಹ). ಚಿತ್ರಾದಿ ದರ್ಶನದಿಂದ ಆಗುವ ಚೇತೋವೈಕ್ಲವ್ಯವೇ ಭಯ. ದೌರ್ಭಾಗ್ಯವಾಹಿಯಾದ (ಅಸಹ್ಯವಾದ) ಪದಾರ್ಥಗಳ ನಿಂದೆಯೆಂದರೆ ಜಿಗುಪ್ಸೆ. 'ಅತಿಶಯೀನ' ಅರ್ಥದರ್ಶನದಿಂದ ಉಂಟಾಗುವ ಚಿತ್ತ ವಿಸ್ತೃತಿಯೆಂದರೆ ವಿಸ್ಮಯ.

ರೀತಿ ನಿರೂಪಣ ಎಂಬ 340ನೆಯ ಅಧ್ಯಾಯದಲ್ಲಿ ಪಾಂಚಾಲಿ. ಗೌಡಿ. ವೈದರ್ಭಿ. ಲಾಟಿ ಈ ಚತುರ್ವಿಧರೀತಿಗಳ ಸಾಂಪ್ರದಾಯಿಕ ನಿರೂಪಣೆಯಿರುತ್ತದೆ. ನಾಲ್ಕು ವೃತ್ತಿಗಳ ಲಕ್ಷಣ ನಿರ್ದೇಶದಲ್ಲಿ 'ಭರತನಿಂದ ಪ್ರಣೀತವಾದ್ದರಿಂದ ಭಾರತೀ ರೀತಿಯೆನ್ನುತ್ತಾರೆ' ಎಂಬಲ್ಲಿ ಭರತನ ಉಲ್ಲೇಖವಿದೆ. ಇದರಿಂದ ಅಗ್ನಿಪುರಾಣದ ಪ್ರಚಲಿತ ಆವೃತ್ತಿ ಭರತನ ಉತ್ತರಕಾಲೀನವಾದದ್ದೆಂಬುದು ಸ್ಪಷ್ಟವಾಗುತ್ತದೆ. ಮುಂದಿನ ನೃತ್ಯ ಮತ್ತು ಅಭಿನಯಗಳಿಗೆ ಸಂಬಂಧಿಸಿದ ಅಧ್ಯಾಯಗಳು ಭರತನ ನಾಟ್ಯಶಾಸ್ತ್ರ ಮತ್ತು ತತ್ಸಮಗ್ರಂಥಗಳಿಂದ ಉಪಕೃತವಾಗಿರುತ್ತವೆ. ಆದರೆ ಅಭಿನಯಾದಿ ನಿರೂಪಣಾದ 342 ನೇ ಅಧ್ಯಾಯದಲ್ಲಿ ಅಭಿನಯ ಪ್ರಕಾರ. ರಸವಿಚಾರ ಇವುಗಳ ನಡುವೆ ಇದ್ದಕ್ಕಿದ್ದಹಾಗೆ ಸಂದರ್ಭವಿಲ್ಲದೆ 'ಕಾವ್ಯಶೋಭಾಕರವಾದ ಧರ್ಮಗಳನ್ನು ಅಲಂಕಾರಗಳೆನ್ನುತ್ತಾರೆ.' ಅವು

ಶಬ್ದ, ಅರ್ಥ, ಉಭಯ ಎಂದು ಮೂಬಗೆಯಾಗಿರುತ್ತವೆ ಇತ್ಯಾದಿ (ಪದ್ಯ 17–20) ಅಲಂಕಾರ ವಿಚಾರವು ನುಸುಳಿರುತ್ತದೆ. ಮುಂದೆ ಶಬ್ದಾಲಂಕಾರ, ಅರ್ಥಾಲಂಕಾರಗಳ ಬಗ್ಗೆ ಪ್ರತ್ಯೇಕ ಅಧ್ಯಾಯಗಳಿರುವಾಗ ಈ ನುಸುಳಿಕೆ ಕಲಬೆರಕೆಗೆ ಒಂದು ಉದಾಹರಣೆಯಾಗಿ ಕಂಡುಬರುತ್ತದೆ. ಶಬ್ದಾಲಂಕಾರಕ್ಕೆ ಸಂಬಂಧಪಟ್ಟ 383 ನೇ ಅಧ್ಯಾಯದ ಅನುಪ್ರಾಸದ ವಿವರಣೆಯಲ್ಲಿ ಅಂತಸ್ಥವರ್ಣಗಳು ಊಷ್ಮವರ್ಣಗಳೊಡನೆ ಕೂಡಿದಾಗ ಕರ್ಣಾಟಿ, ಕೌಂತಲಿ, ಕೌಂತಿ ಮುಂತಾಗಿ ಆರುವಿಧಗಳಿರುತ್ತವೆ ಎಂದು ಹೇಳಿದೆ. ಇಲ್ಲಿ ಕರ್ಣಾಟ ಮತ್ತು ಕುಂತಲ ದೇಶಗಳ ಉಲ್ಲೇಖವನ್ನು ಗಮನಿಸಬೇಕು. ಇದು ಪ್ರಾಚೀನ ಮೂಲದಲ್ಲಿದ್ದುದೇ ಅಥವಾ ಆಮೇಲಿನದೇ ಎಂಬುದನ್ನು ನಿರ್ಧರಿಸಲು ಬರುವಂತಿಲ್ಲ. ಅರ್ಥಾಲಂಕಾರದ 344 ನೇ ಅಧ್ಯಾಯದಲ್ಲಿ ದಂಡಿ–ಭಾಮಹರ ದಟ್ಟವಾದ ಪ್ರಭಾವವನ್ನು ಕಾಣೆಯವರು ಗುರುತಿಸಿದ್ದಾರೆ. ತರುವಾಯದ ಕಾವ್ಯಗುಣದೋಷ ವಿವೇಕದ ಅಧ್ಯಾಯಗಳಲ್ಲಿಯೂ ಪರಂಪರೆಯ ಅನುಸರಣವು ಸ್ಫುಟವಾಗಿದೆ. ಇಷ್ಟಾದರೂ ಅಗ್ನಿಪುರಾಣದ ಪ್ರಾಚೀನ ಮೂಲದಲ್ಲಿದ್ದ ಪಠ್ಯಭಾಗ, ಆಮೇಲೆ ಕಾಲಕಾಲಕ್ಕೆ ಸೇರ್ಪಡೆಯಾದ ಭಾಗ ಇದನ್ನು ಖಚಿತಗೊಳಿಸುವುದು ಇಂದಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಆದರೆ ಪ್ರಾಚೀನ ಮೂಲವೊಂದು ಇದ್ದಿತೆಂದೂ ಅದರಲ್ಲಿ ಕಾವ್ಯಮೀಮಾಂಸೆಗೆ ಸಂಬಂಧಪಟ್ಟ ಮೌಲಿಕ ವಿಚಾರಗಳಿದ್ದುವೆಂದೂ ಊಹಿಸಲು ಸಾಕಷ್ಟು ಆಧಾರವಿದೆ ಎಂಬುದನ್ನು ತೋರಿಸಲು ನಾವು ಈ ಲೇಖನದಲ್ಲಿ ಪ್ರಯತ್ನ ಮಾಡಿದ್ದೇವೆ. ಕೆಲವು ಕಾವ್ಯಮೀಮಾಂಸಾ ಗ್ರಂಥಗಳ ಟೀಕಾಕಾರರು ಹೇಳಿದಂತೆ ಮತ್ತು ಕಾಣೆಯವರಂಥ ವಿದ್ವಾಂಸರು ಸೂಚಿಸಿರುವಂತೆ ಅಗ್ನಿಪುರಾಣದ ಪ್ರಾಚೀನ ಆವೃತ್ತಿಯೊಂದು ಇದ್ದಿತೆಂದು ತಿಳಿಯಲು ಅಭ್ಯಂತರವಿಲ್ಲ. ಪ್ರಚಲಿತ ಆವೃತ್ತಿಯಲ್ಲಿ ಬಹುಮಟ್ಟಿಗೆ ವಿಶ್ವಕೋಶ ರೀತಿಯ ಸಂಕಲನವಿದ್ದರೂ ಸಂಕಲಿತವಲ್ಲದ ಸ್ವತಂತ್ರ ವಿಚಾರಗಳು ಇದರಲ್ಲಿ ಕಂಗೊಳಿಸುತ್ತವೆ. ಪ್ರಾಚೀನ ಆವೃತ್ತಿಯಲ್ಲಿ ಅವು ಇನ್ನೂ ಹೆಚ್ಚಿನ ಪ್ರಮಾಣದಲ್ಲಿರಬಹುದು. ಕಾವ್ಯಮೀಮಾಂಸೆಯ ವಿಚಾರದಲ್ಲಿ ಭರತನು ಸಹ ಅಗ್ನಿಪುರಾಣದಿಂದ ಸ್ಫೂರ್ತಿಹೊಂದಿ ಕಾರಿಕೆಗಳ ರೂಪದಲ್ಲಿ ಅವನ್ನು ಸಂಕ್ಷೇಪಗೊಳಿಸಿ ಅಲಂಕಾರ ಶಾಸ್ತ್ರವನ್ನು ರಚಿಸಿದನೆಂಬುದು ಸತ್ಯವಾದರೆ ಅಗ್ನಿಪುರಾಣವು ಅಲಂಕಾರ ಶಾಸ್ತ್ರಕ್ಕೆ ಆದಿಮೂಲ ಗ್ರಂಥವೆಂಬ ಹಿರಿಯ ಸ್ಥಾನವನ್ನು ಪಡೆಯುತ್ತದೆ.

ವಿಕ್ರಮೋರ್ವಶೀಯದಲ್ಲಿ ನಾಲ್ಕನೆಯ ಅಂಕದ ಪ್ರಕ್ಷಿಪ್ತ ಭಾಗಗಳು

ಸಿ. ರಾಮನಾಥನ್

ಸಂಸ್ಕೃತ ಸಾಹಿತ್ಯದಲ್ಲಿ ಅನೇಕ ಪ್ರಸಿದ್ಧ ಗ್ರಂಥಗಳು ಸಾಹಿತ್ಯದ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಪ್ರಕ್ಷಿಪ್ತ ಭಾಗಗಳನ್ನು ಮೈಗೂಡಿಸಿಕೊಂಡಿರುವುದನ್ನು ನಾವು ಗಮನಿಸಬಹುದು. ಇವುಗಳಲ್ಲಿ ವಿಶೇಷವಾಗಿ ಅಜ್ಞಾತ ಕವಿಗಳೇ ರಚಿಸಿದ ಭಾಗಗಳು ಕಂಡುಬಂದರೂ ಅಲ್ಲಲ್ಲಿ ಜ್ಞಾತ ಕವಿಗಳು ರಚಿಸಿದ ಭಾಗಗಳೂ ಉಂಟು. ಪ್ರಕ್ಷಿಪ್ತ ಭಾಗಗಳನ್ನು ಗ್ರಂಥಗಳಲ್ಲಿ ಅಳವಡಿಸುವ ಈ ಪದ್ಧತಿ ಅತ್ಯಂತ ಪ್ರಾಚೀನವಾಗಿದ್ದು ಮಹಾಭಾರತ ಮತ್ತು ರಾಮಾಯಣಗಳಲ್ಲಿ ಇಂತಹ ಭಾಗಗಳನ್ನು ಧಾರಾಳವಾಗಿ ಕಾಣಬಹುದು. ಬೃಹತ್ ಸ್ವರೂಪವನ್ನು ತಳೆಯಲು ಬಹುಶಃ ಶತಮಾನಗಳನ್ನು ತೆಗೆದುಕೊಂಡ ಮಹಾಭಾರತ ಮತ್ತು ಅದೇ ಜಾಡಿನಲ್ಲಿ ಹಿಗ್ಗಿದ ರಾಮಾಯಣ ಇವು ಪ್ರಕ್ಷಿಪ್ತ ಭಾಗಗಳನ್ನು ಎಂದು ಹೇಗೆ ಮೈಗೂಡಿಸಿಕೊಂಡವು ಎಂಬುದು ಎಂದಿಗೂ ವಿವಾದಾಸ್ಪದ ವಿಷಯವೇ. ಈ ಗ್ರಂಥಗಳ ಪ್ರಕ್ಷಿಪ್ತ ಭಾಗಗಳು ಆಯಾ ಗ್ರಂಥಗಳ ಧಾರ್ಮಿಕ ಹಿನ್ನೆಲೆಯನ್ನು ವಿಸ್ತಾರಗೊಳಿಸುವ ಉದ್ದೇಶವನ್ನಲ್ಲದೆ ಜನರ ಅಭಿರುಚಿಗೆ ಹೊಂದುವಂತೆ ಗ್ರಂಥಗಳ ಬೆಳವಣಿಗೆಯನ್ನು ಸಾಧಿಸುವ ಉದ್ದೇಶವನ್ನು ಹೊಂದಿದ್ದುವೆಂದು ತೋರುತ್ತದೆ.[1] ಆದರೆ ಲೌಕಿಕ ಸಾಹಿತ್ಯದಲ್ಲಿ ಪ್ರಕ್ಷಿಪ್ತ ಭಾಗಗಳು ಏಕೆ ಸೇರಿಸಲ್ಪಟ್ಟುವು ಎಂಬುದಕ್ಕೆ ಸ್ಥೂಲವಾಗಿ ಈ ಕಾರಣಗಳನ್ನು ಕೊಡಬಹುದು.

1. ಪ್ರಾಚೀನ ಕಾವ್ಯಗಳ ಭಾಗಗಳು ಕಳೆದುಹೋದುವೆಂದು.
(ಉದಾ: ಅಶ್ವಘೋಷನ ಬುದ್ಧಚರಿತ ಕಾವ್ಯ.)

2. ತಾವು ಪ್ರಕ್ಷೇಪ ಮಾಡಲಿರುವ ಕಾವ್ಯ ಅಪೂರ್ಣವೆಂದು.
(ಉದಾ: ಬಾಣ ಭಟ್ಟನ ಕಾವ್ಯವನ್ನು ಭೂಷಣ ಭಟ್ಟನು ಪೂರೈಸಿದಂತೆ)

3. ತಮ್ಮ ತಮ್ಮ ಅಗತ್ಯಗಳಿಗೆ ತಕ್ಕಂತೆ ಕಾವ್ಯಗಳನ್ನು ಬೆಳೆಸಿಕೊಂಡು ಅವುಗಳನ್ನು ಮತ್ತಷ್ಟು ಮನೋಜ್ಞವನ್ನಾಗಿ ಮಾಡಲು.
(ಉದಾ: ಕುಮಾರ ಸಂಭವ. ವಿಕ್ರಮೋರ್ವಶೀಯ ಮುಂತಾದುವು)

ಹೀಗೆ ಆಗಿಂದಾಗ್ಗೆ ಕವಿಗಳು ಸ್ವಂತ ರಚನೆಯಲ್ಲದೆ ನಾನಾ ಕಾರಣಗಳಿಂದ ಇತರ ಪ್ರಸಿದ್ಧ ಕಾವ್ಯಗಳ ಮೇಲೂ ಹಸ್ತಕ್ಷೇಪ ಮಾಡುತ್ತಿದ್ದರೆಂಬುದು ನಿರ್ವಿವಾದ. ಆದರೆ

ಇಂತಹ ಸಂದರ್ಭಗಳಲ್ಲಿ ಇವುಗಳನ್ನು ಸೇರಿಸಿದ ಕವಿ ಯಾರು, ಯಾವ ಕಾಲದಲ್ಲಿ ಸೇರಿಸಿದ ಮತ್ತು ಯಾವ ಉದ್ದೇಶವಿಟ್ಟು ಸೇರಿಸಿದ ಎಂಬ ಅಂಶಗಳು ಅನೇಕ ವೇಳೆ ಸಮಸ್ಯೆಗಳಾಗಿಯೇ ಉಳಿದುಬಿಡುತ್ತವೆ. ಇಂತಹ ಸಮಸ್ಯಾತ್ಮಕ ಭಾಗಗಳಲ್ಲಿ ವಿಕ್ರಮೋರ್ವಶೀಯ ನಾಟಕದ ನಾಲ್ಕನೆಯ ಅಂಕವೂ ಒಂದು.

ವಿಕ್ರಮೋರ್ವಶೀಯದ ನಾಲ್ಕನೆಯ ಅಂಕದಲ್ಲಿ ಪ್ರಧಾನವಾಗಿ ಕಾಣುವ ಪಾತ್ರ ಪುರೂರವನೊಬ್ಬನೇ. ಗಂಧಮಾದನ ಪರ್ವತದಲ್ಲಿ ಊರ್ವಶಿಯೊಡನೆ ವಿಹರಿಸ ಹೊರಟ ಈ ದೊರೆ ಅವಳು ಅನಿರೀಕ್ಷಿತವಾಗಿ ಕಣ್ಮರೆಯಾದಾಗ ವಿರಹದಿಂದ ಉನ್ಮಾದಾವಸ್ಥೆಗೆ ಗುರಿಯಾಗುತ್ತಾನೆ.[2] ಹೀಗೆ ಉನ್ಮತ್ತನಾದ ದೊರೆ ಆ ಪರ್ವತದ ಸುಂದರವಾದ ಪ್ರಕೃತಿಯ ಪರಿಸರದಲ್ಲಿ ಅಡಗಿರಬಹುದಾದ ಊರ್ವಶಿಯನ್ನು ಅರಸುತ್ತಾನೆ. ಪರ್ವತದ ಹಲವಾರು ವಸ್ತುಗಳಲ್ಲಿ. ಪಶುಪಕ್ಷಿಗಳಲ್ಲಿ ಮತ್ತೆ ಮತ್ತೆ ಊರ್ವಶಿಯ ಸೌಂದರ್ಯದ ಪ್ರತಿಬಿಂಬವನ್ನು ವಿಧವಿಧವಾಗಿ ಕಾಣುತ್ತಾನೆ. ಈ ಅಂಕದಲ್ಲಿ ಕವಿ ರಾಜನ ಅಸಂಬದ್ಧ ಮಾತುಗಳಿಂದ ದೃಶ್ಯದ ದಾರುಣತೆಯನ್ನು ಮೂಡಿಸಿರುವನಲ್ಲದೆ ಹಲವಾರು ವರ್ಣನಾತ್ಮಕ ಗೀತೆಗಳನ್ನು ಜೋಡಿಸಿದ್ದಾನೆ. ನಾವು ಕಾಣುವ ಪ್ರಕ್ಷಿಪ್ತ ಭಾಗಗಳು ಈ ಗೀತೆಗಳ ನಡುನಡುವೆ ಸೇರಿಹೋಗಿ. ಪ್ರವೇಶಕವೂ ಸೇರಿದಂತೆ. ಅಂಕದುದ್ದಕ್ಕೂ ಚದುರಿಹೋಗಿದೆ. ಒಂದು ಸಂಸ್ಕೃತ ಪದ್ಯವೂ ಸೇರಿದರೆ ಪ್ರಕ್ಷಿಪ್ತ ಭಾಗಗಳೆಂದು ಪರಿಗಣಿಸಲಾದ ಈ ಪ್ರಾಕೃತ ಪದ್ಯಗಳ ಸಂಖ್ಯೆ ಮೂವತ್ತೆರಡು. ಈ ಪ್ರಾಕೃತ ಪದ್ಯಗಳನ್ನು ಜೋಡಿಸಿದವರ ಕಾಲ ಮತ್ತು ದೇಶಗಳು ಸಮಸ್ಯೆಗಳೇ ಆದರೂ ಈ ಸಂಪ್ರದಾಯ ಉತ್ತರದಲ್ಲಿದ್ದುದೇನೋ ನಿಜ. ಏಕೆಂದರೆ ಈ ಅಪಭ್ರಂಶದ ಪದ್ಯಗಳನ್ನೊಳಗೊಂಡ ಹಸ್ತಪ್ರತಿಗಳೆಲ್ಲ ಉತ್ತರದಿಂದ ಬಂದುವೇ. ಅಲ್ಲದೆ ಔತ್ತರೇಯ ಪಾಠಗಳಲ್ಲಿ ನೃತ್ಯ. ಗೀತೆಗಳಿಂದ ತುಂಬಿ ಈ ನಾಟಕ ತ್ರೋಟಕ[3]ವೆನಿಸಿಕೊಂಡಿದೆ. ದಾಕ್ಷಿಣಾತ್ಯ ಪಾಠಗಳಲ್ಲಿ ಈ ನಾಟಕ 'ನಾಟಕ' ವಾಗಿಯೇ ಉಳಿದಿದೆ. ಈ ಅಂಕದ ಮೂಲಭಾಗದಲ್ಲಿಯೇ ಪ್ರಧಾನವಾಗಿ ಏಕೈಕ ಪಾತ್ರವಾಗಿ ಹಾಡಿ ಕುಣಿಯುವ ನಮ್ಮ ನಾಯಕನಿಗೆ ಈ ಪ್ರಾಕೃತ ಪದ್ಯಗಳ ನೃತ್ಯ, ಗೀತ, ಗತಿ ವಿಶೇಷಗಳ ನಿರ್ದೇಶನವನ್ನೂ ನೀಡಿ ಅವನನ್ನೇ ಕೇಂದ್ರವನ್ನಾಗಿಟ್ಟುಕೊಂಡು ಅಂಕವನ್ನು ಹಿಗ್ಗಿಸಿರುವುದು ವಿಸ್ಮಯವನ್ನುಂಟುಮಾಡುತ್ತದೆ. ಸರಿಯಾಗಿ ಹಾಡಿ ಕುಣಿದರೆ ಈ ಅಂಕ ಹಲವಾರು ಗಂಟೆಗಳನ್ನೇ ತೆಗೆದುಕೊಂಡೀತು. ಇಷ್ಟೊಂದು ವಿಸ್ತಾರವಾದ ಪಾತ್ರ ನಿರ್ವಹಣೆ ಏಕಕಾಲದಲ್ಲಿ ಕಲಾವಿದನಿಗೆ ಸಾಧ್ಯವಿತ್ತೆ ಅಥವಾ ಅವನ ಪಾತ್ರದಲ್ಲಿ ಬೇರಾರಾದರೂ ನರ್ತಿಸುತ್ತಿದ್ದರೆ ಎಂಬ ಸಂದೇಹವೂ ಬಂದೀತು.

ಈ ಪ್ರಾಕೃತ ಪದ್ಯಗಳೆಲ್ಲ ಪ್ರಕ್ಷಿಪ್ತ ಭಾಗಗಳು ಎಂದು ಸಾಧಾರಣವಾಗಿ ಎಲ್ಲ ವಿದ್ವಾಂಸರ ಅಭಿಪ್ರಾಯ. ಈ ಪ್ರಾಕೃತ ಪದ್ಯಗಳು ಪ್ರಕ್ಷಿಪ್ತ ಭಾಗಗಳೆಂದು ಹೇಳಲು ಕಾರಣಗಳನ್ನು ಹೀಗೆ ಸಂಗ್ರಹಿಸಬಹುದು.

1. ನಾಟಕದ ನಾಯಕ ಪುರೂರವಸ್ ದೊರೆ. ಧೀರೋದಾತ್ತ ನಾಯಕ. ಈ ಉತ್ತಮ ಪಾತ್ರ ಪ್ರಾಕೃತದಲ್ಲಿ ಹಾಡುವುದು ಸಂಪ್ರದಾಯಕ್ಕೆ ವಿರುದ್ಧ.

2. ಪ್ರಾಕೃತ ಭಾಗದಲ್ಲಿ ಅನೇಕ ಪುನರುಕ್ತಿಗಳಿವೆ. ಅಷ್ಟೇ ಅಲ್ಲ. ಅವುಗಳಿಗೂ ಮೂಲ ಸಂಸ್ಕೃತ ಭಾಗಕ್ಕೂ ಸಾಮಾನ್ಯವಾಗಿ ನೇರವಾದ ಯಾವ ಸಂಬಂಧವೂ ಇಲ್ಲ.

3. ಈ ಪದ್ಯಗಳೆಲ್ಲ ದೊರೆಯಿಂದ ಹಾಡಲ್ಪಟ್ಟರೂ ಅಚ್ಚರಿಯೆಂದರೆ ಅಲ್ಲಲ್ಲಿ ಮೂರನೆಯವರಿಂದ ಹಾಡಲ್ಪಟ್ಟಂತಿದೆ.

4. ನಾಲ್ಕನೆಯ ಅಂಕದ ಕರುಣರಸಕ್ಕೆ ಅವು ಪೋಷಕವಾಗಿಲ್ಲ. ಬದಲಾಗಿ ಮೂಲದಲ್ಲಡಗಿರುವ ರಸ ಸನ್ನಿವೇಶವನ್ನು ಪದೇ ಪದೇ ತೊಡಕುಗೊಳಿಸುತ್ತವೆ.

5. ಉತ್ತಮ ವ್ಯಾಖ್ಯಾನಕಾರನಾದ ಕಾಟಯವೇಮನು ತನ್ನ ಅಧಿಕೃತವಾದ ವ್ಯಾಖ್ಯಾನದಲ್ಲಿ ಪ್ರಾಕೃತ ಭಾಗಗಳನ್ನು ಬಿಟ್ಟಿರುವನಲ್ಲದೆ ಅವುಗಳ ಬಗ್ಗೆ ತನ್ನ ತಿಳುವಳಿಕೆಯನ್ನೂ ತೋರ್ಪಡಿಸುವುದಿಲ್ಲ.[4]

6. ಕಾಳಿದಾಸನ ಕಾಲದ ಪ್ರಾಕೃತಕ್ಕೂ ಈ ಪದ್ಯಗಳಲ್ಲಿ ಕಾಣುವ ಅಪಭ್ರಂಶಕ್ಕೂ ಅಂತರ ಗೋಚರವಾಗುತ್ತದೆ.[5]

ಈ ಕಾರಣಗಳೇ ಅಲ್ಲದೆ ಹೆಚ್ಚು ಹಸ್ತಪ್ರತಿಗಳು ಈ ಭಾಗಗಳನ್ನು ಒಳಗೊಳ್ಳದೆ ಈ ಪ್ರಾಕೃತ ಪದ್ಯಗಳಿಗೆ ಗಮನ ನೀಡದಿರುವುದು ಈ ಭಾಗ ಪ್ರಕ್ಷಿಪ್ತವೆಂಬುದನ್ನು ದೃಢೀಕರಿಸುತ್ತವೆ.[6]

ಈ ಪ್ರಾಕೃತ ಪದ್ಯಗಳುಳ್ಳ ವಿಕ್ರಮೋರ್ವಶೀಯದ ರಂಗಪ್ರದರ್ಶನ ಪ್ರಾಯಶಃ ಕೇವಲ ಯಾವುದೋ ಒಂದು ಪ್ರದೇಶದಲ್ಲಿ ಪ್ರಚಲಿತವಿದ್ದು ಅವು ಅಷ್ಟು ಪ್ರಚಾರ ಪಡೆಯದೇ ಹೋಗಿರಲು ಸಾಧ್ಯ. ಅಲ್ಲದೆ ಇಂತಹ ಒಂದು ಪರಂಪರೆ ಪ್ರಾಯಶಃ ಜನಪ್ರಿಯ ಮೂಲಗಳಲ್ಲಿ ಬೆಳೆದು ಬಂದು ಅದನ್ನು ರಚಿಸಿದವರು ನಾಟಕದ ನಿಯಮಗಳನ್ನು ಅನುಸರಿಸುವ ಗೋಜಿಗೆ ಹೋಗಿರಲಾರರು. ಆದರೆ ಅವರು ಉತ್ತಮ ಕಲಾವಿದರಿದ್ದು ವಿಕ್ರಮೋರ್ವಶೀಯದ ಈ ಭಾಗವನ್ನು ಮೆಚ್ಚಿ ನಾಲ್ಕನೆಯ ಅಂಕದ ಪ್ರಾಕೃತಿಕ ಹಿನ್ನೆಲೆಯನ್ನು ಅಳವಡಿಸಿಕೊಂಡು ಆ ಭಾಗವನ್ನು ಮತ್ತಷ್ಟು ಆಕರ್ಷಕವಾದ ಆಪೇರಾ ಮಾಡಲು ಯತ್ನಿಸಿರಬಹುದು.[7] ಅಂತೂ ಕಾಳಿದಾಸನ (ಅನಂತರ?) ನಾಟಕಗಳನ್ನು ಆಡುತ್ತಿದ್ದ ನಟನಟಿಯರು ಕ್ರಮೇಣ ಈ ನಾಟಕದ ನಾಲ್ಕನೆಯ ಅಂಕವನ್ನು 'ಪ್ರೇಕ್ಷಕರಿಗೆ ರಮಣೀಯವಾಗುವಂತೆ' ಮಾಡಿರಬಹುದು.

ಈ ಪ್ರಾಕೃತ ಪದ್ಯಗಳನ್ನು ಹಲವಾರು ನೃತ್ಯ, ಗೀತ ಮತ್ತು ಗತಿ ವಿಶೇಷಗಳಿಗೆ ಹೊಂದಿಸಲಾಗಿದೆ. ವಿರಹಕ್ಕೆ ತುತ್ತಾದ ದೊರೆಯ ಮಾತುಗಳಲ್ಲಿ ವಿರಹದ ಸ್ಪಂದನ ಇರಬೇಕಷ್ಟೆ. ಆದ್ದರಿಂದ ಇವುಗಳಲ್ಲಿ ವಿರಹದ ನಾನಾಭಾವಗಳು ಕೇವಲ ಲಾಕ್ಷಣಿಕವಾಗಿ

ಅನ್ಯೋಕ್ತಿ ಅಥವಾ ಅನ್ಯಾಪದೇಶಗಳಿಂದ ಹೊರಪಡುತ್ತವೆ.[9] ಇವುಗಳ ಗಾನ ನರ್ತನಗಳಿಂದ ನಾಟಕದ ಗತಿ (tempo) ಹಾಳಾಗಿರುವುದೇನೋ ನಿಜ. ಆದರೆ ಮೂಲದಲ್ಲಿ ಸಹೃದಯನು ಅನುಭವಿಸುವ ಕೇವಲ ವಿರಹದ ಮಾತುಗಳಿಂದಾಗುವ ಬೇಸರಿಕೆಯನ್ನು (monotony) ಈ ಗಾನ ನರ್ತನಗಳು ನಿಸ್ಸಂದೇಹವಾಗಿ ಹೋಗಲಾಡಿಸುತ್ತವೆ. ಹೇಗಾದರೂ, ಕೇವಲ ಈ ಭಾಗಗಳನ್ನೇ ಪರೀಕ್ಷಿಸಿದಲ್ಲಿ ಇವುಗಳಿಂದ ಕಣ್ಣು ಮನಸ್ಸುಗಳು ತಣಿಯುವುವೇ ಹೊರತು (ಮೂಲದ ಹಿನ್ನೆಲೆಯಲ್ಲಿ) ಹೃದಯ ತಣಿಯಲಾರದು ಎಂದೆನಿಸದೇ ಇರದು. ವಿರಹದ ನೋವಿಗೆ ಗಾನ-ನರ್ತನಗಳ ಚೌಕಟ್ಟು ಸಲ್ಲದು.

ನಾಟಕದ ಈ ಅಂಕದುದ್ದಕ್ಕೂ ಕಾಣಬರುವ ಈ ಪ್ರಾಕೃತ ಪದ್ಯಗಳಿಗೆ ಅಳವಡಿಸಿರುವ ನೃತ್ಯ, ಗೀತ ಮತ್ತು ಗತಿ ವಿಶೇಷಗಳ ಸಂಖ್ಯೆ ಹದಿನೇಳು. ಇವುಗಳೆಲ್ಲ ಪರಂಪರಾಗತವಾಗಿರುವವಲ್ಲದೆ ಹಲವಾರು ಭರತನ ಕಾಲದವೆಂಬುದನ್ನೂ ಗಮನಿಸಬಹುದು. ಕೇವಲ ಮೂವತ್ತೆರಡು ಪದ್ಯಗಳಿಗೆ ಹದಿನೇಳು ಬಗೆ ರಂಗ ನಿರ್ದೇಶನಗಳಿವೆಯೆಂದರೆ ಈ ಗಾನ ನರ್ತನಗಳ ವೈವಿಧ್ಯ ಎಷ್ಟೆಂಬುದು ಮನಸ್ಸಿಗೆ ಬಂದೀತು. ಈ ವೈವಿಧ್ಯದಿಂದ ಮನೋರಂಜನೆಯನ್ನು ಎಷ್ಟೊಂದು ಮಟ್ಟಿಗೆ ಸಾಧಿಸಿದ್ದಿರಬಹುದೆಂಬುದೂ ಮನಸ್ಸಿಗೆ ಬಾರದಿರದು. ಇದೇ ಇದರ ಜನಪ್ರಿಯತೆಗೆ ಅನುವಾಗಿರಲೂ ಸಾಧ್ಯ. ಈ ಪ್ರಾಕೃತ ಪದ್ಯಗಳನ್ನು ಅರಿಯುವಾಗ ರಂಗನಾಥನ ವ್ಯಾಖ್ಯಾನ ಬಹಳ ಸಹಕಾರಿಯಾಗಿದೆ. ಅಲ್ಲಲ್ಲಿ ಭರತನಿಂದ ಪರಿಭಾಷೆಗಳನ್ನು ನೀಡಿ, ನಿರ್ದೇಶನದ ತಾಂತ್ರಿಕತೆಯನ್ನು ಅವನು ವಿಶದಪಡಿಸಿದ್ದಾನೆ.

ಈ ನೃತ್ಯ, ಗಾನ, ಗತಿ ವಿಶೇಷಗಳಲ್ಲಿ ಚರ್ಚರೀ ಅತ್ಯಂತ ಮುಖ್ಯವಾದುದು. ಇದು ರಾಗಸಂಯೋಜನೆಗೆ ನಿರ್ದೇಶಕವಾಗಿದ್ದು ಇಪ್ಪತ್ತಮೂರು ಬಾರಿ ಪ್ರಯೋಗಿಸಲ್ಪಟ್ಟಿದೆ. ಆದರೂ ಈ ಪದದ ಅರ್ಥವ್ಯಾಪ್ತಿ ಬಹಳ; ಚಪ್ಪಾಳೆಯಾಟ, ಹರ್ಷಕ್ರೀಡೆ, ವಸಂತ ಸಮಯಕ್ರೀಡೆ ಇತ್ಯಾದಿ. 'ದ್ರುತಮಧ್ಯಲಯಗಳನ್ನು ಆಶ್ರಯಿಸಿ ಅಥವಾ ಪ್ರತಿಮಂಠಕ ರಾಸಕದಲ್ಲಿ ನಟಿಸಿ ಪ್ರೇಮಪೂರ್ಣಳಾದ ನಟಿಯು ನುಡಿದರೆ ದ್ರುತಮಧ್ಯವೃತ್ತದ ಚರ್ಚರೀ' ಪ್ರಯೋಗವಾಗುತ್ತದೆ.[10] ಲಘುವೇ ಮುಂತಾದ ತಾಳಗಳು ರಾಸವೆನಿಸುತ್ತವೆ.[11] ಚರ್ಚರಿಕಾ ಒಂದು ಗತಿ ವಿಶೇಷ ಅಥವಾ ತಾಲವಿಶೇಷ. ಆದರೆ ಇದೇ ಸಂದರ್ಭದಲ್ಲಿ ರಂಗನಾಥನು 'ಚರ್ಚರೀ' ಪ್ರಯೋಗವನ್ನು ಮತ್ತೆ ಹೀಗೆ ವಿಶದಪಡಿಸಿದ್ದಾನೆ – 'ವಿರಾಮಾಂತದ ದ್ರುತವೆರಡು ಮತ್ತು ಎಂಟು ಲಘುಗಳು ಚರ್ಚರೀ'.[12] ('ವಿರಾಮ' ಛಂದಸ್ಸಿನ ಚರಣಗಳಲ್ಲಿ ಕಾಣುವ ತಡೆ, 'ಯತಿ'ಯ ಅಂಗ). ಚರ್ಚರೀ ಎಂಬುದು ಚಪ್ಪಾಳೆಯೊಡನೆ ಆಡುವ ಒಂದು ನೃತ್ಯ ಎಂದು ರುದ್ರ ಎಂಬುವನ ಅಭಿಪ್ರಾಯ.[13] ಎಡಬಲದ ಅಂಗಗಳ ಅಭಿನಯದೊಡನೆ ಸಮವಾಗಿ ಚಲಿಸುತ್ತಾ ಕಾಮಿನಿಯರ ಜೋಡಿ ವರ್ಣ ಮತ್ತು ತಾಳಗಳಿಗೆ ಅನುಗುಣವಾಗಿ ರಂಗವನ್ನು ಪ್ರವೇಶಿಸುವುದಂ ಚರ್ಚರೀ ಎನಿಸುತ್ತದೆ[14] ಎಂದು ಭಾವಪ್ರಕಾಶನದಲ್ಲಿ ಹೇಳಿದೆ. ಈ

ಕೊನೆಯ ಪರಿಭಾಷೆಗನುಗುಣವಾಗಿ ಒಂದು ದೃಶ್ಯವನ್ನು ರತ್ನಾವಳೀ ನಾಟಕದಲ್ಲಿ ಕಾಣಬಹುದು. ವಸಂತೋತ್ಸವದ ಸಂದರ್ಭದಲ್ಲಿ ಮಹಾರಾಜನ ಮುಂದೆ ದ್ವಿಪದೀ ಖಂಡದಲ್ಲಿ ಹಾಡುತ್ತಾ ಚೇಟಿಯರಿಬ್ಬರು ತಮ್ಮ ನೃತ್ಯದಿಂದ ಮಹಾರಾಜನ ಮೈಮರೆಸುತ್ತಾರೆ. ಆದರೆ ಅವರನ್ನು ಅನುಕರಣೆ ಮಾಡುವಾಗ ವಿದೂಷಕನು ಚರ್ಚರಿಯಲ್ಲಿ ನರ್ತಿಸಿ ಬಿಡುತ್ತಾನೆ. ಹೀಗೆ ಅರಿವಿಲ್ಲದೆ ಮಾಡಿದ ವಿದೂಷಕನ ನೃತ್ಯಭಂಗಿ ಹಾಸ್ಯಕ್ಕೊಂದು ಆಸ್ಪದ.

ಚರ್ಚರೀಯನ್ನು ಬಿಟ್ಟರೆ ದ್ವಿಪದಿಕಾ ಬಹಳವಾಗಿ ಕಾಣಬರುವ ರಂಗನಿರ್ದೇಶನ. ಇದು ಬರುವುದು ಏಳು ಬಾರಿ. ಇದೊಂದು ನೃತ್ಯ ಹಾಗೂ ಗೀತಿ ವಿಶೇಷ. ಇದರಲ್ಲಿ ನಾಲ್ಕು ವಿಧ. ಶುದ್ಧಾ. ಖಂಡಾ, ಮಾತ್ರಾ ಮತ್ತು ಸಂಪೂರ್ಣಾ. ದ್ವಿಪದೀ 'ಕರಣ' ಎಂಬ ತಾಳದಿಂದ ಹಾಡಲ್ಪಡುತ್ತದೆ.[15] ಮೇಲೆ ಹೇಳಿದ ರತ್ನಾವಳಿಯ ಸನ್ನಿವೇಶದಲ್ಲಿ ಚರ್ಚರಿಯೆಂದು ವಿದೂಷಕನು ಬಗೆದ ನೃತ್ಯ ದ್ವಿಪದೀಖಂಡ. ರಂಗನಾಥನು ತನ್ನ ವ್ಯಾಖ್ಯಾನ ಸರಣಿಯಲ್ಲಿ ವಿಂಗಡಿಸಿರುವಂತೆ ಇನ್ನಿತರ ನಿರ್ದೇಶನಗಳು ಹೀಗಿವೆ :

1) ಗೀತಿ ವಿಶೇಷಗಳು — ಜಂಭಾಲಿಕಾ. ಖಂಡಕ. ಖಂಡಿಕಾ. ಖಂಡಧಾರಾ[16]
2) ರಾಗ ವಿಶೇಷಗಳು — ಭಿನ್ನಕ, ವಲಂತಿಕಾ, ಕಕುಭ.
3) ನಾಟ್ಯ ವಿಶೇಷಗಳು — ಕುಟಿಲಿಕಾ. ಮಲ್ಲಘಟೀ ಮತ್ತು ಗಲಿತಕ
4) ಸಂಸ್ಥಾನ ವಿಶೇಷಗಳು— ಅರ್ಧಜತುರಸ್ರಕ ಮತ್ತು ವಾಮಕ.

ಇವಲ್ಲದೆ. ಚರ್ಚರಿಕಾ ಗತಿ ವಿಶೇಷ ಅಥವಾ ತಾಲ ವಿಶೇಷ. ಸ್ಥಾನಕ ಎಂಬುದು ಒಂದು ಬಗೆಯ ಆಲಾಪ. ಆಕ್ಷಿಪ್ತಿಕಾ ಪ್ರವೇಶ ಮಾಡುವ ಕಾಲದಲ್ಲಿ ಮಾಡುವ ಒಂದು ನೃತ್ಯ ಭಂಗಿ. ಖುರಕ ಎಂಬುದು ನೃತ್ಯ ವಿಶೇಷ. ಖಂಡಿಕಾ ಎಂಬುದು ಒಂದು ಗದ್ಯಭೇದ. ಹೀಗೆ ಕೇವಲ ಒಂದು ಅಂಕದ ಆವರಣದಲ್ಲಿ ಇಷ್ಟೊಂದು ಬಗೆಯ ನೃತ್ಯಗೀತಾದಿಗಳನ್ನು ಅಳವಡಿಸಿರುವುದು ಪ್ರಾಯಶಃ ಬೇರೆಲ್ಲೂ ಸಿಗದು. ಆದರೆ ಇದರಲ್ಲಿನ ಬಹುಮಟ್ಟಿನ ಭಾಗವನ್ನು ಪುರೂರವನ ಪಾತ್ರಧಾರಿಯಾದ ಕೇವಲ ಒಬ್ಬ ಕಲಾವಿದನೇ ನಡೆಸುವಂತೆ ಮಾಡಿರುವುದು ಸೋಜಿಗವೇ ಸರಿ. ನಮ್ಮ ಅಭಿಪ್ರಾಯದಲ್ಲಿ ಇದು ಅಳತೆ ಮೀರಿದ್ದು: ಕಾಳಿದಾಸನಾದರೂ ಅನಗತ್ಯವಾಗಿ ಈ ಅಂಕವನ್ನು ಇಷ್ಟುಮಟ್ಟಿಗೆ ಬೆಳಸಿಕೊಂಡು ಹೋಗಿರಲಾರ ಎಂದೆನಿಸದಿರದು.

ಈ ಪ್ರಾಕೃತ ಪದ್ಯಗಳು ಏನನ್ನು ವರ್ಣಿಸುತ್ತವೆ? ನಾಲ್ಕನೆಯ ಅಂಕದ ಪ್ರವೇಶಕದಲ್ಲಿ ಎರಡನೆಯ ಮತ್ತು ಕೊನೆಯ ಪ್ರಾಕೃತ ಪದ್ಯಗಳು ಒಂದೇ. ಈ ಪದ್ಯವಲ್ಲದೆ ಮತ್ತೆರಡು ಪದ್ಯಗಳು ಪ್ರವೇಶಕದಲ್ಲಿ ಕಾಣಸಿಗುತ್ತವೆ. ಮೊದಲನೆಯ ಪದ್ಯ ಊರ್ವಶಿಯಿಂದ ದೂರವಾದ ಚಿತ್ರಲೇಖೆಯ ವರ್ಣನೆಯನ್ನು ಹೊಂದಿದ್ದು ರಂಗದ ಮೇಲೆ ಬರಲಿರುವ ಚಿತ್ರಲೇಖೆಯನ್ನು ಕುರಿತು ನೇಪಥ್ಯದಲ್ಲಿ ಹಾಡುವ ಸನ್ನಿವೇಶವನ್ನು

ಮೂಡಿದೆ. ಇತರ ಪದ್ಯಗಳಲ್ಲಿ ವಿರಹದಲ್ಲಿರುವ ಊರ್ವಶಿಯ ಕೋಮಲತೆಯನ್ನು ಸಾಂಕೇತಿಕವಾಗಿ ಸೂಚಿಸುವ ಹಂಸ ಜೋಡಿಗಳ ವರ್ಣನೆಯಿದೆ.

ನಾಲ್ಕನೆಯ ಅಂಕದ ಮುಖ್ಯಭಾಗದಲ್ಲಿ ಉದ್ದಕ್ಕೂ ವಿವಿಧ ಪ್ರಾಣಿಗಳ ಹಾಗೂ ಪಕ್ಷಿಗಳ ವರ್ಣನೆಗಳು ಅನ್ಯೋಕ್ತಿ ಸಾಧಕಗಳಾಗಿ ಕೊಡಲ್ಪಟ್ಟಿವೆ. ಆದರೂ ದೊರೆಯ ಉಚಿತ ಹಾಗೂ ಗಾಂಭೀರ್ಯ ಸೂಚಿಸಲೆಂದೋ ಏನೋ ಸಾಮಾನ್ಯವಾಗಿ ವಿರಹಕ್ಕೀಡಾದ ಆನೆಯೊಡೆಯನ ವರ್ಣನೆಗಳು ಹೆಚ್ಚು. ಒಂಬತ್ತು ಪದ್ಯಗಳಲ್ಲಿ ಗಜೇಂದ್ರನಾಥ. ಗಜಯೂಥಪತಿ. ಗಜಪತಿ. ಗಜವರ. ಕರಿವರ. ಗಜೇಂದ್ರ ಮುಂತಾದ ಪದಗಳಿದ್ದು ಸಲಗದ ವರ್ಣನೆ ಗಮನೀಯವಾಗಿದೆ. ನಾಟಕದ ಭಾಗಕ್ಕೆ ತೀರ ಸಂಬಂಧಿಸದೇ ಇರುವ ಪದ್ಯಗಳೂ ಉಂಟು. ಉದಾಹರಣೆಗೆ ಕಲ್ಪತರುವೇ ನರ್ತಿಸುವ ಸನ್ನಿವೇಶ![17] ಪ್ರಿಯಾವಿರಹಕ್ಕೆ ಸಂಬಂಧಿಸಿದಂತೆ ಇದರ ಔಚಿತ್ಯವೇನೂ ಕಾಣದು. ಮತ್ತೊಂದೆಡೆ ಐರಾವತದ ವರ್ಣನೆ ಮೂಲಕ್ಕೆ ಸಂಬಂಧವಿಲ್ಲದೆ ಜೋಡಿಸಲ್ಪಟ್ಟಿರುವುದು ವ್ಯಕ್ತವಾಗುತ್ತದೆ.[18] ದೊರೆಯು ಕೃಷ್ಣಸಾರ ಜಿಂಕೆಯನ್ನು ಕಂಡು ಅದನ್ನು ವರ್ಣಿಸುವ ಭಾಗದಲ್ಲಿ ನವಿಲೆ ಸೇರಿಹೋಗಿದೆ. ಇನ್ನೊಂದು ವಿಶೇಷವೆಂದರೆ ಈ ಪದ್ಯ ಸಂಸ್ಕೃತದಲ್ಲಿದೆ.

ಅಲ್ಲಲ್ಲಿ ಸುಂದರ ದೃಶ್ಯಗಳ ವರ್ಣನೆಯನ್ನು ಈ ಭಾಗದಲ್ಲಿ ಕಾಣಬಹುದು. ವಿರಹದಲ್ಲಿ ಬಳಲಿದ ದೊರೆಯ ಭಾವ ಆನೆಯಲ್ಲಿ ಹೀಗೆ ಪ್ರಕಟವಾಗಿದೆ: 'ಮೊಗ ಬಾಡಿದೆ. ಕಣ್ಣಲ್ಲಿ ನೀರಡರಿದೆ. ದುಗುಡದಿಂದ ನಡಗೆ ನಿಧಾನವಾಗಿದೆ. ನೋವಿನಿಂದ ದೇಹ ಕಾದಿದೆ. ವಿಚಲಿತ ಮನದ ಆನೆ ಕಾಡಿನಲ್ಲೆತ್ತಲೋ ನಡೆದಿದೆ'[19]. ಇನ್ನೊಂದೆಡೆ ಸಮುದ್ರ ರಾಜನ ವರ್ಣನೆಯಿದು: 'ಪೂರ್ವದಿಕ್ಕಿನ ಗಾಳಿಯಿಂದ ಅಲೆಗಳೆಂಬ ತೋಳುಗಳನ್ನು ಮೇಲೆತ್ತಿದ್ದಾನೆ. ಮೇಘಗಳೆಂಬ ಅಂಗಗಳಿಂದ ಲಲಿತವಾಗಿ ನರ್ತಿಸುತ್ತಿದ್ದಾನೆ. ಹಂಸ. ಚಕ್ರವಾಕ. ಶಂಖ ಇವುಗಳ ತಿಲಕ ತೊಟ್ಟಿದ್ದಾನೆ. 'ಆನೆ, ಮೊಸಳೆಗಳಿಂದ ಕಪ್ಪು ಕಮಲದ ಬಟ್ಟೆ ತೊಟ್ಟಿದ್ದಾನೆ. ಅತ್ತ ದಡಕ್ಕೆ ಹೊಡೆಯುವ ಅಲೆಗಳ ಚಪ್ಪಾಳೆ. ಅದೂ. ಪ್ರಾವೃಟ್ ಕಾಲದ ಹೊಸ ಮೇಘಗಳು ಪಸರಿಸಿವೆ'.[20]

ಕೂಲಂಕಷವಾಗಿ ಪರಿಶೀಲಿಸಿದಾಗ ಈ ಪ್ರಾಕೃತ ಪದ್ಯಗಳು ಅನಾವಶ್ಯಕ ಭಾಗಗಳೆಂದು ತೋರಿದರೂ ಅವುಗಳಲ್ಲಿ ಭಾವುಕತೆ ಅಡಗಿದೆ. ಪ್ರಿಯಾವಿರಹೋನ್ಮಾದದ ಮಾತುಗಳಲ್ಲಿ ಹೃದಯದ ನೋವು ಅಡಗಿದೆ.

References

1. "The Brahmanas knew how to utilise the great influence of the old epic tradition by gradually incorporating didactic matter calculated to impress upon the people, and especially the kings, the doctrines of the priestly caste."

—A. A. Macdonell: History of Sanskrit literature, p. 240.

"They seem rather to owe their origin simply to the desire of the rhapsodists to meet the demands of the popular tastes." Ibid. p. 256.

2. ततः प्रविशति उन्मत्तवेषो राजा ।

3. सप्राष्टनवपञ्चाङ्कं दिव्यमानुषसंश्रयम् ।
त्रोटकं नाम तत्प्राहुः प्रत्यङ्कं सविदूषकम् ॥

4. ವಿಕ್ರಮೋರ್ವಶೀಯದ ವ್ಯಾಖ್ಯಾನಕಾರರು ಇಬ್ಬರು, ಕಾಟಯವೇಮ ಮತ್ತು ರಂಗನಾಥ. ಕಾಟಯವೇಮ (1400 ಕ್ರಿ. ಶ.) ಆಂಧ್ರದವನು ಮತ್ತು ಅವನ ವ್ಯಾಖ್ಯಾನ ತೆಲುಗು ಲಿಪಿಯಲ್ಲಿದೆ. ರಂಗನಾಥ (1656 ಕ್ರಿ. ಶ.) ಔತ್ತರೇಯ ಪಾಠದ ವ್ಯಾಖ್ಯಾನದ ಕರ್ತೃ.

5. The arguments against the authenticity of the verses are partly the silence of the theorists, the fact that the existence in Kalidasa's time of Apabhramsa of the type found is more than dubious, that there is sometimes a degree of discrepency between the verses and the prose of the drama, and that in many imitations of the scene there are no similar verses. These reasons are on the whole conclusive.

A. B. Keith, The Sanskrit Drama, p. 151

6. ವಿಕ್ರಮೋರ್ವಶೀಯವನ್ನು ಟೀಕೆಯೊಡನೆ ಪ್ರಕಟಿಸಲು ಸಂಗ್ರಹಿಸಿದಾಗ ಶ್ರೀ ಎಸ್.ಪಿ. ಪಂಡಿತ್ ರವರು ಎಂಟು ಹಸ್ತಪ್ರತಿಗಳಲ್ಲಿ ಕೇವಲ ಎರಡು ಹಸ್ತಪ್ರತಿಗಳು ಪ್ರಾಕೃತ ಪದ್ಯಗಳನ್ನು ಒಳಗೊಂಡಿದ್ದುವೆಂದು ತಿಳಿಸಿದ್ದಾರೆ.

ನೋಡಿ: Bombay Sanskrit Series. No. **XVI**, p. 6.

7. ಆದರೂ ಈ ಸಂಪ್ರದಾಯಕ್ಕೆ ಮೂಲವೂ ಔಚಿತ್ಯವೂ ಇದ್ದಿರಬೇಕು: ಇಲ್ಲದಿದ್ದರೆ ಈ ಸಂಪ್ರದಾಯ ಹುಟ್ಟುತ್ತಿರಲಿಲ್ಲ; ಮಿಕ್ಕ ನಾಟಕಗಳನ್ನು ಬಿಟ್ಟು ಇವರಲ್ಲಿಯೇ ಈ ವಿಧವಾದ ಪ್ರಕ್ಷೇಪಗಳನ್ನು ಸಾಧಿಸುವುದಕ್ಕೂ ಆಗುವುದಿಲ್ಲ.
ಎ. ಆರ್. ಕೃಷ್ಣಶಾಸ್ತ್ರಿ, ಸಂಸ್ಕೃತ ನಾಟಕ. ಪು. 144.

8. ಎ. ಆರ್. ಕೃಷ್ಣಶಾಸ್ತ್ರಿ: ಸಂಸ್ಕೃತ ನಾಟಕ. ಪು. 143.

9. हंसान्यापदेशेन राजा स्वदुःखातिरेकमाह ।
हंसीयुगलान्योक्त्या स्वपीडातिशयं वर्णयति ॥

10. द्रुतमध्यलयं समाश्रिता पठति प्रेमभरान्नती यदि ।
प्रतिमण्ठकरासकेन वा द्रुतमध्या प्रथमा हि चर्चरी ॥

11. लघ्वादितालो लोकेऽसौ रास इत्यभिधीयते ।

12. विरामान्तद्रुतं द्वन्द्व लघूऽयष्टौ (च) चर्चरी ।

13. चर्चरी गीतभेदे च केशभित् करशब्दयोः ।

14. कामिनीभिर्भुवो भर्तुश्चेष्टितं यत्र नृत्यते ।
रागाद् वसन्तमालोक्य स ज्ञेयो नाट्यरासकः ।
चर्चरीमिति तां प्राहुर्वर्णतालेन तत्र तु ॥
प्रविशेत्कामिनीयुग्मं समचर्यादिशिक्षितम् ।
वामदक्षिणसञ्चारैरङ्गैस्तत्तत्परिष्कृतम् ॥

15. द्विपदी करणाख्येन तालेन परिगीयते ।

16 यष्टिकेन प्रकाशिता ಎಂಬ ಪಾಠವನ್ನು ಅನುಸರಿಸಿ ಎ. ಆರ್. ಕೃಷ್ಣಶಾಸ್ತ್ರಿಗಳು 'ಪ್ರಾಯಶಃ ಇದು ಕೋಲಾಟವಾಗಿರುವಂತೆ ತೋರುತ್ತದೆ' ಎಂದು ಅಭಿಪ್ರಾಯ ಪಟ್ಟಿದ್ದಾರೆ.

17. गन्धोन्मादितमधुकरगीतैर्वाद्यमानैः परभृततूर्यैः ।
प्रसृतपवनोद्वेल्लितपल्लवनिकरः सुललितविविधप्रकारं नृत्यति कल्पतरुः ॥

18. अभिनवकुसुमस्तबकिततरुवरस्य परिसरे
मदकलकोकिलकूजितरवझङ्कारमनोहरे ।
नन्दनविपिने निजकरिणी विरहानलेन सन्ततो
विचरति गजपतिरैरावतनामा ॥

19. प्रियतमाविरहक्लान्तवदनः अविरलबाष्पजालाकुलनयनः ।
दुःसहदुःखविसंष्टुलगमनः प्रसृतगुरुतापदीताङ्गः ।
अधिकं दूरमानसो दरीं गतः कानने परिभ्रमति गजेन्द्रः ॥

20. पूर्वदिकपवनाहतकल्लोलोद्धतबाहु-
र्मेघाङ्गैर्नृत्यति सललितं जलनिधिनाथः ।
हंसरथाङ्गशङ्खकुङ्कुमकृताभरणः
करिमकराकुलकृष्णकमलकृतावरणः ।
वेलामलोलोद्वेलितदत्तहस्ततालो-
ऽवस्तृणाति दशदिशो रुद्ध्वा नवमेघकालः ॥

ಇದ್ದಂತೆ ನೀನು ಬಾ

ನಾಗಲಕ್ಷ್ಮಿ ಹರಿಹರೇಶ್ವರ

ಇದ್ದಂತೆ ನೀನು ಬಾ
ಸಿಂಗರಿಸಿಕೊಳಲೆಂದು ತಡಮಾಡಬೇಡ
ಇದ್ದಂತೆ ಬಾ ನೀನು.

ಹೆಣೆದ ಜಡೆ ಸಡಿಲಾಯ್ತು; ಬೈತಲೆ
ನೇರ ಬಾರದೆ ಹೋಯ್ತು,
ಕಂಚುಕದ ಕಸೆಯಿನ್ನು ಕಟ್ಟಿಲ್ಲವೆನುತ
ಮನದಿ ಕಸಿವಿಸಿ ಬೇಡ
ಇದ್ದಂತೆ ನೀನು ಬಾ.

ಸಿಂಗರಿಸಿಕೊಳಲೆಂದು ತಡಮಾಡಬೇಡ
ಇದ್ದಂತೆ ಬಾ ನೀನು.

ಹಸಿರು ಹುಲ್ಲಿನ ಮೇಲೆ ಓಡೋಡಿ ನೀನು ಬಾ.

ಮೃದು ಪದದ ಲೇಪನವ
ಮಂಜು ಕಳಚೀತೆಂದೊ,
ನೂಪುರದ ಇನಿನಾದ ಮೆಲ್ಲಗಾಗುವುದೆಂದೊ,
ಸರದ ಮುತ್ತುಗಳುರುಳಿ ಬೀಳುವುವೆಂದೋ—
ಮನದಿ ಕಸಿವಿಸಿ ಬೇಡ
ಹಸಿರು ಹುಲ್ಲಿನ ಮೇಲೆ ಓಡೋಡಿ ಬಾ ನೀನು.

ಮೋಡಗಳು ಆಗಸವ ಮುಚ್ಚುತಿವೆ. ನೋಡಿದೆಯಾ?
ನದಿಯ ದಡದಿಂದಲ್ಲಿ ಹಾರುತಿವೆ ಸಾರಸಾವಳಿ. ಮೇಲೆ
ಬೆಂಕಿಯೆಡೆ ನುಗ್ಗುತಿದೆ ಹುಚ್ಚು ಗಾಳಿ.

ಓಡುತಿವೆ ಹಕ್ಕಿ ಕೊಟ್ಟಿಗೆಯತ್ತ ಕಾತುರದ ಪಶು–ನಿಕರ
ಮೋಡಗಳು ಆಗಸವ ಮುಚ್ಚುತಿವೆ. ನೋಡಿದೆಯಾ
ಶೃಂಗಾರ ಕೋಣೆಯಲ್ಲೇಕೆ ದೀಪ. ಅದು ವ್ಯರ್ಥ
ಅಲ್ಲಾಡಿ ಆರೀತು ಈ ಗಾಳಿ ಬಡಿದು.

ನಿನ್ನ ರೆಪ್ಪೆಗೆ ಇನ್ನೂ ಕಾಡಿಗೆಯ ಹಚ್ಚಿಲ್ಲ?
ಅದನಾರು ಅರಿತಾರು? —
ನಿನ್ನ ಕಣ್ಣೇ ಮೇಘ–ಶ್ಯಾಮಲತರವಿಲ್ಲ?
ಶೃಂಗಾರ ಕೋಣೆಯಲ್ಲೇಕೆ ಈ ದೀಪ, ವ್ಯರ್ಥ
ಆರುವುದು ಈ ಹುಚ್ಚುಗಾಳಿ ಬಡಿದು.

ಇದ್ದಂತೆ ನೀನು ಬಾ
ಸಿಂಗರಿಸಿಕೊಳಲೆಂದು ತಡಮಾಡಬೇಡ.

ಹೂದಂಡೆ ಹೆಣೆದಿಲ್ಲ? ಅದರದೇತಕೆ ಪರವೆ?
ಮಣಿಬಂಧದಲಿ ಕುಣಿಕೆ ಹಾಕಿಲ್ಲ? ಇರಲಿ ಬಿಡು

ಮೋಡಗಳು ಆಗಸವ ಮುಚ್ಚಿಹವು, ತಡವಾಯ್ತು.

ಇದ್ದಂತೆ ನೀನು ಬಾ
ಸಿಂಗರಿಸಿಕೊಳಲೆಂದು ತಡಮಾಡಬೇಡ.

(ರವೀಂದ್ರನಾಥ ಠಾಕೂರರ 'The Gardener' ಕವನ ಸಂಕಲನದಲ್ಲಿನ 'Come As You Are' ಗೀತದ ಕನ್ನಡ ರೂಪ)

ಕವಿರಾಜಮಾರ್ಗದಲ್ಲಿ ಕಾರಕ ವಿಚಾರ

ವಿ. ಕೃಷ್ಣಸ್ವಾಮಿ ಅಯ್ಯಂಗಾರ್

ಕವಿರಾಜಮಾರ್ಗದ ಪ್ರಥಮ ಪರಿಚ್ಛೇದದಲ್ಲಿ ಕೆಲವು ಕಾವ್ಯದೋಷಗಳನ್ನು ಚರ್ಚಿಸುವ ಪ್ರಸಂಗದಲ್ಲಿ ಗ್ರಂಥಕಾರನು 'ಕಾರಕದೋಷ' ಎಂಬ ಒಂದು ದೋಷವನ್ನು ಪ್ರಸ್ತಾಪಿಸಿದ್ದಾನೆ. ಈ ದೋಷದ ಸ್ವರೂಪವೇನೆಂದು ವಿವರಿಸಲು ಹೊರಟಾಗ, ಕಾರಕಗಳು ಆರು ಎಂದು ಮುಂತಾಗಿ ಕನ್ನಡದ ಕಾರಕಗಳ ವಿಚಾರದಲ್ಲಿ ತನ್ನ ಅಭಿಪ್ರಾಯವನ್ನು ಮಂಡಿಸಿದ್ದಾನೆ. ಕವಿರಾಜಮಾರ್ಗದ ಪದ್ಯಗಳನ್ನು ಓದುಗರ ಸೌಕರ್ಯಕ್ಕಾಗಿ ಕೆಳಗೆ ಉದ್ಧರಿಸಲಾಗಿದೆ:

1. ಕಾರಕ ದೋಷಮುಂ ವಚನದೋಷಮುಮಾ ಗುರು
   ದೋಷಮುಂ ಲಘೂ
   ಚ್ಚಾರಿತಶಬ್ದದೋಷಮುಮದಂತೆ ಸಮುಚ್ಚಯ
   ಜಾತದೋಷಮುಂ।
   ಭೂರಿವಿಕಲ್ಪದೋಷಮುಮದಿನ್ನವಧಾರಣ
   ದೋಷಮುಂ ವಿಶಂ-
   ಕಾರಚಿತೋರುದೋಷಮುಮನೀ ತೆಱದಿಂ
   ತಜಿಸಲ್ಗೆ ಪಂಡಿತರ್ [1–113]
2. ಕಾರಕಮಾಱು ಕರ್ಮಕರಣಾದಿಕದಿಂ ಪ್ರಥಮಾದಿಭೇದನಿ
   ರ್ಧಾರದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞಿನಿಕ್ಕುಮಾ॥
   ಚಾರುಗುಣೋದಯಂ ವಚನಮೇಕಬಹುಕ್ರಮದಿಂದೆರಟಿತ್ತ್ರಜಿ-
   ಕ್ಕಾರಯೆ ಪೇೞ್ವೆನಿಂತಿವರ ಜಾತಿವಿಭಾಗಗುಣಾಗುಣಂಗಳಂ [1–114]

ಕವಿರಾಜಮಾರ್ಗದ ಸಂಪಾದಕರಾದ ಶ್ರೀ ಎಂ. ವಿ. ಸೀತಾರಾಮಯ್ಯನವರು ಈ ಪದ್ಯಗಳಿಗೆ ಟಿಪ್ಪಣಿ ಬರೆಯುತ್ತಾ ಹೀಗೆ ಹೇಳಿದ್ದಾರೆ:

"ಇಲ್ಲಿಯವರೆಗೆ ಮಾರ್ಗಕಾರನು ಸಂಸ್ಕೃತ ಕಾವ್ಯಲಕ್ಷಣಕಾರರು ಹೇಳಿದ ದೋಷಗಳನ್ನು ಕನ್ನಡಕಾವ್ಯಮಾರ್ಗಕ್ಕೆ ಅನ್ವಯವಾಗುವಂತೆ ವಿವರಿಸಿ, ಇಲ್ಲಿಂದ ಮುಂದಕ್ಕೆ ಕನ್ನಡ ಭಾಷೆಗೆ ವಿಶಿಷ್ಟವಾದ, ಎಂದರೆ, ಕನ್ನಡ ಭಾಷಾ ಪ್ರಯೋಗ ಸಂಬಂಧವಾಗಿ ಉದ್ಭವಿಸಬಹುದಾದ ದೋಷಗಳನ್ನು ಕುರಿತು ವಿವೇಚಿಸಿದ್ದಾನೆ. ಈ ಗ್ರಂಥವಿಭಾಗವು ಸಂಪೂರ್ಣವಾಗಿ ಮಾರ್ಗಕಾರನ ಸ್ವತಂತ್ರ ರಚನೆ ಎಂದು ನೆನೆಯತಕ್ಕದ್ದು; ಹಾಗೂ ಕನ್ನಡ ಕಾವ್ಯಮೀಮಾಂಸೆಗೆ ಆತನ ಬೆಲೆಯುಳ್ಳ ಕೊಡುಗೆ". (ಟಿಪ್ಪಣಿಗಳು. ಪು. 162)

ಕಾರಕದೋಷ ಮುಂತಾದ ದೋಷಗಳ ನಿರೂಪಣೆ ಮಾರ್ಗಕಾರನ ಸ್ವತಂತ್ರ ವಿಚಾರದ ಕುರುಹೆಂದು ಒಪ್ಪಲು ಯಾರೂ ಹಿಂಜರಿಯಲಾರರು. ಆದರೆ ಈ ದೋಷದ ಸ್ವರೂಪವೇನು? ಮಾರ್ಗಕಾರನು ಒಂದು ಪದ್ಯದಲ್ಲಿ ಕಾರಕದೋಷಕ್ಕೆ ಉದಾಹರಣೆಯನ್ನು ಕೊಟ್ಟು, ಅಲ್ಲೇ ಆ ದೋಷವನ್ನು ನಿವಾರಿಸುವ ಬಗೆಯನ್ನು ತಿಳಿಸಿದ್ದಾನೆ:

ಬರಮೆಮಗೀಗೆ ದೇವತೆಗಳಾದರದಿಂ ಕರುಣಿಪ್ಪುದಕ್ಕೆ ಬಂ
ಧುರಗುಣಬಂಧು ಸಂತತಿಯನೆಂಬುದು ಕಾರಕದೋಷಮಾಗಳುಂ ।
ಬರವನವೋಘಮೀಗೆಮಗೆ ದೇವತೆಗಳ್ ಕರುಣಿಪ್ಪುದಕ್ಕೆ ಬಂ
ಧುರಗುಣಬಂಧುಸಂತತಿಗೆ ನಿಕ್ಕುವಮೆಂಬುದದುಷ್ಟಕಾರಕಂ [1 - 116]

ಇಲ್ಲಿ 'ಬರಮೆಮಗೀಗೆ' ಎಂದು ಹೇಳಿದಾಗ ಕಾರಕದೋಷ ತಲೆದೋರುತ್ತದೆ. ಇಲ್ಲಿ 'ಈಗೆ' (ಕೊಡಲಿ) ಎಂಬುದು ಕ್ರಿಯಾಪದ. ದೇವತೆಗಳ್ ಇದಕ್ಕೆ ಕರ್ತೃ: ಬರಂ ಎಂಬುದು ಕರ್ಮ. ಇದು ಕರ್ಮಕಾರಕವಾದುದರಿಂದ ದ್ವಿತೀಯಾವಿಭಕ್ತಿಯ ಪ್ರತ್ಯಯ ಸೇರಬೇಕಾದುದು ಅಗತ್ಯ. ಆ ಪ್ರತ್ಯಯವಿಲ್ಲದೆ 'ಬರಮೆಮಗೀಗೆ' ಎಂದು ಪ್ರಯೋಗಿಸುವುದೇ ದೋಷ. 'ಬರವಂ' ಎಂದು ದ್ವಿತೀಯಾಂತ ರೂಪವನ್ನು ಪ್ರಯೋಗಿಸಿದರೆ ಕಾರಕದೋಷದ ನಿವಾರಣೆಯಾಗುತ್ತದೆ. ಅಥವಾ, 'ಬರಮೀಗೆ' ಎಂದು ಸಮಾಸ ಮಾಡಬಹುದು. ಮುಂದಿನ ಪದ್ಯ (1–117)ದಲ್ಲಿ ಮಾರ್ಗಕಾರನು ಸಮಾಸದಲ್ಲಿ ವಿಭಕ್ತಿಲೋಪವನ್ನು ಮಾಡಿತೋರಿಸಿ, ಈ ಪ್ರಯೋಗವೂ ಸರಿಯೇ ಎಂದು ಸ್ಥಾಪಿಸಿದ್ದಾನೆ. ಕಾರಕ ವಿಭಕ್ತಿ ಇರಬೇಕಾದ ಕಡೆ ಆ ವಿಭಕ್ತಿ ಇಲ್ಲದಿರುವುದೇ ಕಾರಕದೋಷವೆಂದು ಈ ನಿರೂಪಣೆಯ ಸಾರಾಂಶ ಎಂದು ಹೇಳಬಹುದು. ಶ್ರೀ. ಎಂ. ವಿ. ಸೀತಾರಾಮಯ್ಯನವರ ಟಿಪ್ಪಣಿ (ಪು. 173) ಯಲ್ಲಿ ಈ ವಿಷಯ ಬಹಳ ಸ್ಪಷ್ಟವಾಗಿದೆ.

ಮಾರ್ಗಕಾರನು ಸಂದೇಹಕ್ಕೆಡೆಯಿಲ್ಲದಂತೆ, "ಕಾರಕಗಳು ಆರು; ಆದರೆ ಅವುಗಳನ್ನು ಹಿಡಿದು ನಿಲ್ಲುವ ವಿಭಕ್ತಿಗಳು ಏಳು" ಎಂದಿದ್ದಾನೆ. ಈ ಮಾತಿನಲ್ಲಿ ಯಾವ ಅಸಂಗತಿಯೂ ಇಲ್ಲ. ಆದರೂ ಕೆಲವು ವಿದ್ವಾಂಸರು ಇದರಲ್ಲಿ ಏನೋ ವಿರೋಧವಿದೆಯೆಂದು ಭಾವಿಸಿ, ಆ ವಿರೋಧದ ಪರಿಹಾರಕ್ಕಾಗಿ ಅನೇಕ ವಿಧವಾದ ಕಲ್ಪನೆಗಳನ್ನು ಮಾಡಿದ್ದಾರೆ. ಕರ್ತೃ ಕಾರಕವಲ್ಲವೆಂದೂ, ಸಂಬಂಧ ಕಾರಕವಾಗಬಹುದೆಂದೂ ಹೀಗೆ ಅನುಕೂಲಕ್ಕೆ ತಕ್ಕಂತೆ ವಾದಿಸಿದ್ದಾರೆ. ಕಾರಕ ಆರಾದರೆ, ವಿಭಕ್ತಿಗಳೂ ಆರೇ ಆಗಿರಬೇಕೆಂದು ಯಾರು ಎಲ್ಲಿ ಹೇಳಿದ್ದಾರೆ? ಕಾರಕ ಬೇರೆ, ಕಾರಕವನ್ನು ತೋರಿಸಲು ಉಪಯೋಗಿಸುವ ವಿಭಕ್ತಿ ಬೇರೆ. ಇವೆರಡೂ ಒಂದೇ ಎಂದು ಭಾವಿಸುವುದು ತಪ್ಪು. ಕಾರಕ ಎಂಬುದು ಅರ್ಥ; ವಿಭಕ್ತಿ ಎಂಬುದು ಆ ಅರ್ಥವನ್ನು ಪ್ರತಿಪಾದಿಸುವ ಶಬ್ದಾಂಶ. ಕೆಲವೆಡೆ ಅದು ಪ್ರತ್ಯಯವಾಗಿರಬಹುದು. ಕೆಲವೆಡೆ ಪ್ರತ್ಯಯವಿಲ್ಲದೆಯೇ ಕಾರಕದ ಪ್ರತೀತಿಯಾಗಬಹುದು. ಈ ಭೇದವನ್ನು ಮರೆಯದಿದ್ದರೆ, ಮಾರ್ಗಕಾರನ ಉಕ್ತಿಯಲ್ಲಿ ಯಾವ ವಿರೋಧವೂ ಕಾಣಬರುವುದಿಲ್ಲ.

ಶ್ರೀ ಸೀತಾರಾಮಯ್ಯನವರು ಮದ್ರಾಸ್ ಮುದ್ರಣದ ಸಂಪಾದಕರ ಅಭಿಪ್ರಾಯವನ್ನು ತಿಳಿಸುತ್ತಾ ಹೀಗೆ ಅವತರಣಿಕೆ ಕೊಟ್ಟು ಬರೆದಿದ್ದಾರೆ:

'ಕಾರಕಗಳು ಆರು. ಇವುಗಳನ್ನು ಅವಲಂಬಿಸಿ ನಿಲ್ಲುವ ವಿಭಕ್ತಿಗಳು ಏಳು' ಎಂಬ ಮೇಲಿನ ಹೇಳಿಕೆಯಲ್ಲಿ **ಕಂಡುಬರುವ ವಿರೋಧಾಭಾಸವನ್ನು ಪರಿಹರಿಸಿ ವಿವರಿಸುವುದು ಕ್ಲೇಶಕರವೆನ್ನುವುದರಲ್ಲಿ ಸಂದೇಹವಿಲ್ಲ.** ಈ ಕುರಿತು ಟಿಪ್ಪಣಿ ಬರೆಯುತ್ತಾ, ಮದ್ರಾಸು ಮುದ್ರಣದ ಸಂಪಾದಕರು ಹೀಗೆ ಟೀಕಿಸಿದ್ದಾರೆ—"ಷಷ್ಠಿಗೆ ಕಾರಕತ್ವವಿಲ್ಲವಾಗಿ ಕಾರಕಗಳು ಆರಾದುದರಿಂದ ಇಲ್ಲಿ 'ವಿಭಕ್ತಿಗಳಾಱಿನಿಕ್ಕುಂ' ಎಂದಿರಬಹುದೆಂದು ತೋರುವುದು. ಆದರೆ ಲಕ್ಷ್ಯದಲ್ಲಿ ಷಷ್ಠಿಯ ವಿಭಕ್ತಿಯನ್ನೂ ಕಾರಕಕ್ಕೆ ಉದಾಹರಣೆಯಾಗಿ ಕವಿಯು ಕೊಟ್ಟಿರುವನು—'ಅಧೀಶ್ವರನಾ ದಯೆ'. ಈ ಕವಿಗೆ ಕಾರಕವೆಂದರೆ ನಾಮವಿಭಕ್ತಿಪ್ರತ್ಯಯವೆಂಬ ಅಭಿಪ್ರಾಯವಿದ್ದಂತೆ ಕಾಣುವುದು." ಮಾರ್ಗಕಾರನ ಈ ಹೇಳಿಕೆಯ ಬಗ್ಗೆ ವಿಚಾರ ವಿಮರ್ಶೆ ಅಗತ್ಯವಾಗಿದೆ.

(ಟಿಪ್ಪಣಿ. ಪು. 162–163)

ಸಂಪಾದಕರು ಮಾರ್ಗಕಾರನ ಹೇಳಿಕೆಯಲ್ಲಿ ವಿರೋಧಾಭಾಸವಿದೆ ಎಂದಿದ್ದಾರೆ. ಅದನ್ನು ಪರಿಹರಿಸುವುದು ಕಷ್ಟಸಾಧ್ಯವೆಂದೂ ಹೇಳಿದ್ದಾರೆ. ಮದ್ರಾಸ್ ಮುದ್ರಣದ ಸಂಪಾದಕರಂತೂ ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಮೂಲಪಾಠವನ್ನೇ ಬದಲಾಯಿಸುವ ಸಲಹೆಕೊಟ್ಟಿದ್ದಾರೆ. ವಿಭಕ್ತಿಗಳು ಏಳು ಎಂದರಲ್ಲವೇ ಈ ಕ್ಲೇಶ. ವಿರೋಧ? ವಿಭಕ್ತಿಗಳೂ ಆರೇ ಎಂದರೆ ಸಮಸ್ಯೆ ಪರಿಹಾರವಾಯಿತು. ಆದರೆ ಏನು ಮಾಡೋಣ? ಮಾರ್ಗಕಾರ ಕಾರಕಗಳಿಗೆ ಉದಾಹರಣೆ ಕೊಡಲು ಹೊರಟು, ಏಳು ವಿಭಕ್ತಿಗಳನ್ನೂ ಪ್ರಯೋಗದಲ್ಲಿ ತೋರಿಸಿಬಿಟ್ಟಿದ್ದಾನೆ. ಹೀಗಾಗಿ ವಿಭಕ್ತಿಗಳು ಆರೇ ಎಂದು ಪಾಠವನ್ನು ತಿದ್ದಲು ಸಾಧ್ಯವಾಗದೇ ಹೋಯಿತು. ಮಾರ್ಗಕಾರನು ಉದಾಹರಣೆಯಾಗಿ ಕೊಟ್ಟಿರುವ ಪದ್ಯ ಇದು:

"ನರಪತಿ ಬಂದಂ, ಆ ನೃಪನನರ್ಚಿಸಿಯೆ ಕಾಣ್ಬುದು, ತನ್ನರೇಂದ್ರನಿಂ
ಧರಣಿ ಸನಾಥೆ, ಭೂಪತಿಗೆ ಕಪ್ಪವನಿತ್ತವನೀಶನತ್ತಣಿಂ ।
ಪರಿಭವಮಂ ಕಳಲ್ಚುವುದು. ಅಧೀಶ್ವರನಾದಯೆ ಸಾಲ್ಗುಂ ಆ ಮಹೀ
ಶ್ವರನೊಳಿದಪ್ಪುದು - ಎಂಬುದಿದು ಕಾರಕಯುಕ್ತ ವಿಭಕ್ತ್ಯನುಕ್ರಮಂ [1 - 115]

ಇದರಲ್ಲಿ 'ನರಪತಿ ಬಂದಂ' ಎಂಬ ವಾಕ್ಯದಲ್ಲಿ ಪ್ರಥಮೆ ಬಂದಿದೆ: ನೃಪನನ್ ಎಂಬುದು ದ್ವಿತೀಯೆ, ನರೇಂದ್ರನಿಂ ಎಂಬುದು ತೃತೀಯೆ. ಭೂಪತಿಗೆ ಎಂಬುದು ಚತುರ್ಥಿ: ಅವನೀಶನತ್ತಣಿಂ ಎಂಬುದು ಪಂಚಮಿ. ಅಧೀಶ್ವರನಾ ಎಂಬುದು ಷಷ್ಠಿ: ಮಹೀಶ್ವರನೊಳ್ ಎಂಬುದು ಸಪ್ತಮಿ. ಹೀಗೆ ಈ ಪದ್ಯದಲ್ಲಿ ಏಳು ವಿಭಕ್ತಿಗಳೂ ಬಂದಿವೆ. 'ಕಾರಕಯುಕ್ತ ವಿಭಕ್ತ್ಯನುಕ್ರಮಂ' ಎಂದು ಕೊನೆಯಲ್ಲಿ ಸೇರಿಸಿದ್ದಾನೆ. ಇವೆಲ್ಲಾ ಕಾರಕವಿಭಕ್ತಿಗಳು ಎಂದು ಇದಕ್ಕೆ ಕೆಲವರು ಅರ್ಥಮಾಡಿದ್ದಾರೆ. ಏನಾದರೂ ಆಗಲಿ;

ವಿಭಕ್ತಿಗಳು ಏಳು ಇರುವುದರಿಂದ. ಆರೇ ವಿಭಕ್ತಿಗಳು ಎಂದು ವಾದಿಸಲು ಅವಕಾಶವಿಲ್ಲದೇ ಹೋಯಿತು.

ಶ್ರೀ ಸೀತಾರಾಮಯ್ಯನವರು ತಮ್ಮ ಟಿಪ್ಪಣಿಯಲ್ಲೇ ಅಡಿಟಿಪ್ಪಣಿಯಾಗಿ, ಅಣ್ಣಾಮಲೈ ವಿಶ್ವವಿದ್ಯಾಲಯದವರು ಏರ್ಪಡಿಸಿದ್ದ 'ಕನ್ನಡ ವ್ಯಾಕರಣ ಸಿದ್ಧಾಂತಗಳ ಸಂಗೋಷ್ಠಿ'ಯಲ್ಲಿ ತಾವು ಓದಿದ ಒಂದು ಶೋಧಪತ್ರದಿಂದ ಕೆಲವು ಅಂಶಗಳನ್ನು ಇಂಗ್ಲಿಷಿನಲ್ಲಿ ಕೊಟ್ಟಿದ್ದಾರೆ. ಅದರ ಸಾರಾಂಶ ಇಷ್ಟು—"ನೃಪತುಂಗನ ಕವಿರಾಜಮಾರ್ಗದಲ್ಲೇ ಪ್ರಪ್ರಥಮವಾಗಿ ಕನ್ನಡದಲ್ಲಿ ಕಾರಕ ವ್ಯವಸ್ಥೆಯ ಚರ್ಚೆ ಬಂದಿದೆ. ಆತ (ಮಾರ್ಗಕಾರ) ಕ್ರಿಯೆಯ ಜೊತೆಗೆ ಸಂಬಂಧ ವಿಶೇಷದಿಂದ ಏರ್ಪಡುವ ಆರು ಕಾರಕಗಳಿವೆ ಎಂದೂ. ಆದರೆ ವಿಭಕ್ತಿಗಳು ಏಳೆಂದೂ ಹೇಳಿದ್ದಾನೆ. ಅವನು ಷಷ್ಠೀ ವಿಭಕ್ತಿಯನ್ನು ಕಾರಕವರ್ಗಕ್ಕೆ ಸೇರಿಸದೆ ಬಿಟ್ಟಿದ್ದಾನೆಂದು ತೋರುತ್ತದೆ. ಆದರೆ ಲಕ್ಷ್ಯ ಪದ್ಯದಲ್ಲಿ ಷಷ್ಠೀವಿಭಕ್ತಿಯನ್ನು ಉದಾಹರಿಸಿದ್ದಾನೆ. ಕಾರಕಯುಕ್ತ ವಿಭಕ್ತಿ ಎಂದು ಹೇಳಿರುವುದರಿಂದ ಸಂಬಂಧವನ್ನೂ ಕಾರಕವೆಂದು ಎಣಿಸುತ್ತಾನೆಂದು ಕಾಣುತ್ತದೆ. ಈ ವಿರೋಧವನ್ನು ಪರಿಹರಿಸುವುದು ಕಷ್ಟ. ನಾಗವರ್ಮನ ಅಭಿಪ್ರಾಯವೂ ಇದೇ. ಶಬ್ದಸ್ಮೃತಿಯ 15–16ನೆಯ ಸೂತ್ರಗಳನ್ನು ನೋಡಿ."

(ಟಿಪ್ಪಣಿ, ಪು. 163–164)

ಇಲ್ಲಿ ಅವರು ತೋರಿಸುತ್ತಿರುವ ವಿರೋಧ ಬೇರೆ. ಉದಾಹರಣೆಯಲ್ಲಿ (1–115) ಏಳು ವಿಭಕ್ತಿಗಳನ್ನು ಕೊಟ್ಟಿರುವುದು ನಿಜ. ಆ ಏಳು ವಿಭಕ್ತಿಗಳೂ ಕಾರಕಯುಕ್ತ ವಿಭಕ್ತಿಗಳು ಅಥವಾ ಕಾರಕ ವಿಭಕ್ತಿಗಳು ಎಂದು ಮಾರ್ಗಕಾರನು ಹೇಳಿದ್ದಾನೆಂದು ಭಾವಿಸಿ. ಏಳು ವಿಭಕ್ತಿಗಳೂ ಕಾರಕ ವಿಭಕ್ತಿಗಳಾಗಬೇಕಾದರೆ ಕಾರಕಗಳೂ ಏಳಾಗಿರಬೇಕೆಂದು ಊಹಿಸಿ, ಅವರು ಈ 'ವಿರೋಧಾಭಾಸ'ವನ್ನು ಕಂಡುಹಿಡಿದಿದ್ದಾರೆ.

ಕಾರಕ ಆರು ಎಂದರೆ, ಆ ಕಾರಕಗಳು ಯಾವುವು? ಪಾಣಿನಿಯ ವ್ಯಾಕರಣದಲ್ಲಿ ಆರು ಕಾರಕಗಳು ಪ್ರಸಿದ್ಧವಾಗಿವೆ: ಕರ್ತೃ. ಕರ್ಮ. ಕರಣ. ಸಂಪ್ರದಾನ. ಅಪಾದಾನ. ಅಧಿಕರಣ. ಸಂಬಂಧವನ್ನು ಪಾಣಿನಿ ಕಾರಕವೆಂದು ಒಪ್ಪಲಿಲ್ಲ. ಅದನ್ನು 'ಶೇಷ' (ಕಾರಕಗಳನ್ನುಳಿದು ಮಿಕ್ಕದ್ದು) ಎಂದಿದ್ದಾನೆ. ಪಾಣಿನಿಯ ವ್ಯವಸ್ಥೆಯಲ್ಲಿ ಆರೇ ಕಾರಕಗಳು ಎಂಬುದು ನಿರ್ವಿವಾದ. ಇದರಲ್ಲಿ ಯಾರಿಗೂ ಸಂದೇಹಕ್ಕೆ ಅವಕಾಶವೇ ಇಲ್ಲ. ಆದರೆ ಪಾಣಿನಿ ಹೇಳಿರುವ ವಿಭಕ್ತಿಗಳೆಷ್ಟು? ಏಳು. ಕೊನೆಯ ವಿಭಕ್ತಿಗೆ 'ಸಪ್ತಮೀ' ಎಂದರೆ ಏಳನೆಯ ವಿಭಕ್ತಿ ಎಂದೇ ಹೆಸರು. ಪ್ರಥಮಾ ಮುಂತಾದ ಹೆಸರುಗಳೂ ಸಂಖ್ಯಾಕ್ರಮವನ್ನೇ ಸೂಚಿಸುತ್ತವೆ. ಹೀಗೆ ಪಾಣಿನಿ ಆರು ಕಾರಕಗಳನ್ನೂ ಏಳು ವಿಭಕ್ತಿಗಳನ್ನೂ ಹೇಳಿರುವಾಗ, ಯಾರಿಗೂ ವಿರೋಧದ ಸುಳಿವೇ ಸಿಕ್ಕದಿರಲು ಕಾರಣವೇನು? ಪಾಣಿನಿಯ ಕಾಲ ಸುಮಾರು 2.500 ವರ್ಷಗಳ ಹಿಂದಿನದೆಂದು ಒಪ್ಪಿ

ಕೊಂಡರೆ. ಈ 2.500 ವರ್ಷಗಳಲ್ಲಿ ಯಾವ ವಿದ್ವಾಂಸನೂ ಆರು ಕಾರಕ ಮತ್ತು ಏಳು ವಿಭಕ್ತಿಗಳನ್ನು ಹೇಳುವ ಪಾಣಿನಿಯ ಬಗ್ಗೆ ಚಕಾರ ಶಬ್ದವನ್ನೂ ಎತ್ತದಿರುವುದು ಏಕೆ? ಮಾರ್ಗಕಾರ ಅದೇ ಮಾತನ್ನು ಹೇಳಿದರೆ. 'ವಿರೋಧಾಭಾಸ'' ಏಕೆ ಏರ್ಪಟ್ಟಿತು?

ಮಾರ್ಗಕಾರನ ಉದಾಹರಣೆಯಲ್ಲಿ ಏಳು ವಿಭಕ್ತಿಗಳೂ ಬಂದಿವೆ. ಹಾಗೆಯೇ ಕರ್ತೃ ಮುಂತಾದ ಆರು ಕಾರಕಗಳೂ ಬಂದಿವೆ. ಕಾರಕಗಳೂ ವಿಭಕ್ತಿಗಳೂ ಸೇರಿ ಬಂದಿವೆ ಎಂದು ತೋರಿಸಲು 'ಕಾರಕಯುಕ್ತವಿಭಕ್ತಿ' ಎಂದು ಹೇಳಿದ್ದಾನೆ. ಕಾರಕ ಮತ್ತು ವಿಭಕ್ತಿ ಎಂಬ ಅರ್ಥವೇ ಅವನಿಗೆ ವಿವಕ್ಷಿತವಾಗಿರಬೇಕು. ಈ ವಿಭಕ್ತಿಗಳೆಲ್ಲವೂ ಕಾರಕಾರ್ಥಕವೆಂದು ವ್ಯಾಖ್ಯಾನ ಮಾಡಬೇಕಾದ ಅಗತ್ಯವಿಲ್ಲ. ದ್ವಿತೀಯ ಮುಂತಾದ ವಿಭಕ್ತಿಗಳೂ ಸಹ ಸರ್ವದಾ ಕಾರಕಾರ್ಥದಲ್ಲೇ ಬರಬೇಕೆಂದು ನಿಯಮವೇನಿಲ್ಲ. ಸಂಸ್ಕೃತದಲ್ಲಿ ಕೂಡ ಈ ವಿಭಕ್ತಿಗಳು 'ಉಪಪದವಿಭಕ್ತಿ'ಯಾಗಿ ಬರುತ್ತವೆ. 'ನಮಃ ಶಿವಾಯ' ಎಂಬಲ್ಲಿ ಚತುರ್ಥಿ ಸಂಪ್ರದಾನಾರ್ಥದಲ್ಲಿ ಬಂದಿಲ್ಲ. ಅದು 'ನಮಃ' ಶಬ್ದದ ಕಾರಣದಿಂದ ಬಂದಿದೆ. ಆದುದರಿಂದ ಅದನ್ನು ಉಪಪದವಿಭಕ್ತಿ ಎಂದು ಕರೆಯುತ್ತೇವೆ. ಹೀಗೆ ಕನ್ನಡದಲ್ಲೂ ಉಂಟು. "ನೀವು ಇವರಿಗೆ ಏನಾಗಬೇಕು?" ಈ ವಾಕ್ಯದಲ್ಲಿ 'ಗೆ' (ಚತುರ್ಥಿ) ವಿಭಕ್ತಿ ಪ್ರತ್ಯಯ ಬಂದಿದೆ. ಇದರ ಅರ್ಥ ಸಂಪ್ರದಾನವಲ್ಲ. ಬಾಂಧವ್ಯ ಸಂಬಂಧವನ್ನು ಸೂಚಿಸಲು ಈ ಪ್ರತ್ಯಯ ಬಂದಿದೆ. 'ನನಗೆ ಏನೂ ಬೇಡ'. ಹೀಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಆದುದರಿಂದ ಮಾರ್ಗಕಾರನು ಈ ಪದ್ಯದಲ್ಲಿ ಕೆಲವು ಕಾರಕಗಳನ್ನೂ ವಿಭಕ್ತಿಗಳನ್ನೂ ಉದಾಹರಿಸಿ. ಇವೆರಡೂ ಈ ಪದ್ಯದಲ್ಲಿ ಬಂದಿವೆ ಎಂದು ಹೇಳಿದ್ದಾನೆ. ಇವೆಲ್ಲವೂ ಕಾರಕ ವಿಭಕ್ತಿಗಳೇ ಎಂದು ನಾವು ಅರ್ಥಮಾಡಿ. ಇಲ್ಲದ ವಿರೋಧವನ್ನು ಕಲ್ಪಿಸಿದರೆ. ಪರಿಹಾರ ದೊರೆಯುವುದು ಹೇಗೆ?

ಶ್ರೀ ಸೀತಾರಾಮಯ್ಯನವರು ಇನ್ನೊಂದು ಸಂದೇಹವನ್ನು ಮುಂದಿಟ್ಟಿದ್ದಾರೆ. ಮಾರ್ಗಕಾರನ ದೃಷ್ಟಿಯಲ್ಲಿ ಆರು ಕಾರಕಗಳು ಯಾವುವು? ಅವನು 'ಕಾರಕಮಾಳಿ ಕರ್ಮಕರಣಾದಿಕದಿಂ' ಎಂದು ಹೇಳಿದ್ದಾನೆ. ಮೊದಲು ಕರ್ತೃವನ್ನು ಹೇಳಬೇಕಾಗಿತ್ತು. ಅದನ್ನು ಹೇಳದೆ ಬಿಟ್ಟಿದ್ದಾನೆ. ಕರ್ಮದಿಂದಲೇ ಆರಂಭಿಸಿದ್ದಾನೆ. ಆದುದರಿಂದ ಅವನು ಸಂಬಂಧವನ್ನು ಕಾರಕವೆಂದು ಒಪ್ಪಿರಬೇಕು. ಕರ್ತೃವನ್ನು ಬಿಟ್ಟು ಸಂಬಂಧವನ್ನು ಗ್ರಹಿಸಿದರೆ ಆರು ಕಾರಕಗಳೆಂಬ ಲೆಕ್ಕ ಸರಿಬರುತ್ತದೆ. ಆದರೆ ಇದು ಸಂಸ್ಕೃತ ವ್ಯಾಕರಣಕ್ಕೆ ವಿರೋಧವಾಗಿದೆ. "ಅವನು ಷಷ್ಠಿಗೆ ಕಾರಕತ್ವವನ್ನು ಆರೋಪಿಸಿದಂತಾಯಿತು. ಇದು ಸಮಸ್ಯೆಯನ್ನು ಇನ್ನಷ್ಟು ಜಟಿಲವನ್ನಾಗಿ ಮಾಡಿದೆ" (ಪು. 164) ಎಂದು ಶ್ರೀ ಸೀತಾರಾಮಯ್ಯನವರು ಬರೆದಿದ್ದಾರೆ.

'ಕರ್ಮಕರಣಾದಿಕದಿಂ' ಎಂದು ಹೇಳಿದ ಮಾತ್ರಕ್ಕೆ ಕರ್ತೃವನ್ನು ಬಿಟ್ಟಿದ್ದಾನೆಂದು ಹೇಳಲು ಸಾಧ್ಯವೇ? ಕರ್ತೃ ಕಾರಕವಲ್ಲ ಎಂಬ ಅಭಿಪ್ರಾಯವನ್ನು ಕನ್ನಡದಲ್ಲಿ ಯಾವ

ವೈಯಾಕರಣನೂ ಒಪ್ಪಿದಂತೆ ತೋರುತ್ತಿಲ್ಲ. ಕಾರಕವೆಂದರೇನು? 'ಕ್ರಿಯಾಜನಕತ್ವಂ ಕಾರಕತ್ವಂ। ಕ್ರಿಯಾನ್ವಯಿತ್ವಂ ಕಾರಕತ್ವಂ' ಎಂದು ಸಂಸ್ಕೃತ ವೈಯಾಕರಣರು ನಿರ್ವಚನ ಮಾಡಿದ್ದಾರೆ. ಕ್ರಿಯೆಯಲ್ಲಿ ಅನ್ವಯ (ಸಂಬಂಧ) ವಾದರೆ ಅದು ಕಾರಕವಾಗುತ್ತದೆ. ಕರ್ಮ. ಕರಣ ಮುಂತಾದುವನ್ನು ಕಾರಕವೆಂದು ಒಪ್ಪಿದವನು, ಕ್ರಿಯೆಗೆ ನೇರವಾಗಿ ಸಂಬಂಧಿಸಿದ ಕರ್ತೃವನ್ನು ಕಾರಕವಲ್ಲ ಎಂದು ಹೇಳಲು ಏನಾದರೂ ಕಾರಣ ಬೇಡವೇ? ಕರ್ತೃವನ್ನು ಮೊದಲು ಹೇಳಬೇಕಾಗಿತ್ತು; ಹೇಳಲಿಲ್ಲ; ಇದೇ ಕರ್ತೃ ಕಾರಕವಲ್ಲ ಎನ್ನಲು ಪ್ರಮಾಣ" ಎಂದು ವಾದಿಸಿದರೆ, ಈ ವಾದ ಸತ್ಯವಿರೋಧವಾದುದರಿಂದ ಅಗ್ರಾಹ್ಯವೆಂದೇ ಹೇಳಬೇಕಾಗುತ್ತದೆ. ಕರ್ತೃಗೆ ಕಾರಕತ್ವವಿಲ್ಲ ಎಂದು ತೀರ್ಮಾನಿಸಲು ಮಾರ್ಗಕಾರನಾಗಲೀ ಸಂಪಾದಕರಾಗಲೀ ಏನೂ ತರ್ಕ ಅಥವಾ ಯುಕ್ತಿ ಕೊಟ್ಟಿಲ್ಲ. "ಆ ಕಾರಕವೆಂಬುದು ಕ್ರಿಯಾನಿಮಿತ್ತಂ. ಅದು ಕರ್ತೃವೆಂದುಂ......ಷಡ್ವಿಧಮಾಗಿರ್ಪುದು. ಷಷ್ಠಿಯೆಂಬುದು ಸಂಬಂಧಾರ್ಥಂ", ಎಂದು ಕೇಶಿರಾಜನ ವೃತ್ತಿಯನ್ನು (ಪು. 164) ಸಂಪಾದಕರೇ ಉದಾಹರಿಸಿದ್ದಾರೆ. ಕೇಶಿರಾಜ ಕರ್ತೃವನ್ನು ಕಾರಕವೆಂದು ಹೇಳಿದ್ದಾನೆ. ಆರು ಕಾರಕಗಳನ್ನೂ ಹೆಸರಿಸಿ, ಸಂಬಂಧವನ್ನು ಬೇರೆಯಾಗಿ ತೋರಿಸಿದ್ದಾನೆ. ಸಂಬಂಧ ಕಾರಕವಲ್ಲ ಎಂದು ಅವನು ಸ್ಪಷ್ಟಪಡಿಸಿದ್ದಾನೆ. ಕನ್ನಡದ ಪ್ರಥಮ ವೈಯಾಕರಣನಾದ ನಾಗವರ್ಮನೂ ಶಬ್ದಸ್ಮೃತಿ (ಕಾವ್ಯಾವಲೋಕನ) ಯಲ್ಲಿ ಇದೇ ಅಭಿಪ್ರಾಯವನ್ನು ಪ್ರತಿಪಾದಿಸಿದ್ದಾನೆ. ಹೀಗೆ ಕನ್ನಡ ವೈಯಾಕರಣರೆಲ್ಲರೂ ಒಮ್ಮತದಿಂದ ಕರ್ತೃ ಮುಂತಾದ ಆರು ಕಾರಕಗಳನ್ನು ಒಪ್ಪಿಕೊಂಡಿರುವಾಗ, ಮಾರ್ಗಕಾರ ಮಾತ್ರ ಯಾವ ಕಾರಣವನ್ನೂ ಕೊಡದೆ ಕರ್ತೃವನ್ನು ಕಾರಕಗಳ ಪಟ್ಟಿಯಿಂದ ಹೊರಹಾಕಿದ್ದಾನೆ ಎಂದು ಒಪ್ಪುವುದು ಸರಿಯಾಗಲಾರದು.

ಕರ್ತೃ ಕಾರಕವಲ್ಲ ಎಂದೇ ಭಾವಿಸೋಣ. ಹಾಗಾದರೆ 'ಕಾರಕಯುಕ್ತವಿಭಕ್ತ್ಯಕ್ರಮಂ' ಎಂಬ ಮಾರ್ಗಕಾರನ ಮಾತು ಸರಿಹೋಗುತ್ತದೆಯೇ? ಅವನ ಲಕ್ಷ್ಯಪದ್ಯದಲ್ಲಿ 'ನರಪತಿ ಬಂದಂ' ಎಂಬುದೇ ಮೊದಲನೆಯ ವಾಕ್ಯ. ಇಲ್ಲಿ ನರಪತಿ ಎಂಬ ಪದವಲ್ಲಿ ವಿಭಕ್ತಿ ಇದೆಯೇ ಇಲ್ಲವೇ? ಅದು ಕಾರಕಯುಕ್ತ ವಿಭಕ್ತಿ ಹೇಗಾಗಬಹುದು? ಈ ವಾಕ್ಯವನ್ನು ಬಿಟ್ಟು ಉಳಿದ ವಾಕ್ಯಗಳಲ್ಲಿ ಮಾತ್ರ ಕಾರಕ ವಿಭಕ್ತಿ ಬಂದಿದೆ ಎಂದರೆ, ಕಾರಕ ವಿಭಕ್ತಿಗಳನ್ನೇ ಉದಾಹರಿಸಲು ಹೊರಟಿರುವ ಈ ಪದ್ಯದಲ್ಲಿ ಪ್ರಥಮಾ ವಿಭಕ್ತಿಯ ಉದಾಹರಣೆಯನ್ನು ಏಕೆ ಸೇರಿಸಬೇಕಾಗಿತ್ತು? ಈಗಲೂ. ಕಾರಕಗಳಾರು. ವಿಭಕ್ತಿಗಳೇಳು ಎಂಬ ವಿರೋಧ ಅಳಿಯದೆ ಉಳಿಯುತ್ತದೆ. ಶ್ರೀ ಸೀತಾರಾಮಯ್ಯನವರು "ಅವನ ಅಭಿಪ್ರಾಯದಂತೆ ಕರ್ತೃ ಕಾರಕವಲ್ಲದಿದ್ದರೂ ಅದು ಪ್ರಥಮಾ ವಿಭಕ್ತಿಯಿಂದ ನಿರ್ದಿಷ್ಟವಾಗಿ. **ವಿಭಕ್ತಿಗಳು ಏಳು; ಇದರಲ್ಲಿ ಸಂದೇಹವಿಲ್ಲ"** ಎಂದಿದ್ದಾರೆ.

(ಟಿಪ್ಪಣಿ. ಪು. 166)

ವಿಭಕ್ತಿಗಳು ಏಳು ಎಂಬುದರಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಇಲ್ಲ. ಆದರೆ ಏಳು ವಿಭಕ್ತಿಗಳೂ ಕಾರಕವಿಭಕ್ತಿಗಳಾಗಲು ಸಾಧ್ಯವಿಲ್ಲ. ಪ್ರಥಮೆ ಕರ್ತೃಬೋಧಕ

ವಾಗಿರುವುದರಿಂದ ಅದು ಎಂದೆಂದಿಗೂ ಕಾರಕವಿಭಕ್ತಿಯಾಗಲಾರದು. ಹೀಗಾಗಿ ಕಾರಕ ವಿಭಕ್ತಿಗಳ ಉದಾಹರಣೆಯ ಮೊದಲಲ್ಲಿ ಕಾರಕವೇ ಅಲ್ಲದ ಕರ್ತೃವನ್ನು ತೋರಿಸುವ ಪ್ರಥಮೆಯನ್ನು ತಂದುದು ಗ್ರಂಥಕಾರನ ದೋಷವಾಗುತ್ತದೆ. "ಹಾಗಲ್ಲ: ಈ ಪದ್ಯದಲ್ಲಿ ಆರು ಕಾರಕಗಳನ್ನೂ ಏಳು ವಿಭಕ್ತಿಗಳನ್ನೂ ಹೇಳಿದ್ದಾನೆ" ಎಂದರೆ. ಷಷ್ಠೀ ವಿಭಕ್ತಿ ಕಾರಕ ವಿಭಕ್ತಿ ಅಲ್ಲ ಎಂದು ಹೇಳುವ ಮತದಲ್ಲೂ ಇದೇ ಸಮಾಧಾನವನ್ನು ಕೊಡಬಹುದಲ್ಲವೇ?

ಶ್ರೀ ಸೀತಾರಾಮಯ್ಯನವರು 'ಅಧೀಶ್ವರನಾ ದಯೆ ಸಾಲ್ಗುಂ' ಎಂಬ ವಾಕ್ಯದಲ್ಲಿ 'ಸಾಲ್ಗುಂ' ಎಂಬ ಕ್ರಿಯಾಪದವನ್ನು ನೋಡಿ. "ಮಾರ್ಗಕಾರನು ಷಷ್ಠಿಗೆ ಕ್ರಿಯಾ ಸಂಬಂಧವನ್ನು ಸ್ಪಷ್ಟವಾಗಿ ತಗುಳ್ಚಿರುವುದಾಗಿ' (ಪು. 167) ಹೇಳಿದ್ದಾರೆ. ಇದು ನಮಗೆ ಸರಿಯೆಂದು ಕಾಣುತ್ತಿಲ್ಲ. 'ಸಾಲ್ಗುಂ' ಎಂಬ ಕ್ರಿಯೆಗೂ. ಅಧೀಶ್ವರನಾ ಎಂಬ ನಾಮಪದಕ್ಕೂ ಯಾವ ಸಂಬಂಧವೂ ಇಲ್ಲ. 'ನನ್ನ ಪುಸ್ತಕವನ್ನು ಕೊಡು" ಎಂಬಲ್ಲಿ 'ನನ್ನ' ಮತ್ತು 'ಕೊಡು'ಗೆ ಯಾವ ಸಂಬಂಧವಿದೆ? 'ಮರದದು ಪೆಣ್' ಎಂದು ಕೇಶಿರಾಜನು ಸಂಬಂಧಾರ್ಥವನ್ನಷ್ಟೇ ಎತ್ತಿಕಾಣಿಸಿದ್ದಾನೆಂದೂ (ಪು. 167) ಅವರು ಹೇಳಿದ್ದಾರೆ. ಮಾರ್ಗಕಾರನ ವಾಕ್ಯದಲ್ಲಿ ಕ್ರಿಯೆ ಬಂದಿದೆ: ಕೇಶಿರಾಜನ ವಾಕ್ಯದಲ್ಲಿ ಕ್ರಿಯೆ ಇಲ್ಲ. ಒಂದು ವಾಕ್ಯದಲ್ಲಿ ಕ್ರಿಯಾಪದವಿದ್ದರೆ. ಷಷ್ಠಿಗೂ ಆ ಕ್ರಿಯೆಗೂ ಸಂಬಂಧ ವುಂಟೆಂದು ವಾದಿಸಲು ಸಾಧ್ಯವೇ? 'ನನ್ನ ಪುಸ್ತಕ'—ಇಲ್ಲಿ ಕ್ರಿಯೆ ಇಲ್ಲ. 'ನನ್ನ ಪುಸ್ತಕವನ್ನು ಕೊಡು'—ಇಲ್ಲಿ ಕ್ರಿಯೆ ಇದೆ. ಆದುದರಿಂದ, ಒಂದು ಕಡೆ ಸಂಬಂಧಕಾರಕ ವೆಂದೂ ಮತ್ತೊಂದು ಕಡೆ ಅಲ್ಲವೆಂದೂ ಹೇಳಬಹುದೇ? "ನನ್ನ ತಂದೆ ಸ್ವರ್ಗಸ್ಥರಾದರು"– ಈ ವಾಕ್ಯದಲ್ಲಿ ಕ್ರಿಯೆ (ಸಾಯುವುದು) ಗೂ ನನಗೂ ಸಂಬಂಧವನ್ನು ಕಲ್ಪಿಸುವುದು ಅನ್ಯಾಯವಲ್ಲವೇ? ಹೀಗೆ ಕ್ರಿಯಾಪದ ಇದ್ದ ಮಾತ್ರಕ್ಕೆ ಷಷ್ಠಿಗೂ ಅದಕ್ಕೂ ಅನ್ವಯ ವನ್ನು ಕಲ್ಪಿಸಿ ಸಂಬಂಧವೂ ಕಾರಕವೇ ಎಂದು ಹೇಳುವವರು. ಯಾವ ತರ್ಕದ ಆಧಾರದಿಂದ ಕರ್ತೃ ಮಾತ್ರ ಕಾರಕವಲ್ಲ ಎಂದು ಹೇಳುತ್ತಾರೆ? 'ನರಪತಿ ಬಂದಂ' ಎಂಬಲ್ಲಿ ನರಪತಿಗೂ ಬರುವ ಕ್ರಿಯೆಗೂ ಸಂಬಂಧ ಇಲ್ಲವೇ? ಸಂಬಂಧ ಇದ್ದರೂ ಇಲ್ಲಿ ನರಪತಿ ಕಾರಕವಲ್ಲ ಎಂದು ಹೇಳಲು ಕಾರಣವೇನು?

ಶ್ರೀ ಸೀತಾರಾಮಯ್ಯನವರು "ಅದು ಹೇಗಿದ್ದರೂ. ಮಾರ್ಗಕಾರ ಮೊದಲು ಗೊಂಡು ಎಲ್ಲ ವ್ಯಾಕರಣಕಾರರೂ ಕನ್ನಡ ನುಡಿಯ ಜಾಯಮಾನವನ್ನು ಗಮನಿಸದೆ ಅವರ ವ್ಯಾಕರಣ ಪ್ರಕ್ರಿಯೆಗಳನ್ನು ಸಂಸ್ಕೃತ ವ್ಯಾಕರಣದ ಚೌಕಟ್ಟಿಗೆ ಅಳವಡಿಸಿರುವುದೇ ಇಂಥ ಗೊಂದಲಗಳಿಗೆ ಕಾರಣವಾಗಿದೆ" (ಪು. 167) ಎಂದು ಅಭಿಪ್ರಾಯಪಟ್ಟಿದ್ದಾರೆ. ಕನ್ನಡ ವ್ಯಾಕರಣದಲ್ಲಿ ಸಂಸ್ಕೃತದ ಪದ್ಧತಿಯನ್ನು ಅನುಸರಿಸಲೇಬೇಕು ಎಂಬ ಮತ ಸರಿಯಲ್ಲ. ಆದರೆ. ಸಂಸ್ಕೃತ ಪದ್ಧತಿಯನ್ನು ಉಪೇಕ್ಷಿಸಲೇಬೇಕೆಂಬ ನಿಯಮವೂ ಇಲ್ಲ. ಕನ್ನಡದ ಜಾಯಮಾನವೇನೆಂದು ಮೊದಲು ತಿಳಿಯಬೇಕು. ಕನ್ನಡಕ್ಕೆ ಸಂಸ್ಕೃತದಿಂದ ಉಪಕಾರವೂ ಆಗಿದೆ, ಸ್ವಲ್ಪ ಅಪಕಾರವೂ ಆಗಿದೆ. ಯಾವ ಅಂಶದಲ್ಲಿ ಸಂಸ್ಕೃತ

ವ್ಯಾಕರಣ ಕನ್ನಡದ ಪ್ರಕೃತಿಗೆ ವಿರೋಧವಾಗುತ್ತದೆಯೋ ಆ ಅಂಶವನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸಬೇಕು. ಸಂಸ್ಕೃತದ ಜ್ಞಾನ ಕನ್ನಡಕ್ಕೆ ಪೋಷಕವಾಗಿದ್ದರೆ ಮಾತ್ರ ಅದನ್ನು ಗ್ರಹಿಸಬೇಕೇ ಹೊರತಾಗಿ. ಅದು ಕನ್ನಡಕ್ಕೆ ಭಾರವಾಗುವ ಹಾಗಿದ್ದರೆ ಕಿತ್ತೊಗೆಯುವುದೇ ಉಚಿತ. ಆದರೆ. ಕರ್ತೃವಿನ ಕಾರಕತ್ವವನ್ನು ಅಲ್ಲಗಳೆಯುವುದು ಕನ್ನಡದ ಜಾಯಮಾನದಲ್ಲಿ ಬಂದಿಲ್ಲ. ಇಲ್ಲಿಯ ಗೊಂದಲಕ್ಕೆ ಕಾರಣ ಸಂಸ್ಕೃತವ್ಯಾಕರಣಪದ್ಧತಿಯಲ್ಲ ಎಂದು ವಿನಯದಿಂದ ಸೂಚಿಸ ಬಯಸುತ್ತೇನೆ.

ಶ್ರೀ ಕೆ. ಟಿ. ಪಾಂಡುರಂಗಿಯವರು ಮಾರ್ಗಕಾರನ ಮಾತಿಗೆ ಬೇರೊಂದು ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಮಾರ್ಗಕಾರನು ಸಂಸ್ಕೃತ ವ್ಯಾಕರಣದ ಕಾರಕ ವ್ಯವಸ್ಥೆಯನ್ನು ಅನುಸರಿಸಿರುವುದರಿಂದ ಅವನು ಕರ್ತೃವನ್ನು ಕಾರಕಾನುಕ್ರಮದಲ್ಲಿ ಸೇರಿಸಿಲ್ಲ. ಸಂಸ್ಕೃತ ವ್ಯಾಕರಣದ ಪ್ರಕಾರ ಪ್ರಥಮಾ ವಿಭಕ್ತಿ ಕಾರಕಾಧೀನವಲ್ಲ; ಹಾಗೂ (ಕರ್ಮಣಿ ಪ್ರಯೋಗದಲ್ಲಿ) ತೃತೀಯಾ ವಿಭಕ್ತಿಯ 'ಕರಣ' ಕಾರಕವೇ ಕರ್ತೃಕಾರಕತ್ವವನ್ನೂ ಒಳಗೊಳ್ಳುತ್ತದೆ. ಶ್ರೀ ಸೀತಾರಾಮಯ್ಯನವರು ಈ ಅಭಿಪ್ರಾಯವನ್ನು ಅನುವಾದ ಮಾಡಿ, "**ಮಾರ್ಗಕಾರನ ಉಕ್ತಿಯನ್ನು ಅವರು ಈ ರೀತಿ ಸಮರ್ಥಿಸಿರುವುದು ಗ್ರಾಹ್ಯವಾಗಿ ಕಂಡುಬಂದರೂ,** ಮಾರ್ಗಕಾರನು ಹೇಳುವ 'ಕರ್ತೃ' ಕಾರಕ ರಹಿತವಾದ ಆರು ಕಾರಕಗಳಲ್ಲಿ ಷಷ್ಠಿಯೂ ಸೇರುವುದೇ ಇಲ್ಲವೇ ಎಂಬ ಸಮಸ್ಯೆಗೆ ಅವರಿಂದ ಪರಿಹಾರ ಸೂಚಿತವಾಗಿಲ್ಲ" ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಶ್ರೀ ಕೆ. ಟಿ. ಪಾಂಡುರಂಗಿಯವರು ಸೂಚಿಸಿರುವ ಕಾರಣವನ್ನು ಪರಿಶೀಲಿಸೋಣ. ಸಂಸ್ಕೃತ ಕಾರಕ ವ್ಯವಸ್ಥೆಯನ್ನು ಅನುಸರಿಸಿರುವುದರಿಂದ ಮಾರ್ಗಕಾರನು ಕರ್ತೃವನ್ನು ಸೇರಿಸಲಿಲ್ಲವೆಂಬ ಹೇಳಿಕೆ ಸಮಂಜಸವಲ್ಲ. ಸಂಸ್ಕೃತ ವ್ಯಾಕರಣದಲ್ಲಿ ಕರ್ತೃವಿಗೆ ಕಾರಕತ್ವವನ್ನು ಅಸಂದಿಗ್ಧವಾಗಿ ಸುಸ್ಪಷ್ಟವಾಗಿ ಹೇಳಿದ್ದಾರೆ. 'ಸ್ವತಂತ್ರಃ ಕರ್ತಾ' ಎಂದು ಪಾಣಿನಿಯ ಸೂತ್ರ (1–4–54) ಇದೆ. 'ಕ್ರಿಯಾಯಾಂ ಸ್ವಾತಂತ್ರ್ಯೇಣ ವಿವಕ್ಷಿತೋಽರ್ಥಃ ಕರ್ತೃಸಂಜ್ಞಃಸ್ಯಾತ್' ಎಂದು ಇದಕ್ಕೆ ವ್ಯಾಖ್ಯಾನ ಮಾಡಿದ್ದಾರೆ. ಇಲ್ಲಿ ಸ್ವಾತಂತ್ರ್ಯವೆಂದರೆ ಸ್ವಪ್ರಯತ್ನದಿಂದ ಕ್ರಿಯೆಯನ್ನು ನಡೆಸುವ ಶಕ್ತಿ. ಕಾರಕಾಂತರಗಳು ಕರ್ತೃವಿಗೆ ಅಧೀನ; ಆದರೆ ಕರ್ತಾ ಕಾರಕಾಂತರಗಳಿಗೆ ಅಧೀನನಲ್ಲ. ಅವನು ಸ್ವವ್ಯಾಪಾರದಿಂದ ಕಾರಕಾಂತರಗಳನ್ನು ಕ್ರಿಯೆಗೆ ಅನುಗುಣವಾಗಿಸಿಕೊಂಡು ಕ್ರಿಯೆಯನ್ನು ನಡೆಸಬಲ್ಲನು. ಈ ಸ್ವಾತಂತ್ರ್ಯದ ಬಲದಿಂದ ಕಾರಕಗಳಲ್ಲಿ ಪ್ರಥಮಸ್ಥಾನ ಕರ್ತೃವಿಗೆ ಸಲ್ಲಬೇಕು. ಆದರೆ ಮಾರ್ಗಕಾರನು ಯಾವುದೋ ಕಾರಣದಿಂದ ಕರ್ತೃವಿಗೆ ಕಾರಕತ್ವವನ್ನು ನಿರಾಕರಿಸಿದ್ದಾನೆಂದು ಹೇಳುವವರು ಈ ಮಾತನ್ನು ಉಪೇಕ್ಷಿಸಲಾಗದು. ಇಂಗ್ಲಿಷ್‌ನಲ್ಲಿ ಅಡಿಟಿಪ್ಪಣಿಯಲ್ಲಿ ಹೀಗೆ ಬರೆದಿದ್ದಾರೆ: "He begins his enumeration with karmakaraka instead of kartrkaraka. This is because

the order followed is that of vibhaktis" (ಪು. 167). ಮಾರ್ಗಕಾರನು ಕರ್ತೃಕಾರಕವನ್ನು ಬಿಟ್ಟು ಕರ್ಮದಿಂದ ಆರಂಭಿಸಿದುದಕ್ಕೆ ಕಾರಣವೆಂದರೆ ಅವನು ವಿಭಕ್ತಿಗಳ ಕ್ರಮವನ್ನನುಸರಿಸಿರುವುದೇ ಎಂದು ಇದರ ಅರ್ಥವಾಗುತ್ತದೆ. ಪ್ರಥಮಾವಿಭಕ್ತಿ ಕಾರಕಾರ್ಥದಲ್ಲಿ ಬರುವುದಿಲ್ಲ. ಅದು ಕರ್ತೃವನ್ನು ನಿರ್ದೇಶಿಸುವುದೂ ಇಲ್ಲ. ಆದುದರಿಂದ ಪ್ರಥಮೆಯನ್ನು ಬಿಟ್ಟು ದ್ವಿತೀಯೆಯಿಂದ ಆರಂಭಿಸಿ ಕ್ರಮವನ್ನು ಹೇಳಿದ್ದಾನೆ. ದ್ವಿತೀಯೆಯ ಅರ್ಥ ಕರ್ಮವಾದುದರಿಂದ ಕರ್ತೃವನ್ನೇ ಆದಿಯಲ್ಲಿ ಹೇಳಿದ್ದಾನೆ. ಹೀಗೆ ಮಾರ್ಗಕಾರನ ಹೇಳಿಕೆಗೆ ಒಂದು ನವೀನ ಕಾರಣವನ್ನು ಕಲ್ಪಿಸಲಾಗಿದೆ.

ಕಾರಕಗಳ ಕ್ರಮವನ್ನು ಹೇಳುವಾಗ ವಿಭಕ್ತಿಗಳ ಕ್ರಮವನ್ನು ಅನುಸರಿಸಿ ಹೇಳುವ ಆವಶ್ಯಕತೆ ಏನಿತ್ತು? ಪ್ರಥಮಾ ವಿಭಕ್ತಿ ಕರ್ತೃವನ್ನು ನಿರ್ದೇಶಿಸುವುದಿಲ್ಲ ಎಂದು ಪಾಣಿನಿಯ ವ್ಯಾಕರಣದ ಅನುಸಾರವಾಗಿ ಹೇಳಬಹುದಾದರೂ. ಕನ್ನಡದಲ್ಲಿ ಈ ಮಾತನ್ನು ಒಪ್ಪಲು ಸಾಧ್ಯವೇ? ಪಾಣಿನಿಯ ಪ್ರಕಾರ, ಆಖ್ಯಾತವೇ—(ಭವತಿ. ಏಧತೇ ಮುಂತಾದ ಕ್ರಿಯಾಪದಗಳಲ್ಲಿ ಕೊನೆಯಲ್ಲಿರುವ ತಿ. ತೇ ಮುಂತಾದ ಪ್ರತ್ಯಯ ಗಳನ್ನು ಆಖ್ಯಾತವೆನ್ನುತ್ತಾರೆ; ಪಾಣಿನಿ ಇವನ್ನು 'ತಿಙ್' ಎಂಬ ಪ್ರತ್ಯಾಹಾರದಿಂದ ಹೆಸರಿಸಿದ್ದಾನೆ; ಲಟ್ ಮುಂತಾದ ಹತ್ತು ಲಕಾರಗಳಿಗೆ ಇವು ಆದೇಶವಾಗಿ ಬರುವುದರಿಂದ ಇವನ್ನು ಲಕಾರ ಅಥವಾ ಲಾದೇಶವೆಂದೂ ಕರೆಯಬಹುದು. ಈ ಪ್ರತ್ಯಯಗಳು ಹದಿನೆಂಟು ಇವೆ. ಮೊದಲನೆಯ ಒಂಬತ್ತು ಪ್ರತ್ಯಯಗಳನ್ನು ಪರಸ್ಮೈಪದವೆನ್ನುತ್ತೇವೆ. ಉಳಿದುವನ್ನು ಆತ್ಮನೇ ಪದವೆನ್ನುತ್ತೇವೆ. ಕರ್ತರಿ ಪ್ರಯೋಗದಲ್ಲಿ ಕೆಲವು ಧಾತುಗಳಿಗೆ ಪರಸ್ಮೈ ಪದಗಳೂ ಕೆಲವಕ್ಕೆ ಆತ್ಮನೇ ಪದಗಳೂ ಸೇರುತ್ತವೆ. ಕೆಲವು ಧಾತುಗಳು ಉಭಯಪದಿಗಳು; ಅವಕ್ಕೆ ಎರಡು ವಿಧವಾದ ಪ್ರತ್ಯಯಗಳೂ ಸೇರುತ್ತವೆ. ಕರ್ಮಣಿ ಮತ್ತು ಭಾವೇ ಪ್ರಯೋಗವಲ್ಲಿ ಎಲ್ಲಾ ಧಾತುಗಳಿಗೂ ಆತ್ಮನೇಪದ ಪ್ರತ್ಯಯಗಳೇ ಸೇರುತ್ತವೆ. ಇದು ಸಂಕ್ಷೇಪವಾಗಿ ಪಾಣಿನಿಯ ಪದವ್ಯವಸ್ಥೆ)—ಕರ್ತೃ ಅಥವಾ ಕರ್ಮದ ಅರ್ಥವನ್ನು ಹೇಳುತ್ತದೆ. ಲಕಾರದಿಂದ ಕರ್ತೃ ಅಭಿಹಿತವಾದರೆ. ಆಗ ತೃತೀಯವಿಭಕ್ತಿ ಬರಲಾರದು. ಲಕಾರದ ಅರ್ಥ ಕರ್ಮ ಅಥವಾ ಭಾವವಾದರೆ. (ಅಂದರೆ ಕರ್ಮಣಿ ಮತ್ತು ಭಾವೇ ಪ್ರಯೋಗದಲ್ಲಿ) ಕರ್ತೃ ಅಭಿಹಿತವಲ್ಲವಾದುದರಿಂದ. ಕರ್ತೃವಿನ ಅರ್ಥದಲ್ಲಿ ತೃತೀಯ ಬರುತ್ತದೆ. 'ಕರ್ತೃಕರಣಯೋಸ್ತೃತೀಯಾ' ಎಂಬ ಸೂತ್ರಕ್ಕೆ ಇದೇ ಅರ್ಥ. ಹೀಗಿರುವುದರಿಂದ. ಸಂಸ್ಕೃತದಲ್ಲಿ ಪ್ರಥಮಾವಿಭಕ್ತಿ ಕಾರಕಾರ್ಥ-ಕವಲ್ಲ. ಆದರೆ ಇದು ಕನ್ನಡದ ಜಾಯಮಾನಕ್ಕೆ ಹೊಂದುತ್ತದೆಯೇ? ನಾಗವರ್ಮ ನೇನೋ ಸಂಸ್ಕೃತ ವ್ಯಾಕರಣದಮಾದರಿಯನ್ನೇ ಅನುಸರಿಸಿ 'ಕರ್ತೃಕರಣಯೋಸ್ತೃತೀಯಾ' ಎಂದು ವಿಧಿಸಿದ್ದಾನೆ. ಆದುದರಿಂದ ಕನ್ನಡದಲ್ಲೂ ಆಖ್ಯಾತವೇ ಕರ್ತೃ ಅಥವಾ ಕರ್ಮವನ್ನು ನಿರ್ದೇಶಿಸುತ್ತದೆ ಎಂದು ಒಪ್ಪಬಹುದು. ಹಾಗಾದರೆ, ಕನ್ನಡದಲ್ಲೂ ಪ್ರಥಮ ಕಾರಕವಿಭಕ್ತಿಯಲ್ಲ ಎಂದು ನಿಸ್ಸಂದೇಹವಾಗಿ ಒಪ್ಪಬಹುದು.

ಆದರೆ, ಪ್ರಥಮೆ ಕಾರಕವಿಭಕ್ತಿಯಲ್ಲ ಎಂದು ಹೇಳಿದಮಾತ್ರಕ್ಕೆ ಕರ್ತಾ ಕಾರಕವಲ್ಲ ಎಂದು ಹೇಳಿದಂತೆ ಆಗಲಾರದು. ಪ್ರಥಮೆ ವಿಭಕ್ತಿ; ಕರ್ತಾ ಒಂದು ಕಾರಕ. ಕಾರಕವನ್ನೂ ವಿಭಕ್ತಿಯನ್ನೂ ಒಂದೆಂದು ಎಣಿಸುವುದೇ ಗೊಂದಲಕ್ಕೆ ಕಾರಣವಾಗಿದೆ. ಒಂದೇ ಕಾರಕವನ್ನು ನಿರ್ದೇಶಿಸಲು ಅನೇಕ ವಿಭಕ್ತಿಗಳು ಬರಬಹುದು. ಒಂದೇ ವಿಭಕ್ತಿ ಅನೇಕ ಕಾರಕಗಳ ಅರ್ಥವನ್ನು ಪ್ರತಿಪಾದಿಸಬಹುದು. ಸಂಸ್ಕೃತದಲ್ಲೇ ಇದಕ್ಕೆ ಅನೇಕ ಉದಾಹರಣೆಗಳಿವೆ. 'ರಾಮಸ್ಯ ಗಮನಂ' ಎಂಬಲ್ಲಿ 'ರಾಮಸ್ಯ' ಎಂಬ ಷಷ್ಠೀ ಕರ್ತೃವನ್ನು ನಿರ್ದೇಶಿಸುತ್ತದೆ. 'ರಾಮೇಣ ಗಮ್ಯತೇ' ಎಂಬಲ್ಲಿ ಅದೇ ಕರ್ತೃವನ್ನು ನಿರ್ದೇಶಿಸಲು ತೃತೀಯ ಬಂದಿದೆ. 'ರಾಮೇ ಗತೇ ಭೀಮ ಆಗತಃ' ಎಂಬಲ್ಲಿ ಸಪ್ತಮೀ ವಿಭಕ್ತಿ ಕರ್ತೃವನ್ನೇ ಹೇಳುತ್ತದೆ. 'ರಾಮಃ ಪಠತಿ' ಎಂಬಲ್ಲಿ 'ತಿ' ಪ್ರತ್ಯಯವು ಕರ್ತೃವನ್ನು ನಿರ್ದೇಶಿಸುತ್ತದೆ. ಹೀಗೆ ಒಂದು ಕಾರಕವನ್ನು ನಿರ್ದೇಶಿಸಲು ಅನೇಕ ವಿಭಕ್ತಿಗಳು ಬರಬಹುದು. (ಪಾಣಿನಿ ತಿಙ್ ಪ್ರತ್ಯಯವನ್ನೂ ವಿಭಕ್ತಿ ಎಂದೇ ಕರೆಯುತ್ತಾನೆ. ಕನ್ನಡದಲ್ಲಿ ವಿಭಕ್ತಿ ಎಂದರೆ ನಾಮಪದಕ್ಕೆ ಸೇರುವ ಪ್ರತ್ಯಯವೆಂದೇ ಭಾವಿಸಬಹುದು). ತೃತೀಯಾವಿಭಕ್ತಿ ಕರ್ತಾ ಮತ್ತು ಕರಣ ಎರಡು ಅರ್ಥಗಳಲ್ಲೂ ಬರುತ್ತದೆ. 'ರಾಮೇಣ ರಾವಣೋ ಹತಃ' ಎಂಬಲ್ಲಿ ತೃತೀಯೆಗೆ ಕರ್ತಾ ಅರ್ಥವಾದರೆ, 'ರಾಮೇಣ ಬಾಣೇನ ಹತಃ' ಎಂಬಲ್ಲಿ 'ಬಾಣೇನ' ಎಂಬ ತೃತೀಯೆಗೆ ಕರಣವೇ ಅರ್ಥ. ಒಂದೇ ವಿಭಕ್ತಿಗೆ ಎರಡು ಅರ್ಥಗಳುಂಟು ಎನ್ನಲು ಈ ಪ್ರಯೋಗವೊಂದೇ ಸಾಕು. 'ರಾಮಸ್ಯ ಗಮನಂ' ಎಂಬಲ್ಲಿ ಷಷ್ಠೀ ಕರ್ತೃವಾಚಕವಾದರೆ, 'ಪುಸ್ತಕಸ್ಯ ಪಠನಂ. ಎಂಬಲ್ಲಿ ಅದೇ ಕರ್ಮವಾಚಕವಾಗಿದೆ. ಆದುದರಿಂದ, ಕಾರಕ ಬೇರೆ, ವಿಭಕ್ತಿ ಬೇರೆ. ಇವೆರಡನ್ನೂ ಒಂದೆಂದು ಗಣಿಸುವುದು ತಪ್ಪು. ಹೀಗಿರುವಾಗ ಪ್ರಥಮೆ ಕಾರಕ ವಿಭಕ್ತಿಯಲ್ಲ ಎಂದು ಸಾಧಿಸಿದರೂ. ಕರ್ತಾ ಕಾರಕವಲ್ಲ ಎಂದು ಸಿದ್ಧಿಸುವುದಿಲ್ಲ. 'ಮಾರ್ಗಕಾರನ ಉಕ್ತಿಯನ್ನು ಈ ರೀತಿ ಸಮರ್ಥಿಸಿರುವುದು ಗ್ರಾಹ್ಯವಾಗಿ ಕಂಡುಬರಲು' ಸಾಧ್ಯವಿಲ್ಲ. ಸಂಸ್ಕೃತ ವಿಭಕ್ತೀ ಕ್ರಮವನ್ನೂ ಕಾರಕ ವ್ಯವಸ್ಥೆಯನ್ನೂ ಅನುಸರಿಸುವ ಮಾರ್ಗಕಾರನು ಸಂಬಂಧವನ್ನು ಕಾರಕವೆಂದು ಭಾವಿಸುವುದೂ ಸೋಜಿಗದ ಸಂಗತಿಯಾಗುತ್ತದೆ.

ಮಾರ್ಗಕಾರನ ಅಭಿಪ್ರಾಯದಲ್ಲಿ ಪ್ರಥಮೆ ಕರ್ತೃವನ್ನು ನಿರ್ದೇಶಿಸುವ ವಿಭಕ್ತಿ. ಆದುದರಿಂದ ಅದು ಕಾರಕ ವಿಭಕ್ತಿಗಳಲ್ಲಿ ಸೇರಲು ಯೋಗ್ಯವೇ ಆಗಿದೆ. ಆಖ್ಯಾತದಿಂದ ಕರ್ತಾ ಅಭಿಹಿತವಾಗಿದೆ ಎಂಬ ಮಾತನ್ನು ಮಾರ್ಗಕಾರನು ಒಪ್ಪುವುದಿಲ್ಲ ಎಂದು ಅವನ ಈ ಉದಾಹರಣೆಯಿಂದಲೇ ಸ್ಪಷ್ಟವಾಗುತ್ತದೆ. ಷಷ್ಠೀ ವಿಭಕ್ತಿ ಸಂಬಂಧಾರ್ಥಕವಾಗಿ ಬಂದಾಗ ಕಾರಕ ವಿಭಕ್ತಿಯಾಗಲಾರದು. ಲಕ್ಷ್ಯಪದ್ಯದಲ್ಲಿ 'ಅಧೀಶ್ವರನಾದಮೆ ಸಾಲ್ಗುಂ' ಎಂದು ಉದಾಹರಿಸಿರುವುದರಿಂದ ಸಂಬಂಧ ಷಷ್ಠಿಯೇ. ಆದರೆ ಇದು ಕಾರಕ ವಿಭಕ್ತಿಯಲ್ಲವೆಂದ ಮಾತ್ರಕ್ಕೆ, ಕಾರಕಯುಕ್ತ ವಿಭಕ್ತಿಕ್ರಮ ಎಂಬ ಗ್ರಂಥಕಾರನ ಮಾತಿಗೆ

ವಿರೋಧವಿಲ್ಲ. ಆ ಮಾತಿನ ತಾತ್ಪರ್ಯ 'ಈ ಉದಾಹರಣೆಯು ವಿಭಕ್ತಿಗಳೆಲ್ಲವೂ ಕಾರಕ ವಿಭಕ್ತಿಗಳು' ಎಂದಲ್ಲ. ಈ ಪದ್ಯದಲ್ಲಿ ಕಾರಕಗಳನ್ನೂ ವಿಭಕ್ತಿಗಳನ್ನೂ ಕ್ರಮವಾಗಿ ತೋರಿಸಿ ದ್ದೇನೆ ಎಂಬುದಿಷ್ಟೇ ಈ ಮಾತಿನ ಅರ್ಥವೆಂದು ಗ್ರಹಿಸಬೇಕು. ಹೀಗೆ ಅರ್ಥಮಾಡಿ ದಾಗ ಪೂರ್ವಾಪರವಿರೋಧ ಯಾವುದೂ ಇರಲಾರದು. ಇದೇ ಸಮಂಜಸವಾದ ಅರ್ಥವೆಂದು ನಮಗೆ ತೋರುತ್ತದೆ. ಈಗ ಒಂದೇ ಒಂದು ಸಮಸ್ಯೆ ಮಾತ್ರ ಉಳಿಯು ತ್ತದೆ. ಕಾರಕಗಳನ್ನು ನಿರ್ದೇಶಿಸುವಾಗ ಕರ್ಮದಿಂದ ಆರಂಭಿಸಿದುದೇಕೆ? 'ಕರ್ತೃ ಕರಣಾದಿಕ' ಎಂದೂ ಹೇಳಬಹುದಿತ್ತು: ಕರ್ಮಕ್ಕೆ ಬದಲಾಗಿ ಕರ್ತೃ ಎಂದು ಹೇಳಿದ್ದರೆ ಛಂದಸ್ಸಿನ ದೃಷ್ಟಿಯಿಂದಲೂ ಏನೂ ತೊಡಕಾಗುತ್ತಿರಲಿಲ್ಲ. ಕರ್ತೃವನ್ನು ಬಿಟ್ಟು ಕರ್ಮ ವನ್ನು ಆರಿಸಿಕೊಂಡದ್ದು ಏಕೆ ಎಂದು ಯೋಚಿಸಿದರೆ ಹೀಗೆ ಹೊಳೆಯುತ್ತದೆ. ಇಲ್ಲಿ ಕಾರಕ ಗಳನ್ನು ಕ್ರಮವಾಗಿ ಹೇಳಬೇಕೆಂದು ಗ್ರಂಥಕಾರನ ಇಷ್ಟ. ಕರ್ತೃವನ್ನು ಮೊದಲು ಹೇಳಿ ದರೆ. ಎರಡನೆಯದಾಗಿ ಕರ್ಮವನ್ನೇ ಹೇಳಬೇಕು. 'ಕರ್ತೃಕರ್ಮಕರಣಾದಿಕ' ಎಂದು ಹೇಳಲು ಛಂದಸ್ಸಿನಲ್ಲಿ ಅವಕಾಶವಿಲ್ಲ. 'ಕರ್ತೃಕರಣ' ಎಂದು ಹೇಳಿದರೆ ಕ್ರಮಭಂಗ ವಾಗುತ್ತದೆ. ಆದುದರಿಂದ. ಕರ್ತೃವನ್ನು ಬಿಟ್ಟು ಕರ್ಮದಿಂದ ಆರಂಭಿಸಿರಬಹುದು. ಕರ್ತೃವನ್ನು ಬಿಟ್ಟರೆ ಕ್ರಮಭಂಗವಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ನಿಜವಾಗಿ, ಗ್ರಂಥಕಾರ ಕರ್ತೃವನ್ನು ನಿರ್ದೇಶಿಸದೆ. ಕರ್ಮವನ್ನು ಹೇಳಿದ್ದೇ ಈ ಸಮಸ್ಯೆಗೆ ಮೂಲ ಕಾರಣವಾಗಿದೆ. ಇದಕ್ಕೆ ಬೇರೆ ಯಾವ ಸಮಾಧಾನವನ್ನೂ ಕೊಡಲು ಸಾಧ್ಯವಿಲ್ಲ. ಕರ್ತೃವನ್ನು ಬಿಡಲು ಕಾರಣ ಅದನ್ನು ಗ್ರಂಥಕಾರ ಕಾರಕವೆಂದು ಭಾವಿಸದಿರುವುದೇ ಎಂಬ ಊಹೆ ನಿರಾಧಾರವಾದುದು. "ಗ್ರಂಥಕಾರನು ಕರ್ತೃವನ್ನು ಬಿಟ್ಟದ್ದು ತಪ್ಪು: ಪ್ರಮಾದಕೃತವಾದ ದೋಷ" ಎಂದು ಬೇಕಾದರೂ ಹೇಳಬಹುದೇ ವಿನಹ. ಈ ಸಣ್ಣ ತಪ್ಪನ್ನು ಸಮರ್ಥಿಸುವ ಉತ್ಸಾಹದ ಭರದಲ್ಲಿ ಕರ್ತೃವಿಗೆ ಕಾರಕತ್ವವೇ ಇಲ್ಲ ಎಂದು ಹೇಳುವ ದೊಡ್ಡ ತಪ್ಪನ್ನು ಮಾಡದಿರುವುದೇ ವಿವೇಕದ ದಾರಿ ಎಂದು ನಮಗೆ ತೋರುತ್ತದೆ.

ಶ್ರೀ ಸೀತಾರಾಮಯ್ಯನವರು ಮತ್ತೊಂದು ಬಗೆಯ ಸಮಾಧಾನವನ್ನು ಸೂಚಿಸಿದ್ದಾರೆ. 'ಆಧುನಿಕ ಭಾಷಾಶಾಸ್ತ್ರಜ್ಞರ ಪ್ರಕಾರ. ಕನ್ನಡದಲ್ಲಿ ಪ್ರಥಮಾವಿಭಕ್ತಿ ಇದ್ದರೂ. ಅದನ್ನು ಸಂಕೇತಿಸುವ ಪ್ರತ್ಯಯ ನುಡಿಯ ಜಾಯಮಾನಕ್ಕೆ ಹೊರತು. ನಾಮಪ್ರಕೃತಿಯೇ ಪ್ರಥಮೆಯ ಅರ್ಥದಲ್ಲಿ ಪ್ರಯೋಗವಾಗುತ್ತದೆ. ಮಾರ್ಗಕಾರನ ಲಕ್ಷ್ಯಪದ್ಯದಲ್ಲಿಯೇ 'ನರಪತಿ ಬಂದಂ' ಎಂಬ ಪ್ರಯೋಗ ಇದಕ್ಕೆ ನಿದರ್ಶನ. ಅಲ್ಲದೆ. ವಾಕ್ಯದ ಕ್ರಿಯಾಪದದಲ್ಲಿಯ ಧಾತುವಿಗೆ ಹತ್ತಿರುವ ಆಖ್ಯಾತ ಪ್ರತ್ಯಯವೇ ಕರ್ತೃ ವಾಚಕವೂ ಆಗಿ ಕೆಲಸಮಾಡುತ್ತದೆ. ಬರು + ಅನ್. ಅಳ್. ಅದು. ಅರ್. ಉವು ಇತ್ಯಾದಿ. ಬಂದನ್ ಎಂದರೆ ಅವನ್ ಬಂದನ್ ಎಂದೇ ಅರ್ಥ. ಹೀಗಿರುತ್ತ, ಕನ್ನಡದಲ್ಲಿ ಸಹಜವಾಗಿಯೇ ಪ್ರಥಮಾಮೂಲಕವಾದ ಕರ್ತೃಕಾರಕತ್ವಕ್ಕೆ ಎಡೆಯಿಲ್ಲ

ನೆಂದು ಕಂಡು ಬರುತ್ತದೆ. ಮಾರ್ಗಕಾರನು ಇದನ್ನೆಲ್ಲ ಮನಗಂಡೇ ಕರ್ತೃವನ್ನು ಕಾರಕವರ್ಗದಿಂದ ಹೊರತುಪಡಿಸಿರಬೇಕೆಂದು ನಮಗೆ ತೋರುತ್ತದೆ" ಎಂದು (ಟಿಪ್ಪಣಿ ಪು. 168) ಅವರು ವಿವರವಾಗಿ ತಮ್ಮ ವಾದವನ್ನು ಮಂಡಿಸಿದ್ದಾರೆ. ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ವಿಷಯಗಳು ಮೂರು: (1) ಕನ್ನಡದಲ್ಲಿ ಆಖ್ಯಾತ ಪ್ರತ್ಯಯವೇ ಕರ್ತೃವನ್ನು ಬೋಧಿಸುತ್ತದೆ ಎಂದು ಹೇಳಬಹುದೇ? (2) ಪ್ರಥಮಾ ವಿಭಕ್ತಿ ಇದ್ದರೂ ಅದನ್ನು ಸಂಕೇತಿಸುವ ಪ್ರತ್ಯಯ ಇಲ್ಲ ಎಂದರೆ ಇದರ ಅರ್ಥವೇನು? (3) ಪ್ರತ್ಯಯ ಇಲ್ಲದಿದ್ದರೂ. ಕಾರಕ ಇರಬಹುದಲ್ಲವೇ? ಪ್ರತ್ಯಯವಿದ್ದರೇನೇ ಕಾರಕ, ಪ್ರತ್ಯಯವಿಲ್ಲದಿದ್ದರೆ ಕಾರಕವಿಲ್ಲ ಎಂದು ಹೇಳಲು ಯಾವ ಆಧಾರವಿದೆ? ಇದರ ಜೊತೆಗೆ. ಕನ್ನಡದಲ್ಲಿ ಪ್ರಥಮಾವಿಭಕ್ತಿಯಲ್ಲಿ ಪ್ರತ್ಯಯಗಳೇ ಇಲ್ಲವೆಂದು ಹೇಳುವುದು ಸರಿಯೇ ಎಂಬುದನ್ನೂ ವಿಮರ್ಶಿಸಬೇಕು.

ಆಖ್ಯಾತ ಪ್ರತ್ಯಯವೇ ಕರ್ತೃವಾಚಕವೆಂದು ಹೇಳುವುದು ಪಾಣಿನಿಯ ಸಿದ್ಧಾಂತವನ್ನು ಕನ್ನಡಕ್ಕೆ ಆರೋಪಿಸುವ ಮಾತು. ಆಖ್ಯಾತ ಪ್ರತ್ಯಯ ಕಾಲ, ಲಿಂಗ, ಪುರುಷ ಮತ್ತು ಅರ್ಥ (ವಿಧಿ ಆದಿ) ದ ಜೊತೆಗೆ ಕಾರಕವನ್ನೂ ಬೋಧಿಸುತ್ತದೆ ಎಂದು ಒಪ್ಪಿದರೆ – ಇದರಲ್ಲಿ ಮತಭೇದಕ್ಕೆ ಅವಕಾಶವುಂಟೆಂದು ಹೇಳಬಯಸುತ್ತೇವೆ· ಕರ್ತೃವಿನ ಕಾರಕತ್ವಕ್ಕೆ ಲೋಪ ಬರುವುದಿಲ್ಲ. ಪ್ರಥಮಾ ವಿಭಕ್ತಿಗೆ ಕರ್ತಾ ಅರ್ಥವಲ್ಲ ಎಂದಿಷ್ಟೇ ಆಗುತ್ತದೆ. ಇದಕ್ಕಾಗಿ ಕಾರಕ ವ್ಯವಸ್ಥೆಯನ್ನು ಬದಲಾಯಿಸಬೇಕಾದ ಅಗತ್ಯವಿಲ್ಲ. ಕರ್ತಾ ಕಾರಕವೇ ಆದರೆ ಅದನ್ನು ನಿರ್ದೇಶಿಸುವ ಪ್ರತ್ಯಯ ಆಖ್ಯಾತ, ಪ್ರಥಮೆ ಅಲ್ಲ. ಇದಿಷ್ಟೇ ಈ ಮತದಲ್ಲಿ ದೊರೆಯಬಹುದಾದ ಫಲಿತಾಂಶ. ಆಖ್ಯಾತ ಕರ್ತೃವಾಚಕವಲ್ಲ ಎಂದು ಹೇಳಿದರೆ. ಪ್ರಥಮಾ ವಿಭಕ್ತಿಯೇ ಕರ್ತೃಬೋಧಕವೆಂದು ನಿರ್ಧರಿಸಬೇಕಾಗುತ್ತದೆ.

'ಪ್ರಥಮಾವಿಭಕ್ತಿ ಇದೆ: ಆದರೆ ಪ್ರತ್ಯಯವಿಲ್ಲ' ಎಂದು ಹೇಳುವ ಮಾತು ಸರಿಯಲ್ಲ. ವಿಭಕ್ತಿ ಎಂದರೇನು? ಪ್ರತ್ಯಯವೇ. ಪ್ರತ್ಯಯವನ್ನೇ ವೈಯಾಕರಣರು ವಿಭಕ್ತಿ ಎಂದು ನಿರ್ದೇಶಿಸುತ್ತಾರೆ. ಸಮಾಸದಲ್ಲಿ ವಿಭಕ್ತಿ ಲೋಪವಾಗಿರುತ್ತದೆ· 'ಪ್ರತ್ಯಯವಿಲ್ಲದಿದ್ದರೂ ಸಮಾಸದಲ್ಲಿ ವಿಭಕ್ತಿಯುಂಟು' ಎಂದು ಹೇಳಬಹುದೇ? ಕೆಲವೆಡೆ ಪ್ರತ್ಯಯಕ್ಕೆ ಲೋಪವಾಗಿರಬಹುದು. ಆದರೆ. ಅಲ್ಲಿ ಪ್ರತ್ಯಯ ಹತ್ತಿ. ಆಮೇಲೆ ಲೋಪವಾಗಿದೆ ಎಂಬ ಕಲ್ಪನೆಯೇ 'ವಿಭಕ್ತಿ' ಇತ್ತೆಂದು ಹೇಳಲು ಆಧಾರ. ಆಧುನಿಕ ಭಾಷಾಶಾಸ್ತ್ರಜ್ಞರೂ ಈ ಮಾತನ್ನು ಒಪ್ಪಿಕೊಳ್ಳದೆ ವಿಧಿ ಇಲ್ಲ. ಇಂಗ್ಲೀಷಿನಲ್ಲಿ 'ಶೀಪ್' (Sheep) ಎಂಬುದನ್ನು ಏಕವಚನ ಮತ್ತು ಬಹುವಚನ ಎರಡರಲ್ಲೂ ಉಪಯೋಗಿಸುತ್ತಾರೆ. ಆದರೆ, ಬಹುವಚನದ ರೂಪದಲ್ಲಿ ಬಹುತ್ವಬೋಧಕ ಪ್ರತ್ಯಯ ಬಂದು ಲುಪ್ತವಾಯಿತೆಂದು ಕಲ್ಪಿಸಬೇಕಾಗುತ್ತದೆ. ಸಂಸ್ಕೃತದಲ್ಲಿ ಹಲಂತ ಶಬ್ದಗಳಲ್ಲಿ (ರಾಜಾ, ವಾಕ್, ವಿದ್ವಾನ್ ಆದಿ) ಪ್ರಥಮಾ

ಏಕವಚನದ ಪ್ರತ್ಯಯ ಲುಪ್ತವಾಗಿದೆ ಎನ್ನುತ್ತೇವೆ. ಇದೆಲ್ಲಾ ಶಾಸ್ತ್ರಕಾರರು ಭಾಷಾ ವಿಶ್ಲೇಷಣೆಯ ಸೌಕರ್ಯಕ್ಕಾಗಿ ಮಾಡಿಕೊಂಡಿರುವ ಶಾಸ್ತ್ರೀಯ ಕಲ್ಪನೆ ಮಾತ್ರ. ವ್ಯಾಕರಣವೇತ್ತರಲ್ಲಿ ಅಗ್ರಗಣ್ಯನಾದ ಭರ್ತೃಹರಿ ವಾಕ್ಯಪದೀಯದಲ್ಲಿ

> "ಪದೇನ ವರ್ಣಾ ವಿದ್ಯಂತೇ ವರ್ಣೇಷ್ವವಯವಾ ನ ಚ ।
> ವಾಕ್ಯಾತ್ ಪದಾನಾಮತ್ಯಂತಂ ಪ್ರವಿವೇಕೋ ನ ಕಶ್ಚನ ॥"

ಎಂದು ಸಾರಿದ್ದಾನೆ. ಪದ, ಪದದಲ್ಲಿ ಪ್ರಕೃತಿ, ಪ್ರತ್ಯಯ ಮುಂತಾದ ವಿಭಾಗಗಳು, ಆಗಮ, ಆದೇಶ, ಲೋಪ, ಸಂಪ್ರಸಾರಣ, ಗುಣ, ವೃದ್ಧಿ ಮುಂತಾದ ವಿಕಾರಗಳು — ಇವೆಲ್ಲವೂ ಶಾಸ್ತ್ರಕಾರರ ಕಲ್ಪನೆ ಎಂದು ಆತನ ಅಭಿಪ್ರಾಯ. ಆಧುನಿಕ ಭಾಷಾವಿಜ್ಞಾನವೂ ಇದನ್ನು ಒಪ್ಪುತ್ತದೆ. ಸಂಸ್ಕೃತದಲ್ಲಿ ಕೆಲವು ಧಾತುಗಳ ಮೇಲೆ 'ಕ್ವಿಪ್' ಪ್ರತ್ಯಯ ಹತ್ತುತ್ತದೆ. ಇದರಲ್ಲಿ ಏನೂ ಉಳಿಯುವುದಿಲ್ಲ. 'ಕ್' ಎಂಬುದು ಪ್ರತ್ಯಯದ ಆದಿಯಲ್ಲಿ ಬಂದಿದೆ. ಆದುದರಿಂದ ಅದು 'ಇತ್' ಎನಿಸಿಕೊಳ್ಳುತ್ತದೆ. 'ಪ್' ಎಂಬ ವ್ಯಂಜನ ಪ್ರತ್ಯಯದ ಅಂತ್ಯದಲ್ಲಿ ಬಂದಿದೆ. ಅದೂ 'ಇತ್'. ಇಕಾರವು ಅನುನಾಸಿಕವಾದುದರಿಂದ ಅದೂ 'ಇತ್'. (ಲಶಕ್ವತದ್ಧಿತೇ. ಹಲಂತ್ಯಂ. ಉಪದೇಶೇಜನುನಾಸಿಕ ಇತ್ ಎಂದು ಪಾಣಿನಿ ಸೂತ್ರಗಳಿವೆ.) 'ಇತ್' ಸಂಜ್ಞಕವಾದ ವರ್ಣಗಳಿಗೆ ಲೋಪವಾಗುತ್ತದೆ— 'ತಸ್ಯಲೋಪಃ'. ಈಗ ಉಳಿದದ್ದು ವಕಾರ ಮಾತ್ರ. ಪಾಣಿನಿ 'ವೇರಪೃಕ್ತಸ್ಯ' ಎಂದು ಅದಕ್ಕೂ ಲೋಪವನ್ನು ವಿಧಿಸಿದ್ದಾನೆ. ಹೀಗಾಗಿ 'ಕ್ವಿಪ್' ಪ್ರತ್ಯಯದಲ್ಲಿ ಏನೂ ಉಳಿಯುವುದಿಲ್ಲ. 'ಶಾಸ್ತ್ರವಿತ್' 'ಉಖಾಸ್ರುತ್' ಮುಂತಾದ ಶಬ್ದಗಳು ಕ್ವಿಪ್ ಪ್ರತ್ಯಯಾಂತ ಶಬ್ದಗಳೆಂದು ಹೇಳುತ್ತೇವೆ. ಧಾತುಗಳಿಗೆ ಕೃದಂತತ್ವ ನಿಮಿತ್ತಕವಾದ ಪ್ರಾತಿಪದಿಕ ಸಂಜ್ಞೆ ಸಿದ್ಧಿಸಲು (ಧಾತು ಪ್ರಾತಿಪದಿಕವಾಗಲಾರದು. ಅದಕ್ಕೆ ಕೃತ್ ಪ್ರತ್ಯಯವನ್ನು ಸೇರಿಸಿದರೆ, ಕೃದಂತ ರೂಪವನ್ನು ಪ್ರಾತಿಪದಿಕ ಎನ್ನುತ್ತೇವೆ. ವಿದ್ ಮುಂತಾದ ಧಾತುಗಳು ಸಂಸ್ಕೃತದಲ್ಲಿ ಪ್ರಾತಿಪದಿಕಗಳಾಗಿ ಪ್ರಯುಕ್ತವಾಗಿವೆ. ಈ ಧಾತುಗಳಿಗೆ ಯಾವ ಪ್ರತ್ಯಯವೂ ಸೇರಿಲ್ಲ. ಆದರೂ ಪ್ರಯೋಗದಲ್ಲಿ ಅವು ಪ್ರಾತಿಪದಿಕವಾಗಿರುವುದರಿಂದ, ಒಂದು ಪ್ರತ್ಯಯವನ್ನು ಸೇರಿಸಿ, ಅದಕ್ಕೆ ಲೋಪವನ್ನು ವಿಧಿಸಿ, ಹೇಗೋ ಒಂದು ರೀತಿಯಲ್ಲಿ ಇವು ಕೃದಂತರೂಪಗಳೆಂದೂ, ಕೃದಂತವಾದುದರಿಂದ ಪ್ರಾತಿಪದಿಕಸಂಜ್ಞೆ ಬಂದಿದೆ ಎಂದೂ ಪಾಣಿನಿ ಉಪಪತ್ತಿ ಕಲ್ಪಿಸಿದ್ದಾನೆ) ಈ ಕಲ್ಪನೆ ಮಾಡಲಾಗಿದೆ. ಹಾಗೆಯೇ 'ನರಪತಿ ಬಂದಂ' ಮುಂತಾದ ಕಡೆಗಳಲ್ಲೂ ಪ್ರಥಮಾ ವಿಭಕ್ತಿ ಹತ್ತಿ ಲುಪ್ತವಾಗಿದೆ ಎಂದು ಕಲ್ಪನೆ ಮಾಡಬೇಕು. ಹೀಗೆ ಇರುವುದರಿಂದ ಇಲ್ಲಿ ವಿಭಕ್ತಿ ಇದೆ, ಆದರೆ ಪ್ರತ್ಯಯವಿಲ್ಲ ಎಂದು ಹೇಳುವುದು ಸರಿಯಲ್ಲ. ವಿಭಕ್ತಿ ಪ್ರತ್ಯಯರಹಿತವಾಗಿರಲು ಸಾಧ್ಯವಿಲ್ಲ. ಪ್ರತ್ಯಯಕ್ಕೇ ವಿಭಕ್ತಿ ಎಂದು ಹೆಸರು. ಕರ್ತೃಕಾರಕ ಪ್ರತ್ಯಯರಹಿತವಾಗಿದೆ ಎಂದು ಹೇಳಬಹುದು. ಕಾರಕ ಅರ್ಥ ಸ್ವರೂಪವಾದುದರಿಂದ, ಪ್ರತ್ಯಯವಿಲ್ಲದೆಯೂ ಆ ಅರ್ಥತೋರಬಹುದು. ಕಾರಕ ಬೋಧಕವಾದ ಪ್ರತ್ಯಯವಿಲ್ಲದಿದ್ದರೂ ಕಾರಕ ಪ್ರತೀತಿ ಉಂಟಾಗುವುದು ನಿರ್ವಿವಾದ,

"ರಾಮಾಯಣ ಬರೆದ ಕವಿ ಯಾರು?" ಎಂಬ ವಾಕ್ಯ ಈಗಿನ ಶೈಲಿಯಲ್ಲಿ ಸರಿ; ವ್ಯಾಕರಣ ಸಂಮತವಾದ ವಾಕ್ಯ. "ರಾಮಾಯಣವನ್ನು ಬರೆದ ಕವಿ" ಎಂದು ದ್ವಿತೀಯಾ ವಿಭಕ್ತಿ ಪ್ರತ್ಯಯವನ್ನು ಸೇರಿಸಿಯೇ ಹೇಳಬೇಕೆಂಬ ನಿಯಮವಿಲ್ಲ. ದ್ವಿತೀಯಾ ಪ್ರತ್ಯಯವನ್ನು ಲುಪ್ತಗೊಳಿಸಿದರೂ. ಬರೆಯುವ ಕ್ರಿಯೆಗೆ ರಾಮಾಯಣವೇ ಕರ್ಮ ಎಂದು ನಿಶ್ಚಯವಾಗಿ ತಿಳಿಯುತ್ತದೆ. ಇಲ್ಲಿ ಪ್ರತ್ಯಯ ಕಾಣದಿದ್ದರೂ ಕರ್ಮಕಾರಕ ಪ್ರತೀತಿಗೆ ಬಾಧಕವಿಲ್ಲ. ಹಾಗೆಯೇ ನರಪತಿ ಬಂದಂ ಎಂಬಲ್ಲೂ ಪ್ರಥಮಾ ವಿಭಕ್ತಿ ಪ್ರತ್ಯಯ ಲುಪ್ತವಾಗಿದೆ: ಆದರೆ ಕರ್ತಾ ಪ್ರತೀತಿ ಆಗುತ್ತದೆ. ಇದನ್ನು 'ಲುಪ್ತ ವಿಭಕ್ತಿಕ ರೂಪಂ' ಎಂದು ಕರೆಯಬಹುದು. ಆದುದರಿಂದ. ಈ ಪ್ರಯೋಗದಿಂದ ಕರ್ತೃವಿಗೆ ಕಾರಕತ್ವ ಇಲ್ಲ ಎಂದು ಸಾಧಿಸಲು ಸಾಧ್ಯವಿಲ್ಲ.

ಬಹುವಚನದಲ್ಲಿ 'ಗಳ್' ಪ್ರತ್ಯಯ ಪ್ರಥಮೆಯಲ್ಲೂ ಬರುತ್ತದೆ. ಮೊನ್ನೆ ಮೊನ್ನೆಯವರೆಗೆ ಕನ್ನಡದಲ್ಲಿ ರಾಮನು. ಕೃಷ್ಣನು. ಹರಿಯು. ಶಂಭುವು ಎಂದು ಪ್ರಥಮಾ ಏಕವಚನದಲ್ಲಿ ಉಕಾರ ಪ್ರತ್ಯಯವನ್ನು ಪ್ರಯೋಗಿಸುತ್ತಿದ್ದರು. ಅವನು, ಅವಳು, ಇವನು, ಅವರು, ಇವರು ಮುಂತಾದ ಶಬ್ದಗಳಲ್ಲಿ ಇನ್ನೂ ಆ ಪ್ರತ್ಯಯ ಉಳಿದಿದೆ. ಪ್ರಾಚೀನ ಕನ್ನಡದಲ್ಲಿ ಅಕಾರಾಂತ ಪ್ರಾತಿಪದಿಕಗಳಲ್ಲಿ 'ಮ್' ವಿಭಕ್ತಿಯ ಪ್ರಯೋಗಕ್ಕೆ ಸಾವಿರಾರು ಉದಾಹರಣೆಗಳನ್ನು ಕೊಡಬಹುದು. ಮಾರ್ಗಕಾರನೇ, ಮಣಿನಿಕರಂ (1–61), ಮಧುರರಮಂ (1–55). ಉಚ್ಚೈರ್ಧ್ವಾನಂ (1—56). ತಾಣಂ (1–71). ಯತಿಭಂಗಂ (1–73) ಎಂದು ಮುಂತಾಗಿ ಪ್ರಥಮಾ ವಿಭಕ್ತಿಯಲ್ಲಿ ಈ ಪ್ರತ್ಯಯವನ್ನು ಹಲವು ಬಾರಿ ಪ್ರಯೋಗಿಸಿದ್ದಾನೆ. ಆದುದರಿಂದ, ಆಧುನಿಕ ಭಾಷಾಶಾಸ್ತ್ರಜ್ಞರ ಅಭಿಪ್ರಾಯವನ್ನು ಮಾರ್ಗಕಾರನಿಗೆ ಆರೋಪಿಸುವುದು ಐತಿಹಾಸಿಕ ದೃಷ್ಟಿಯಿಂದಲೂ ಸಾಧುವಲ್ಲ. ಕನ್ನಡದ ಜಾಯಮಾನದಲ್ಲೂ ಪ್ರಥಮಾ ವಿಭಕ್ತಿ ಪ್ರತ್ಯಯ ಉಂಟೆಂದು ಮೇಲಿನ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ.

ಪ್ರತ್ಯಯ ಇರಲಿ. ಇಲ್ಲದಿರಲಿ: ಅದರಿಂದ ಕಾರಕದ ಅಸ್ತಿತ್ವಕ್ಕೆ ಕುಂದೇನೂ ಬರಲಾರದು. ಕಾರಕವೆಂಬುದು ಕ್ರಿಯಾ ಸಂಸರ್ಗನಿಮಿತ್ತಕವಾದ ಪಾರಿಭಾಷಿಕ ಸಂಜ್ಞೆ; ಇದು ಅರ್ಥ ಸ್ವರೂಪ. ಆದುದರಿಂದ ಇದು ಯಾವುದೇ ಒಂದು ಭಾಷೆಯ ಸ್ವತ್ತಲ್ಲ. ಸಂಸ್ಕೃತದಲ್ಲಿ ಮಾತ್ರ ಕಾರಕವಿದೆ. ಇಂಗ್ಲೀಷಿನಲ್ಲಿ ಇಲ್ಲ ಎಂದು ಹೇಳಲಾಗದು. ಇಂಗ್ಲೀಷಿನಲ್ಲೂ ಕರ್ತೃ (agent). ಕರ್ಮ (object). ಕರಣ (instrument) ಮುಂತಾದ ಕಾರಕಗಳಿವೆ. ಕಾರಕವ್ಯವಸ್ಥೆ ಎಲ್ಲಾ ಭಾಷೆಗಳಿಗೂ ಹೊಂದುವ ಅರ್ಥ ವ್ಯವಸ್ಥೆ. ಆದರೆ ಸಂಸ್ಕೃತದಲ್ಲಿ ಆರು ಕಾರಕಗಳಿರುವುದರಿಂದ, ಕನ್ನಡದಲ್ಲೂ ಆರೇ ಇರಬೇಕೆಂದು ನಾವು ವಾದಿಸುವುದಿಲ್ಲ. ಈ ವ್ಯವಸ್ಥೆ ಭಾಷೆಯಿಂದ ಭಾಷೆಗೆ ಬದಲಾಯಿಸಬಹುದು. ಕನ್ನಡದ ಕ್ರಿಯೆಗಳು ಹೇಗಿವೆ? ಅವುಗಳ ಅರ್ಥಸಂಪತ್ತಿ ಎಂಥದು?

ಅವಕ್ಕೆ ಬೇಕಾದ ಕಾರಕಗಳು ಯಾವುವು. ಎಷ್ಟು? ಈ ಪ್ರಶ್ನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಆಧುನಿಕ ಭಾಷಾಶಾಸ್ತ್ರಜ್ಞರು ಕನ್ನಡದ ಅಗತ್ಯಕ್ಕೆ ತಕ್ಕಂತೆ ಕಾರಕವ್ಯವಸ್ಥೆಯನ್ನು ರೂಪಿಸಬೇಕಾಗಿದೆ. ಅಲ್ಲಿಯವರೆಗೆ, ಪರಂಪರಾಗತವಾದ ಕಾರಕಪಟ್ಟಿಯನ್ನು ಒಪ್ಪಿ ನಡೆಯೋಣ. ಬೇರೆ ಭಾಷೆಗಳ ವಿಷಯ ನಮಗೆ ತಿಳಿಯದು. ಆದರೆ ಕನ್ನಡದಲ್ಲಿ ಕರ್ತೃವಿಗೆ ಕಾರಕತ್ವ ಇದ್ದೇ ಇದೆ ಎಂದು ಪ್ರಮಾಣಪೂರ್ವಕವಾಗಿ ಸಿದ್ಧಪಡಿಸಲು ಸಾಧ್ಯವಿದೆ.

ಶ್ರೀ ಸೀತಾರಾಮಯ್ಯನವರು ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರ ಕವಿರಾಜಮಾರ್ಗ ವಿವೇಕದಿಂದ ಕೆಲವು ಭಾಗಗಳನ್ನು ಉದ್ಧರಿಸಿ, 'ಅವರ ತೀರ್ಮಾನವು ನಮ್ಮ ತೀರ್ಮಾನಕ್ಕೆ ಪೋಷಕವಾಗಿದೆ' ಎಂದು ತೋರಿಸಿದ್ದಾರೆ. ಶ್ರೀ ತಿಮ್ಮಪ್ಪಯ್ಯನವರು, "ಕಾರಕಂ ಎಂಬ ಪದವು ಸಂಸ್ಕೃತ ವ್ಯಾಕರಣಾನುಸಾರವಾದ ವ್ಯುತ್ಪತ್ತಿಯಂತೆ ಮಾಡಿಸುವ ವ್ಯಕ್ತಿಯನ್ನು ಸೂಚಿಸುವುದಲ್ಲದೆ ಮಾಡುವ ವ್ಯಕ್ತಿಯನ್ನಲ್ಲ. 'ಕಾರಯತೀತಿ ಕಾರಕಃ'. 'ಕರೋತಿ ಇತಿ ಕರ್ತಾ' ಎಂದು ಕರ್ತೃ ಪದವು ರೂಪಿತವಾಗಿದೆ. ಇಂಥ ಕರ್ತೃ ಎಂಬ ಪದವು ಕಾರಕವೆನ್ನಿಸುವುದು ಹೇಗೆ?" ಎಂದು ವಾದಿಸಿದ್ದಾರೆ (ಟಿಪ್ಪಣಿ. ಪು.171). ಇದೊಂದು ಈ ಸಮಸ್ಯೆಯ ಹೊಸ ಮುಖ. ಕರ್ತೃವಿಗೆ ಕಾರಕ ಎಂಬ ಹೆಸರು ಸಲ್ಲುತ್ತದೆಯೇ ಇಲ್ಲವೇ ಎಂದು ಪರಿಶೀಲಿಸಬೇಕಾದುದು ಅಗತ್ಯ.

ಮೊದಲನೆಯದಾಗಿ, 'ಕಾರಯತೀತಿ ಕಾರಕಂ' ಎಂಬ ವ್ಯುತ್ಪತ್ತಿ ಸರಿಯೇ ಎಂದು ನೋಡೋಣ. 'ಕೃ' ಧಾತುವಿಗೆ 'ಮಾಡು' ಎಂದು ಅರ್ಥ. ಕಾರಯತಿ ಎಂಬುದು ಇದರ ಪ್ರೇರಣಾರ್ಥಕ ರೂಪ; ಮಾಡಿಸುತ್ತಾನೆ ಎಂದು ಅರ್ಥವಾಗುತ್ತದೆ. ತಿಮ್ಮಪ್ಪಯ್ಯನವರು ಹೇಳುವ ವ್ಯುತ್ಪತ್ತಿ ವ್ಯಾಕರಣ ಸಂಮತವಲ್ಲ ಎಂದು ಹೇಳಲಾರೆವು. ಮಾಡಿಸುವವನನ್ನು ಸಂಸ್ಕೃತದಲ್ಲಿ 'ಕಾರಕ' ಎಂದು ಕರೆಯಬಹುದು. ಆದರೆ, ಪಾಣಿನಿ 'ಕಾರಕ' ಎಂಬ ಪದವನ್ನು ಈ ಅರ್ಥದಲ್ಲಿ ಬಳಸಿದ್ದಾನೆಯೇ ಎಂಬುದು ನಮ್ಮ ಮುಂದಿರುವ ಪ್ರಶ್ನೆ. "ಕಾರಕ ಪದವು ಮಾಡುವ ವ್ಯಕ್ತಿಯನ್ನು ಸೂಚಿಸುವುದಿಲ್ಲ" **ಎಂದು ಹೇಳಿ ತಿಮ್ಮಪ್ಪಯ್ಯನವರು ತಪ್ಪು ಮಾಡಿದ್ದಾರೆ.** 'ಕರೋತಿ ಇತಿ ಕರ್ತಾ' ಎಂಬಂತೆ, 'ಕರೋತಿ ಇತಿ ಕಾರಕಂ' ಎಂದೂ ಆಗುತ್ತದೆ. ಕರ್ತೃವಿನ ಅರ್ಥದಲ್ಲೇ 'ಅಕ' ಪ್ರತ್ಯಯವೂ ಉಕ್ತವಾಗಿದೆ. ಲೇಖಕ, ಪಾಠಕ, ಅರ್ಚಕ, ಬೋಧಕ, ದರ್ಶಕ ಮುಂತಾದ ಶಬ್ದಗಳಲ್ಲಿ ಪ್ರೇರಣಾರ್ಥಕ ರೂಪರಹಿತವಾದ ಅಕ ಪ್ರತ್ಯಯವನ್ನು ಕಾಣಬಹುದು. 'ಲಿಖತಿ ಇತಿ ಲೇಖಕಃ' ಎಂದು ಬರೆಯುವವನನ್ನೇ ನಾವು ಲೇಖಕ ಎನ್ನುತ್ತೇವೆ. 'ಪಠತಿ ಇತಿ ಪಾಠಕಃ'—ಓದುವವನೇ ಪಾಠಕ. ಇಲ್ಲಿ 'ಲೇಖಯತಿ ಇತಿ ಲೇಖಕಃ' 'ಪಾಠಯತಿ ಇತಿ ಪಾಠಕಃ' ಎಂದು ಓದಿಸುವವನು, ಬರೆಸುವವನು ಎಂಬ ಅರ್ಥವನ್ನೂ ವ್ಯಾಕರಣದ ಆಧಾರದ ಮೇಲೆ ಸಾಧಿಸಬಹುದು. ಆದರೆ ಪ್ರಯೋಗದಲ್ಲಿ ಹಾಗಿಲ್ಲ. ತಿಮ್ಮಪ್ಪಯ್ಯನವರು 'ಕರ್ತೃ ಹೇಗೆ ಕಾರಕ ಆಗಲು

ಸಾಧ್ಯ' ಎಂದು ಕೇಳಿ, ತೃ ಮತ್ತು ಅಕ ಪ್ರತ್ಯಯಗಳಿಗೆ ಅರ್ಥಭೇದವನ್ನು ಕಲ್ಪಿಸಿದ್ದಾರೆ. "ಕರ್ತೃ ಎಂದರೆ ಮಾಡುವವನು, ಕಾರಕ ಎಂದರೆ ಮಾಡಿಸುವವನು; ಆದುದರಿಂದ ಕರ್ತೃ ಕಾರಕವಾಗಲಾರದು" ಎಂದು ಅವರ ಅಭಿಪ್ರಾಯ. ಈ ಅಭಿಪ್ರಾಯ ಸರಿಯಲ್ಲ. ಕರ್ತೃ, ಕಾರಕ ಎರಡು ಪದಗಳಿಗೂ ಅರ್ಥ ಒಂದೇ ಆಗಬಹುದು. ಪಾಣಿನಿ ಅಕ ಮತ್ತು ತೃ ['ಣ್ವುಲ್ ತೃಚೌ' ಎಂದು ಸೂತ್ರ] ಪ್ರತ್ಯಯಗಳನ್ನು ಕರ್ತೃವಿನ ಅರ್ಥದಲ್ಲೇ ವಿಧಿಸಿದ್ದಾನೆ. ಆದುದರಿಂದ ತಿಮ್ಮಪ್ಪಯ್ಯನವರು ತೋರಿಸುವ ಅರ್ಥಭೇದಕ್ಕೆ ಆಧಾರವಿಲ್ಲ.

ಪಾಣಿನಿ 'ಕಾರಕೇ' ಎಂದು ಅಧಿಕಾರ ಸೂತ್ರವನ್ನು ಹೇಳಿ, ನಂತರ ಕಾರಕಗಳನ್ನು ನಿರ್ದೇಶಿಸಿದ್ದಾನೆ. 'ಕಾರಕ' ಎಂಬುದು ದೊಡ್ಡ (ಅನೇಕ ಅಕ್ಷರಗಳಿಂದ ಕೂಡಿದುದು; ಪಾಣಿನಿ ಸಾಮಾನ್ಯವಾಗಿ ಟಿ, ಘ, ಘು ಎಂದು ಮುಂತಾಗಿ ಏಕಾಕ್ಷರ ಸಂಜ್ಞೆಗಳನ್ನು ಹೇಳುತ್ತಾನೆ; ಕೆಲವು ಕಡೆ ಪ್ರಾಚೀನ ವೈಯಾಕರಣರಿಂದ ಬಳುವಳಿಯಾಗಿ ಬಂದ ಪ್ರಾತಿಪದಿಕ, ಧಾತು, ಉಪಸರ್ಗ, ಕಾರಕ ಮುಂತಾದ ಅನೇಕಾಕ್ಷರವಾದ ಸಂಜ್ಞೆಗಳನ್ನು ಬದಲಾಯಿಸದೆ ಸ್ವೀಕರಿಸಿದ್ದಾನೆ) ಸಂಜ್ಞೆ. ಆದುದರಿಂದ ಅದು ಅನ್ವರ್ಥವಾಗಿರಬೇಕು. ಕರೋತಿ = ಮಾಡುತ್ತಾನೆ. ಕ್ರಿಯೆಯನ್ನು ಮಾಡುವ, ಕ್ರಿಯೆಯೊಂದಿಗೆ ನೇರವಾಗಿ ಸಂಬಂಧವುಳ್ಳ ಅರ್ಥವೇ ಕಾರಕ. ಹೀಗೆ ವ್ಯಾಕರಣ ಮಹಾಭಾಷ್ಯದಲ್ಲಿ ಮಹರ್ಷಿ ಪತಂಜಲಿ ಸ್ಪಷ್ಟವಾಗಿ ಹೇಳಿದ್ದಾನೆ : —

> "ಅಯಂ ತರ್ಹಿ ದೋಷಃ। ಕರ್ಮಸಂಜ್ಞಾಪ್ರಸಂಗಶ್ಚ ಅಕಥಿತಸ್ಯ ಬ್ರಾಹ್ಮಣಸ್ಯ ಪುತ್ರಂ ಪಂಥಾನಂ ಪೃಚ್ಛತಿ ಇತಿ। ನೈಷ ದೋಷಃ। ಕಾರಕೇ ಇತಿ ಮಹತೀ ಸಂಜ್ಞಾ ಕ್ರಿಯತೇ। ಸಂಜ್ಞಾ ಚ ನಾಮ ಯತೋ ನ ಲಘೀಯಃ। ಕುತ ಏತತ್? ಅನ್ವರ್ಥಂ ಹಿ ಸಂಜ್ಞಾಕರಣಂ। ತತ್ರ ಮಹತ್ಯಾಃ ಸಂಜ್ಞಾಯಾಃ ಕರಣೇ ಏತತ್ ಪ್ರಯೋಜನಂ. ಅನ್ವರ್ಥಸಂಜ್ಞಾ ಯಥಾ ವಿಜ್ಞಾಯೇತ. 'ಕರೋತಿ ಇತಿ ಕಾರಕಂ' ಇತಿ॥"

(ಮಹಾಭಾಷ್ಯ, 1-4-23, ಪುಟ 347—348) 'ಬ್ರಾಹ್ಮಣನ ಮಗನನ್ನು ಮಾರ್ಗವನ್ನು ಕೇಳುತ್ತಾನೆ' ಎಂಬ ವಾಕ್ಯದಲ್ಲಿ 'ಪೃಚ್ಛತಿ' ಎಂಬ ಕ್ರಿಯೆ ದ್ವಿಕರ್ಮಕವಾಗಿದೆ. ಈ ಕ್ರಿಯೆಗೆ ಮಾರ್ಗ ಪ್ರಧಾನಕರ್ಮ. ಬ್ರಾಹ್ಮಣನ ಪುತ್ರ ಗೌಣ (ಅಕಥಿತ) ಕರ್ಮ. ಕಾರಕಾಧಿಕಾರವಿಲ್ಲದಿದ್ದರೆ ಬ್ರಾಹ್ಮಣನಿಗೂ (ಸಂಬಂಧಷಷ್ಠಿ) ಕರ್ಮತ್ವ ಪ್ರಾಪ್ತವಾದೀತು ಎಂದು ಶಂಕಿಸಿ, ಇದು ಅನ್ವರ್ಥ ಸಂಜ್ಞೆ. ಕೇಳುವ ಕ್ರಿಯೆಗೂ ಬ್ರಾಹ್ಮಣನಿಗೂ ಯಾವ ಸಂಬಂಧವೂ ಇಲ್ಲ, ಆದುದರಿಂದ ಬ್ರಾಹ್ಮಣನಿಗೆ ಈ ವಾಕ್ಯದಲ್ಲಿ ಕರ್ಮತ್ವ ಇಲ್ಲ ಎಂದು ಭಾಷ್ಯಕಾರನು ಹೇಳಿದ್ದಾನೆ. 'ಕರೋತಿ ಇತಿ ಕಾರಕಂ' ಎಂಬ ವ್ಯುತ್ಪತ್ತಿಯನ್ನು ಪತಂಜಲಿ ತೋರಿಸಿದ್ದಾನೆ. ಸಂಸ್ಕೃತ ವ್ಯಾಕರಣದಲ್ಲಿ ಪತಂಜಲಿ ಹೇಳಿದುದೇ ಕೊನೆಯ ಮಾತು. ಅವನ ಮಹಾ ಭಾಷ್ಯವೇ ಪರಮ ಪ್ರಮಾಣ. ಹಾಗಿರುವಾಗ, ವಿದ್ವಾನ್ ತಿಮ್ಮಪ್ಪಯ್ಯನವರು ಭಾಷ್ಯಕ್ಕೆ ವಿರೋಧವಾಗಿ, 'ಕಾರಯತೀತಿ ಕಾರಕಂ' ಎಂದು ಅರ್ಥ ಮಾಡುವುದು ಸರಿಯಲ್ಲ. ಭಾಷ್ಯಕಾರನು ಕರ್ಮ, ಕರಣ ಮುಂತಾದ ಕಾರಕಗಳಿಗೆ

'ಕರೋತಿ ಇತಿ ಕಾರಕಂ' ಎಂಬ ಕಾರಕತ್ವ ಹೇಗೆ ಉಪಪನ್ನವಾಗುತ್ತದೆ ಎಂದು ಶಂಕಿಸಿ ಆ ಕಾರಕಗಳಲ್ಲೂ ಕ್ರಿಯೆ (ಧಾತೂಪಾತ್ತ ಕ್ರಿಯಾನುಗುಣವಾದ ವ್ಯಾಪಾರ: ಕೆಲಸ) ಇವೆ ಎಂದು ಸಾಧಿಸಿದ್ದಾನೆ. ನಮಗೆ ಇಲ್ಲಿ ಆ ಚರ್ಚೆ ಬೇಕಿಲ್ಲ. 'ಕರೋತಿ ಇತಿ ಕಾರಕಂ' ಎಂಬ ಅರ್ಥವೇ ಇಲ್ಲಿ ವಿವಕ್ಷಿತವೆಂದಿಷ್ಟೇ ನಮಗೆ ಬೇಕಾದದ್ದು.

ಶ್ರೀ ತಿಮ್ಮಪ್ಪಯ್ಯನವರು ಹೇಳಿದ ಅರ್ಥವನ್ನು ಒಪ್ಪಿದರೆ, ಕರ್ಮಾದಿಕಾರಕಗಳಿಗೂ ಕಾರಕತ್ವವು ಸಿದ್ಧಿಸಲಾರದು. 'ನಾನು ಹಾಲು ಕುಡಿದೆ' ಎಂಬ ವಾಕ್ಯದಲ್ಲಿ ಕುಡಿಯುವ ಕ್ರಿಯೆಯನ್ನು ಮಾಡುವವನು ನಾನಾದುದರಿಂದ. ನಾನು ಕರ್ತೃವೇ ಹೊರತು ಕಾರಕವಲ್ಲ. ಆದರೆ ಹಾಲು ಈ ಕ್ರಿಯೆಯನ್ನು ಮಾಡಿಸುತ್ತದೆಯೇ? ನಾನು ಕುಡಿಯಬೇಕೆಂದು ಬೇರೆ ಯಾರಾದರೂ ಪ್ರೇರಿಸಿದರೆ ಆ ವ್ಯಕ್ತಿಯನ್ನು ಕಾರಕವೆನ್ನಬಹುದು. ಹಾಲು ಅಚೇತನ: ಅದು ಕುಡಿಯುವವನಿಗೆ ಯಾವ ಪ್ರೇರಣೆಯನ್ನೂ ಕೊಡದೆ ತಟಸ್ಥವಾಗಿರುತ್ತದೆ. ಆದರೆ. ಹಾಲಿದ್ದರೆ ತಾನೆ ಕುಡಿಯಲು ಸಾಧ್ಯ? ಆದುದರಿಂದ ಹಾಲು ತನ್ನ ಅಸ್ತಿತ್ವದ ಮೂಲಕ ಪರೋಕ್ಷವಾಗಿ ಪ್ರೇರಣೆ ನೀಡುತ್ತದೆ. ಹೀಗೆ ಕಷ್ಟಪಟ್ಟು ಹಾಲಿಗೆ ಕಾರಕತ್ವವನ್ನು ಒಪ್ಪಬಹುದಾದರೆ. ಕುಡಿಯುವವನಿಗೆ ಕಾರಕತ್ವ ಏಕಿರಬಾರದು? ನಾನಿದ್ದರೆ ತಾನೇ ಕುಡಿಯಲು ಸಾಧ್ಯ? 'ಅವನು ನೆನ್ನೆ ಊರಿಂದ ಬಂದ' ಎಂಬಲ್ಲಿ ಊರು ಅಪಾದಾನ ಕಾರಕ. ಊರು ಬರುವ ಕ್ರಿಯೆಯನ್ನು ಮಾಡಿಸುತ್ತದೆಯೇ? ತಿಮ್ಮಪ್ಪಯ್ಯನವರ ವ್ಯಾಖ್ಯೆ ಎಲ್ಲಾ ಕಾರಕಗಳಿಗೂ ಸರಿಯಾಗಿ ಅನ್ವಯಿಸಲಾರದೆಂಬುದು ಇದರಿಂದ ವ್ಯಕ್ತವಾಗುತ್ತದೆ. 'ಕಾರಯತೀತಿ ಕಾರಕಂ' ಎಂದು ಅವರು ಅರ್ಥ ಹೇಳಲು ಹೊರಟದ್ದು ಹೇಗಾದರೂ ಮಾಡಿ ಕರ್ತೃವಿಗೆ ಕಾರಕತ್ವವನ್ನು ತಪ್ಪಿಸಬೇಕೆಂಬ ಉದ್ದೇಶದಿಂದಲೇ ಎಂದೂ ಗೋಚರವಾಗುತ್ತದೆ.

'ಅಧೀಶ್ವರನಾ ದಯೆ ಸಾಲ್ಗುಂ' ಎಂಬ ಉದಾಹರಣೆಯನ್ನು ತೆಗೆದುಕೊಂಡು ಶ್ರೀ ತಿಮ್ಮಪ್ಪಯ್ಯನವರು ಹೀಗೆ ವಿವೇಚಿಸಿದ್ದಾರೆ: "ಇಲ್ಲಿ ಅಧೀಶ್ವರನಾ ಎಂಬ ಷಷ್ಠೀ ವಿಭಕ್ತಿಯುತವಾದ **ಪದವು ಸಾಲ್ಗುಂ ಎಂಬ ಕ್ರಿಯೆಯ ಕಾರಕವಲ್ಲವೆಂಬುದೇನೋ ಸರಿ.** ಆ ಕ್ರಿಯೆಗೆ ಕರ್ತೃ ದಯೆ. ಅಂತಹ ಕರ್ತೃ ರೂಪವಾದ ದಯೆ ಅಧೀಶ್ವರನ ಸಂಬಂಧವಾದುದು. ಮೇಲಿನ ವಿವೇಚನೆಗನುವಾಗಿ ಕರ್ತಾ ಕಾರಕವಾಗದು ಎಂಬುದು ಸರಿಯಾದರೆ, ಈ ವಾಕ್ಯದಲ್ಲಿ ಕಾರಕವೇ ಇಲ್ಲವೆನಿಸುತ್ತದೆ. ಅದರಿಂದ ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನು ಮಾತ್ರ ಕೊಡುವ 'ಅಧೀಶ್ವರನಾ' ಎಂಬ ಪದವು ಆ ಸ್ವಸಂಬಂಧಿಯಾದ ದಯೆ ಎಂಬ ಕರ್ತೃವಿನ ಮೂಲಕವಾಗಿ ಸಾಲ್ಗುಂ ಎಂಬ ಭಾವನಾತ್ಮಕ ಕ್ರಿಯೆಯನ್ನು ಮಾಡಿಸುವುದಲ್ಲವೆ? ಇನ್ನೊಬ್ಬನ ದಯೆಯಾದರೆ. ಅದು ಸಾಲ್ಗುಂ ಎಂಬುದಕ್ಕೆ ಕರ್ತೃವಾಗಲಾರದು. ಅದರಿಂದಲೇ ಷಷ್ಠೀವಿಭಕ್ತಿಯುಕ್ತ ಪದವು ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನಿತ್ತು ಆ ಮೂಲಕವಾಗಿ ಕ್ರಿಯೆಗೆ ಕಾರಕವಾಗುವುದು. ಅದನ್ನು ಬೇಕಾದರೆ ಸಂಬದ್ಧಕಾರಕ ಎಂದು ಕರೆಯಬಹುದು." (ಟಿಪ್ಪಣಿ ಪು.171).

ಈ ತರ್ಕ ಸರಣಿ ಬಹಳ ವಿಚಿತ್ರವಾಗಿದೆ. 'ಸಾಲ್ಗುಂ' ಎಂಬ ಕ್ರಿಯೆ ನಿಜವಾಗಿ ಕ್ರಿಯಾತ್ಮಕವಲ್ಲ. ವ್ಯಾಕರಣದ ದೃಷ್ಟಿಯಿಂದ ಮಾತ್ರ ಇದನ್ನು ಕ್ರಿಯೆ ಎಂದು ಒಪ್ಪಬೇಕಾಗಿದೆ. ಇದಕ್ಕೆ ಕರ್ತೃ ದಯೆ ಎಂದೂ, ಅಧೀಶ್ವರ ಇದಕ್ಕೆ ಕಾರಕವಲ್ಲವೆಂದೂ ತಿಮ್ಮಪ್ಪಯ್ಯನವರೇ ನುಡಿದಿದ್ದಾರೆ. ಆದರೆ, ಈ ವಾಕ್ಯದಲ್ಲಿ ಕಾರಕವೇ ಇಲ್ಲದೇ ಹೋಯಿತಲ್ಲಾ ಎಂದು ಯೋಚಿಸಿ, ಹಾಗಾದರೆ, ದಯೆಯ ಮೂಲಕ ಅಧೀಶ್ವರನೇ ಕಾರಕವೆಂದು ನಿರ್ಣಯಿಸಿದ್ದಾರೆ. ದಯೆಯ ಮೂಲಕ ಕಾರಕವಾಗುವುದೆಂದರೆ ಏನು? 'ಸಾಲ್ಗುಂ' ಎಂಬ ಕ್ರಿಯೆಗೆ ಅಧೀಶ್ವರ ಏನಾಗಬೇಕು? ಇನ್ನೊಬ್ಬನ ದಯೆಯಾದರೆ, ಸಾಕಾಗಲಾರದು; ಅಧೀಶ್ವರನ ದಯೆಯಾದರೆ ಸಾಕಾಗುತ್ತದೆ. ಸಾಕಾಗಲು ದಯೆಗೆ ಅಧೀಶ್ವರನ ಸಂಬಂಧ ಬೇಕಾಗಿದೆ. ಹೀಗೆ ಮುಂದಿನ ನಾಮಪದದ ಮೂಲಕ ಅಧೀಶ್ವರನಿಗೆ ಕಾರಕತ್ವ ವಿವಕ್ಷಿತವಾಗಿದೆ ಎಂದು ವಾದಿಸಿದರೆ, ದಯೆ — ಅದೇ ತಾನೇ ಸಾಕಾಗುವುದು?— ಕಾರಕ ಯಾಕಲ್ಲ? 'ನನ್ನ ಕುದುರೆ ಓಡಿತು' ಎಂಬಲ್ಲಿ 'ನನ್ನ' ಕಾರಕವೇ ಇಲ್ಲವೇ? ಕುದುರೆ ನನ್ನದಾದುದರಿಂದ ಓಡಲಿಲ್ಲ; ಅದು ಕುದುರೆಯಾದುದರಿಂದ — ನನ್ನದಾಗಿದ್ದರೂ ಸಹ — ಓಡಿತು. ಇಲ್ಲಿ 'ನನ್ನ' ಎಂಬುದಕ್ಕೆ ಪರೋಕ್ಷವಾಗಿಯೂ ಕ್ರಿಯಾನ್ವಯವಿಲ್ಲ. ಆದುದರಿಂದ, ಷಷ್ಠೀ ವಿಭಕ್ತಿಯನ್ನು ಕಾರಕ ವಿಭಕ್ತಿಯೆಂದು ಹೇಳಲು ಹೂಡಿದ ಈ ವಾದ ಸಮಂಜಸವಾಗಿಲ್ಲ.

"ಇಷ್ಟು ಮಾತ್ರವಲ್ಲ. ಪ್ರಾಕೃತ ದೇಶಿಗಳಲ್ಲಿ ಷಷ್ಠೀ ವಿಭಕ್ತಿ ಪದಕ್ಕೆ ಕರ್ಮಾದಿಯಾದ ಕೆಲವು ಕಾರಕಗಳ ಅಧಿಕಾರವೂ ಇದ್ದಂತೆ ಗೊತ್ತಾಗುತ್ತಿದೆ......ಕನ್ನಡ ವೈಯಾಕರಣರೂ ಈ ವಿಚಾರವನ್ನು ವಿಭಕ್ತಿ ಪಲ್ಲಟ ಎಂಬ ಹೆಸರಿನಿಂದ ವಿಸ್ತರಿಸಿದ್ದಾರಷ್ಟೆ. ಇದು ದೇಶಿಯಲ್ಲಿ ಪುರಾತನ ಕಾಲದಿಂದಲೂ ನಡೆದುಬಂದು ಈಗಲೂ ನೆಲೆಗೊಂಡಿರುವ ಪದ್ಧತಿಯೆಂಬುದನ್ನು ಮರೆಯಬಾರದು" ಎಂದು ಶ್ರೀ ತಿಮ್ಮಪ್ಪಯ್ಯನವರು (ಪು. 171–172) ಲಕ್ಷ್ಮೀಧರನ 'ಷಡ್ ಭಾಷಾ ಚಂದ್ರಿಕೆ' ಯಿಂದ ಪ್ರಮಾಣವನ್ನು ಉದಾಹರಿಸಿ ಹೇಳಿದ್ದಾರೆ. ನಾಗವರ್ಮ ಭಾಷಾಭೂಷಣದಲ್ಲಿ ಸಂಬಂಧವನ್ನು ಕಾರಕಗಳಲ್ಲಿ ಸೇರಿಸಿದ್ದಾನೆ. ಹೀಗೆ 'ಸಂಬಂಧವೂ ಕಾರಕವೇ' ಎಂದು ಅವರು ಸಾಧಿಸಿದ್ದಾರೆ.

ಷಷ್ಠೀವಿಭಕ್ತಿಗೆ ಅನೇಕ ಅರ್ಥಗಳಿವೆ. "ಏಕಶತಂ ಷಷ್ಠ್ಯರ್ಥಾಃ" ಎಂದು ಸಂಸ್ಕೃತ ಶಾಸ್ತ್ರಕಾರರು ಹೇಳಿದ್ದಾರೆ. ಸಂಬಂಧ ಅನೇಕ ರೂಪವಾಗಿರಬಹುದು. 'ನನ್ನ ಮನೆ' ಎಂದರೆ, ನಾನು ವಾಸಿಸುತ್ತಿರುವ ಬಾಡಿಗೆ ಮನೆಯಾಗಬಹುದು; ನನ್ನ ಸ್ವಂತ ಮನೆಯಾಗಬಹುದು; ನಾನು ಕಟ್ಟಿಸಬೇಕೆಂದಿರುವ ಮನೆಯಾಗಬಹುದು; ನನ್ನ ಮಗ ಎಂದಾಗ ಜನ್ಯಜನಕ ಭಾವ ಸಂಬಂಧವಾದರೆ, ನನ್ನ ಶಾಲೆ ಎಂದಾಗ ಸಂಬಂಧದ ರೂಪ ಬದಲಾಯಿಸುತ್ತದೆ. ಷಷ್ಠಿಗೆ ಕರ್ತೃ, ಕರ್ಮ ಎಂಬ ಎರಡು ಕಾರಕಗಳೂ ಅರ್ಥವಾಗಬಹುದು. **ಪ್ರಾಕೃತ ಮತ್ತು ದೇಶಿಗಳಲ್ಲಿರುವಂತೆ, ಈ ಪುರಾತನ ಪದ್ಧತಿ ಸಂಸ್ಕೃತದಲ್ಲೂ ಇದೆ.** 'ಕರ್ತೃಕರ್ಮಣೋಃ ಕೃತಿ' ಎಂಬ ಸೂತ್ರ

ದಿಂದ ಪಾಣಿನಿ ಕೃದ್ಯೋಗದಲ್ಲಿ ಈ ಅರ್ಥಗಳನ್ನು ಷಷ್ಠಿಗೆ ಹೇಳಿದ್ದಾನೆ. 'ರಾಮಸ್ಯ ಗಮನಂ (ರಾಮನು ಹೋಗುವುದು) 'ಎಂಬಲ್ಲಿ ಕರ್ತರೀಷಷ್ಠೀ; ಗ್ರಾಮಸ್ಯ ಗಮನಂ (ಗ್ರಾಮಕ್ಕೆ ಹೋಗುವುದು) ಎಂಬಲ್ಲಿ ಕರ್ಮಣಿ ಷಷ್ಠೀ. 'ರಾಮಸ್ಯ ಗ್ರಾಮಸ್ಯ ಗಮನಂ' (ರಾಮನು ಹಳ್ಳಿಗೆ ಹೋಗುವುದು) ಎಂದು ಕರ್ತೃ ಮತ್ತು ಕರ್ಮ ಎರಡರಲ್ಲೂ ಷಷ್ಠಿಯನ್ನು ಪ್ರಯೋಗಿಸಕೂಡದು. ಇಂತಹ ಜಾಗದಲ್ಲಿ ಕರ್ಮಣಿ ಷಷ್ಠಿಯೇ ಬರಬೇಕು. ಕರ್ತರಿ ತೃತೀಯ ಬರುತ್ತದೆ. 'ರಾಮೇಣ ಗ್ರಾಮಸ್ಯ ಗಮನಂ' ಎಂದೇ ಹೇಳಬೇಕು. 'ಉಭಯ ಪ್ರಾಪ್ತೌ ಕರ್ಮಣಿ' ಎಂಬ ಸೂತ್ರದಲ್ಲಿ ಪಾಣಿನಿ ಹೀಗೆ ಹೇಳಿದ್ದಾನೆ. ಆದುದರಿಂದ. ಷಷ್ಠಿಗೆ ಕರ್ತೃ ಅಥವಾ ಕರ್ಮ ಅರ್ಥವಾದಾಗ ಅದನ್ನು ಕಾರಕವಿಭಕ್ತಿಯೆನ್ನಲು ಅಡ್ಡಿಯಿಲ್ಲ.

ಸಂಬಂಧವೂ ಕಾರಕವೆಂದು ನಾಗವರ್ಮ ಹೇಳಿದ್ದಾನೆ. ಶಬ್ದಸ್ಮೃತಿಯಲ್ಲಿ ಅವನು ಹೀಗೆ ಹೇಳಲಿಲ್ಲ. ಭಾಷಾಭೂಷಣದಲ್ಲಿ ಮಾತ್ರ ಹೇಳಿದ್ದಾನೆ. ಕೇಶಿರಾಜ ಈ ಮಾತನ್ನು ಒಪ್ಪಲಿಲ್ಲ. ಪುರಾತನ ಕಾಲದಿಂದಲೂ ದೇಸಿಯಲ್ಲಿ ನೆಲೆಗೊಂಡ ಪದ್ಧತಿಯನ್ನು ಮನಗಂಡು ನಾಗವರ್ಮ ಸಂಬಂಧಕ್ಕೆ ಕಾರಕತ್ವವನ್ನು ಹೇಳಿರುವಾಗ. ಕೇಶಿರಾಜ ಅದನ್ನೇಕೆ ಉಪೇಕ್ಷಿಸಿ ಕೈಬಿಟ್ಟನೋ ತಿಳಿಯದು. "ಸಂಬಂಧವನ್ನು ಕಾರಕವೆಂದು ಕರೆಯಲೇ ಬಾರದು; ಅದು ಮಹಾ ಪಾಪ" ಎಂದು ನಾವು ವಾದಿಸುತ್ತಿಲ್ಲ. ಕಾರಕವೆಂದರೇನು? ಇದರ ಸ್ವರೂಪ, ಲಕ್ಷಣ, ವ್ಯಾಪ್ತಿ ಏನು? ಇದರ ಭೇದಗಳು ಯಾವುವು? ಹೀಗೆ ವಿಮರ್ಶೆ ಮಾಡಿ. ಕಾರಕವೆಂದರೆ ಇಂಥದ್ದು ಎಂದು ನಿರ್ಧರಿಸಿ. ಸಂಬಂಧವೂ ಕಾರಕವಾಗಬಹುದೆಂದು ತೋರಿಸಿದರೆ. ನಾವೂ ಸಂತೋಷದಿಂದ ಒಪ್ಪುತ್ತೇವೆ. 'ಕ್ರಿಯಾಜನಕತ್ವಂ ಕಾರಕತ್ವಂ, ಕ್ರಿಯಾನ್ವಯಿತ್ವಂ ಕಾರಕತ್ವಂ' ಎಂಬ ಲಕ್ಷಣವನ್ನಂಗೀಕರಿಸಿದರೆ, ಈ ಕೋಟಿನಲ್ಲಿ ಸಂಬಂಧ ಕಾರಕವಾಗಲಾರದೆಂಬುದಿಷ್ಟೇ ನಮ್ಮ ಆಕ್ಷೇಪಣೆ. ಹಿಂದೀ ವ್ಯಾಕರಣದಲ್ಲಿ ಸಂಬೋಧನವನ್ನೂ ಸಂಬಂಧವನ್ನೂ ಕಾರಕವೆಂದು ಗಣಿಸಿ. ಎಂಟು ಕಾರಕಗಳನ್ನು ಒಪ್ಪಿದ್ದಾರೆ. ಕಾರಕವೆಂದರೆ ವಿಭಕ್ತಿ ಎಂದೇ ಅರ್ಥಮಾಡಿದರೆ. ನಾವು ಬೇಡವೆನ್ನುವುದಿಲ್ಲ. ಆಗ ಕನ್ನಡದಲ್ಲೂ ಎಂಟು ಕಾರಕಗಳನ್ನು ಇಟ್ಟುಕೊಳ್ಳಬಹುದು. ಆದರೆ. ಕರ್ತೃ ಕಾರಕವಲ್ಲ ಎಂದೂ. ಸಂಬಂಧ ಕಾರಕ ಎಂದೂ ಹೇಳಲು ಆಧಾರ ತೋರಿಸಬೇಕಾದುದು ಈ ವಾದವನ್ನು ಮುಂದಿಟ್ಟವರ ಕರ್ತವ್ಯ. ನಮಗೆ ತೋರುವಂತೆ. ಇದುವರೆಗೆ ಯಾರೂ ಈ ಬಗೆಯ ಶಾಸ್ತ್ರೀಯ ಆಧಾರವನ್ನು ತೋರಿಸಿಲ್ಲ. ನಾಗವರ್ಮ, ಕೇಶಿರಾಜ ಮತ್ತು ಭಟ್ಟಾಕಳಂಕ ಈ ಮೂವರು ವೈಯಾಕರಣರಲ್ಲಿ ಯಾರೂ ಕರ್ತೃವಿಗೆ ಕಾರಕತ್ವವಿಲ್ಲವೆಂದು ಎಲ್ಲೂ ಹೇಳಿಲ್ಲ. ಕನ್ನಡ ವ್ಯಾಕರಣ ಪರಂಪರೆಯಲ್ಲಿ ಇಲ್ಲದ ಈ ಹೊಸಮಾತನ್ನು ಮಾರ್ಗಕಾರನ ಮೇಲೆ ಆರೋಪಿಸಲಾಗಿದೆ. ಮಾರ್ಗಕಾರನೂ ಕಂಠೋಕ್ತಿಯಿಂದ 'ಕರ್ತೃ ಕಾರಕವಲ್ಲ' ಎಂದು ಹೇಳಲಿಲ್ಲ. ಕಾರಕ ಕ್ರಮದಲ್ಲಿ ಕರ್ಮವನ್ನು ಹೇಳಿ ಕರ್ತೃವನ್ನು ಬಿಟ್ಟಿದ್ದೇ ಈ ಗೊಂದಲಕ್ಕೆ ನಾಂದಿಯಾಯಿತು. ಈ ಒಂದು ಸಣ್ಣ ತಪ್ಪನ್ನು ಹೇಗಾದರೂ

ಸಮರ್ಥಿಸಬೇಕೆಂಬ ಉತ್ಸಾಹದಲ್ಲಿ. ಸಂಸ್ಕೃತ ವ್ಯಾಕರಣ ಪರಂಪರೆಯನ್ನಲ್ಲಗಳೆದು. ಸಂಬಂಧಕ್ಕೆ ಕಾರಕತ್ವವನ್ನು ಸ್ಥಾಪಿಸಿ. ಕರ್ತೃವಿಗೆ ಅದನ್ನು ನಿಷೇಧಿಸಿ ಏನೇನೋ ವಾದಗಳನ್ನು ಹೂಡಲಾಗಿದೆ. ತತ್ತ್ವದರ್ಶಿಗಳಾದ ವಿದ್ವಾಂಸರು ಈ ಪ್ರಕರಣವನ್ನು ಪೂರ್ಣವಾಗಿ ನೋಡಿ. ನಿಷ್ಪಕ್ಷವಾಗಿ ಸಾಧಕ ಬಾಧಕಗಳನ್ನು ತೂಗಿ ಒಂದು ನಿರ್ಣಯಕ್ಕೆ ಬರಬೇಕು. ಈ ಕಾರ್ಯದಲ್ಲಿ ಸತ್ಯಾನ್ವೇಷಣೆಯ ದೃಷ್ಟಿಯೇ ಮುಖ್ಯವಾಗಿರಬೇಕು. ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರೂ ಶ್ರೀ ಎಂ. ವಿ. ಸೀತಾರಾಮಯ್ಯನವರೂ ದೊಡ್ಡ ವಿದ್ವಾಂಸರು. ಅವರ ಬಗ್ಗೆ ಆದರಭಾವ ಇದೆ. ಅವರ ಕೆಲವು ವಿಚಾರಗಳನ್ನು ಈ ಲೇಖನದಲ್ಲಿ ಪರೀಕ್ಷೆಯ ಒರೆಗಲ್ಲಿಗೆ ಹಾಕಲಾಗಿದೆ. ಈ ವಿಷಯವಾಗಿ ಪುನಃ ವಿಚಾರ ಮಂಥನವಾಗಬೇಕೆಂಬುದೇ ನಮ್ಮ ಆಸೆ.

ಹಾಯಿ

ಮೋಗರವಳ್ಳಿ ರಮೇಶ್

ಕಡಲು
ಕಡಲ ಮೇಲೊಂದು ಹಾಯಿ.
ಹಾಯಿಯೊಳಗೆ ನಾನು
ಒಂಟಿ.

ಇದ್ದಕ್ಕಿದ್ದಂತೆ
ಬಿರುಗಾಳಿ ಬೀಸುತ್ತದೆ
ತೆರೆಗಳೇಳುತ್ತವೆ
ಹಾಯಿ ತುಯ್ದಾಡುತ್ತದೆ
ನೀರು ಒಳನುಗ್ಗುತ್ತದೆ
ಹಾಯಿ ಒಡೆಯುತ್ತದೆ
ನಾನು ಮೂರ್ಛೆ ಹೋಗುತ್ತೇನೆ.

ಎಚ್ಚರಾದಾಗ
ಹೊಸ ಹಡಗ ಮೇಲೆ
ಹೊಸ ಮಂದಿಯ ನಡುವೆ
ನಾನು:
ಹೊಸ ಬಟ್ಟೆ ತೊಡಿಸಿ
ಹೊಸ ಔಷಧ ಕುಡಿಸಿ
ನವ ಚೇತನ ಕೊಟ್ಟು
ಮಾತನಾಡಿಸಿದ್ದಾರೆ.

2

ಹೊಸನೆಲ ಹಳತಾಗುತ್ತದೆ
ಹೊಸ ಮಂದಿ ಹಳಬರಾಗುತ್ತಾರೆ
ಬಿರುಗಾಳಿ ಮತ್ತೆ ಬೀಸುತ್ತದೆ ಮತ್ತೆ ಹೋಗುತ್ತದೆ
ಕಡಲು ಮತ್ತೆ ಕೆರಳುತ್ತದೆ ಮತ್ತೆ ಶಾಂತವಾಗುತ್ತದೆ.

ಕಡಲ ತಡಿಗೆ ದಿನವೂ ಬರುತ್ತೇನೆ
ಹಣೆಗೆ ಕೈಯಿಟ್ಟು ನೋಡುತ್ತೇನೆ
ಯಾವುದಾದರೂ ಹಾಯಿ ಕಾಣುವುದೋ
ಎಂದು ಕಾಯುತ್ತೇನೆ.

ಕಾಣುವುದಿಲ್ಲ ಹಾಯಿ
ಹಾಯಿ ಕಾಣುವುದಿಲ್ಲ
ಕಾಣುವುದೇ ಇಲ್ಲ—ಹಾಯಿ.

ಸಮಾಜವಾದ *

ಟಿ. ಕೆ. ಲಕ್ಷ್ಮಣ್

ಸಮಾಜವಾದದ ಕಲ್ಪನೆ ಅನೇಕ ಚಿಂತನಶೀಲರಿಂದ ಭಿನ್ನರೀತಿಗಳಲ್ಲಿ ವಿವರಿಸಲ್ಪಟ್ಟಿದೆ. ಸಮಾಜವಾದದ ಪ್ರತಿಪಾದಕರು ಬಹುಶಃ ಅಸಂಖ್ಯಾತರಿರುವಂತೆಯೇ ಅದರ ಬಗೆಗಿನ ಸಾಹಿತ್ಯವೂ ಭಿನ್ನ ಭಿನ್ನ ಹಾದಿಯಲ್ಲಿ ವಿಶಾಲವಾಗಿ ಹರಡಿದೆ. ಆದರೂ ನಿಖರವಾಗಿ ಸಮಾಜವಾದ ಎಂದರೆ ಇದೇ ಎಂದು ಹೇಳುವುದು ಕಷ್ಟಕರವಾಗಿದೆ. ಪ್ರೊ. ಜೋಡ್ ಅವರ ಪ್ರಕಾರ ಸಂಕ್ಷಿಪ್ತವಾಗಿ, "ಸಮಾಜವಾದವೆಂದರೆ ಆಕಾರ ಕಳೆದುಕೊಂಡ ಟೊಪ್ಪಿಗೆಯ ರೀತಿ; ಏಕೆಂದರೆ ಎಲ್ಲರೂ ಅದನ್ನು ಧರಿಸುವವರೇ".

ಸಮಾಜವಾದವು ನಾನಾ ರೀತಿಗಳಲ್ಲಿ ಬೆಳೆದು ಬಂದಿದೆ. ಸರ್ ಥಾಮಸ್ ಮೋರ್‌ನ "ಯುಟೋಪಿಯನ್ ಸಮಾಜವಾದ"; ಇನ್‌ಕಾಸನ "ಥಿಯೋಕ್ರಾಟಿಕ್ ಸಮಾಜವಾದ"; ಕ್ಯಾನನ್ ಕಿಂಗೆಸ್ಲಿ ಮತ್ತು ರೆವರೆಂಡ್ ಮಾರಿಸ್‌ರವರ "ಕ್ರಿಶ್ಚಿಯನ್ ಸಮಾಜವಾದ"; ಕಾರ್ಲ್‌ಮಾರ್ಕ್ಸ್‌ನ "ವೈಜ್ಞಾನಿಕ ಸಮಾಜವಾದ" : ಸಿಡ್ನಿ ಮತ್ತು ಬೆಟ್ರಿಸ್ ವೆಬ್‌ರ "ಶಾಸನಾನರೂಪ ಸಮಾಜವಾದ ಅಥವಾ ಕಾನೂನು ಬದ್ಧವಾದ ಸಮಾಜವಾದ" ಮೊದಲಾದುವನ್ನು ನಾವು ಇಲ್ಲಿ ಗಮನಿಸಬಹುದು. ಮೂಲಭೂತವಾಗಿ ಸಮಾಜವಾದದ ಚಿಂತನಶೀಲರು ಅನೇಕ ಮುಖ್ಯ ವಿಷಯಗಳಲ್ಲಿ ಒಬ್ಬರಿಂದ ಮತ್ತೊಬ್ಬರು ಭಿನ್ನರಾದರೂ. ಎಲ್ಲರೂ ಜೆ. ಎಸ್. ಮಿಲ್‌ನ 'ವೈಯುಕ್ತಿಕತೆಯ ತತ್ವ' (ವ್ಯಕ್ತಿ ವಿಶಿಷ್ಟತಾ ತತ್ವ) ಮತ್ತು ಸಾಮಾಜಿಕ ಅಸಮಾನತಾ ನಿಯಮದ ಬಗ್ಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ಬೃಹತ್ ಪ್ರಮಾಣದ ವ್ಯವಸ್ಥಾಪನೆ ಹಾಗೂ ಯೋಜನೆ ಇವುಗಳಿಂದ ಆಗುವ ಅನುಕೂಲಗಳ ಬಗ್ಗೆ ಧೃಡವಾದ ನಂಬಿಕೆಯಿಟ್ಟಿದ್ದ ಸ್ವೆಂಟ್‌ಸಿಮನ್ಸ್‌ರು. ವಿಜ್ಞಾನ ಮತ್ತು ತತ್ವಜ್ಞಾನಗಳ ಪೂರ್ಣ ಪ್ರಯೋಜನವು ಸಮಾಜವಾದ ಪದ್ಧತಿಯನ್ನು ರಚಿಸಬಲ್ಲದು ಎಂದು ನಂಬಿದ್ದರು. ಛಾರ್ಲ್ಸ್ ಫೌರಿಯರ್‌ರವರು ವ್ಯವಸಾಯ ಕೇಂದ್ರೀಕೃತವಾದ ಸಮಾಜರಚನೆ ಒಳ್ಳೆಯ ರೀತಿಯ ಜೀವನದ ಸಾಧ್ಯತೆಗಳನ್ನು ಸೃಜಿಸಬಲ್ಲದು ಎಂದು ಧೃಢ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ರಾಬರ್ಟ್ ಓವನ್ ಕಾರ್ಖಾನೆಯ

---

* ಈ ಪ್ರಬಂಧವನ್ನು ಸಿದ್ಧಪಡಿಸುವಲ್ಲಿ ಶ್ರೀ ಟಿ. ಬಿ. ಚಂದ್ರಶೇಖರಯ್ಯನವರು ಬಹುವಾಗಿ ಸಹಾಯಮಾಡಿದರು. ಅವರಿಗೆ ನನ ಕೃತಜ್ಞತೆ.

ಪದ್ಧತಿಯಿಂದ ಉದ್ಭವಿಸಿದ ಘೋರ ಪರಿಸ್ಥಿತಿಯನ್ನು ಮತ್ತು ತತ್ಪರಿಣಾಮವಾಗಿ ಉಂಟಾದ ಕೊಳಚೆ ಪ್ರದೇಶಗಳ ಬಗ್ಗೆ ತೀವ್ರವಾಗಿ ವಿರೋಧ ಸೂಚಿಸಿದ್ದಾರೆ; ಹಾಗೂ ಸಹಕಾರ ಪದ್ಧತಿಯ ಮೂಲಕ ವ್ಯವಸಾಯ ಮತ್ತು ಕೈಗಾರಿಕೆಗಳ ಸಮತೋಲನ ಬೆಳವಣಿಗೆಯನ್ನು ಪ್ರತಿಪಾದಿಸಿದ್ದಾರೆ. ಫೆರ್ಡಿನ್ಯಾಂಡ್ ಲಾಸಲೆಯು ಶೋಷಣೆಯನ್ನು ನಿರ್ಮೂಲವಾಗಲು ಕಾರ್ಮಿಕರೇ ಉತ್ಪಾದಕರಾಗುವುದು ಸೂಕ್ತವೆನ್ನುತ್ತಾರೆ. ಸಿಸ್ಮಾಂಡಿಯ ಇಚ್ಛೆ ಏನೆಂದರೆ ಸ್ವತಃ ಉಪಯೋಗಿಸುವವರಲ್ಲಿ ಉತ್ಪಾದನೆಯ ಸಾಧನಗಳು ವಿಶಾಲವಾಗಿ ಹಂಚಿಕೆಯಾಗಿರಬೇಕೆಂಬುದು. ಹಾಗೂ ಸಣ್ಣಪ್ರಮಾಣದ ಉತ್ಪಾದಕರ ಮತ್ತು ಭೂಮಾಲೀಕರ ಹಿತದೃಷ್ಟಿಯಿಂದ ಆರ್ಥಿಕ ಸ್ಥಿತಿಯನ್ನು ಸರ್ಕಾರವು ಕ್ರಮಗೊಳಿಸಬೇಕೆಂಬುದು.

ನಂತರ ಕಾರ್ಲ್ ಮಾರ್ಕ್ಸ್‌ರು ಸಾಮ್ಯವಾದದ ತತ್ವವನ್ನು ಪ್ರತಿಪಾದಿಸಿದರು. ಆಧುನಿಕ ಸಾಮ್ಯವಾದದ ತಿರುಳಾದ 'ವರ್ಗಕಲಹ'ವು ಅವರ ಮೂಲ ತತ್ವವಾಗಿತ್ತು. ಅವರು ಇತರ ಶಕ್ತಿಗಳಿಗಿಂತ ಆರ್ಥಿಕ ಶಕ್ತಿಗೇ ಹೆಚ್ಚು ಮಹತ್ವ ಕೊಟ್ಟರು. ಈ ಮಾರ್ಕ್ಸ್‌ವಾದವನ್ನೇ ರಷ್ಯಾದೇಶದ ಆರ್ಥಿಕ ಪುನರ್ವ್ಯವಸ್ಥೆಗೆ ಲೆನಿನ್ ಸ್ವೀಕರಿಸಿದರು.

ಅದೇಕಾಲದಲ್ಲಿ ಬರ್ನ್‌ಸ್ಟೈನರು ಕ್ರಾಂತಿಯಿಂದ ಕಟ್ಟಿದ ಸಾಮ್ಯವಾದವನ್ನು ಪ್ರತಿಭಟಿಸಿ ಕ್ರಮಕ್ರಮವಾಗಿ ವಿಕಸಿತಗೊಳಿಸುವ ಪುನರ್ ಪರಿಶೀಲನಾ ನೀತಿಯನ್ನು ಎತ್ತಿಹಿಡಿದರು. ನಂತರ ಇಂಗ್ಲೆಂಡಿನಲ್ಲಿ ಫೇಬಿಯನ್ನರು ತಮ್ಮದೇ ಆದ ಸಾಮಾಜಿಕ ತತ್ವವನ್ನು ಬೆಳೆಸಿದರು. ಶಾಂತ ವಿಧಾನಗಳಿಂದ ತಮ್ಮ ನೀತಿಯನ್ನು ಎತ್ತಿಹಿಡಿಯುವುದೇ ಈ ತತ್ವವಾಗಿತ್ತು. ಫೇಬಿಯನ್ ಪಂಥಕ್ಕೆ ಸೇರಿದ ವೆಬ್ ದಂಪತಿಗಳು ಪ್ರಗತಿಪರ ತೆರಿಗೆಯು (Progressive taxation) ಸೇರಿದಂತೆ ಸಂಪತ್ತಿನ ಮೇಲೆ ಸಾಮಾಜಿಕ ಹತೋಟಿ ಮತ್ತು ಸಾಮಾಜಿಕವಾಗಿ ನಿರ್ಧರಿಸಲ್ಪಟ್ಟ ಕನಿಷ್ಠ ಜೀವನ ಮಟ್ಟಗಳ ಮೂಲಕ ಬಡತನ ನಿರ್ಮೂಲವಾಗಬೇಕೆಂದು ವಾದಿಸಿದರು. ವರಮಾನಗಳ ಸಮಾನತೆಯ ಮುಖಾಂತರ ಸಮಾಜವಾದ ರಚನೆಯನ್ನು ಸ್ಥಾಪಿಸಬಹುದು ಎಂದು ಜಾರ್ಜ್ ಬರ್ನಾಡ್ ಷಾ ನಂಬಿದ್ದರು.

ಇದೇ ಸಮಯದಲ್ಲಿ ಸಮಾಜವಾದದ ಉಳಿದ ಬಗೆಗಳ ಬಗ್ಗೆ ಹೇಳುವುದಾದರೆ:

ಗಿಲ್ಡ್ ಸಮತಾವಾದ ಎಂಬುದು ಒಂದು ಬಗೆ. ಸುಸಂಘಟಿತರಾದ ಕಾರ್ಮಿಕರ ಸಂಘಗಳು ಕೈಗಾರಿಕೆಗಳ ಆಡಳಿತವನ್ನು ಪರಿಣಾಮಕಾರಿಯಾಗಿ ವಹಿಸಿಕೊಳ್ಳಬೇಕೆಂಬುದು ಇವರ ಉದ್ದೇಶ. ಶಾಂತಿಮಾರ್ಗದಿಂದ ಕಾರ್ಮಿಕರನ್ನು ಸಂಘಟಿಸುವುದರ ಬದಲು, ಸಿಂಡಿಕ್ಯಾಲಿಸ್ಟ್ ಎಂಬ ಪಥದವರು ಹಿಂಸಾತ್ಮಕ ಮತ್ತು ಕ್ರಾಂತಿಕಾರಿ ಪದ್ಧತಿಗಳನ್ನು ಪ್ರತಿಪಾದಿಸಿದರು: ಈ ಉದ್ದೇಶಕ್ಕಾಗಿ ದೇಶಾದ್ಯಂತ ಮುಷ್ಕರಗಳನ್ನು ನಡೆಸುವುದು ಇವರ ಉದ್ದೇಶವಾಗಿತ್ತು. ಅರಾಜಕವಾದಿಯಾದ ಕ್ರೊಪೋಟ್‌ಕಿನ್ನರು ಸ್ವತಂತ್ರ ಸಮಾಜವನ್ನು

ಪ್ರತಿಪಾದಿಸಿದರು. ಇಂತಹ ಸಮಾಜದಲ್ಲಿ ಸಾಮಾಜಿಕ ಸಾಮರಸ್ಯವು ಸರ್ಕಾರವಿಲ್ಲದೇ ಉಂಟಾಗಬೇಕು. ಕಾನೂನಿಗೆ ಬದ್ಧರಾಗದೆ ಅಥವಾ ಒಂದು ಅಧಿಕಾರಕ್ಕೆ ವಿಧೇಯರಾಗದೇ ವಿವಿಧ ಸಮೂಹಗಳ ಸ್ವಯಂ ಸಮ್ಮತಿಯಿಂದ ಕೂಡಿದ ಒಪ್ಪಂದಗಳಿಂದ ಈ ಸಾಮರಸ್ಯ ಉಂಟಾಗಬೇಕೆಂಬುದೇ ಇವರ ನಿರೀಕ್ಷೆ. ಹಾಗೆಯೇ ನಾವು ಹಿಟ್ಲರನ 'ರಾಷ್ಟ್ರೀಯ ಸಮಾಜವಾದ' ಅಥವಾ ನಾಜಿಸಂ ಮತ್ತು ಮುಸೋಲಿನಿಯ ಫ್ಯಾಸಿಸಂ ಬಗ್ಗೆಯೂ ಸಹ ಕೇಳಿದ್ದೇವೆ ಇತ್ತೀಚೆಗೆ ನಾವು ಇಂಡೋನೇಷಿಯದ ಡಾ. ಸುಕರ್ನೋ ಅನುಸರಿಸಿದ 'ನಿರ್ದೇಶಿತ ಪ್ರಜಾಪ್ರಭುತ್ವ' ಎಂಬ ಇಂಡೋನೇಷಿಯನ್ ಸಮಾಜವಾದದ ವಿಚಾರವನ್ನೂ ನೋಡಿದ್ದೇವೆ.

ಡಾ. ಸುಕರ್ನೋ ಸಾಮಾಜಿಕ ಹಾಗೂ ಆರ್ಥಿಕ ವರ್ಗ ವ್ಯತ್ಯಾಸಗಳನ್ನು ನಿವಾರಿಸುವುದರ ಮೂಲಕ ರಾಷ್ಟ್ರವನ್ನು 'ಆದರ್ಶ ಸಮಾಜವಾದ'ದ ಕಡೆಗೆ ನಡೆಸಿಕೊಂಡು ಹೋಗಬೇಕೆಂದು ಪ್ರತಿಪಾದಿಸಿದರು. ನಾಸೆರ್‌ರಿಂದ ರೂಪುಗೊಂಡ ಅರಬ್‌ನಮೂನೆಯ ಸಮಾಜವಾದ ಮತ್ತು ಘಾನಾದ (ಡಾ. ಕ್ವಾಮೆಕ್ರೂಮಾ). ತಾಂಗನೀಕ ಮತ್ತು ಅಲ್ಜೀರಿಯಾಗಳಲ್ಲಿ ರೂಢಿಗೆ ಬಂದ ಆಫ್ರಿಕನ್ ಸಮಾಜವಾದವೂ ಇವೆ. ಇವರ ಸಂಪೂರ್ಣಗಮನ ಪೂರ್ಣ ಉದ್ಯೋಗ ಅವಕಾಶ, ಒಳ್ಳೆಯ ವಸತಿ, ವಿದ್ಯಾಭ್ಯಾಸ ಮತ್ತು ಸಾಂಸ್ಕೃತಿಕ ಪ್ರಗತಿಯ ಸಮಾನಾವಕಾಶ—ಇವುಗಳ ಮೇಲಿದ್ದಿತು. ಅಂತಿಮವಾಗಿ ಭಾರತವೂ ಸಹ ತನ್ನದೇ ಆದ ಅಪೂರ್ವರೀತಿಯ ಸಮಾಜವಾದವನ್ನು ಬೆಳೆಸಿಕೊಂಡಿತು. ಮಹಾತ್ಮ ಗಾಂಧಿಯವರು ಸಮಾಜದ ಎಲ್ಲಾ ವರ್ಗದ ಜನರ ನೈತಿಕ ಹಾಗೂ ಲೌಕಿಕ ಕ್ಷೇಮವನ್ನು ಸಾಧಿಸುವ ಮತ್ತು ವಿಶೇಷವಾಗಿ ಕೆಳದರ್ಜೆಯ ಹಾಗೂ ಬಡವರ ಸಮಾಜದ ಹಿತ ಚಿಂತನೆಯನ್ನು ಬೋಧಿಸುವ ಸರ್ವೋದಯದ ಆದರ್ಶವನ್ನು ಎತ್ತಿಹಿಡಿದರು. ಆಚಾರ್ಯ ವಿನೋಬಾ ಭಾವೆ ಮತ್ತು ಜಯಪ್ರಕಾಶ್‌ನಾರಾಯಣ್‌ರವರೂ ಸಹ ಇದೇ ಆದರ್ಶವನ್ನು ಅನುಮೋದಿಸಿದರು. ಪ್ರಧಾನ ಮಂತ್ರಿ ನೆಹರೂರವರಿಗೆ ಸಮಾಜವಾದ ಬರಿಯ ಆರ್ಥಿಕ ತತ್ವವಾಗದೆ ಪ್ರಮುಖ ಧರ್ಮವೇ ಆಗಿತ್ತು. ಸಮಾಜವಾದವನ್ನು ಅಂಗೀಕರಿಸಿದ ನಮ್ಮ ಪ್ರಧಾನಿ ಇಂದಿರಾಗಾಂಧಿಯವರ ಪ್ರಕಾರ ಸಮಾಜವಾದವೆಂದರೆ ಭೂಸುಧಾರಣೆ. ಉಗ್ರತೆರಿಗೆ ನೀತಿ. ಏಕಸ್ವಾಮ್ಯದ ಬಗ್ಗೆ ಬಿಗಿಯಾದ ಹಿಡಿತ. ನಗರಾಸ್ತಿ ಮಿತಿ. ಸಣ್ಣ ಪ್ರಮಾಣದ ಗೃಹಕೈಗಾರಿಕೆಗಳ ಬೆಳವಣಿಗೆ ಮತ್ತು ವ್ಯವಸಾಯ. ಕೈಗಾರಿಕೆಗಳ ಎಲ್ಲಾ ರೀತಿಯ ಅಭಿವೃದ್ಧಿ ಮತ್ತು ಈ ಮುಖಾಂತರ ಬಡತನ ನಿರ್ಮೂಲನ.

ಹೀಗೆ ಸಮಾಜವಾದವು ಯೂರೋಪ್. ಏಷ್ಯಾ ಮತ್ತು ದೂರಪೂರ್ವದ ಅನೇಕ ದೇಶಗಳಲ್ಲಿ ದೊಡ್ಡಶಕ್ತಿಯಾಗಿದೆ. ಅಲ್ಲದೆ ಕೆಲವು ಮುಂದುವರೆದ ಪಾಶ್ಚಾತ್ಯ ಬಂಡವಾಳಶಾಹಿ ದೇಶಗಳೂ ಕೂಡ ಪೂರ್ಣ ಸ್ವಾತಂತ್ರ್ಯದ (laissez faire) ಪದ್ಧತಿಯಿಂದ ಬಹಳ ದೂರ ಬಂದಿವೆ. ಅಮೆರಿಕ. ಬ್ರಿಟನ್. ಜರ್ಮನಿ ಮತ್ತು ಜಪಾನ್‌ದೇಶಗಳ ಆಧುನಿಕ ಆರ್ಥಿಕ ನೀತಿಯಲ್ಲಿ ಸಮಾಜವಾದ ಮಿಶ್ರಿತವಾಗಿದೆ. ಆರ್ಥರ್ ಲೂಯಿಸ್

ಹೇಳುವಂತೆ ಸರ್ವಸ್ವಾತಂತ್ರ್ಯದ (laissez faire) ಆರ್ಥಿಕ ಪದ್ಧತಿಯನ್ನು ನಂಬುವವರು ಇತ್ತೀಚೆಗೆ ಯಾರೂ ಇಲ್ಲ. ಅರ್ಥಶಾಸ್ತ್ರಜ್ಞ ಪ್ರೊ. ಗ್ಯಾಲ್‌ಬ್ರೆತ್‌ರವರು ಅಮೆರಿಕದ ಆರ್ಥಿಕ ಪದ್ಧತಿಯನ್ನು ಕುರಿತು ಪ್ರಸ್ತಾಪಿಸುತ್ತಾ, ಅಮೆರಿಕಾದ ವ್ಯವಸಾಯವು ಭಾರತದ ಆರ್ಥಿಕ ಪದ್ಧತಿಯಲ್ಲಿರುವ ಹತೋಟಿಗಳಿಗಿಂತ ಹೆಚ್ಚಿನ ಹತೋಟಿಗಳಿಗೆ ಒಳಪಟ್ಟಿವೆ ಎಂದು ವ್ಯಕ್ತಪಡಿಸುತ್ತಾರೆ. ಸಂಪ್ರದಾಯವಾದಿ ನಾಯಕತ್ವದಲ್ಲಿ ಇದ್ದಾಗ್ಯೂ ಜಪಾನು ಸಮಾಜವಾದವನ್ನು ಬೋಧಿಸುವುದಕ್ಕಿಂತ ಹೆಚ್ಚಾಗಿ ಆಚರಣೆಗೆ ತಂದಿದೆ. ಅಲ್ಲದೆ ಪರಂಪರೆಯ ತಳಹದಿಯುಳ್ಳ ಬಂಡವಾಳಶಾಹಿಗೂ ಪರಿಷ್ಕೃತಗೊಳಿಸಲ್ಪಟ್ಟ ಕಮ್ಯೂನಿಸಂಗೂ ಇರುವ ಅಂತರದ ಗೆರೆ ದಿನದಿನಕ್ಕೆ ತೆಳುವೂ, ಅಗೋಚರವೂ ಆಗುತ್ತಿದೆ. ರಷ್ಯಾದಲ್ಲಿ ಇತ್ತೀಚೆಗೆ ಬಂಡವಾಳಶಾಹಿಯ ತಂತ್ರಗಳು ನಿಧಾನವಾಗಿ ಬಳಕೆಗೆ ಬರುತ್ತಿವೆ. ಮ್ರುಶ್ಚೊವ್‌ರವರು ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಭೆಯ ಮುಂದೆ ಕೈಗಾರಿಕೆ ಮತ್ತು ವ್ಯವಸಾಯದ ಪುನರ್‌ವ್ಯವಸ್ಥೆಯ ಸ್ಥೂಲರೇಖೆಗಳನ್ನು ಮಂಡಿಸುವಾಗ ಬಂಡವಾಳಶಾಹಿ ಪದ್ಧತಿಗಳು ಸೂಕ್ತವಾಗಿದ್ದರೆ ಮತ್ತು ಆರ್ಥಿಕವಾಗಿ ಲಾಭದಾಯಕ ವಾಗಿದ್ದರೆ ಬಂಡವಾಳಶಾಹಿ ತತ್ವಗಳನ್ನು ಅನುಸರಿಸಬಹುದು ಎಂದು ಸೂಚಿಸುತ್ತಾರೆ.

ಈ ಬೆಳವಣಿಗೆಗಳು ಏನೇ ಆಗಿರಲಿ, ಸಮಾಜವಾದದ ಆದರ್ಶವು 20ನೇ ಶತಮಾನದಲ್ಲಿ ಪ್ರಪಂಚದ ಅನೇಕ ಜನರನ್ನು ಬಹುವಾಗಿ ಆಕರ್ಷಿಸಿತು ಮತ್ತು ಬಂಡವಾಳಶಾಹಿಯ ಪ್ರತಿತತ್ವವಾಗಿ ಅನೇಕ ದೇಶಗಳಲ್ಲಿ ಬೆಳಕಿಗೆ ಬಂದಿತು. ಅಲ್ಲದೆ ಪ್ರತಿಯೊಂದು ಕಾಲಕ್ಕೂ ತನ್ನದೇ ಆದ ಒಂದು ಆದರ್ಶವಿದ್ದೇ ಇದೆ. 19ನೆಯ ಶತಮಾನದಲ್ಲಿ ಫ್ರಾನ್ಸಿನ ಮಹಾಕ್ರಾಂತಿಯು ಅಂತಹ ಆದರ್ಶವಾಗಿದ್ದು, ಸ್ವಾತಂತ್ರ್ಯ, ಸಮಾನತೆ, ಸೋದರತ್ವದ ಧ್ಯೇಯಗಳನ್ನು ಎತ್ತಿಹಿಡಿಯಿತು. ಕೈಗಾರಿಕಾ ಕ್ರಾಂತಿಯ ನಂತರ ಈ ಆದರ್ಶ ಕೊನೆಗೊಂಡಿತು ಮತ್ತು ಈ ಮೂರು ಧ್ಯೇಯಗಳು ಜನಸಾಮಾನ್ಯ ರಿಂದ ದೂರವಾಗಿ ಕೆಲವೇ ವರ್ಗಗಳ ಸಂಕುಚಿತ ಆವರಣದಲ್ಲಿ ಉಳಿದವು. 20ನೇ ಶತಮಾನದಲ್ಲಿ ಸಮಾಜವಾದವು ಜನತೆಯ ಪ್ರಾಮುಖ್ಯತೆಯನ್ನು ಪಡೆದು ಪ್ರಗತಿಶೀಲ ಆದರ್ಶ ತತ್ವವಾಗಿ ರೂಪತಾಳಿತು. ಬಂಡವಾಳಶಾಹಿ ಪದ್ಧತಿಯಲ್ಲಿ ಹೆಚ್ಚಾಗುತ್ತಿದ್ದ ದುಷ್ಫಲಗಳೇ ಸಮಾಜವಾದವು ಹುಟ್ಟುವುದಕ್ಕೆ ಕಾರಣಗಳಾದುವು.

ಖಾಸಗೀ ಆಸ್ತಿ, ಲಾಭದಾಯಕ ಉದ್ದೇಶ, ಸ್ವತಂತ್ರ ಉದ್ಯಮ, ಮಾರುಕಟ್ಟೆಯ ತಂತ್ರ, ಪೈಪೋಟಿ ಅಥವಾ ಇವುಗಳ ಸಂಯೋಗದಿಂದ ಕೂಡಿದ ಬಂಡವಾಳ ಪದ್ಧತಿಯು 18 ಮತ್ತು 19 ನೇ ಶತಮಾನಗಳಲ್ಲಿ ಯೂರೋಪಿನ ಅನೇಕದೇಶಗಳಲ್ಲಿ ದೊಡ್ಡಶಕ್ತಿ ಯಾಗಿತ್ತು. ಇದು ಅಪೂರ್ವವಾದ ಸಂಪದಭಿವೃದ್ಧಿಯನ್ನು ತಂದಿತಲ್ಲದೆ ಆಧುನಿಕ ವಿಜ್ಞಾನ, ತಾಂತ್ರಿಕ ಬೆಳವಣಿಗೆ ವೈದ್ಯಕೀಯ ಪ್ರಗತಿ, ಆರ್ಥಿಕ ವ್ಯವಸ್ಥೆ ಮತ್ತು ಆಧುನಿಕ ನಾಗರಿಕತೆ ಯಲ್ಲಿ ಹೆಮ್ಮೆಗೆ ಕಾರಣವಾಗುವಂತಹ ಅನೇಕ ದಿನಬಳಕೆ ವಸ್ತು ಸಂಗ್ರಹಣೆಯನ್ನು ತಂದಿತು. ಇಂತಹ ಪ್ರಗತಿಯನ್ನು ತಂದಿದ್ದರೂ ಸಹ ಬಂಡವಾಳಶಾಹಿ ಪದ್ಧತಿಯು ಅನೇಕ

ದುಷ್ಪರಿಣಾಮಗಳನ್ನು ತನ್ನ ಜೊತೆಯಲ್ಲಿಯೇ ತಂದಿತು. ಅವುಗಳೆಂದರೆ ಆರ್ಥಿಕ ಶಕ್ತಿಯ ಕೇಂದ್ರೀಕರಣ; ಪಟ್ಟಭದ್ರವರ್ಗಗಳ ಸೃಷ್ಟಿ; ಕೇವಲ ಲಾಭವೃತ್ತಿಯಿಂದಲೇ ಕೂಡಿದ. ವಿವೇಚನೆ ಇಲ್ಲದ ಸಂಪನ್ಮೂಲಗಳ ಹಂಚಿಕೆ; ನಿರ್ದಯವಾದ ಪೈಪೋಟಿ: ಸಂಪನ್ಮೂಲಗಳ ಅಪವ್ಯಯ ಮತ್ತು ಕಾರ್ಮಿಕರ ಸ್ಥಾನಮಾನಗಳನ್ನು ಕೆಳಗಿಳಿಸುವಂತಹ ಶೋಷಣೆ. ಈ ಪರಿಣಾಮಗಳಿಂದ ಬಂಡವಾಳಶಾಹಿ ಮತ್ತು ಶ್ರಮಜೀವಿಗಳ ನಡುವಿನ ಅಂತರ ವಿಸ್ತಾರವಾಗುವುದನ್ನು ಕಾರ್ಲ್‌ಮಾರ್ಕ್ಸ್‌ರು ಪೂರ್ವಭಾವಿಯಾಗಿ ತಿಳಿದಿದ್ದರು ಮತ್ತು ಈ ಗುಂಪುಗಳ ಮಧ್ಯೆ ಸಂಭವಿಸುವ ಅನಿವಾರ್ಯವಾದ ವರ್ಗ ಕಲಹವನ್ನು ಮುನ್ಸೂಚಿಸಿದರು.

ಹೀಗೆ ಸಮಾಜವಾದವು ಬಂಡವಾಳಶಾಹಿಯನ್ನು ಕಿತ್ತೆಸೆಯುವ ಮತ್ತು ಪ್ರತಿಯೊಬ್ಬನಿಗೂ ಒಳ್ಳೆಯ ಜೀವನ ಸೌಲಭ್ಯಗಳನ್ನೊದಗಿಸುವ ಆಶ್ವಾಸನೆಯಾಗಿ ಹುಟ್ಟಿಕೊಂಡಿತು. ಸಮಾಜವಾದ ಪದ್ಧತಿಯಲ್ಲಿ. ಉತ್ಪಾದನೆಯ ಸಾಧನಗಳು ಸಾರ್ವಜನಿಕರ ಸ್ವತ್ತು. ಈ ಒಡೆತನವು ಕೇವಲ ಲಾಭಕ್ಕಾಗಿ ಅಲ್ಲದೆ ಪ್ರಜೆಗಳ ಸೇವೆಗಾಗಿ ಇರುತ್ತದೆ. ಅಂದರೆ ಕೇವಲ ಲಾಭಕ್ಕಾಗಿ ನಡೆಸುವ ಅರಾಜಕತೆಯಿಂದ ಕೂಡಿದ ಉತ್ಪಾದನೆಯನ್ನು ಕೊನೆಗಾಣಿಸಿದಂತಾಯಿತು. ವರ್ಗಗಳ ಅಂತರವನ್ನು ತೊಡೆದು ಹಾಕುವಂತಹ ಮಾನವೀಯ ಸೌಹಾರ್ದತೆ ಇದರ ಗುರಿ. ಖಾಸಾಗೀಥ ಆಸ್ತಿಗಳ ನಿರ್ಮೂಲನ. ಉತ್ಪಾದನಾಸಾಧನಗಳ ಸಾರ್ವಜನಿಕ ಒಡೆತನ ಮತ್ತು ಅವುಗಳ ನಿರ್ವಹಣೆಯಿಂದ ಕೂಡಿದ ಆರ್ಥಿಕ ಮತ್ತು ಸಾಮಾಜಿಕ ಪದ್ಧತಿಯನ್ನು ಇದು ಸೃಷ್ಟಿಸುತ್ತದೆ. ಇದರ ಮುಖ್ಯತತ್ವ 'ಸಾಮರ್ಥ್ಯಕ್ಕನುಗುಣವಾಗಿ ದುಡಿಮೆ, ಅವಶ್ಯಕತೆಗೆ ತಕ್ಕಂತೆ ವರಮಾನ'. ಈ ಆದರ್ಶದ ಆಧಾರದ ಮೇಲೆ ರಷ್ಯಾ. ಪೂರ್ವ ಯೂರೋಪ್ ರಾಷ್ಟ್ರಗಳು ಮತ್ತು ಚೈನಾ. ಇವು ಸಾಮಾಜಿಕ ಮತ್ತು ಆರ್ಥಿಕ ನ್ಯಾಯದಿಂದ ಕೂಡಿದ ಆರ್ಥಿಕಾಭಿವೃದ್ಧಿ ಸಾಧ್ಯ ಎಂಬುದನ್ನು ಪ್ರಪಂಚಕ್ಕೆ ತೋರಿಸಿ ಕೊಟ್ಟವು.

ಭಾರತದಲ್ಲಿ ಸಮಾಜವಾದವು ರಷ್ಯಾ. ಚೀನಾ ಮತ್ತು ಯೂರೋಪಿನ ಪೂರ್ವ ರಾಷ್ಟ್ರಗಳ ಸಾಮ್ಯವಾದಕ್ಕಿಂತ ಭಿನ್ನವಾಗಿ ತನ್ನದೇ ಆದ ಅಪೂರ್ವರೀತಿಯಲ್ಲಿ ರೂಪುಗೊಂಡಿತು, ಹಾಗೂ. ಬಲತ್ಕಾರ ಅಥವಾ ಹಿಂಸಾಮಾರ್ಗದಿಂದಲ್ಲದೆ ಜನರ ಮನ ಒಲಿಸುವ ಅಥವಾ ಶಾಂತಿಯುತವಾದ ಪ್ರಜಾಪ್ರಭುತ್ವ ಒತ್ತಡಗಳ ಮೂಲಕ ಬದಲಾವಣೆಗಳನ್ನು ಯತ್ನಿಸುತ್ತದೆ. 1930 ರ ದಶಕದ ಆರಂಭದಿಂದಲೂ ಸಮಾಜವಾದಿ ತತ್ವವು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಆದರ್ಶದೊಂದಿಗೆ ಹೆಣೆದುಕೊಂಡಿದೆ. 1931 ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಕರಾಚಿ ಅಧಿವೇಶನದಲ್ಲಿ ಮಹಾತ್ಮಗಾಂಧಿಯವರು ಮಂಡಿಸಿದ "ಮೂಲಭೂತ ಹಕ್ಕುಗಳ" ಗೊತ್ತುವಳಿಯಲ್ಲಿ ಸಮಾಜವಾದದ ಸ್ಥೂಲಸ್ವರೂಪವು ಸ್ಪಷ್ಟವಾಯಿತು. ಜನಸಾಮಾನ್ಯರ ಶೋಷಣೆ

ಯನ್ನು ಕೊನೆಗಾಣಿಸಲು. ರಾಜಕೀಯ ಸ್ವಾತಂತ್ರ್ಯವು. ಹಸಿದು ಕಂಗಾಲಾದ ಕೋಟ್ಯಾಂತರ ಜನರ ನಿಜವಾದ ಆರ್ಥಿಕ ಸ್ವಾತಂತ್ರ್ಯವನ್ನು ಒಳಗೊಂಡಿರಬೇಕು. ಎಂಬುದನ್ನು ಈ ಗೊತ್ತುವಳಿಯು ವಿಶದಪಡಿಸಿತು. ಪುನಃ 1936ರ ಲಕ್ನೊ ಅಧಿವೇಶನದಲ್ಲಿ ಬಡತನ, ನಿರುದ್ಯೋಗ ಮತ್ತು ಋಣದ ಹೊರೆ ಮೊದಲಾದ ಸಮಸ್ಯೆಗಳ ಪರಿಹಾರಕ್ಕಾಗಿ ಹಿಡುವಳಿ ಮತ್ತು ಭೂಕಂದಾಯ ಪದ್ಧತಿಗಳಲ್ಲಿ ತೀವ್ರ ಬದಲಾವಣೆಗಳನ್ನು ಮಾಡುವುದರಲ್ಲಿ ಮತ್ತು ಉದ್ಯೋಗ ಅವಕಾಶ ನೀಡುವುದರಲ್ಲಿ ಸರ್ಕಾರದ ಪಾತ್ರ ಹಿರಿಯದಾಗ ಬೇಕೆಂಬುದನ್ನು ಒತ್ತಿ ಹೇಳಲಾಯಿತು. 1938ರಲ್ಲಿ ನೆಹರೂರವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಯೋಜನಾ ಸಮಿತಿಯೊಂದು ನೇಮಕಗೊಂಡು ಭಾರತದ ಆರ್ಥಿಕತೆಗೆ ಸಮಾಜವಾದೀ ಸ್ವರೂಪವನ್ನು ಕೊಡುವಂತಹ ಬ್ಲೂಪ್ರಿಂಟ್ ಒಂದನ್ನೂ ತಯಾರಿಸಿತು. ತರುವಾಯ ಸ್ವಾತಂತ್ರ್ಯ ಪ್ರಾಪ್ತವಾದ ನಂತರ 1948ರಲ್ಲಿ "ಆರ್ಥಿಕ ಕಾರ್ಯಕ್ರಮಗಳ ಸಮಿತಿ" ಮತ್ತು 1949 ರಲ್ಲಿ ಜೆ. ಸಿ. ಕುಮಾರಪ್ಪನವರ ವ್ಯವಸಾಯ ಸುಧಾರಣಾ ಸಮಿತಿ ವರದಿಗಳೂ ಸಹ ಸಮಾಜವಾದೀ ಪದ್ಧತಿಯ ಆಚರಣೆಗೆ ಸಲಹೆಗಳನ್ನು ನೀಡಿದವು. ನಂತರ ಸಮಾಜವಾದ ತತ್ವಗಳನ್ನು ಭಾರತ ರಾಜ್ಯಾಂಗದ ನಿರ್ದೇಶನ ತತ್ವಗಳಲ್ಲಿ ಅಳವಡಿಸಲಾಯಿತು. ಇದು ಯೋಜಿತ ಆರ್ಥಿಕ ಅಭಿವೃದ್ಧಿಯೊಂದಿಗೆ ಜೊತೆಗೂಡಿಕೊಂಡಿತು. ಎಲ್ಲ ಪ್ರಜೆಗಳಿಗೂ ಸಾಕಷ್ಟು ಜೀವನಾಧಾರವನ್ನು ಪಡೆಯುವಂತಹ ಹಕ್ಕು ಮತ್ತು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಒಳಗೊಂಡ ಸಾಮಾಜಿಕ ಕ್ರಮವನ್ನು ರಾಜ್ಯಾಂಗವು ಯೋಜಿಸುತ್ತದೆ. ಹಾಗೂ ದೇಶದ ಆರ್ಥಿಕ ಕಾರ್ಯವಿಧಾನಗಳು ಜನಸಾಮಾನ್ಯರಿಗೆ ಹಾನಿಯಾಗುವಂತಹ ಸಂಪತ್ತು, ಉತ್ಪಾದನಾ ಸಾಧನೆಗಳ ಕೇಂದ್ರೀಕರಣದಲ್ಲಿ ಪರಿಣಮಿಸುವುದನ್ನು ತಡೆಯಬೇಕೆಂದೂ ಸಹ ನಿರ್ದೇಶನ ತತ್ವಗಳು ತಿಳಿಸುತ್ತವೆ.

ಈ ಮೇಲೆ ಹೇಳಿದ ತತ್ವಗಳು ರಾಜ್ಯಾಂಗ ವಿಧಿಯಲ್ಲಿ ಅಳವಡಿಸಲ್ಪಟ್ಟಿದ್ದು ಮೊದಲನೆಯ ಪಂಚವಾರ್ಷಿಕ ಯೋಜನೆಯ ಪ್ರಕಟನೆಯ ಕಾಲದಿಂದಲೂ ಭಾರತದ ಯೋಜನೆಗಳಿಗೆ ಮಾರ್ಗದರ್ಶಕ ಸೂತ್ರಗಳಾಗಿವೆ. ನೆಹರೂರವರು ಮೊದಲನೆಯ ಪಂಚವಾರ್ಷಿಕ ಯೋಜನೆಯನ್ನು ಪರಿಚಯ ಮಾಡಿಕೊಡುತ್ತಾ. ವರ್ಗವಿಭೇದಗಳನ್ನು ಕೊನೆಗಾಣಿಸುವುದು. ಆರ್ಥಿಕ ಸಮಾನತೆಯನ್ನು ಸಾಧಿಸುವುದೂ ಮುಖ್ಯ ಎಂದು ವಾದಿಸಿದರು. ಎರಡನೆಯ ಪಂಚವಾರ್ಷಿಕ ಯೋಜನೆಯು ಸಮಾಜವಾದದ ಗುರಿಯ ಕಡೆಗೆ ಮುನ್ನಡೆ ಇಡಲು ನಿರ್ಧರಿಸಬೇಕಾದ ಅಂಶ ಖಾಸಗೀ ಲಾಭದೃಷ್ಟಿಯಾಗಿರದೆ ಸಾಮಾಜಿಕ ಲಾಭವಾಗಿರಬೇಕೆಂದು ತಿಳಿಸಿತು. ಆರ್ಥಿಕ ಅಭಿವೃದ್ಧಿಯಿಂದ ಉಂಟಾಗುವ ಅನುಕೂಲಗಳು ಸಮಾಜದ ಭಾಗ್ಯಹೀನರಿಗೆ ಹೆಚ್ಚು ಹೆಚ್ಚಾಗಿ ದೊರೆಯಬೇಕು ಮತ್ತು ಅನುಕ್ರಮವಾಗಿ ವರಮಾನ. ಸಂಪತ್ತು. ಆರ್ಥಿಕ ಶಕ್ತಿಗಳ ಕೇಂದ್ರೀಕರಣವು ಕಡಿಮೆ

ಯಾಗಬೇಕು. ಸಮಾಜದ ಎಲ್ಲ ಪಂಗಡಗಳು ದೇಶದ ಎಲ್ಲ ಭಾಗಗಳು ಮುಂದುವರೆಯಲು ಮತ್ತು ರಾಷ್ಟ್ರದ ಹಿತಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸಲು ಪೂರ್ಣವಾದ ಅವಕಾಶಗಳನ್ನು ನೀಡುವಂತಹ ಜಾತ್ಯತೀತ ಮತ್ತು ವರ್ಗಾತೀತ ಸಮಾಜವನ್ನು ಸ್ಥಾಪಿಸುವುದು ಮೂರನೆಯ ಪಂಚವಾರ್ಷಿಕ ಯೋಜನೆಯ ಗುರಿಯಾಗಿತ್ತು. ಹಾಗೆಯೇ ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಸಾಮಾಜಿಕ ನ್ಯಾಯದಿಂದ ಕೂಡಿದ ಅಭಿವೃದ್ಧಿಯೇ ರಾಷ್ಟ್ರೀಯ ಆರ್ಥಿಕ ನೀತಿಯ ಮುಖ್ಯ ಭಾಗವಾಗಿದೆ.

ಆದುದರಿಂದ ಸಮಾಜವಾದವು ಭಾರತಕ್ಕೇನೂ ಹೊಸದಲ್ಲ ಮತ್ತು ಅದು ವೇದಗಳ ಕಾಲದಿಂದಲೂ ಭಾರತದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಿಚಾರ ತರಂಗಗಳಲ್ಲಿ ಇದ್ದೇ ಇದೆ. "ಸರ್ವೇ ಜನಾಃ ಸುಖಿನೋ ಭವಂತು" ಎಂಬ ಮಾತು ಸರ್ವೇಸಾಧಾರಣವಾಗಿ ರೂಢಿಗೆ ಬಂದಿದೆ. ಈ ಆದರ್ಶವನ್ನು ಆಚರಣೆಗೆ ತರಲು ನಮ್ಮ ದೇಶದ ಪಂಚವಾರ್ಷಿಕ ಯೋಜನೆಗಳ ಮೂಲಕ ಕಾರ್ಯ ಆರಂಭವಾಡಲಾಗಿದೆ. ಹೆಚ್ಚಿನ ನೀರಾವರಿ ಸೌಲಭ್ಯ, ಸಮುದಾಯ ಅಭಿವೃದ್ಧಿ ಕಾರ್ಯಕ್ರಮ, ಭೂಸುಧಾರಣೆ ಮತ್ತು ಸುಧಾರಿತ ತಂತ್ರಜ್ಞಾನದ ಬಳಕೆ ಇವುಗಳ ಮುಖಾಂತರ ಗ್ರಾಮಾಂತರ ಆರ್ಥಿಕ ಜೀವನವನ್ನು ಆಧುನಿಕಗೊಳಿಸುವುದರ ಮೂಲಕ ದೇಶದ ಸರ್ವತೋಮುಖವಾದ ಆರ್ಥಿಕ ಪ್ರಗತಿಯನ್ನು ಸಾಧಿಸುವ ಪ್ರಯತ್ನಗಳು ನಡೆದಿವೆ. ಗ್ರಾಮಾಂತರ ಜೀವನ ವ್ಯವಸಾಯ ಮತ್ತು ಗೃಹ ಅಥವಾ ಸಣ್ಣ ಪ್ರಮಾಣದ ಕೈಗಾರಿಕೆಗಳ ರಚನೆಯಿಂದ ಹೆಣೆಯಲ್ಪಟ್ಟಿದೆ. ಕೈಗಾರಿಕಾಕ್ಷೇತ್ರದಲ್ಲಿ ಮಿಶ್ರ ಆರ್ಥಿಕ ಪದ್ಧತಿ ಆಚರಣೆಗೆ ಬಂದಿದೆ. ಇದರ ಪರಿಣಾಮವಾಗಿ ಕಳೆದ 22 ವರ್ಷಗಳಲ್ಲಿ ಉತ್ಪಾದನಾ ಸಾಧನಗಳನ್ನು ತಯಾರಿಸುವ ಕೈಗಾರಿಕೆಗಳು, ರಾಸಾಯನಿಕ, ವಿದ್ಯುತ್ ಮತ್ತು ಲೋಹಕ್ಕೆ ಸಂಬಂಧಿಸಿದ ಕೈಗಾರಿಕೆಗಳು ಸಾರ್ವಜನಿಕ ಕ್ಷೇತ್ರದಲ್ಲಿ ಗಮನಾರ್ಹವಾಗಿ ಬೆಳೆದಿವೆ. ಖಾಸಗೀ ಕ್ಷೇತ್ರದಲ್ಲಿ ದಿನಬಳಕೆಯ ವಸ್ತುಗಳ ಕೈಗಾರಿಕೆಗಳು ಬಹುವಾಗಿ ಬೆಳೆದಿವೆ. ವಿದ್ಯಾಭ್ಯಾಸ, ಆರೋಗ್ಯ ಮತ್ತು ಸಾರಿಗೆ ವ್ಯವಸ್ಥೆ ಮುಂತಾದ ಸಾಮಾಜಿಕ ಮತ್ತು ಆರ್ಥಿಕ ಸೇವಾ ಸೌಲಭ್ಯಗಳ ಬೆಳವಣಿಗೆಯೂ ಗಣನೀಯವಾಗಿ ಹೆಚ್ಚಿದೆ. ಇಡೀ ಆರ್ಥಿಕ ರಚನೆ ಸರ್ವರ ಹಿತಕ್ಕಾಗಿ ಖಾಸಗೀ ಲಾಭಗಳನ್ನು ಅಧೀನಗೊಳಿಸುವಂತೆ ಪುನರ್ರಚಿತವಾಗಿದೆ.

ಈ ಎಲ್ಲ ಬದಲಾವಣೆಗಳಾದರೂ ಸಹ ಆರ್ಥಿಕ ಅಭಿವೃದ್ಧಿಯ ಅಲ್ಪಸ್ವಲ್ಪ ಪ್ರಯೋಜನಗಳು ಅಸಮಾನವಾಗಿ ಹಂಚಿರುವುದು ಕಂಡುಬರುತ್ತದೆ. ನಿರುದ್ಯೋಗ ಮತ್ತು ಬಡತನ ಹೆಚ್ಚಾಗಿ ವ್ಯಾಪಕವಾಗಿವೆ. ಇತ್ತೀಚಿನ ಸಮೀಕ್ಷೆಯ ಪ್ರಕಾರ ಗ್ರಾಮಾಂತರ ಪ್ರದೇಶದ ಜನಸಂಖ್ಯೆಯಲ್ಲಿ ಶೇ. 40 ರಷ್ಟು ಜನರಲ್ಲಿ ದಿನಕ್ಕೆ ಪ್ರತಿಯೊಬ್ಬನೂ ಕೇವಲ 50 ಪೈಸೆಗಳಿಗಿಂತ ಕಡಿಮೆ ಖರ್ಚುಮಾಡುತ್ತಾನೆ. ಹಾಗೆಯೇ ನಗರವಾಸಿಗಳಲ್ಲಿ ಸುಮಾರು ಶೇ. 40 ಭಾಗ ಜನರಲ್ಲಿ ಪ್ರತಿವ್ಯಕ್ತಿಯ ತಲಾವಾರು ಖರ್ಚು ದಿನಕ್ಕೆ 75 ಪೈಸೆ. ನಗರ ಮತ್ತು ಗ್ರಾಮ ಈ ಎರಡೂ ಪ್ರದೇಶಗಳನ್ನು ತೆಗೆದುಕೊಂಡರೆ ಶೇ. 40 ರಷ್ಟು

ಭಾಗವಿರುವ ಮಧ್ಯಮ ಮತ್ತು ಕೆಳವರ್ಗದ ಜನತೆಯು ಅಭಿವೃದ್ಧಿಯ ಪ್ರಯೋಜನಗಳ ಲಾಭವನ್ನು ಪಡೆಯಲಿಲ್ಲ. ಗ್ರಾಮಾಂತರಗಳಲ್ಲಿ ತೀರ ಕೆಳವರ್ಗದ ಶೇ. 20 ರಷ್ಟು ಜನರ ಸ್ಥಿತಿಗತಿಗಳು ಎಂದಿನಂತೆಯೇ ಇವೆ. ನಗರಗಳಲ್ಲಿ ತೀರ ಕೆಳವರ್ಗದ ಶೇ. 70 ರಷ್ಟು ಜನರ ಪರಿಸ್ಥಿತಿ ಎಂದಿಗಿಂತಲೂ ಕ್ಷೀಣಿಸಿದೆ. ಸರ್ಕಾರದ ಹಣಕಾಸಿನ ನೀತಿ ಸಮಾಜದ ವಿವಿಧ ವರ್ಗಗಳ ಅಂತರವನ್ನು ಕಡಿಮೆಮಾಡಲು ಹೆಚ್ಚು ಸಹಾಯಕವಾಗಲಿಲ್ಲ. ಜನಸಾಮಾನ್ಯರಲ್ಲಿ ಈ ಕಾರಣಗಳಿಂದ ಅತೃಪ್ತಿ ಹೆಚ್ಚಾಗಿದೆ. ಭಾರತದ ಕೋಟ್ಯಂತರ ಜನ ಸಮೂಹಕ್ಕೆ ಸಮಾಜವಾದವೆಂದರೆ ಹೆಚ್ಚಿನ ಉದ್ಯೋಗ ಅವಕಾಶಗಳು ಮತ್ತು ಮೂಲ ಅಗತ್ಯಗಳಾದ ಆಹಾರ, ಬಟ್ಟೆ. ವಿದ್ಯಾಭ್ಯಾಸ ಮತ್ತು ವೈದ್ಯಕೀಯ ಸೌಲಭ್ಯಗಳು. ಇಲ್ಲದಿದ್ದರೆ ಸಮಾಜವಾದವು ಬರಿಯ ಪೊಳ್ಳು ಘೋಷಣೆ.

ನಮ್ಮ ದೇಶದ ಈ ಸ್ಥಿತಿಯ ಹಿನ್ನೆಲೆಯಲ್ಲಿ ಬಹುಮುಖ್ಯವಾದುದೆಂದರೆ — ಜನತೆಯ ದುರ್ಬಲವರ್ಗಗಳಿಗೆ ಸಹಾಯಕವಾಗುವಂತಹ ಕಾರ್ಯಕ್ರಮಗಳನ್ನು ಕೈಗೊಳ್ಳುವುದು: ಇವುಗಳಲ್ಲಿ ಮುಖ್ಯವಾದುವು: ತ್ವರಿತವಾಗಿ ಭೂಸುಧಾರಣೆಯನ್ನು ಜಾರಿಗೆ ತರುವುದು: ಉದ್ಯೋಗವನ್ನು ಸೃಷ್ಟಿಸುವಂತಹ ಗ್ರಾಮಾಂತರ ಯೋಜನೆಗಳು; ನಗರ ಆಸ್ತಿಯ ಮೇಲೆ ಮಿತಿ; ಏಕಸ್ವಾಮ್ಯ ನಿಯಂತ್ರಣ ಮತ್ತು ನಿರ್ದಿಷ್ಟ ಅಥವಾ ಗೊತ್ತಾದ ಕಾಲದಲ್ಲೇ ನಡೆಯಬೇಕಾದ ಅಭಿವೃದ್ಧಿ ಕಾರ್ಯಗಳು. ಆರ್ಥಿಕ ಬೆಳವಣಿಗೆಯನ್ನು ತ್ವರಿತಗೊಳಿಸಿದರೇ ಬಡವರ್ಗಗಳ ಜೀವನ ಸ್ಥಿತಿ ಸುಧಾರಿತವಾಗುವುದಿಲ್ಲ. ಆರ್ಥಿಕ ಬೆಳವಣಿಗೆಯು ತ್ವರಿತವಾಗಿ ನಡೆದರೂ. ಕೇವಲ ಕೆಲವರ ಕೈಯಲ್ಲೇ ಸಂಗ್ರಹವಾಗುವ ಸಂಪತ್ತು ಜನಸಾಮಾನ್ಯರ ಕೈ ಸೇರುವುದಿಲ್ಲ. ಬಹಳ ಹಿಂದೆಯೇ ನೆಹ್ರೂರವರು ತಿಳಿಸಿದಂತೆ ಯೂರೋಪಿನಲ್ಲಿ ಕೈಗಾರಿಕಾ ಕ್ರಾಂತಿಯಾದ ನಂತರ ಸಂಪತ್ತಿನ ಬಹುಭಾಗವು ಕೇವಲ ಕೆಲವೇ ಶ್ರೀಮಂತ ವರ್ಗದವರಲ್ಲಿ ಸೇರಿತು ಮತ್ತು ಅತಿ ಸ್ವಲ್ಪ ಭಾಗ ಬಡಜನರನ್ನು ಮುಟ್ಟಿತು. ಇಂತಹ ಪ್ರವೃತ್ತಿಯು ನಮ್ಮ ದೇಶದಲ್ಲಿ ಬರದಂತೆ ತಪ್ಪಿಸಬೇಕು. ಅಂದರೆ ಯೋಜನಾ ಪದ್ಧತಿಯನ್ನು ಬಲಗೊಳಿಸುವುದು, ಯೋಜನೆಯ ಕಾರ್ಯಕ್ರಮಗಳನ್ನು ಸೂಕ್ತವಾಗಿ ಆಚರಣೆಯಲ್ಲಿ ತರುವುದು, ಪ್ರಾದೇಶಿಕ ಅಸಮತೆಗಳ ನಿವಾರಣೆ. ಕೈಗಾರಿಕಾ ಸಂಬಂಧಗಳ ಪುನರ್‌ರಚನೆ. ಮತ್ತು ಸಂಯುಕ್ತ ಕ್ಷೇತ್ರಕ್ಕೆ ಪ್ರೋತ್ಸಾಹ ಮುಂತಾದುವು. ಭಾರತದಲ್ಲಿ ಸಮಾಜವಾದವನ್ನು ಬೆಳೆಸಲು ಈ ಎಲ್ಲ ಕಾರ್ಯಕ್ರಮಗಳೂ ಸಹಾಯಕವಾಗುವುವು.

ಉಂಗುರ

ಶಶಿಧರ ಕುಲಕರ್ಣಿ

ನನ್ನ
ಶಾಕುಂತಲ
ನನಗೆ ಕೊಟ್ಟ
ಉಂಗುರ
ಹಾಳು ಬೀದಿಯಲ್ಲಿ
ಬಿದ್ದು
ಕಳೆದು ಹೋಯಿತು.

ಒಳ್ಳೆಯ ಮಳೆಯೆಂದು
ಹಳ್ಳಿಗರು ಫಸಲಿಗಾಗಿ ತವಕ ಪಡುವಾಗ
ನಾನು–ನಾನಾಗಿ
ಹಾಳು ಬೀದಿಯ ಕೆಸರಿನಲಿ
ಕಳೆದ ಉಂಗುರಕಾಗಿ
ತಡಕಾಡುವಾಗ
ಉಂಗುರ ಸಿಕ್ಕಿತು, ಆದರೆ
ಅದು ನಾನು ಕಳೆದು ಕೊಂಡದ್ದಲ್ಲ.

"ಕನ್ನಡಗ್ರಂಥಸೂಚಿ-ಸಂಪುಟ 1": ಒಂದು ವಿಮರ್ಶೆ

ಎಂ. ಚಿದಾನಂದಮೂರ್ತಿ

ಇದು* "ಮುದ್ರಿತ ಕನ್ನಡ ಕೃತಿಗಳ ವಿವರಣಾತ್ಮಕ ಗ್ರಂಥಸೂಚಿ 1817-1968"-ಎಂಬ ಯೋಜನೆಯಲ್ಲಿನ ಆರು ಸಂಪುಟಗಳಲ್ಲಿ ಮೊದಲನೆಯದು. ಇದರಲ್ಲಿ "ಶುದ್ಧ ವಿಜ್ಞಾನ" ಗಳಿಗೆ ಸಂಬಂಧಿಸಿದ ಮುದ್ರಿತ ಗ್ರಂಥಗಳ ದಾಖಲೆಯಿದೆ. ಸಾಮಾನ್ಯ ವಿಜ್ಞಾನ. ಭೌತ ವಿಜ್ಞಾನ. ಗಣಿತ ವಿಜ್ಞಾನ, ಎಂಜಿನಿಯರಿಂಗ್, ತಾಂತ್ರಿಕ ವಿಜ್ಞಾನ. ರಸಾಯನ ವಿಜ್ಞಾನ, ಭೂವಿಜ್ಞಾನ, ಜೀವ ವಿಜ್ಞಾನ. ಸಸ್ಯ ವಿಜ್ಞಾನ. ಪ್ರಾಣಿ ವಿಜ್ಞಾನ, ಕೃಷಿ ವಿಜ್ಞಾನ, ವೈದ್ಯ ವಿಜ್ಞಾನ ಮತ್ತು ಗೃಹ ವಿಜ್ಞಾನಗಳನ್ನು ಇಲ್ಲಿನ "ಶುದ್ಧ ವಿಜ್ಞಾನ" ಒಳಗೊಂಡಿದೆ.

ಕ್ರಿ. ಶ. 1817 ರಲ್ಲಿ ನಮಗೆ ತಿಳಿದಂತೆ ಕನ್ನಡದ ಮೊದಲನೆಯ ಗ್ರಂಥವಾದ ವಿಲಿಯಂ ಕೇರಿ ಅವರ A Grammer of the Curnatika Language ಎಂಬುದು ಕಲ್ಕತ್ತದ ಬಳಿಯ ಸೆರಾಂಪುರ್ [ಶ್ರೀರಾಮಪುರ] ನಲ್ಲಿ ಅಚ್ಚಾಯಿತು. ಅಲ್ಲಿಂದ 1968 ರವರೆಗೆ ಅಚ್ಚಾದ ಎಲ್ಲ ಕನ್ನಡ ಗ್ರಂಥಗಳ ಮಾಹಿತಿಯನ್ನು ಕೊಡುವ ದೊಡ್ಡ ಯೋಜನೆಯ ಮೊದಲ ಫಲ ಈ ಪುಸ್ತಕ. 1968 ರಿಂದ ಈಚೆಗೆ ಅಚ್ಚಾದ ಪುಸ್ತಕಗಳು ವಾರ್ಷಿಕ ಪುರವಣಿಗಳಲ್ಲಿ ಪ್ರಕಟವಾಗುತ್ತವೆಯೆಂದು ತಿಳಿದು ಬರುತ್ತದೆ.

1817 ರಿಂದ ಇಲ್ಲಿಯವರೆಗೆ ಸುಮಾರು ನಲವತ್ತು ಸಾವಿರಕ್ಕೆ ಮೇಲ್ಪಟ್ಟು ಪುಸ್ತಕಗಳು ಅಚ್ಚಾಗಿವೆಯೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಕರ್ನಾಟಕದ ಯಾವುದೇ ಪುಸ್ತಕ ಭಂಡಾರದಲ್ಲಿ ಎಳೆಂಟು ಸಾವಿರದಷ್ಟು ಪುಸ್ತಕಗಳು ಸಿಕ್ಕರೆ ಹೆಚ್ಚು. ಅಚ್ಚಾದ ಎಲ್ಲ ಪುಸ್ತಕಗಳನ್ನೂ ಇಡುವುದು ಬಹು ಅಪೇಕ್ಷಣೀಯವಾದ ಕೆಲಸವೇ ಆದರೂ ಅದು ಕೇವಲ ಆದರ್ಶದ ಮಾತೇ ಆಗಿ ಉಳಿಯುತ್ತದೆ. ಅಚ್ಚಾದ ಪುಸ್ತಕಗಳ ಪಟ್ಟಿಯೊಂದಿದ್ದರೆ ಕೊನೆಯಪಕ್ಷ ಕನ್ನಡದಲ್ಲಿ ಏನು ಬಂದಿದೆ. ಏನು ಬಂದಿಲ್ಲವೆಂಬುದಾದರೂ ತಿಳಿದೀತು. ಅಂತಹ ವಿವರಣಾತ್ಮಕ ಗ್ರಂಥಸೂಚಿಯಿಂದ

---

* ಸಂಪಾದಕರು: ದೇ. ಜವರೇಗೌಡ, ಕೆ. ಎಸ್. ದೇಶಪಾಂಡೆ. ಪ್ರಭುಶಂಕರ ಮತ್ತು ಆರ್. ಎಲ್. ಅನಂತರಾಮಯ್ಯ (ಪ್ರಸಾರಾಂಗ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.1971)

"ಪಂಡಿತರಿಗೆ, ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ, ಬೋಧಕರಿಗೆ–ಎಲ್ಲ ತೆರದ ಜ್ಞಾನೋಪಾಸಕರಿಗೂ ಅನುಕೂಲವಾಗುತ್ತದೆ."

"ಯಾವುದೇ ಭಾಷೆಯಲ್ಲಿ ರಚಿತವಾಗಿರುವ ಎಲ್ಲ ಬಗೆಯ ಬರವಣಿಗೆಗಳನ್ನು ಕುರಿತ ಎಲ್ಲ ಅಂಶಗಳ ಶಾಸ್ತ್ರೀಯ ನಿರೂಪಣೆಯೇ ಗ್ರಂಥಸೂಚಿ". ಯಾವುದಾದರೂ ಕ್ಷೇತ್ರದಲ್ಲಿ ಏನು ಕೆಲಸವಾಗಿದೆ ಎಂದು ತಿಳಿಯಲು ಯತ್ನಿಸುವ ಪ್ರಾರಂಭಿಕ ಸಂಶೋಧಕನಿಗೆ ಈ ಗ್ರಂಥಸೂಚಿಗಳು ಕೈದೀವಿಗೆಯಿದ್ದಂತೆ. ಇಂಗ್ಲೀಷಿನಲ್ಲಿ ಗ್ರಂಥಸೂಚಿಗಳೂ ಹುಟ್ಟಿವೆ, ಗ್ರಂಥಸೂಚಿಗಳ ಗ್ರಂಥಸೂಚಿಗಳೂ ಹುಟ್ಟಿವೆ. ಭಾರತದಲ್ಲಿ ಬಂಗಾಳಿ, ಮರಾಠಿಗಳಲ್ಲಿ ಗ್ರಂಥಸೂಚಿಗಳು ಬಂದಿವೆಯೆಂದು ಸಂಪಾದಕರು ತಿಳಿಸುತ್ತಾರೆ. ಕನ್ನಡ ಭಾಷೆಗೆ ಅಂತಹ ಒಂದು ಗ್ರಂಥಸೂಚಿಯನ್ನು ತಯಾರಿಸಲು ಕೈಗೆತ್ತಿಕೊಂಡಿರುವ ಈ ಯೋಜನೆ ನಿಜಕ್ಕೂ ಶ್ಲಾಘನೀಯ.

ಪ್ರಸ್ತುತ ಗ್ರಂಥದಲ್ಲಿ "ಶುದ್ಧ ವಿಜ್ಞಾನ"ಕ್ಕೆ ಸಂಬಂಧಿಸಿದ 1449 ಪಟ್ಟಿಕೆಗಳಿವೆ. ಇದು 1817 ರಿಂದ 1968 ರವರೆಗೆ ಪ್ರಕಟವಾಗಿರುವ ಶುದ್ಧ ವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ ಪಟ್ಟಿಮಾಡಲು ಸಾಧ್ಯವಾಗಿರುವುದನ್ನು ಮಾತ್ರ ತಿಳಿಸುತ್ತದೆ [ಪ್ರಕಟವಾಗಿರುವುದು ಇಷ್ಟು ಮಾತ್ರ ಎಂದಲ್ಲ]. ಈ ಗ್ರಂಥಗಳನ್ನು ಬೇರೆ ಬೇರೆ ಶೀರ್ಷಿಕೆಗಳ ಕೆಳಗೆ [ಭೌತ, ಗಣಿತ, ವೈದ್ಯ...ಇತ್ಯಾದಿ] ಉಪಶೀರ್ಷಿಕೆಗಳನ್ನು ಕೊಟ್ಟು, ಲೇಖಕರ ಅಕಾರಾದಿಯಲ್ಲಿ ಅಳವಡಿಸಲಾಗಿದೆ. ಉದಾಹರಣೆಗೆ "ವೈದ್ಯ ವಿಜ್ಞಾನ" ಮುಖ್ಯ ಶೀರ್ಷಿಕೆಯಾದರೆ, ನಿಘಂಟು, ಸಾಮಾನ್ಯ, ಅಂಗರಚನಾಶಾಸ್ತ್ರ, ಶರೀರ ಶಾಸ್ತ್ರ ಇತ್ಯಾದಿಗಳು ಉಪಶೀರ್ಷಿಕೆಗಳು. ಪ್ರಥಮ ಚಿಕಿತ್ಸೆಯ ಬಗ್ಗೆ ಕನ್ನಡದಲ್ಲಿ ಏನು ಗ್ರಂಥಗಳು ಬಂದಿವೆಯೆಂಬುದನ್ನು ತಿಳಿಯಲು ಆ ಹೆಸರಿನ ಶೀರ್ಷಿಕೆಯನ್ನು ತೆಗೆದರೆ ಸಾಕು.

ಒಂದು ಪುಸ್ತಕ ನೆನಪಿದ್ದು ಅದರ ಯಾವುದೇ ವಿವರ ತಿಳಿಯದಿದ್ದರೂ, ಅಥವಾ ಲೇಖಕ ಗೊತ್ತಿದ್ದು ಇನ್ನೇನೂ ವಿವರ ತಿಳಿಯದಿದ್ದರೂ, ಆಯಾ ವಿವರಗಳನ್ನರಿಯಲು ಕೃತಿಸೂಚಿ, ಗ್ರಂಥಕರ್ತೃಸೂಚಿಗಳು ಸಹಾಯ ಮಾಡುತ್ತವೆ. ಒಂದು ಗ್ರಂಥದ ಮೂಲಲೇಖಕ ಮತ್ತು ಅದು ಅನುವಾದವಾಗಿದ್ದರೆ ಅದರ ಅನುವಾದಕನ ಹೆಸರೂ ಇಲ್ಲಿರುವುದು ಒಂದು ದಾಖಲೆಯನ್ನು (entry) ಕಂಡುಹಿಡಿಯಲು ಸಹಾಯ ಮಾಡುತ್ತದೆ.

ದಾಖಲೆಗಳಲ್ಲಿ ಸಾಮಾನ್ಯವಾಗಿ ಇಷ್ಟು ವಿವರಗಳಿರುತ್ತವೆ: ಲೇಖಕನ ಹೆಸರು, ಗ್ರಂಥದ ಹೆಸರು [ಅನುವಾದವಾಗಿದ್ದರೆ ಅನುವಾದಕನ ಹೆಸರು], ಪ್ರಕಟವಾದ ಊರು, ಪ್ರಕಾಶಕ, ಪ್ರಕಾಶನವರ್ಷ, ಪುಟಗಳು, ಗ್ರಂಥದ ಗಾತ್ರ, ಹೊದಿಕೆ [ಕಾಗದ ಅಥವಾ ರಟ್ಟು ಅಥವಾ ಕ್ಯಾಲಿಕೊ], ಬೆಲೆ, ಮತ್ತು ಗ್ರಂಥ ವಿಷಯ. ಕೆಲವು ಕಡೆ ಆ ಪುಸ್ತಕ ಯಾವ ಗ್ರಂಥ ಭಂಡಾರದಲ್ಲಿದೆ ಎಂಬುದರ ಸೂಚನೆಯೂ ಇದೆ.

ಈ ವಿವರಗಳು ಎಲ್ಲ ದಾಖಲೆಗಳಲ್ಲೂ ಇರದಿರಬಹುದು. ಲೇಖಕನ ಹೆಸರು, ಪ್ರಕಟವಾದ ವರ್ಷ, ಊರು, ಪ್ರಕಾಶನ, ಬೆಲೆ ಇವುಗಳಲ್ಲಿ ಯಾವುದಾದರೂ ಪುಸ್ತಕದ ಮೇಲೆ ನಮೂದಿತವಾಗಿರದಿದ್ದರೆ, ಅಥವಾ ಆ ಭಾಗ ಹಾಳಾಗಿ ಹೋಗಿದ್ದರೆ ಆ ವಿವರಗಳನ್ನು ಕೊಡಲು ಸಾಧ್ಯವಾಗುವುದಿಲ್ಲ ತಾನೇ ?

ಒಂದು ಮಾದರಿ ದಾಖಲೆಯನ್ನು ಕೆಳಗೆ ಕೊಟ್ಟಿದೆ. ಇದು "ಭೌತವಿಜ್ಞಾನ" ಶೀರ್ಷಿಕೆಯ ಕೆಳಗೆ 'ಸಾಮಾನ್ಯ' ಎಂಬ ಉಪಶೀರ್ಷಿಕೆಯ ಕೆಳಗೆ ಬರುತ್ತದೆ. (ಮೂಲದಲ್ಲಿ ಬೇರೆ ಬೇರೆ ಸಂಗತಿಗಳಿಗೆ ಬೇರೆ ಬೇರೆ ಗಾತ್ರದ ಅಕ್ಷರಗಳನ್ನು ಬಳಸಿದೆ.)

ಬೆಳ್ಳಾವೆ, ವೆಂಕಟನಾರಣಪ್ಪ
ಕೆಲವು ಭೌತಿಕ ವಿಜ್ಞಾನದ ವೈಚಿತ್ರ್ಯಗಳು ಸಚಿತ್ರ
ಬೆಂಗಳೂರು. ಕರ್ಣಾಟಕ ವಿಜ್ಞಾನ ಪ್ರಚಾರಣೀ ಸಮಿತಿ. 1918
ವಿಜ್ಞಾನೋಪನ್ಯಾಸಗಳು–1
ẍ × 28 20 . 5 × 13.5 ಕಾಗದ 0.50
ಆರ್ಕಮಿಡೀಸನ ಸನ್ನೆಯತತ್ತ್ವ. ಗೆಲಿಲಿಯೋನ
ಪೆಂಡುಲಂ ತತ್ತ್ವ. ನ್ಯೂಟನ್ನನ ಸ್ಥಿತ್ಯಂತತ್ತ್ವ.
ವಾಲ್ಟಾನ ಬ್ಯಾಟರಿ ಸಂಶೋಧನೆ ಇತ್ಯಾದಿ
೧೪೬ ಪರಿಷತ್ತು

೧೪೬ ಎಂಬುದು ದಾಖಲೆಯ ಕ್ರಮಸಂಖ್ಯೆಯನ್ನೂ, 'ಪರಿಷತ್ತು' ಎಂಬುದು ಈ ಪುಸ್ತಕ ಪರಿಷತ್ತಿನ ಪುಸ್ತಕಭಂಡಾರದಲ್ಲಿದೆಯೆಂಬುದನ್ನೂ ಸೂಚಿಸುತ್ತದೆ. [ಬೆಲೆ 0.50 ಎಂಬುದು ನ್ಯಾಯವಾಗಿ 0–8–0 ಎಂದಿರಬೇಕು. 1918 ರಲ್ಲಿ ಇನ್ನೂ ಪೈಸೆ ಬಂದಿರಲಿಲ್ಲ ತಾನೆ ?]

ಕೆಲವು ಕಡೆ ಲೇಖಕರ ಹೆಸರಿನ ಮುಂದೆ ಅವರ ಹುಟ್ಟುವರ್ಷ, ಸತ್ತಿದ್ದರೆ ಆ ವರ್ಷ ಎರಡನ್ನೂ ಕೊಡುವುದುಂಟು. 328ನೇ ದಾಖಲೆಯಲ್ಲಿ ಒಬ್ಬ ಲೇಖಕರ ಹೆಸರಿನ ಮುಂದೆ 1850–ಎಂದಿಷ್ಟುಮಾತ್ರ ಕೊಟ್ಟಿದೆ. ಆ ವ್ಯಕ್ತಿ ಸತ್ತುಹೋಗಿದ್ದು, ಅದರ ತೇದಿ ತಿಳಿದಿಲ್ಲವೆಂದು ಅರ್ಥಮಾಡಬೇಕೇ, ಅಥವಾ ಬದುಕಿರುವನೆಂದು ಅರ್ಥ ಮಾಡಿಕೊಳ್ಳಬೇಕೇ ತಿಳಿಯದು. ತಮಗೆ ತಿಳಿದು ಬಂದ ಕಡೆ ಅಂತಹ ವಿವರ ಕೊಟ್ಟಿರುವುದಾಗಿ ಸಂಪಾದಕರು ಹೇಳಿಕೊಂಡಿದ್ದಾರೆ. ಆರ್. ನರಸಿಂಹಾಚಾರ್ಯ ರಂಥ ಸುಪ್ರಸಿದ್ಧರ ತೇದಿಗಳನ್ನು ಸಂಗ್ರಹಿಸುವುದು ಕಷ್ಟವಾಗುತ್ತಿರಲಿಲ್ಲ. ಬದುಕಿರುವವರ ಹುಟ್ಟು ತೇದಿಯನ್ನು ಕೊಟ್ಟು ಅದರ ಮುಂದೆ ಅಡ್ಡಗೀಟು ಹಾಕಿ ಖಾಲಿ ಜಾಗ ಬಿಡುವುದು ನನಗೆ ಎಷ್ಟೋ ಸಾರಿ ಅಮಂಗಳಕರವಾಗಿ ತೋರುತ್ತದೆ. ಒಟ್ಟಿನಲ್ಲಿ ಈ ತೇದಿ ವಿವರವೇ ಇಲ್ಲಿ ಅನಗತ್ಯವಾಗಿತ್ತೇನೋ ಎಂದು ಅನ್ನಿಸುತ್ತದೆ. ಈ ಗ್ರಂಥ ಸೂಚಿಯಲ್ಲಿ ನಮಗೆ ತಿಳಿದಂತೆಯೇ ಕೆಲವು ಗ್ರಂಥಗಳ ಹೆಸರು ಕೈಬಿಟ್ಟು ಹೋಗಿದೆ.

ಉದಾಹರಣೆಗೆ ಮದ್ರಾಸು ವಿಶ್ವವಿದ್ಯಾನಿಲಯದಿಂದ 1950 ರಲ್ಲಿ ಪ್ರಕಟವಾದ "ಅಸ್ತ್ರ ಶಾಸ್ತ್ರಂ" ಇಲ್ಲಿ ಉಲ್ಲೇಖವಾಗಿಲ್ಲ. ಪ್ರಕೃತಿ ಚಿಕಿತ್ಸೆಗೆ ಸಂಬಂಧಿಸಿದ ಗಾಂಧೀಜಿಯವರ ಪುಟ್ಟ ಪುಸ್ತಕವೊಂದು ಇಲ್ಲಿ ಉಲ್ಲೇಖವಾಗಬಹುದಿತ್ತು. ಗ್ರಂಥ ಅಚ್ಚಿನ ತಪ್ಪು-ಗಳಿಂದ ಬಹುಮಟ್ಟಿಗೆ ವಿಮುಕ್ತವಾಗಿದ್ದರೂ, ಅಲ್ಲಲ್ಲಿ ಕೆಲವು ಉಳಿದಿವೆ: ತಿದ್ದುಪಡಿಯಲ್ಲೂ ಇವು ಬಂದಿಲ್ಲ.

[ಉದಾ: ಪುಟ. 30- 'ಥಾಸ್ಕರಾಚಾರ್ಯ'. ಪುಟ. 23- ಶಬ್ಬ].

ಆದರೆ ಇವೆಲ್ಲ ಬಹಳ ಸಣ್ಣ ಸಂಗತಿಗಳು; ಮತ್ತು ಇಂತಹ ಕೆಲಸಗಳಲ್ಲಿ ತಲೆದೋರಬಹುದಾದ ಅನಿವಾರ್ಯ ಕೊರತೆಗಳು. ಅವುಗಳನ್ನು ಬಿಟ್ಟು ಗ್ರಂಥದ ಉಪಯುಕ್ತತೆಯನ್ನು ನೋಡುವುದಾದರೆ, ಇದೊಂದು ಅಪೂರ್ವ ಯೋಜನೆ. ನಾವು ಕಂಡರಿಯದ, ಕೇಳರಿಯದ ನೂರಾರು ಗ್ರಂಥಗಳು ಇಲ್ಲಿವೆ. ಎಂ. ಆರ್. ಶ್ರೀನಿವಾಸಮೂರ್ತಿಯವರು ವಿದ್ಯಾರ್ಥಿಗಳಿಗಾಗಿ "ಅಯಸ್ಕಾಂತತೆ ಮತ್ತು ವಿದ್ಯುಚ್ಛಕ್ತಿ" ಎಂಬ ಪುಸ್ತಕವನ್ನು 1933 ರಲ್ಲಿ ಪ್ರಕಟಿಸಿದರೆಂಬ ಸಂಗತಿ. ಆರ್. ನರಸಿಂಹಾಚಾರ್ಯರು ವಿದ್ಯಾರ್ಥಿಗಳಿಗಾಗಿ "ಆಕೃತಿ ಮತ್ತು ಬಣ್ಣ ಇವನ್ನು ಕುರಿತು ಸರಳ ಪಾಠಗಳು" ಎಂಬ ಪುಸ್ತಕವನ್ನು ಬರೆದರೆಂಬ ಸಂಗತಿ ಎಷ್ಟು ಜನಕ್ಕೆ ತಿಳಿದಿದೆ? ವಿಜ್ಞಾನದ ವಿದ್ಯಾರ್ಥಿಗಳು ಇಂತಹ ನೂರಾರು ಹೆಸರುಗಳನ್ನು ಇಲ್ಲಿ ನೋಡಬಹುದು. ಇಲ್ಲಿ ಬಂದಿರತಕ್ಕ ಗ್ರಂಥಗಳೆಲ್ಲವೂ ಶ್ರೇಷ್ಠ, ಉಪಯುಕ್ತ ಎಂದು ಯಾರೂ ಭಾವಿಸುವುದಿಲ್ಲ. ಆದರೆ ಆ ಎಲ್ಲ ಗ್ರಂಥಗಳಲ್ಲದಿದ್ದರೂ ಅವುಗಳ ಹೆಸರಾದರೂ ಮುಂದಿನ ಪೀಳಿಗೆಯವರಿಗೆ ಉಳಿಯುವುದು ಅಗತ್ಯ.

ಈ ಗ್ರಂಥಸೂಚಿಯಲ್ಲಿ 1449 ಗ್ರಂಥಗಳು ಪಟ್ಟಿ ಆಗಿವೆ. ಈ ಸಂಖ್ಯೆ ಹೆಮ್ಮೆಪಡಬೇಕಾದ್ದೇ? ಗ್ರಂಥದ ಆರಂಭದ 'ಮೊದಲ ಮಾತಿ'ನಲ್ಲಿ ಸಂಪಾದಕರೊಬ್ಬರು "'ಕನ್ನಡದಲ್ಲೇನಿದೆ? ಕನ್ನಡದಲ್ಲಿ ಶಬ್ದ ಸಂಪತ್ತಿದೆಯೆ? ವೈಜ್ಞಾನಿಕ ಗ್ರಂಥಗಳಿವೆಯೆ? ಕನ್ನಡ ಶಿಕ್ಷಣ ಮಾಧ್ಯಮವಾಗಲಿಕ್ಕೆ ಯೋಗ್ಯವಾಗಿದೆಯೆ' – ಹೀಗೆ ಅಪ್ರಬುದ್ಧರೂ ಪ್ರಗತಿ ವಿರೋಧಿಗಳೂ ಸಂದೇಹವಾದಿಗಳೂ ಮೇಲಿಂದ ಮೇಲೆ ಪ್ರಶ್ನೆ ಹಾಕುತ್ತಾರೆ. ಇಂಥ ಸಂಶಯ ಅಥವಾ ಪ್ರಗತಿ ವಿರೋಧ ಮನೋಭಾವನೆ ಚಟವಾಗಿ ಮಾನಸಿಕ ರೋಗವಾಗಿ ಬೆಳೆದಂತೆ ಕಾಣುತ್ತದೆ. ಕನ್ನಡವೆಂದರೆ ಮೂಗು ಮುರಿಯುವ ಜನ ಕನ್ನಡದಲ್ಲೇನಿದೆಯೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆಯೆ? ಈ ದಿಶೆಯಲ್ಲಿ ಏನೂ ಪ್ರಯತ್ನ ನಡೆಸದೆಯೆ ಅಪ್ರಗಲ್ಭರಂತೆ ಬೊಬ್ಬೆ ಹಾಕುತ್ತಾರೆ. ಅಂಥವರಿಗೆ ಈ ಗ್ರಂಥಸೂಚಿ ಎಚ್ಚರಿಕೆಯ ಚಾವುಟವಾಗುತ್ತದೆ" ಎಂದೂ, ಇದು "...ಕನ್ನಡದ ಸಿರಿಯ ಕೋಶಾಗುತ್ತದೆ" ಎಂದೂ ಹೇಳಿದ್ದಾರೆ. ಈ ಆವೇಶದ ಮಾತುಗಳ ಹಿಂದಿನ ಭಾವನೆ ಮೆಚ್ಚತಕ್ಕದ್ದಾದರೂ, ವೈಜ್ಞಾನಿಕ ಗ್ರಂಥಗಳ ಸಂಖ್ಯೆ, – ಯೋಗ್ಯತೆಯ ಮಾತನ್ನು ವಿಜ್ಞಾನಿಗಳು ಹೇಳಬೇಕು – ಅಂತಹ ಹೆಮ್ಮೆ

ಪಡತಕ್ಕದ್ದೇನೂ ಅಲ್ಲ. ಇಂತಹ ಗ್ರಂಥಸೂಚಿಗಳು ಇನ್ನೂ ಹೆಚ್ಚಿನ ಕೆಲಸ ನಡೆಯುವುದಕ್ಕೆ ಪ್ರಚೋದನೆ ಆಗಬೇಕೇ ಹೊರತು, ಹೆಮ್ಮೆಪಡುವುದಕ್ಕಲ್ಲ.

"ಗ್ರಂಥ ಸೂಚಿ"ಯಂತಹ ಗ್ರಂಥಕ್ಕೆ ಉಚಿತವಾದ ಗಂಭೀರ ಮುನ್ನುಡಿ ಬರೆದಿರುವ ಸಂಪಾದಕರು 'ಗ್ರಂಥ ಸೂಚಿ' ಮಾತಿನ ವಿವರಣೆ, ಕನ್ನಡ ಸಾಹಿತ್ಯದ ಸಂಕ್ಷಿಪ್ತ ಇತಿಹಾಸ, ನವೋದಯ ಕಾಲಕ್ಕಿಂತ ಹಿಂದಿನ ಹತ್ತೊಂಬತ್ತನೇ ಶತಮಾನದ ಕನ್ನಡದ ದುಸ್ಥಿತಿ, ಆಗಿನ ಪಾದ್ರಿಗಳು ಮತ್ತು ಮುದ್ರಣಾಲಯಗಳ ಪಾತ್ರ ಇವುಗಳನ್ನು ನಿರೂಪಿಸಿ ಕನ್ನಡದಲ್ಲಿ ಬಂದ ಮೊದಮೊದಲ ಪಠ್ಯ ಗ್ರಂಥಗಳ ಪರಿಚಯ ಮಾಡಿ ಕೊಟ್ಟಿದ್ದಾರೆ. ಅವುಗಳನ್ನು ಈಗಿನ ಪಠ್ಯಗ್ರಂಥ ರಚನಕಾರರೂ 'ಅನುಕರಣ ಯೋಗ್ಯ'ವೇ ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ ಎಂದಿದ್ದಾರೆ. ಗ್ರಂಥ ಸೂಚಿಯನ್ನು ತಯಾರಿಸಲು ಸಹಾಯಕ ಸಂಶೋಧಕರು ನಾಡಿನ ಬೇರೆ ಬೇರೆ ಸಾರ್ವಜನಿಕ ಮತ್ತು ಖಾಸಗಿ ಗ್ರಂಥ ಭಂಡಾರಗಳಿಗೆ ಭೇಟಿಕೊಟ್ಟದ್ದು, ಅವರು ಎದುರಿಸಿದ ಸಮಸ್ಯೆಗಳು ಇತ್ಯಾದಿಗಳನ್ನು ಚರ್ಚಿಸಿದ್ದಾರೆ. ಲೇಖಕರ ಹೆಸರನ್ನು ಹೇಗೆ ಕೊಡಬೇಕು ಎಂಬಂತಹ ವಿಷಯಕ್ಕೂ ಗಮನ ಕೊಟ್ಟಿದ್ದಾರೆ. ಪುಸ್ತಕದಿಂದ ಅದಕ್ಕೆ ಸಂಬಂಧಿಸಿದ ವಿವರ ಸಿಗದಿದ್ದರೆ ಬೇರೆಡೆಯಿಂದ ಸಂಗ್ರಹಿಸಲು ಪ್ರಯತ್ನಿಸಿದ್ದಾರೆ. ಎಂದರೆ. ಈ ಗ್ರಂಥ ಸೂಚಿಯ ಹಿಂದೆ ಅನೇಕರ ಆಲೋಚನೆ, ಪರಿಶ್ರಮಗಳಿವೆ ಎಂಬುದು ಸ್ಪಷ್ಟವಾಗಿದೆ. ಇಷ್ಟಾದರೂ "ಕೆಲಸ ಸಮರ್ಪಕವಾಯಿತೆಂದು ಹೇಳಲು ಸಾಧ್ಯವಿಲ್ಲ" ಎಂಬ ಮಾತು ಸಂಪಾದಕರ ಪ್ರಾಮಾಣಿಕತೆಯನ್ನು ಹೇಳುತ್ತದೆ. ಇದು ಸರಿಯಾದ ನಿಲುವು, ಸಂಪಾದಕರ ದೃಷ್ಟಿಯಿಂದ. ಆದರೆ ವಾಚಕರ ದೃಷ್ಟಿಯಿಂದ ಹೇಳುವುದಾದರೆ ಈ ಅಪೂರ್ವ ಕಾರ್ಯವನ್ನು ಇಷ್ಟೊಂದು ಶ್ರದ್ಧೆಯಿಂದ, ವೈಜ್ಞಾನಿಕವಾಗಿ, ಕೈಗೆತ್ತಿಕೊಂಡು ಮುಗಿಸಿರುವುದು ನಿಜಕ್ಕೂ ಅಭಿನಂದನೀಯವಾಗಿದೆ.

ಗ್ರಂಥದ ಕೊನೆಯಲ್ಲಿನ ಅನುಬಂಧಗಳು [ಗ್ರಂಥಕರ್ತೃ ಸೂಚಿ, ಕೃತಿಸೂಚಿ ಇತ್ಯಾದಿ] ಓದುಗರಿಗೆ ಅತ್ಯಂತ ಉಪಯುಕ್ತವಾಗಿವೆ. ಪುಸ್ತಕ ಆಕರ್ಷಕವಾಗಿಯೂ ಹೊರಬಂದಿದೆ. ಯಾವುದೇ ವಿಶ್ವವಿದ್ಯಾನಿಲಯ ಹೆಮ್ಮೆಪಟ್ಟುಕೊಳ್ಳಬೇಕಾದ ಗ್ರಂಥವಿದು.

ಮುಂದಿನ ಐದು ಸಂಚಿಕೆಗಳಲ್ಲಿ ಕೆಳಕಂಡ ವಿಷಯಗಳಿರುತ್ತವೆ ಎಂದು ಒಂದು ಪ್ರಕಟಣೆ ತಿಳಿಸುತ್ತದೆ.

2 ನೆಯ ಸಂಪುಟ : ಸಾಮಾನ್ಯ ವಿಷಯಗಳು, ಉಪಯುಕ್ತ ಕಲೆ, ಅಭಿನಂದನ ಮತ್ತು ಸ್ಮಾರಕ ಸಂಪುಟಗಳು ಮತ್ತು ಸಾಹಿತ್ಯದ ಸಾಮಾನ್ಯ ವಿಷಯಗಳು.

3, 4 ನೆಯ ಸಂಪುಟಗಳು : ಸಾಹಿತ್ಯ ಕೃತಿಗಳು
5 ನೆಯಸಂಪುಟ : ಮಾನವಿಕ ಶಾಸ್ತ್ರಗಳು
6 ನೆಯಸಂಪುಟ : ತತ್ವಶಾಸ್ತ್ರ ಮತ್ತು ಧರ್ಮಗಳು

ಈ ಸಂಪುಟಗಳು ಬೇಗ ಬರಲಿ ಎಂದು ಆಶಿಸುತ್ತೇವೆ.

ಸೀಮಾಬದ್ಧ

ಜಯಸುದರ್ಶನ

ಸೀಮದಲ್ಲೇ ಕುಡಿಯೊಡೆದ ಅಸೀಮದ ಕಲ್ಪನೆ ಕೃತಿಯ ದಾಟುವ.
ಮರೆಯಾಗಿ ದಿಗಂತದಾಚೆ ಚಾಚುವ ಸುಖ. ಮನಸ್ಸು ಪ್ರಜ್ಞೆಯ
ಊಳಿಗಕ್ಕಿಳಿದ ಊರ್ಧ್ವ ಮುಖ ಇರವು, ದ್ವಂದ್ವವಿರದ ಏಕವಚನ ಕ್ರಿಯೆ
ಧ್ವನಿಗೂ ಪ್ರತಿಧ್ವನಿಗೂ ಇರದ ಕಾಲನವಕಾಶ.
ಸೀಮೆ ತನ್ನ ಮಿತಿಗೆ ಬದ್ಧ
ಕಣ್ಣುಮುಚ್ಚಿ ಬೆಳಕನ್ನು ಪಡೆದವನೊಬ್ಬನೇ ಬುದ್ಧ.
ಪ್ರಸ್ತುತ ಕಲ್ಪನೆಗೂ ಮಿಗಿಲಾದ ಕನಸುಗಳ ಸುಖ
ಅಹಹ. ಸ್ವಪ್ನ ಸ್ಖಲನಕ್ಕೆ ಹುಟ್ಟಿ, ಹಿಗ್ಗುವ ಬ್ರಹ್ಮಾಂಡ.

ಅಹ. ಸೀಮೆ ತೆರೆದ ಮಿತಿಯಲ್ಲಿ ಪ್ರಜ್ಞೆ ಅನುಭವವ ಹಡೆಯುವುದ ಬಲ್ಲೆಯ
ನಿಸ್ಸೀಮ ಕನಸುಗಳ ಬಲೆ ಹೆಣೆದು ಜೇಡ ಹೆಜ್ಜೆ ತಪ್ಪಿ ತನ್ನ ಮಾಟಕ್ಕೆ ತಾನೆ
ಸಿಕ್ಕಿ ಬೀಳುವ ಸುಖಾವಹ ನಿರ್ಬಂಧದ ಪರಿ ಬಲ್ಲೆಯ
ಬಂಧನವೆ ಬಿಡುಗಡೆಯೆಂದು ದಿವಸಗಳ ಕೂಡಿ ಹಾಕಿ,“ಬೆಳೆದು ಬಿಟ್ಟೆ” ಎನುವ
ಹಿರಿತನದ ಹಿಗ್ಗು ಬಲ್ಲೆಯ?
ನೀಲಿಯಾಚೆಗೆ ಅಂಧಕಾರದಲಿ ಬೆಳಕನ್ನು ತಡಕಿದ್ದೂ ಧವಳ ಗಿರಿ
ಕಣಿವೆಗೆ ಕಂಡದ್ದು ಮಂಜಿನಲಿ ಮರೆಯಾದ ತುತ್ತತುದಿ
ಇರವು ಇತ್ತೋ ಇಲ್ಲವೋ ಎಂಬ ಸಂದಿಗ್ಧ ಸೀಮೆಯ ಪರಿಧಿ.

ಕಣ್ಣು ಹಾಯಿಸಿದಲ್ಲೆಲ್ಲ ದಿಗಂತವೇ ಅಡ್ಡ
ಸೀಮೆಗೆ ಸೀಮೆಯೇ ಸಾಟಿ, ಅಸೀಮಕ್ಕಿರಲಿಲ್ಲ ಪಾಪ, ಹೋಲಿಕೆಯ ಅವಕಾಶ.
ಇಲ್ಲಿ ಯಾವುದೂ ಅಲ್ಲ ಸ್ವತಂತ್ರ
ಅಪೇಕ್ಷೆಗಳ ಸಾಪೇಕ್ಷ ಗತಿ–ಸ್ಥಿತಿ
ಹತ್ತಿಕ್ಕಿದವಕಾಶಗಳ ಕಾಣ್ಕೆಗೆ ಸುಳ್ಳಿನ ಪಟ್ಟಿ
ಗತವೈಭವ ಮೈಯುಂಡ ಆವೇಶಕ್ಕೆ ಸಮಯ ಎಣಿಕೆ ತಪ್ಪಿದ ಗಣಿತ.
ನಾಗರಿಕ ಸೀಮಾಬದ್ಧ ಒಳಗೆ ಸೆಲೆಯೊಡೆವ, ಸ್ವಕೀಯವನ್ನೇ ಬಗೆದು ತಿನ್ನುವ
ಮಾನವ ಪ್ರಾಣಿ ವಿಶೇಷ ವಿಸ್ಮಯಕೆ;
ಮರಹತ್ತುವ ಕೀರ್ತಿ, ಇಣಚಿಗಳ ಮೇಲೆ ಹತ್ತಿಕ್ಕಲಾಗದ ಮಾತ್ಸರ್ಯ,

ವಿಕಾಸವಾದಕ್ಕಿರಲಿ ಧಿಕ್ಕಾರ ಇರಲಿಲ್ಲ ಅದರ ಅಗತ್ಯ
ಭೂತವೊಂದೇ ವರ್ತಮಾನದ ಸತ್ಯ.
ನಡೆದು ಬಂದ ದಾರಿಯಲಿ ಹೆಕ್ಕಿದ ಶಬ್ದಗಳೆಲ್ಲ ಮೂಡಿಸದ ಕಾವ್ಯ ಕಾಕುಳಲಿ
ಅದರಾಚೆ ಕುಲುಕುಲು ನಗೆಯ ಮಿಂಚಿಸುವ ಮೂಡದ ಮುಗ್ಧ ಕವಿತೆ.

ಇದು ಪರಿಸ್ಥಿತಿಯೆ ಸ್ಥಿತಿಯಾದ ಹೇಡಿತನದ ತೆವಲು
ತನ್ನಿಂದ ತಾನೆ ತಪ್ಪಿಸಿಕೊಳ್ಳಲೆತ್ನಿಸುವ ಕಾಲಸುದ್ದಗಾಲಿನ ಗೊಂದಲದಾಟ
ಗತಿಯಲ್ಲಿ ಸಾರ್ಥಕ್ಯ ಕಾಣುವ ಆತ್ಮವಂಚನೆಯ ಬಲುಹಿತದ ಅನುಭವ.
ಬದುಕು ಮರೆಯುವ ವಸ್ತುಸ್ಥಿತಿಗೆ ಸ್ವಪ್ನಲೋಕದಲಿ ಭೂತವಾಗಲೆವ ನಿರಂತರ ಶಾಪ.
ಬೀಜದಲ್ಲಿ ಮೊಳಕೆಯೇ ಇರದೆ ಮಣ್ಣಿನ ಬೆನ್ನು ಹತ್ತುವ ಅಪಮಾನ.
ತೀರದಾಸೆಗಳೆ ಹೆಪ್ಪುಗಟ್ಟಿರುವ ಸೀಮ
ಅಸೀಮದಲ್ಲಿ ಮುಳುಗಿದ್ದೆ ತೇಲುವ ಕೃತಕ ಇರವು.
ತನ್ನನ್ನೆ ಅಲ್ಲಗಳೆವ ಬದುಕಿನ ಸುಖಕ್ಕೆ ಬದ್ಧ.
ಗೋರಿಗಳಲ್ಲಿ ನಿಟ್ಟುಸಿರಿಡುವ ಕಾಲ ಮಣ್ಣಲ್ಲಿ ಕರಗಿ, ನೆಲಕ್ಕೆ ಬಂತು ಮುದಿತನ.

ಸುಖವೆ?
ಇಂದ್ರಿಯಜನ್ಯ. ಪಡೆದದ್ದಷ್ಟೆ ಬಂತು.
ಆಕಾಶವನ್ನೇ ರತಿಗೆಳೆವ ಅತೃಪ್ತ ಕಾಮದ ಸ್ವರತಿ
ಅಸೀಮದಾಸೆಗೆ ತನ್ನ ಸತ್ಯದ ಹೊಸಲಿನಲಿ ತಲೆಯೊಡೆದುಕೊಂಡು
ಆತ್ಮಹತ್ಯೆಗೆಳೆಸುವ ಸೀಮೆಯ ಸಾವು ಬದುಕಿಗೆ ಗುಲಾಮ
ನಿಷ್ಕಳವೆ ಮೈಯಾದ ಬೆಳಕಿಗೆ ಕಣ್ಣುಮುಚ್ಚಿ ಕಾಣ್ಕೆಯ ಬಯಸುವ ಶೂನ್ಯ ಪ್ರಜ್ಞೆ.
ಸೀಮದ, ಅಸೀಮದ ನಡುವೆ ಸೇತುವೆಯಾಗುವ ಕೃತಕ ಇರವಿಗೆ ಸೋತ ಬದುಕು
ಇಲ್ಲಿ ಸಲ್ಲದ. ಅಲ್ಲಿಯೂ ಇಲ್ಲದ ಪ್ರಜ್ಞಾಶೂನ್ಯ.
ಇದರಾಚೆ, ಸುಳ್ಳು. ಸತ್ಯಗಳ ಗೊಂದಲದಾಚೆ. ಇದ್ದೀತೋ ಏನೋ ಅಸೀಮ
ತನ್ನತನದ ಪ್ರಜ್ಞೆಯ ಸೀಮೆ ದಾಟಿದ ಅದರಿರವು ಅದಕ್ಕೇ ಅಪರಿಚಿತವಾದ ಹೊಸತನ.
ಸ್ವಂತಕ್ಕೇ ಇರದ ಅದನ್ನು ಕಂಡವರು ಯಾರು?
ಸೀಮದ್ದು ದಂಡೆಯು. ದಿಗಂತದ ನಡುವೆ ಹೊಯ್ದಾಡುವ ಕಡಲಿನತೃಪ್ತಿ.

ಅಸೀಮಕ್ಕೆ ಇರಲಿಲ್ಲ ಅರಿವು. ಇದ್ದಾಗ ಅದು ಸೀಮೆಯ ಭ್ರಮೆ.
ಇಂಥ ಅನುಮಾನಗಳ, ಸಂಭಾವ್ಯಗಳ ತೊರೆದು ಬೆಳಕಿಗೂ ಕತ್ತಲಿಗೂ
ಒಮ್ಮೆಲೆ ಸುಳ್ಳು ಸಾಕ್ಷಿ ಹೇಳುವ ಸಂಜೆ ನೀನು—ಸೀಮಾಬದ್ಧ.
ಮತ್ತು ನಿನ್ನ ದರ್ಶನಕೆ ಹಾಡುಹಗಲೇ ಕಣ್ಮುಚ್ಚಿ ನಕ್ಷತ್ರಲೋಕವನು ಮೀರುವ
ಬಾಲೆ ಮುಂಜಾವು ನಾನು—ನಿರ್ಬದ್ಧ.
ಒಮ್ಮೆ ಹೋದವನು ಮತ್ತೆ ಬರಲೇ ಇಲ್ಲ ಬುದ್ಧ.

ಸಂಸ್ಕೃತಸಾಹಿತ್ಯ ವಿಮರ್ಶೆ ಮತ್ತು ನವ್ಯ ವಿಮರ್ಶೆ *

ಎನ್. ಬಾಲಸುಬ್ರಹ್ಮಣ್ಯಂ

ತೌಲನಿಕ ಅಧ್ಯಯನ ಕ್ಷೇತ್ರದಲ್ಲಿ, ಸಂಸ್ಕೃತಭಾಷೆ ಮತ್ತು ತತ್ತ್ವಶಾಸ್ತ್ರಗಳಿಗೆ ದೊರಕಿದಷ್ಟು ಮನ್ನಣೆ ಸಂಸ್ಕೃತ ಕಾವ್ಯಮೀಮಾಂಸೆಗೆ ಸಿಕ್ಕಿಲ್ಲ. ಪ್ರಮುಖ ಕೃತಿಗಳ ಒಳ್ಳೆಯ ಅನುವಾದಗಳು ಮತ್ತು ಎರಡೂ ಕ್ಷೇತ್ರಗಳಲ್ಲಿ ಸಮಾನ ಪಾಂಡಿತ್ಯವುಳ್ಳವರು ಇರದಿರುವುದು ಇದಕ್ಕೆ ಕಾರಣವಾಗಿರಬಹುದು. ಅಲ್ಲದೆ, ಸಂಸ್ಕೃತ ಕಾವ್ಯ ಮೀಮಾಂಸೆ ಯೆಂದರೆ ಶುಷ್ಕವ್ಯಾಖ್ಯಾನ, ಅಲಂಕಾರಗಳ ಕೊನೆಮೊದಲಿಲ್ಲದ ವರ್ಗೀಕರಣ ಅಥವಾ ನೀರಸ ಶಿಕ್ಷಾಸೂತ್ರಗಳ ಸಂಗ್ರಹ ಎಂದು ವ್ಯಾಪಕವಾಗಿ ಗ್ರಹಿಸಿರುವ ತಪ್ಪು ಕಲ್ಪನೆ ಈ ಸ್ಥಿತಿಗೆ ಮತ್ತಷ್ಟು ಪೂರಕವಾಗಿರಬಹುದು ಆದರೆ ಕೇವಲ ಸ್ಥೂಲವಾದ ಅಧ್ಯಯನ ಕೂಡ. ಸಂಸ್ಕೃತ ಕಾವ್ಯಮೀಮಾಂಸಕರಿಗೆ. ಸಾಹಿತ್ಯದ ಮೂಲಭೂತ ಸಮಸ್ಯೆಗಳ ಪೂರ್ಣ ಅರಿವಿತ್ತೆಂದೂ. ಅವರ ನಿಲುವುಗಳನ್ನು ಪಾಶ್ಚಾತ್ಯ ವಿಮರ್ಶಕರ ನಿಲವುಗಳೊಡನೆ ಹೋಲಿಸುವುದು ಲಾಭದಾಯಕವಾಗಬಹುದು ಎಂದೂ ತೋರಿಸುತ್ತದೆ. ತೌಲನಿಕ ವಿವೇಚನೆಗಳು ಫಲನೀಡಬಲ್ಲ ಕ್ಷೇತ್ರಗಳಲ್ಲಿ ಕೆಲವು: ಅರಿಸ್ಟಾಟಲ್ ಮತ್ತು ಭರತ ಇವರಿಬ್ಬರೂ ನಾಟಕದ ರಚನೆಯ ಬಗ್ಗೆ ನಡೆಸುವ ವಿಶ್ಲೇಷಣೆಗಳು; ರಸಾನುಭವದ ಸ್ವರೂಪ; ಪ್ರತಿಭೆಯಬಗ್ಗೆ ಆನಂದವರ್ಧನ. ಕಾಂಟ್ ಮತ್ತು ಕೋಲ್‌ರಿಜ್‌ರು ಬೆಳೆಸಿದ ವಾದಗಳು: ಹೊರೇಸ್. ಕ್ಷೇಮೇಂದ್ರ ಮತ್ತು ರಾಜಶೇಖರರಲ್ಲಿ ಕಾಣುವ ಸಾಮಾಜಿಕ ಮತ್ತು ಸಾಹಿತ್ಯಿಕ ಔಚಿತ್ಯದ ಸಿದ್ಧಾಂತಗಳು: ಡೆಮಟ್ರಿಸ್. ಡಿಯೋನಿಸಿಸ್. ಸಿಸೆರೋ, ಕ್ವಿಂಟಿಲೀನ್ ಮತ್ತು ಬೇಜ್‌ಹಾಟ್ ಅಲ್ಲಿ, ಮತ್ತು ವಾಮನ, ದಂಡಿ. ರುದ್ರಟರು ಇಲ್ಲಿ ನಿರೂಪಿಸಿದ ಸಾಹಿತ್ಯದ ಶೈಲಿಗಳ ವರ್ಗೀಕರಣ ವಿಧಾನ: ಪಾಶ್ಚಾತ್ಯ ಅಲಂಕಾರಶಾಸ್ತ್ರ, ಭಾಮಹ, ಕುಂತಕ ಮತ್ತಿತರ ಆಲಂಕಾರಿಕರುಗಳಲ್ಲಿ ಕಂಡುಬರುವ ಅಲಂಕಾರವನ್ನು ಕುರಿತ ಕಲ್ಪನೆಗಳು: ಕಾವ್ಯದಲ್ಲಿ ಭಾಷೆಯ ಅರ್ಥ ಅಥವಾ ವೃತ್ತಿಯ ಬಗ್ಗೆ, ಆನಂದ ವರ್ಧನನ ವಿಶ್ಲೇಷಣೆ ಮತ್ತು ಅಮೆರಿಕಾದ ನವ್ಯ ವಿಮರ್ಶಕರ ಮತ್ತು ರಿಚರ್ಡ್ಸ್, ಎಂಪ್ಸನ್ ಮೊದಲಾದ ಇಂಗ್ಲಿಷ್ ವಿಮರ್ಶಕರ ವಿಶ್ಲೇಷಣೆಗಳು: ಕಾವ್ಯದ ಮೂಲಭೂತ ಸಮಸ್ಯೆಯಾಗಿರುವ ರೂಪಕದ ವಿಷಯವಾಗಿ ಆಲಂಕಾರಿಕರ ವಿಮರ್ಶೆಯನ್ನು ರಿಚರ್ಡ್ಸ್, ಮಿಡಲ್‌ಟನ್ ಮರ್ರಿ. ಹರ್ಬರ್ಟ್ ರೀಡ್. ವಿಲಿಯಂ ಎಂಪ್ಸನ್. ಕ್ಲಿಯಾಂತ್ ಬ್ರೂಕ್ಸ್ ಮತ್ತು ಫಿಲಿಪ್‌ವಾಲ್ ರೈಟ್‌ರವರ ಇಂತಹುದೇ ಪ್ರಯತ್ನಗಳೊಡನೆ ಹೋಲಿಸಬಹುದು.

---

* ಪ್ರಥಮ ವಿಶ್ವ ಸಂಸ್ಕೃತ ಪರಿಷತ್ (ನವದೆಹಲಿ. 1972) ನಲ್ಲಿ ಮಂಡಿಸಿದ ಪ್ರಬಂಧ

ಆಧುನಿಕ ಶೈಲಿಶಾಸ್ತ್ರದ ದೃಷ್ಟಿಯಿಂದ ಶಬ್ದಾಲಂಕಾರಗಳನ್ನು ಹೊಸದಾಗಿ ಪರೀಕ್ಷಿಸಬಹುದಾಗಿದೆ. ಅಂತಹ ಅಭ್ಯಾಸವೊಂದು ಕೇವಲ ಪ್ರಾಕ್ತನಾಸಕ್ತಿಯಾಗಿ ಅಥವಾ ಬೌದ್ಧಿಕ ವ್ಯಾಯಾಮವಾಗಿ ಉಳಿಯದೆ ಸಮಕಾಲೀನ ವಿಮರ್ಶಾ ಸಿದ್ಧಾಂತಕ್ಕೆ ಅರ್ಥಪೂರ್ಣವಾಗುತ್ತದೆ ಮತ್ತು ವಿಮರ್ಶಾ ಪ್ರಕ್ರಿಯೆಗೆ ಬೆಲೆಯುಳ್ಳ ಕೊಡುಗೆಯನ್ನು ನೀಡಬಲ್ಲುದೆಂಬುದನ್ನು ಸಂಸ್ಕೃತ ಆಲಂಕಾರಿಕರು ಮತ್ತು ಇಪ್ಪತ್ತನೆಯ ಶತಮಾನದ ಅತ್ಯಂತ ಪ್ರಭಾವಶಾಲಿ ಮತ್ತು ಪ್ರಾಚುರ್ಯವನ್ನುಳ್ಳ ವಿಮರ್ಶಾ ಪ್ರಸ್ಥಾನವೆಂದು ಹೇಳಲಾದ 'ನವ್ಯ ವಿಮರ್ಶಕರು' ಇವರ ಈ ತೌಲನಿಕ ಅಧ್ಯಯನವು ತೋರಿಸಲು ಯತ್ನಿಸುತ್ತದೆ.

ಜೆ. ಸಿ. ರಾನ್ಸೊಮ್, ಅಲೆನ್‌ಟೇಟ್. ಬ್ರೂಕ್ಸ್. ವಾರೆನ್, ಬ್ಲಾಕ್‌ಮರ್, ವೀಲ್‌ರೈಟ್, ವಿಂಟರ್ಸ್ ಮತ್ತು ಬರ್ಕ್ ಮುಂತಾದ ಅಮೆರಿಕನ್ ವಿಮರ್ಶಕರ ವಿಮರ್ಶಾ ಪ್ರಯತ್ನಗಳನ್ನು ನವ್ಯವಿಮರ್ಶೆ ಎನ್ನಲಾಗುತ್ತದೆ. ಇದು ಕೆಲವು ಸಂದರ್ಭದಲ್ಲಿ ಐ. ಎ. ರಿಚರ್ಡ್ಸ್. ಎಂಪ್ಸನ್ ಮತ್ತವರ ಪ್ರಸ್ಥಾನದ ಕೃತಿಗಳನ್ನು ಒಳಗೊಳ್ಳುತ್ತದೆ. "ಇದು 1920ರ ದಶಕದಲ್ಲಿ ಪ್ರಾರಂಭವಾಗಿ 1930ರ ದಶಕದಲ್ಲಿ ಬಲವಾಗಿ 1940 ಮತ್ತು 1950ರ ದಶಕದ ಪ್ರಾರಂಭದ ವೇಳೆಗೆ ಶಿಖರವನ್ನು ಮುಟ್ಟಿತು. ತನ್ನ ಬಹುಪಾಲು ಗುರಿಗಳನ್ನೂ ಸಾಧಿಸಿ ಅದು ಸದ್ಯಕ್ಕೆ. ತಾನು ಮಾರ್ಪಡಿಸಲು ಹೊರಟ ಸಂಸ್ಕೃತಿಯೊಳಗೆ ಐಕ್ಯವಾಗುವ ಎಲ್ಲ ಯಶಸ್ವಿ ಕ್ರಾಂತಿಗಳ ಹಣೆಯಬರಹವನ್ನು, ತಾತ್ಕಾಲಿಕವಾಗಿ ಅನುಭವಿಸುತ್ತಿರುವಂತೆ ಕಾಣುತ್ತಿದೆ. "ಒಮ್ಮೆ ಕ್ರಾಂತಿಕಾರಿಯಾಗಿ ಕಂಡ ಅದು ಈಗ ಒಂದು ರೂಢಿಯಾಗಿದೆ" (ಎಸ್. ಎನ್. ಗ್ರಾಬ್ಸ್ಟೈನ್ 1968). ಆಕೃತಿ ವಿಮರ್ಶೆ, ಮೂಲಸ್ವರೂಪ ವಿಮರ್ಶೆ. ಸಾಂದರ್ಭಿಕವಿಮರ್ಶೆ. ಅಂತರ್ಯನಿಷ್ಠವಿಮರ್ಶೆ, ವಿಶ್ಲೇಷಣಾತ್ಮಕವಿಮರ್ಶೆ ಎಂದೆಲ್ಲಾ ಬೇರೆಬೇರೆ ಹೆಸರುಗಳಿಂದ ಕರೆಯಲಾದ ಈ ಪ್ರಸ್ಥಾನವನ್ನು "ಇಂಗ್ಲೆಂಡ್ ಮತ್ತು ಅಮೆರಿಕಾಗಳಲ್ಲಿ ಇಪ್ಪತ್ತನೆಯ ಶತಮಾನದ ಅತ್ಯಂತ ಪ್ರಭಾವಶಾಲಿ ಮತ್ತು ಶಕ್ತಿಯುತ ವಿಮರ್ಶೆ ಚಳುವಳಿಯೆಂದು" ಹೇಳಲಾಗಿದೆ ಮತ್ತು ಅದು "ವಿಮರ್ಶೆ ಮತ್ತು ಸಾಹಿತ್ಯ ಬೋಧನೆಗಳ ಮೇಲೆ ಗಣನೀಯ ಪ್ರಭಾವ" ಬೀರಿದೆ.

ಹಿಂದಿನವರಲ್ಲಿ ಅರಿಸ್ಟಾಟಲ್, ಕಾಂಟ್ ಮತ್ತು ಕೋಲ್‌ರಿಜನಿಂದ ಮತ್ತು ಈಚಿನವರಲ್ಲಿ ಎಲಿಯಟ್ ಮತ್ತು ರಿಚರ್ಡ್ಸ್‌ನರವರಿಂದ 'ನವ್ಯವಿಮರ್ಶೆ' ತನ್ನ ಸಿದ್ಧಾಂತವನ್ನು ರೂಪಿಸಿಕೊಂಡಿದೆ. ಅರಿಸ್ಟಾಟಲನು ಸಾಹಿತ್ಯಕೃತಿಯ ರಚನೆ. ರೂಪ. ಶೈಲಿ ಮತ್ತು ಮಾನಸಿಕ ಪರಿಣಾಮಗಳಿಗೆ ನೀಡುವ ಪ್ರಾಧಾನ್ಯ. ಕಲೆಯು ಸಂಕೇತಗಳ ಮೂಲಕ ಕಾರ್ಯಮಾಡುವ ಒಂದು ಬಗೆಯ ಜ್ಞಾನ ಎನ್ನುವ ಕಾಂಟನ ನಿಲವು ಮತ್ತು ಪ್ರತಿಭೆಯು ಒಂದು ಸ್ಫುಟಗೊಳಿಸುವ ಸಂಯೋಜಿಸುವ ಶಕ್ತಿ. ಸಾಹಿತ್ಯ ಒಂದು ಬಗೆಯ ದರ್ಶನ ಎನ್ನುವ ಕೋಲ್‌ರಿಜ್‌ನ ಅಭಿಪ್ರಾಯ ಇವು ಈ ಹೊಸ ಪ್ರಸ್ಥಾನದ ತಳಹದಿಗಳು. ಸಂಪ್ರದಾಯವೆಂದರೆ ಬದಲಾಗುವ ಒಂದು ಶ್ರೇಣಿ ವ್ಯವಸ್ಥೆ: ಕವಿಯು ವ್ಯಕ್ತಿಗತ

ಸಂವೇದನೆಯಿಂದ ಕಾವ್ಯದ ಭಾವ ಭಿನ್ನ; ಕಾವ್ಯ ತನ್ನ ಅರ್ಥವನ್ನು ತಿಳಿಯಪಡಿಸಲು ಅದಕ್ಕಿರುವ ಸ್ವಸಾಮರ್ಥ್ಯ ಮತ್ತು ಈ ಕಾರಣದಿಂದ ಓದುಗನ ಗಮನ ಕಾವ್ಯವೇ ಹೊರತು ಕವಿಯಲ್ಲ ಎನ್ನುವ ಅಭಿಪ್ರಾಯಗಳು ಎಲಿಯಟ್ಟನ ಕಾಣಿಕೆಗಳು. ಸಾಹಿತ್ಯ ವೆಂದರೆ 'ಸಂಪೂರ್ಣತಮ ಉಕ್ತಿ' ಎಂಬ ಕಲ್ಪನೆ; ಗ್ರಂಥಪಾಠದ ಸೂಕ್ಷ್ಮ ವಿಶ್ಲೇಷಣೆಯನ್ನು ವಿವರಣೆ ಮತ್ತು ನಿರ್ಣಯಗಳಿಗೆ ಆಧಾರವಾಗಿ ಮಾಡುವ ವಿಧಾನ; ಕೃತಿಯ ಭಾಷೆಯತ್ತ ಗಮನವನ್ನು ಕೇಂದ್ರೀಕರಿಸುವುದು; ಇವೆಲ್ಲಾ ಮುಖ್ಯವಾಗಿ ರಿಚರ್ಡ್ಸ್‌ನ ಕೊಡುಗೆಗಳು.

ಈ ಅಭಿಪ್ರಾಯಗಳನ್ನು ಸ್ವೀಕರಿಸಿ ನವ್ಯವಿಮರ್ಶಕರು ಇವುಗಳಿಗೆ ಹೆಚ್ಚು ಆಳ ಮತ್ತು ಹೊಸ ಆಯಾಮಗಳನ್ನು ದೊರಕಿಸಿಕೊಟ್ಟರು. ತತ್ತ್ವನಿರೂಪಣೆ ಮತ್ತು ಅನ್ವಯ ವಿಧಾನಗಳಲ್ಲಿ ವೈಯಕ್ತಿಕ ವೈಲಕ್ಷಣ್ಯಗಳು ಅವಧಾರಣೆಗಳು ಇದ್ದರೂ, ಕೆಲವು ಆಲೋಚನೆ ಮತ್ತು ಪ್ರಕ್ರಿಯೆಗಳ ಇವರೆಲ್ಲರೂ ಸಮಾನವಾಗಿದ್ದಾರೆ. ಕವನ ಒಂದು ಶಾಬ್ದಿಕ ಕಲಾಕೃತಿ, ಅಂತರ್ಮುಖಿಯಾದ ಒಂದು ಭಾಷಾರಚನೆ ಮತ್ತು "ಅದನ್ನು ಬರೆದ ಭಾಷೆಯನ್ನು ಬಲ್ಲವನಿಗೆ ಅರ್ಥವಾಗಲು ಬೇಕಾದುದೆಲ್ಲವನ್ನೂ ತನ್ನಲ್ಲೇ ಒಳಗೊಂಡಿರುತ್ತದೆ ಎಂಬರ್ಥದಲ್ಲಿ ಸ್ವಯಂಪೂರ್ಣ" (ಎಲಿಸೊ ವಿವಾಸ್) ಎಂದರೆ ಅದನ್ನು ಅರ್ಥ ಮಾಡಿಕೊಳ್ಳಲು, ಬೆಲೆಕಟ್ಟಲು ಬೇಕಾದ ಸಾಮಗ್ರಿ ಮತ್ತು ಸಂಗತಿಗಳನ್ನು ತನ್ನಲ್ಲೇ ಒಳಗೊಂಡಿರುತ್ತದೆ ಎಂಬ ಇವರ ಅಭಿಪ್ರಾಯ ಅವುಗಳಲ್ಲಿ ಅತ್ಯಂತ ಮುಖ್ಯವಾದುದು. 'ಪ್ರಪಂಚವನ್ನು ಅರಿಯಲು ಇರುವ ವಿಧಾನಗಳಲ್ಲಿ ಕಾವ್ಯವೂ ಒಂದು' (ಅಲೆನ್‌ಟೇಟ್) ಮತ್ತು 'ಅದು ನೀಡುವ ಅರ್ಥ ವಿಶಿಷ್ಟವಾದುದು' (ಕ್ಲಿಯಾಂತ್ ಬ್ರೂಕ್ಸ್) ಎಂಬುದು ಇನ್ನೊಂದು ಅಭಿಪ್ರಾಯ. ಈ ಅರಿವು ತನ್ನ ಸ್ವರೂಪದ ಗುಣದಲ್ಲಿ ಮತ್ತು ಸಂವಹನವಿಧಾನದಲ್ಲಿ ಇತರ ಅರಿವುಗಳಿಂದ ಭಿನ್ನವಾಗಿರುತ್ತದೆ. ರಾನ್ಸಮ್ ಹೇಳುವಂತೆ "ಒಂದು ನಿರೂಪಣೆಯಾಗಿ ಕಾವ್ಯದ ವೈಲಕ್ಷಣ್ಯವಿರುವುದು ಅದರ ಮೂಲಸ್ವರೂಪದಲ್ಲಿ. ವೈಜ್ಞಾನಿಕ ವಿವರಣೆಯಲ್ಲಿ ಸಾಧ್ಯವಾಗದ ಒಂದು ವಾಸ್ತವಿಕತೆಯ ಮಟ್ಟವನ್ನು ಅಸ್ತಿತ್ವದ ಸ್ತರವನ್ನು ಅದು ವರ್ಣಿಸುತ್ತದೆ". ನಾವು ನಮ್ಮ ಸಂವೇದನೆಗಳು ಮತ್ತು ನೆನಪುಗಳ ಮೂಲಕ ಸ್ಥೂಲವಾಗಿ ಗ್ರಹಿಸುವ, ಸಾಂದ್ರತರ ಮತ್ತು ಹೆಚ್ಚುಕಷ್ಟಸಾಧ್ಯವಾದ ಜಗತ್ತಿನ ಮೂಲರೂಪವನ್ನು ಮರಳಿ ಪಡೆಯಲು ಯತ್ನಿಸುತ್ತದೆ. ಈ ಎಣಿಕೆಯಿಂದಾಗಿ ಈ ಅರಿವು ಮೂಲಭೂತವಾಗಿ ಅಥವಾ ಸ್ವರೂಪತಃ ವಿಶಿಷ್ಟವಾಗಿರುತ್ತದೆ". ಈ ಅರಿವು ತನ್ನದೇ ಆದ ಬಗೆಯಲ್ಲಿ ಸಂವಹನಗೊಳ್ಳುತ್ತದೆ ಮತ್ತು ಕಾವ್ಯರೂಪದ ಹಾಗೂ ಅದರ ಮೂಲಕ ದೊರಕುವುದರಿಂದ, ಅದನ್ನುಳಿದು ಪ್ರತ್ಯೇಕವಾಗಿ ಗ್ರಹಿಸಲು ಸಾಧ್ಯವಿಲ್ಲ. ಅದ್ದರಿಂದ ಕಾವ್ಯ "ವೈಜ್ಞಾನಿಕ ಮತ್ತು ಐತಿಹಾಸಿಕ ಅರಿವುಗಳ ಸಂಗಡವೇ ಅವುಗಳಿಗೆ ಪೂರಕವಾಗಿ ಇರುತ್ತದೆಯಲ್ಲದೆ, ಸ್ಪರ್ಧೆಗೆ ನಿಲ್ಲುವುದಿಲ್ಲ" (ಕ್ಲಿಯಾಂತ್ ಬ್ರೂಕ್ಸ್).

ಹೀಗೆಯೇ ಕಾವ್ಯದ ಭಾವಾತ್ಮಕ ವಸ್ತುವೂ ವಿಶಿಷ್ಟ ಲಕ್ಷಣಗಳನ್ನು ಪಡೆದಿದೆ. ಅದು ದಿನದ ಬದುಕಿನ ವ್ಯಕ್ತಿಗತವಾದ ಹಸಿ ಭಾವವಾಗಿರದೆ, ಗುಣದಲ್ಲಿ ಬೇರೆಯಾಗಿರು

ತ್ತವೆ. ಕಲಾವಿದನ ಭಾವ ಮತ್ತು ವ್ಯಕ್ತಿತ್ವಗಳು ಸ್ವತಃ ಮುಖ್ಯವಾದುವಲ್ಲ. ಅವು ವಿಚಿತ್ರಬಗೆಯ ಮಾರ್ಪಾಡಿಗೆ ಒಳಗಾಗಿ ಕಲಾಕೃತಿಯಲ್ಲಿ ಅದೃಶ್ಯವಾಗುತ್ತವೆ. ಇನ್ನೊಂದು ಮಾತಿನಲ್ಲಿ ಭಾವಗಳು 'ಅ–ವ್ಯಕ್ತೀಕರಿಸಲ್ಪಡು'ತ್ತವೆ. ಎಂದರೆ ಕವನ ತನ್ನ ಕರ್ತೃ ಮತ್ತು ಜಗತ್ತಿನಿಂದ ವಿಯೋಜನೆ ಪಡೆದು ಸ್ವಯಂಪೂರ್ಣ, ಸ್ವತಂತ್ರ ವಸ್ತುವಾಗುತ್ತದೆ. ಈ ವಿಶಿಷ್ಟ ಅರಿವು ಮತ್ತು ಈ ವಿಶಿಷ್ಟ ಭಾವವನ್ನು ಅಭಿವ್ಯಕ್ತಿಗೊಳಿಸಬೇಕಾಗಿರುವ ಕಾವ್ಯ ಅಥವಾ ಕಾವ್ಯದ ಭಾಷೆ ತನ್ನದೇ ಆದ, ಬೇರೆಲ್ಲೂ ಕಾಣದ ಸಂವಹನ ವಿಧಾನಗಳನ್ನು ಬಳಸುತ್ತದೆ.

ನವ್ಯ ವಿಮರ್ಶಕರಿಗೆ ಕಾವ್ಯ ಕೇವಲ ಸ್ವತಂತ್ರವಷ್ಟೇ ಆಗಿರದೆ, ಸ್ವಯಂ ಕೇಂದ್ರಿತವೂ ಆಗಿರುತ್ತದೆ. ತನ್ನಿಂದ ಹೊರಗಿನ ಯಾವುದನ್ನೂ ಅದು ಗುರಿಯಾಗಿಸಿಕೊಳ್ಳುವುದಿಲ್ಲ. ಈ ನಿಲುವನ್ನು ಹತ್ತೊಂಬತ್ತನೇ ಶತಮಾನದ ತೊಂಬತ್ತರ ದಶಕದ ಸೌಂದರ್ಯವಾದದೊಂದಿಗೆ ಬೆರೆಸಬಾರದು—ಸಂಪೂರ್ಣವಾಗಿ ಬದುಕನ್ನು ಒಳಗೊಳ್ಳುವುದರಿಂದ ಕಲೆ ಸ್ವತಃ ಒಂದು ಗುರಿ. ಕಲಾಕೃತಿಯಲ್ಲಿ ಅನುಭವದ ವಿದೃಶ ಅಂಶಗಳು ಪಡೆಯುವ ಸಮನ್ವಯ ಆಕಾರ ಮತ್ತು ಅರ್ಥಗಳು ಅದರ ಸೀಮೆಯ ಆಚೆ ಇರದಂತಹುಗಳು. ಈ ಸಮನ್ವಯ ಕಲೆಗೆ ಮೌಲ್ಯವನ್ನು ಒದಗಿಸುತ್ತದೆ. ಅದ್ದರಿಂದ ನವ್ಯವಿಮರ್ಶಕರು ಕಲೆಯನ್ನು ಅದರ ವ್ಯಾವಹಾರಿಕ ಮೌಲ್ಯಗಳಿಗಾಗಿ ಗಮನಿಸುವವರನ್ನು ಖಂಡಿಸುತ್ತಾರೆ. ಕಲೆ ಏನನ್ನೂ ಹೇಳುವುದಿಲ್ಲ, ಏನನ್ನೂ ಸಮರ್ಥಿಸುವುದಿಲ್ಲ. "ತನ್ನ ಗುಣದಲ್ಲಿ ಅದು ಅನುಭವದ ಪೂರ್ಣರೂಪವನ್ನು ಸೃಷ್ಟಿಸುತ್ತದೆ; ಮತ್ತು ಸಾಮಾನ್ಯವಾದ ಕ್ರಿಯಾರೂಪಗಳೊಡನೆ ಅದಕ್ಕೆ ಯಾವ ಬಗೆಯ ಪ್ರಾಯೋಜನಿಕ ಸಂಬಂಧಗಳೂ ಇರುವುದಿಲ್ಲ" (ಅಲೆನ್ ಟೇಟ್). ಆದರೂ ಅದಕ್ಕೆ ಮೌಲ್ಯವಿದೆ. ಏಕೆಂದರೆ, ಟೇಟನ ಪ್ರಕಾರ, ಅಸಾಪೇಕ್ಷ ಮತ್ತು ಪೂರ್ಣ ಅನುಭವಕ್ಕಾಗಿ ಮಾನವನ ಆದಮ್ಯ ಹಂಬಲದಿಂದ ಹುಟ್ಟಿರುತ್ತದೆ. ಈ ಹಂಬಲವನ್ನು ಸಾಮಾನ್ಯ ಅನುಭವ ತೃಪ್ತಗೊಳಿಸಲಾರದು.

ಕಾವ್ಯದ ಬಗ್ಗೆ ನವ್ಯವಿಮರ್ಶಕರು ತಳೆದ ನಿಲುವು ಅವರ ವಿಮರ್ಶೆಯ ನಿಲುವುಗಳನ್ನು ಸಹಜವಾಗಿಯೇ ನಿಯಂತ್ರಿಸುತ್ತದೆ. ಒಂದು ಕವನ ಪ್ರಧಾನವಾಗಿ ಅವರ ಪ್ರಕಾರ, ಒಂದು ಶಾಬ್ದಿಕ ವಸ್ತು. ಅದ್ದರಿಂದ "ಕವನದ ಅಭ್ಯಾಸವೇ ಕವನದ ನಿಜವಾದ ಅಭ್ಯಾಸ" (ಕ್ಲಿಯಾಂತ್ ಬ್ರೂಕ್ಸ್). ರಾನ್ಸಮ್ ಹೇಳುವಂತೆ 'ಒಳ್ಳೆಯ ವಿಮರ್ಶಾ ಬರೆಹ ಹೆಚ್ಚುಕಡಿಮೆ ಪ್ರಾಯೋಗಿಕವಾಗಿರುತ್ತದೆ. ಎಂದರೆ ವಿಮರ್ಶಕ ಕವನವನ್ನು ಮತ್ತು ಅದನ್ನು ಮಾತ್ರ ನೋಡುತ್ತಾನೆ......' ಇದರಿಂದಾಗಿ ವಿಮರ್ಶಕ "ಕವನವನ್ನು ಕವನವೆಂದು ನೋಡಬೇಕೇ ವಿನಾ ಕವಿಯ ಜೀವನ ಚರಿತ್ರೆಯ ಅನುಬಂಧವೆಂದಾಗಲೀ ಅವನ ಅಧ್ಯಯನದ ಪ್ರತಿಫಲನವೆಂದಾಗಲೀ, ಭಾವನೆಗಳ ಇತಿಹಾಸದ ಒಂದು ದೃಷ್ಟಾಂತವೆಂದಾಗಲೀ ನೋಡಬಾರದು. ಇಂತಹ ಅವಧಾರಣೆಯು ಕೃತಿಯ ಸೂಕ್ಷ್ಮ ಪಠನವನ್ನು ಮತ್ತು, ಕವನಗಳನ್ನು ಶಬ್ದಗಳಲ್ಲಿ ಬರೆದಿರುವುದರಿಂದ, ಭಾಷೆಗೆ ಎಚ್ಚರಿಕೆಯ

ಗಮನವನ್ನು ಒತ್ತಿ ಹೇಳುತ್ತದೆ" (ಬ್ರೂಕ್ಸ್). ಆದ್ದರಿಂದ ವಿಮರ್ಶೆಯ ನಿಜವಾದ ಕೆಲಸ "ಭಾಷಾವಿಧಾನಗಳ ಸೂಕ್ಷ್ಮತೆಗಳನ್ನು ಕೂಲಂಕಷವಾಗಿ ಪರೀಕ್ಷಿಸುವುದು" (ರಿಚರ್ಡ್ಸ್). ಈ ಭಾಷಿಕ ಆಸಕ್ತಿ ಆಧುನಿಕ ವಿಮರ್ಶೆಯ ವೈಶಿಷ್ಟ್ಯವೆಂದು ಹೇಳಲಾಗುತ್ತದೆ. ಕ್ಲಿಯಾಂತ್ ಬ್ರೂಕ್ಸ್ ಹೇಳುವಂತೆ ......"ನಮ್ಮ ಕಾಲದ ವಿಮರ್ಶಾ ಇತಿಹಾಸವನ್ನು ಹೀಗೆ ಹೇಳಬಹುದು: ಕವಿಯ ಮೇಲೆ ಅಥವಾ ಓದುಗನ ಮೇಲೆ ಅಲ್ಲದೆ ಕವನದ ಮೇಲೆ ಗಮನವನ್ನು ಕೇಂದ್ರಿಕರಿಸುವ ಒಂದು ಬಲವಾದ ಪ್ರಯತ್ನವನ್ನು ನೋಡುತ್ತಿದ್ದೇವೆ. ಕವನವನ್ನು ತನ್ನದೇ ಆದ ಅಸ್ತಿತ್ವವನ್ನುಳ್ಳ ಒಂದು ರಚನೆಯೆಂದು ಪರಿಗಣಿಸುವುದರೊಂದಿಗೆ ಕಾವ್ಯದ ಸೀಮೆಗಳು ಮತ್ತು ಮಿತಿಗಳನ್ನು ಗುರುತಿಸುವ ಪ್ರಯತ್ನಗಳೂ ನಡೆಯುತ್ತಿವೆ". ಭಾಷೆಯನ್ನು ಕುರಿತ ಈ ಕಾಳಜಿಗಳು ಕಾವ್ಯ ಮತ್ತು ವಿಮರ್ಶೆಯ ವಿಶಿಷ್ಟವೃತ್ತಿ ಅವಶ್ಯಕತೆಗಳಾಗಿರದೆ. ಈ ಯುಗದ ಒಂದು ಪ್ರಮುಖ ತಾತ್ವಿಕ ಒಲವನ್ನು ಪ್ರತಿಬಿಂಬಿಸುತ್ತವೆ. "ಭಾಷೆ ಮತ್ತು ಸಾಂಕೇತಿಕತೆಗಳ ಅಧ್ಯಯನ ಸಾಂದ್ರವಾದುದರ ಅಂಗವಾಗಿ ಆಧುನಿಕ ವಿಮರ್ಶೆಯ ಉದಯುವಾಯಿತು. ಅರ್ಥವಿಜ್ಞಾನದ ಬೆಳವಣಿಗೆ, ಸಾಂಕೇತಿಕ ತರ್ಕಶಾಸ್ತ್ರ, ಸಾಂಸ್ಕೃತಿಕ ಮಾನವ ವಿಜ್ಞಾನ ಮತ್ತು ಯೂಂಗ್, ಫ್ರಾಯ್ಡ್‌ರ ಮನೋವಿಜ್ಞಾನ ಇವೆಲ್ಲವನ್ನೂ ಇದೇ ಸನ್ನಿವೇಶಕ್ಕೆ ಬಂದ ಪ್ರತಿಕ್ರಿಯೆಗಳೆಂದು ತಿಳಿಯಬಹುದು" ಎನ್ನುತ್ತಾರೆ ಬ್ರೂಕ್ಸ್. ಅದರಿಂದಾಗಿ ಕಾವ್ಯ ಭಾಷೆಯ ಮೇಲೆ ಗಮನವನ್ನು ಕೇಂದ್ರೀಕರಿಸುವುದರಿಂದ ನವ್ಯವಿಮರ್ಶೆ ತನ್ನ ದೃಷ್ಟಿಯನ್ನು ಮೊಟಕುಗೊಳಿಸಿಕೊಂಡಂತಾಗಲೀ. ತನ್ನ ಕ್ಷೇತ್ರವನ್ನು ಕಡಿಮೆ ಮಾಡಿಕೊಂಡಂತಾಗಲೀ ಆಗದೆ, ತನ್ನ ಕಾಲದ ಮಹತ್ವದ ಬೌದ್ಧಿಕ ಅನ್ವೇಷಣೆಯಲ್ಲಿ ಭಾಗವಹಿಸಿದೆ.

ನವ್ಯವಿಮರ್ಶಕರು ಅನುಸರಿಸಿದ ವಿವಿಧ ವಿಶ್ಲೇಷಣಾತಂತ್ರಗಳ ಉಲ್ಲೇಖಗಳು ಈ ಲೇಖನವನ್ನು ಬಹಳ ವಿಸ್ತಾರಗೊಳಿಸುವುದರಿಂದ ಮತ್ತು ಅವರ ಸಾಧನೆ, ಸೋಲುಗಳ ಮೌಲ್ಯವಿವೇಚನೆ ಇದರ ಕ್ಷೇತ್ರಕ್ಕೆ ಹೊರಗಿರುವುದರಿಂದ ಈವರೆಗೆ ಹೇಳಿದ್ದನ್ನು ನವ್ಯವಿಮರ್ಶೆಯ ಮೂಲಭೂತ ಆಲೋಚನೆಗಳ ಸಾರಾಂಶವೆಂದುಕೊಳ್ಳಬಹುದು ಮತ್ತು ಇದನ್ನು ಸಂಸ್ಕೃತ ವಿಮರ್ಶೆಯೊಡನೆ ಮುಂದೆ ನಡೆಸಲಿರುವ ತೌಲನಿಕ ವಿವೇಚನೆಯ ಸಂದರ್ಭದಲ್ಲಿ ನೆನಪಿನಲ್ಲಿಡಬೇಕು.

"ಶಬ್ದಗಳಲ್ಲಿ ಮತ್ತು ಅವುಗಳ ಮೂಲಕ ಪ್ರದರ್ಶಿತವಾಗಬಲ್ಲ ಅನುಭವದ ಮುಖ್ಯ ವಿವರಗಳನ್ನು ವ್ಯವಸ್ಥೆಗೆ ತರುವ ಹೊಣೆ ಹೊತ್ತ ಭಾಷಿಕಕೃತಿ ಕವನ". ಇದು ಸಂಸ್ಕೃತ ವಿಮರ್ಶಕರ ಕಾವ್ಯಲಕ್ಷಣದ ಅನುವಾದದಂತೆ ತೋರಬಹುದು. ಆದರೆ ಇವು ನವ್ಯ ವಿಮರ್ಶಕರ ಒಬ್ಬ ಪ್ರಮುಖ ರಸಜ್ಞ ವಿಲಿಸೋ ವಿವಾಸನ ಮಾತು. ಕಾವ್ಯದ ಶಾಬ್ದಿಕರೂಪವನ್ನು ಸಂಸ್ಕೃತ ವಿಮರ್ಶಕರು ಗುರುತಿಸಿದ್ದಾರಷ್ಟೇ ಅಲ್ಲದೆ ಅದನ್ನು ತಮ್ಮ ಕಾವ್ಯಲಕ್ಷಣದ ಅವಿಭಾಜ್ಯ ಅಂಗವನ್ನಾಗಿಸಿದ್ದಾರೆ. ಭರತ ನಾಟಕ ಕೃತಿಯನ್ನು ವಾಚಕಾಭಿನಯವೆನ್ನುತ್ತಾನೆ. ಭಾಮಹ ಶಬ್ದ ಮತ್ತು ಅರ್ಥಗಳಿಗೆ ಸಮಪ್ರಾಧಾನ್ಯ

ನೀಡಿ ಅವುಗಳ ಸಹಯೋಗವೇ ಕಾವ್ಯವೆನ್ನುತ್ತಾನೆ. ಕುಂತಕ ಮತ್ತು ಬಹುಶಃ ಮಮ್ಮಟರನ್ನುಳಿದರೆ. ಮುಂದಿನ ವಿಮರ್ಶಕರಲ್ಲಿ ಶಬ್ದದ ಮೇಲೆ ಅವಧಾರಣೆ ಹೆಚ್ಚಾಗಿ. ಅರ್ಥ ಗೌಣವಾಯಿತು. ದಂಡಿಗೆ ಇಚ್ಛಿತ ಅರ್ಥವನ್ನುಳ್ಳ ಶಬ್ದಗಳ ಸರಣಿ ಕಾವ್ಯ ಶರೀರವಾಯಿತು. ರೀತಿಯನ್ನು ಕಾವ್ಯದ ಆತ್ಮವೆಂದು ಹೇಳಿದ ವಾಮನ. ಪದಗಳ ವಿಶೇಷವತ್ತಾದ ರಚನೆಯನ್ನು ರೀತಿ ಎಂದಿದ್ದಾನೆ. ಆನಂದವರ್ಧನನಲ್ಲಿ ಧ್ವನಿ ಕಾವ್ಯದ ಆತ್ಮ. ಗುಣ ಮತ್ತು ಅಲಂಕಾರಗಳಿಂದ ಕೂಡಿದ ವಾಕ್ಯವೇ ಕಾವ್ಯವೆಂದವನು ರಾಜಶೇಖರ. ಕುಂತಕನಿಗೆ ಅದು ವಕ್ರೋಕ್ತಿ; ರಸಯುಕ್ತವಾಕ್ಯವೆನ್ನುತ್ತಾನೆ ವಿಶ್ವನಾಥ. ರಮಣೀಯಾರ್ಥವನ್ನು ನೀಡುವ ಶಬ್ದವನ್ನು ಜಗನ್ನಾಥ ಕಾವ್ಯವೆನ್ನುತ್ತಾನೆ. ಒಟ್ಟಿನಲ್ಲಿ ಅಲಂಕಾರ ಯುಕ್ತ ಅಥವಾ ವಕ್ರಭಾಷೆ ಅಥವಾ ವಿಶಿಷ್ಟವಾಕ್ಯರಚನೆ ಅಥವಾ ವಿಶಿಷ್ಟ ಅರ್ಥವೃತ್ತಿ ಕಾವ್ಯವನ್ನು, ಶಾಸ್ತ್ರದಂತಹ ಅಭಿವ್ಯಕ್ತಿಗಳಿಂದ ಬೇರ್ಪಡಿಸುತ್ತದೆ. ಅರ್ಥ ಅಥವಾ ವಸ್ತುವಿನ ಪ್ರಾಮುಖ್ಯವನ್ನು ಅಲ್ಲಗಳೆದಿಲ್ಲ. ಏಕೆಂದರೆ ಶಬ್ದಗಳ ಏಕೈಕ ಕಾರ್ಯವೆಂದರೆ ಆ ವಿಷಯವನ್ನು ಗ್ರಾಹ್ಯವಾಗುವಂತೆ ಮಾಡುವುದು. ಕುಂತಕನ ಮಾತಿನಲ್ಲಿ ಈ ವಸ್ತು ಮತ್ತು ಭಾಷೆಗಳ ನಡುವಣ ಗೆರೆ ನಿಜವಾದದ್ದಲ್ಲ. ಕೇವಲ ಅಧ್ಯಯನ ಮತ್ತು ಚರ್ಚೆಗಾಗಿ ಮಾಡಿಕೊಂಡದ್ದು (ಏವಂ ವಿಧೋ ವಿವೇಕಃ ಸಮುದಾಯಾಂತಃ ಪಾತಿನಾಂ ಅಸತ್ಯ ಭೂತಾನಾಮಪಿ ವ್ಯುತ್ಪತ್ತಿ ನಿಮಿತ್ತಂ ಅಪೋದ್ಧೃತ್ಯ ವಿವೇಚನಂ). ಕಾವ್ಯದ ಇರುವಿಕೆಗೆ ಮುಖ್ಯವಾಗಿ ಭಾಷೆಯೇ ಕಾರಣ. ಏಕೆಂದರೆ ಉಳಿದ ಕ್ಷೇತ್ರಗಳಲ್ಲಿ ಶಾಬ್ದಿಕ ರಚನೆಯಿಂದ ಅವುಗಳ ಅರ್ಥ ಸ್ವತಂತ್ರವಾಗಿರುತ್ತದೆ. ಆದರೆ ಆ ಕಾವ್ಯದಲ್ಲಿ ಶಬ್ದವೇ ಅರ್ಥದ ಶರೀರ, ಮೂರ್ತ ರೂಪ. ಅದರ ಅಸ್ತಿತ್ವದ ಆದಿ ಹಾಗೂ ಅಂತ್ಯ. ಆದ್ದರಿಂದ ರಾಜಶೇಖರ ಕಾವ್ಯದಲ್ಲಿ ಉಕ್ತಿಪ್ರಾಧಾನ್ಯವನ್ನು ಕಂಡು. ಕವಿಯ ಶಬ್ದಗಳು ವಸ್ತುವಿಗೆ ರಸವನ್ನು ತುಂಬುತ್ತವೆ ಅಥವಾ ಅವನ್ನು ನೀರಸ ಮಾಡುತ್ತವೆಯೇ ವಿನಾ ಅರ್ಥಗಳಲ್ಲವೆನ್ನುತ್ತಾನೆ (ಕಾವ್ಯೇತು ಕವಿವಚನಾನಿ ರಸಯಂತಿ ವಿರಸಯಂತಿ ಚ. ನ ಅರ್ಥಾಃ). ಇದು ಸಾಮಾನ್ಯ ವಸ್ತುಗಳ ವಿಷಯದಲ್ಲಿ ಮಾತ್ರವಲ್ಲ, ಮಹತ್ವದ ಕಾಣ್ಕೆಯನ್ನು ಒಳಗೊಂಡ ವಸ್ತುಗಳಲ್ಲಿ ಸತ್ಯ. ಭಟ್ಟತೌತ ಈ ವಿಷಯವನ್ನು ಸ್ಪಷ್ಟವಾಗಿ ಹೇಳಿದ್ದಾನೆ ಋಷಿಯಲ್ಲದವನು ಕವಿಯಾಗಲಾರ ಮತ್ತು ವಸ್ತುಗಳ ಸತ್ಯತೆಯನ್ನು 'ಕಾಣು'ವುದರಿಂದ ಕವಿಯನ್ನು ಕವಿಯೆನ್ನಲಾಗುತ್ತದೆ. ಎಂದು ಅವನು ಅನ್ನುತ್ತಾನೆ. ಸಾಮಾನ್ಯ ಬಳಕೆಯಲ್ಲಿ, 'ಕವಿ' ಎನ್ನುವ ಶಬ್ದಕ್ಕೆ ಋಷಿ ಎಂದೂ ಕವನಗಳನ್ನು ರಚಿಸುವಾತನೆಂದೂ, ಅರ್ಥವಿದೆಯೆಂದೂ ಆತ ಒಪ್ಪಿಕೊಳ್ಳುತ್ತಾನೆ. ಅತಿವಿಸ್ಪಷ್ಟ ದರ್ಶನ ಪಡೆದಿದ್ದ ಆದಿ ಹಾಗೂ ಶ್ರೇಷ್ಠ ಕವಿಯ ಕಾವ್ಯವು ಕೂಡಾ ಆದರ್ಶದ ಶಬ್ದಗಳಲ್ಲಿ ಅಭಿವ್ಯಕ್ತಿ ಪಡೆಯುವವರೆಗೆ ದರ್ಶನವು ಶಬ್ದವಾಗುವವರೆಗೆ, ಜನ್ಮತಾಳಲಿಲ್ಲ. ಹೀಗೆಯೇ ಪ್ರತಿಭೆಯೆಂದರೆ, ಜಗನ್ನಾಥನ ಮಾತಿನಂತೆ ಕಾಣುವ ಶಕ್ತಿಯಷ್ಟೇ ಆಗಿರದೆ, ಕಾವ್ಯವನ್ನು ರಚಿಸಲು ಸೂಕ್ತವಾದ ಶಬ್ದಗಳನ್ನು ಹೊಂದಿರುವುದೂ (ಕಾವ್ಯ ಘಟನಾನುಕೂಲ ಶಬ್ದಾರ್ಥೋಪಸ್ಥಿತಿಃ) ಆಗಿರುತ್ತದೆ. ವೇದದಲ್ಲಿ ಕವಿಯ ಬಗ್ಗೆ ಬಂದಿರುವ ಮಾತು

ಗಳಿಂದ ಈ ವಿಷಯವನ್ನು ಮುಗಿಸುವುದು ಅನುಚಿತವಾಗಲಾರದು. ಹಲವು ಶ್ರೇಣಿ
ಗಳಲ್ಲಿ ಗರಿಷ್ಠ ಅಭಿವ್ಯಕ್ತಿಗಳ ಬಗ್ಗೆ ಹೇಳುತ್ತಾ, ತೈತ್ತಿರೀಯದಲ್ಲಿ, ದೇವತೆಗಳಲ್ಲಿ ಬ್ರಹ್ಮ,
ಪಕ್ಷಿಗಳಲ್ಲಿ ಗರುಡ, ಜನರಲ್ಲಿ ಅತಿಥಿ ಎಂದು ಹೇಳುತ್ತಾ ಕವಿಗಳ ವಿಚಾರದಲ್ಲಿ ಪದವೀಃ
ಕವೀನಾಂ ಎಂದು ಹೇಳಿದೆ. ಕವಿಗಳಲ್ಲಿ ಶಬ್ದಗಳನ್ನು ಅರಿತವನು ಎಂದು ಸಾಯಣರು
ಇದನ್ನು ವ್ಯಾಖ್ಯಾನಿಸುತ್ತಾರೆ.

ಆದ್ದರಿಂದ ಕಾವ್ಯಬಂಧದಲ್ಲಿ ಶಬ್ದದ ಪ್ರಾಧಾನ್ಯದ ಬಗ್ಗೆ ನವ್ಯವಿಮರ್ಶಕರ ನಿಲುವು
ತನ್ನೆಲ್ಲ ಪ್ರಾಯೋಗಿಕ, ತಾತ್ತ್ವಿಕ ಸಾಧ್ಯತೆಗಳಲ್ಲೂ, ಸಂಸ್ಕೃತ ವಿಮರ್ಶೆಯಲ್ಲಿ ಸಮಸ್ಪಂದಿ
ಯನ್ನು ಕಾಣಬಲ್ಲದು. ಜೊತೆಗೆ ಸಂಸ್ಕೃತ ವಿಮರ್ಶಕರ ಹಲವು ಆಲೋಚನೆಗಳನ್ನು
ನವ್ಯ ವಿಮರ್ಶೆಯ ಪರಿಭಾಷೆಯಲ್ಲಿ ನಿರೂಪಿಸಲೂಬಹುದು. ಉದಾಹರಣೆಗೆ
ಕುಂತಕ ಒಂದು ಕವನದಲ್ಲಿ ಶಬ್ದ ಮತ್ತು ಅದರ ಅರ್ಥಗಳ ಸಂಬಂಧವನ್ನು ಕೇವಲ
ಸೌಮ್ಯಸಾಹಚರ್ಯವೆಂದು ಮಾತ್ರ ತಿಳಿಯದೆ, ಅದು ಒಂದನ್ನೊಂದು ಸುಂದರವನ್ನಾಗಿ
ಸಲು ಅವೆರಡರ ನಡುವಿನ ಹುರುಪಿನ ಸಹಯೋಗ, ಸ್ನೇಹದ ಪೈಪೋಟಿ, ಸಮತೂಕದ
ಸಕ್ರಿಯ ಸಹಕಾರ ಎಂದು ಕಂಡಿದ್ದನು. ಕಾವ್ಯದ "ವಿಸ್ತರಣೆ" ಮತ್ತು "ಸಂಕೋಚನ"ಗಳ
ಪರಿಣಾಮವಾಗಿ ಜನಿಸುವ ಅದರ "ಬಿಗುವು" ಎಂದು ಟೇಟ್ ಹೇಳಿರುವುದೂ ಇದನ್ನೇ.
ಹೀಗೆಯೇ ಅಲಂಕಾರ ಪ್ರಸ್ಥಾನದವರು ಕಾವ್ಯಲಕ್ಷಣದಲ್ಲಿ 'ಅಲಂಕಾರ'ವನ್ನು ಒಂದು
ಅಂಶವನ್ನಾಗಿ ಮಾಡಲು ನೀಡುವ ಪ್ರಾಶಸ್ತ್ಯವನ್ನು ರಾನ್ಸಮ್‌ನ ಮಾತುಗಳಲ್ಲಿ
ಕವನದ ಸಾರ್ವತ್ರಿಕ 'ರಚನೆ'ಗೆ ದೇಶಿ "ನೆಯ್ಗೆ"ಯ ಪ್ರಾಮುಖ್ಯವೆಂದು ವಿವರಿಸಬಹುದು.

ಕಾವ್ಯ ಕೇವಲ ಒಂದು ಶಾಬ್ದಿಕರಚನೆಯಲ್ಲ. ಅದು ಒಂದು ಕೌಶಲದ ಕೃತಿ ಕೂಡ.
ಅದು ನಿಸರ್ಗಸಿದ್ಧವಲ್ಲ. ಮನುಷ್ಯ ನಿರ್ಮಿತ: ಸಿಗುವುದಲ್ಲ. ಮಾಡಿದ್ದು: ಭಾವನೆಗಳ
ನಿರರ್ಗಳ ಪ್ರವಾಹವಲ್ಲ. ಪ್ರಜ್ಞಾವಂತನೊಬ್ಬನ ಸಂಕಲ್ಪಿತ ಸೃಷ್ಟಿ. ಪ್ರತಿಭೆ ಕೇವಲ
ದತ್ತವಾಗಬಲ್ಲದು, ಆದರೆ ಕವನವನ್ನು ಎಲ್ಲ ಸಂದರ್ಭದಲ್ಲೂ ನಿರ್ಮಿಸಲೇಬೇಕಾಗಿದೆ.
ಸಂಸ್ಕೃತ ವಿಮರ್ಶಕರ ಮಾತಿನಲ್ಲಿ, ಅದೊಂದು ವ್ಯಾಪಾರ, ಕರ್ಮ. ನಿರ್ಮಿತಿ. ಕಾವ್ಯ
ಪ್ರತಿಭೆ ಪುನರ್‌ನಿರ್ಮಿತಿ ಶೀಲವಲ್ಲ. ಸೃಜನಾತ್ಮಕ ಕಾರಯಿತ್ರೀ. ಇದು ಲೋಕದಲ್ಲಿ
ಕಾಣದ ಅಪೂರ್ವವಸ್ತುವೊಂದನ್ನು ನಿರ್ಮಿಸುತ್ತದೆ. ಕಾವ್ಯ ಲೋಕದ ಅನುಕರಣವೂ
ಅಲ್ಲ. ಅದರ ಬದಲೂ ಅಲ್ಲ. ಅದೊಂದು ನಿರ್ಮಿತಿ. ಸಮಾನರೂಪ
ವನ್ನುಳ್ಳದ್ದು. ದಿನದ ಬದುಕನ್ನು ಕುರಿತದ್ದಾದರೂ, ವಸ್ತುಸಂವಾದಿಯನ್ನು ಪಡೆದಿರುವು
ದಿಲ್ಲ. ಪಡೆಯಬೇಕಾಗಿಯೂ ಇಲ್ಲ. ನವ್ಯವಿಮರ್ಶಕರಂತೆ, ಸಂಸ್ಕೃತ ಮೀಮಾಂಸಕರೂ
ಕವಿಯ ಸರ್ವಸ್ವತಂತ್ರತೆಯನ್ನು ಎತ್ತಿಹಿಡಿದಿದ್ದಾರೆ. ನಾಮಗಳ ರೂಪಗಳ ಈ ಲೋಕ
ದಲ್ಲಿ ಕವಿ ಮೊದಲನೆಯದರ ಸೃಷ್ಟಿಕರ್ತ, ದೇವರು ಎರಡನೆಯದರವನು ಎನ್ನುತ್ತಾನೆ
ನೀಲಕಂಠ. ಆನಂದವರ್ಧನ ಅಪಾರವಾದ ಈ ಕಾವ್ಯಸಂಸಾರದಲ್ಲಿ ಕವಿಯೇ ಬ್ರಹ್ಮ
ನೆನ್ನುತ್ತಾನೆ. 'ಜಗತ್ತನ್ನು ತನಗಿಷ್ಟಬಂದಂತೆ ಪರಿವರ್ತಿಸುತ್ತಾನೆ. ಈ ಕ್ರಿಯೆಯಲ್ಲಿ

ಕವಿ ನಿಯತಿಯ ನಿಯಮಗಳಿಂದ ದೂರನಾದವನು, ಅನನ್ಯ ಪರತಂತ್ರ. ಆದರೆ ಕಾವ್ಯ ಈ ಲೋಕದ ನಿರಾಕರಣೆಯೆಂದಾಗಲೀ, ಅದರಿಂದ ವಿಮೋಚನೆಯೆಂದಾಗಲೀ ಅಲ್ಲ. ದೈನಂದಿನ ಜೀವನದ ಪ್ರಯೋಜನಾತ್ಮಕ ವ್ಯವಹಾರಗಳಲ್ಲಿ ಅಲಭ್ಯವಾಗಿರುವ. ಕಾಣದಂತಾಗಿರುವ, ಈ ಲೋಕದ ಮೂಲಭೂತ ಸತ್ಯಗಳನ್ನು ಪ್ರದರ್ಶಿಸುವುದೇ ಕಾವ್ಯದ ಕೆಲಸ. ಬದುಕಿನ ತಿರುಳಾದ ಆನಂದದ ಪರಿಭಾಷೆಯಲ್ಲಿ ಈ ಪ್ರದರ್ಶನ ಜರುಗುತ್ತದೆ.

ಲೋಕ ಮತ್ತು ಲೋಕದ ವಸ್ತುಗಳು ಮಾತ್ರ ಈ ಪರಿವರ್ತನೆಗೆ ಒಳಪಡುತ್ತವೆಂದೇನಲ್ಲ. ಸಂವೇದನೆಗಳು, ಅನುಭವಗಳು, ಅನಿಸಿಕೆಗಳೂ ಇವರಲ್ಲಿ ಸೇರುತ್ತವೆ. ಕಾವ್ಯದ ಭಾವ ಅಥವಾ ರಸವು ದೈನಂದಿನ ಜೀವನದಲ್ಲಿ ಬಾಹ್ಯಕ್ರಿಯೆಯ ಮೂಲಕ ತೃಪ್ತಿಪಡೆಯಲು ಯತ್ನಿಸುವ ವೈಯಕ್ತಿಕ. ಸ್ವಂತ, ವಿಕ್ಷೋಭಕ ಕಚ್ಚಾಭಾವನೆಯಲ್ಲ: ಅದು ಮಾನಸಿಕ ವಿಶ್ರಾಂತಿ, ಸಂವೇದನೆಗಳಿಂದ ಕೂಡಿದ, ಚರ್ವಣವನ್ನುಳ್ಳದ್ದೆ ಬಾಹ್ಯ ಪ್ರವೃತ್ತಿಯನ್ನೂ ಬಯಸದ ಸಾಧಾರಣೀಕೃತ ಭಾವವಾಗಿರುತ್ತದೆ. ಬದುಕಿನ 'ಭಾವ'ವೇ ಕಾವ್ಯದಲ್ಲಿ 'ರಸ' ವಾಗುತ್ತದೆ. ಈ ರಸವೇ ಕಾವ್ಯದ ವಿಲಕ್ಷಣಗುಣ: ಕಾವ್ಯವನ್ನುಳಿದು ಅದು ಮತ್ತೆಲ್ಲೂ ಸಿಗುವುದಿಲ್ಲ. ಈ ಬಗ್ಗೆ ಹೆಚ್ಚು ಚರ್ಚಿನಡೆದಿದೆಯಾದ್ದರಿಂದ ವಿಸ್ತರಿಸುವ ಅಗತ್ಯವಿಲ್ಲ. ರಸ ಕಾವ್ಯದ ಒಂದುಗುಣವೇ ವಿನಾ ಜಗತ್ತಿನದಲ್ಲ (ಅಲೌಕಿಕ. ಲೋಕೋತ್ತರ, ಲೋಕೋತ್ತೀರ್ಣ) ಎಂಬ ಸಂಗತಿಯತ್ತ ಮಾತ್ರ ಗಮನ ಸೆಳೆಯಬಹುದು.

ಈ ನಿರ್ಮಿತಿಗೆ ಪ್ರತಿಭೆಮಾತ್ರ ಸಾಲದೆಂದು ಸಂಸ್ಕೃತ ವಿಮರ್ಶಕರು ಹೇಳುತ್ತಾರೆ. ವ್ಯುತ್ಪತ್ತಿ ಮತ್ತು ಅಭ್ಯಾಸಗಳು ಬೇಕು. ಇವು ಕಾವ್ಯಸ್ಫೂರ್ತಿಗೆ ತಡೆಯನ್ನುಂಟು ಮಾಡುತ್ತವೆಂದಾಗಲೀ, ವಿರೋಧಿಗಳೆಂದಾಗಲೀ ಎಂದೂ ಪರಿಗಣಿತವಾಗಿಲ್ಲ. ನವ್ಯ ವಿಮರ್ಶಕರಂತೆ ಸಂಸ್ಕೃತ ವಿಮರ್ಶಕರು ಕಾವ್ಯ ರಚನೆಯಲ್ಲಿ ಬುದ್ಧಿಯ ಪಾತ್ರವನ್ನು ಯಾವಾಗಲೂ ಒತ್ತಿಹೇಳಿದ್ದಾರೆ ಮತ್ತು ಬುದ್ಧಿಯನ್ನು ಪ್ರತಿಭೆಯ ಶತ್ರುವೆಂದು ಭಾವಿಸಿಲ್ಲ. ಆನಂದವರ್ಧನನಂತಹ ರಸಪ್ರಸ್ಥಾನಕಾರ ಕೂಡ. ಕಾವ್ಯದಲ್ಲಿ ಶಬ್ದಗಳ ಅರ್ಥ ಸಂಕಲ್ಪಪೂರ್ವಕವಾದ್ದರಿಂದ ಕವನವೊಂದರಲ್ಲಿನ ಅವಿವಕ್ಷಿತ ಸೌಂದರ್ಯವನ್ನು ಸೌಂದರ್ಯವೆಂದು ಭಾವಿಸುವುದರ ವಿರುದ್ಧ ಪ್ರತಿಭಟಿಸುತ್ತಾನೆ (ವಿವಕ್ಷೋಪಾರೂಢಾ ಏವಹಿ ಕಾವ್ಯೇ ಶಬ್ದನಾಮರ್ಥಃ)

ರಸವೇ ಕಾವ್ಯದ ವಿಲಕ್ಷಣ ಗುರಿಯಾಗಿದ್ದರೂ. ಸಂಸ್ಕೃತ ಕವಿಗಳು, ಕಾವ್ಯವನ್ನು ಜ್ಞಾನದ ಒಂದು ಮಾರ್ಗವೆಂದೂ, ಶಾಸ್ತ್ರಗಳಿಂದ ಭಿನ್ನವಾದರೂ. ಶಾಸ್ತ್ರಗಳಷ್ಟೇ ಪ್ರಾಮಾಣಿಕವಾದ ನಿರೂಪಣಾವಿಧಾನವೆಂದೂ ಭಾವಿಸಿದ್ದರು. ತೌತನು ಕಾವ್ಯದೇವಿಗೆ ಎರಡು ರೂಪಗಳು, ಅವು ಶಾಸ್ತ್ರ ಮತ್ತು ಕಾವ್ಯ ಎನ್ನುತ್ತಾನೆ. ಮೊದಲನೆಯದು ಪ್ರಜ್ಞೆಯ ಫಲ. ಎರಡನೆಯದು ಪ್ರತಿಭೆಯಿಂದ ಜನ್ಯ. ಎರಡರ ನಡುವೆ ಗಮನಾರ್ಹ

ವಾದ ತಾರ್ಕಿಕ ಹಾಗೂ ಸ್ವರೂಪವ್ಯತ್ಯಾಸಗಳಿದ್ದರೂ, ಎರಡೂ ಅರಿವಿನ ರೂಪಗಳು. ಕಾವ್ಯದ ಜನ್ಮಭೂಮಿಯಾದ ಪ್ರತಿಭೆ ಸದಾ ಹೊಸದನ್ನು ಮತ್ತು ವಸ್ತುವಿನ ಹೊಸ ಸ್ವರೂಪವನ್ನು ಹೊಳೆಯಿಸುವ ಪ್ರಜ್ಞೆಯೆಂದೂ, ವಸ್ತುವಿನ ಸಹಜ ಸೌಂದರ್ಯವನ್ನು ಪ್ರಕಟಿಸುವ ಬೆಳಕೆಂದೂ ಕುಂತಕ ಹೇಳುತ್ತಾನೆ. ವಸ್ತುಗಳ ಸ್ವರೂಪವನ್ನು ಸ್ಪರ್ಶಿಸುವ ಪ್ರಜ್ಞೆ: 'ಭೂತ, ವರ್ತಮಾನ ಮತ್ತು ಭವಿಷ್ಯಗಳನ್ನು ಕಾಣುವ ಶಕ್ತಿಯುಳ್ಳ ಶಿವನ ಕಣ್ಣು': ವಸ್ತುಗಳ ಪರೋಕ್ಷ ವಿವರಣೆ ನೀಡದೆ ಅವುಗಳ ವಿಸ್ಪಷ್ಟ ಪ್ರದರ್ಶನ ಒದಗಿಸುತ್ತದೆ: ಎಂದೆಲ್ಲಾ ಮಹಿಮಭಟ್ಟ ಪ್ರತಿಭೆಯನ್ನು ವರ್ಣಿಸುತ್ತಾನೆ. ಆದ್ದರಿಂದ ಕಾವ್ಯ ವಿಶಿಷ್ಟವಾದ ರೀತಿಯಲ್ಲಿ ಒದಗಿಸುವ ಒಂದು ವಿಶಿಷ್ಟಜ್ಞಾನ ಎಂದು ಪರಿಗಣಿತವಾಗಿರದೆ. ವಿಜ್ಞಾನದ ಅಮೂರ್ತ ಕಲ್ಪನೆಗಳಿಗಿಂತ ಮೇಲೆ ಏರಿ ಕಾವ್ಯವು ನಮಗೆ ವಸ್ತುಗಳ ವಸ್ತುಸ್ವರೂಪವನ್ನು ಗಳಿಸಿಕೊಡುತ್ತದೆ ಎನ್ನುವ ರಾನ್ಸಮ್ ಮತ್ತು ಟೇಟ್‌ರವರ ನಿಲುವನ್ನು ಇದು ನೆನಪಿಗೆ ತರುತ್ತದೆ.

ಈ ವಿಶಿಷ್ಟಜ್ಞಾನ ಮತ್ತು ಭಾವಗಳನ್ನು ಸಂವಹನಗೊಳಿಸಲು ಕಾವ್ಯದ ಭಾಷೆ ಅವಶ್ಯವಾಗಿಯೇ ವಿಶಿಷ್ಟರಚನೆ ಮತ್ತು ತಂತ್ರಗಳನ್ನು ಬೆಳೆಸುತ್ತದೆ, ಬಳಸುತ್ತದೆ. ಇತರೆಡೆಯ ಎಲ್ಲ ವಿಮರ್ಶಕರಂತೆ, ಸಂಸ್ಕೃತ ವಿಮರ್ಶಕರೂ ಇದನ್ನು ಗುರುತಿಸಲು ತಡಮಾಡಲಿಲ್ಲ. ವ್ಯಾಕರಣದ ಮತ್ತು ಬಳಕೆಯ ನಿಯಮಗಳನ್ನೇ ಅನುಸರಿಸಿ, ಅದೇ ಶಬ್ದಗಳನ್ನು ಕಾವ್ಯ ಬಳಸಿದರೂ, ಆ ಶಬ್ದಗಳು ಬಳಕೆಯ ಮಾತಿನಲ್ಲಿ ಮಾಡದ ಕೆಲಸವನ್ನು ಕಾವ್ಯದಲ್ಲಿ ಮಾಡುತ್ತವೆ. ಕಾವ್ಯದ ಮಾತು ಮತ್ತು ವಾರ್ತೆಯ ಮಾತು ಇವುಗಳ ನಡುವೆ ಇರುವ ವ್ಯತ್ಯಾಸವನ್ನು ಸಂಸ್ಕೃತ ವಿಮರ್ಶಕರು ಗುರುತಿಸಿದ್ದಾರೆ. ಕಾವ್ಯದ ಶಬ್ದಗಳು ವಸ್ತುವಿಗೆ ಅಪೂರ್ವ ಶೋಭೆಯನ್ನು ತರುತ್ತವೆ. ವಿಮರ್ಶಕರು ಈ ಶೋಭೆಯನ್ನು ಬೇರ್ಪಡಿಸಿ ವಿವರಿಸುವಲ್ಲಿ ಸೋತಿದ್ದಾರೆ. ವಸ್ತುಗಳು ಕಣ್ಣೆದುರಿಗಿದ್ದು, ಅವನ್ನು ಯಾವ ಉಪಾಧಿಗಳೂ ಇಲ್ಲದೆ ಗ್ರಹಿಸಿದಾಗ ಅವು ಉಂಟುಮಾಡಲಾಗದ ಪ್ರಭಾವವನ್ನು, ಕವಿಯ ಶಬ್ದಗಳ ಮೂಲಕ ಪ್ರದರ್ಶಿತವಾದಾಗ ಅವು ಪಡೆಯುತ್ತವೆ ಎನ್ನುತ್ತಾನೆ ಮಹಿಮಭಟ್ಟ. ಈ ಶೋಭೆಯನ್ನು ವಿಮರ್ಶಕರು ಅಲಂಕಾರ, ರೀತಿ, ಗುಣ, ಧ್ವನಿ ಎಂದೆಲ್ಲಾ ಹೇಳಲು ಪ್ರಯತ್ನಿಸಿದ್ದರೂ, ಪೂರ್ಣವಾಗಿ ವಿವರಿಸಲು ಶಕ್ಯರಾಗಿಲ್ಲ. ಪ್ರತಿಮೆ, ಬಿಗುವು, ಶಿಲ್ಪ, ವ್ಯಂಗ್ಯ, ದ್ವಂದ್ವತೆ ಮುಂತಾದ ಶಬ್ದಗಳ ಮೂಲಕ ಹೆಚ್ಚಿನದೇನನ್ನೂ ಸಾಧಿಸಿಲ್ಲ. ಅವರೂ ಅವರ ವಿಮರ್ಶೆಯ ಪಾರಿಭಾಷಿಕ ಶಬ್ದಗಳನ್ನು ಸಂಸ್ಕೃತ ವಿಮರ್ಶಕರವುಗಳೊಡನೆ ಸಾರ್ಥಕವಾಗಿ ಹೋಲಿಸಬಹುದು.

ಸಮಾನವಾಗಿ ಪಡೆದಿರುವ ಮೌಲ್ಯಗಳನ್ನುಳ್ಳ ಸುವ್ಯವಸ್ಥಿತ ಸಮಾಜದಲ್ಲಿ ಬದುಕುತ್ತಿದ್ದು, ಕಾವ್ಯವನ್ನು ಬಳಸಲಾದ ಉದ್ದೇಶಗಳ ಬಗ್ಗೆ ಜಾಗ್ರತರಾಗಿದ್ದ ಸಂಸ್ಕೃತ ವಿಮರ್ಶಕರು ಅವೆಲ್ಲವೂ ಕಾವ್ಯದ ಸಮರ್ಥಕಗುರಿಗಳೆಂದು ಒಪ್ಪುತ್ತಾರೆ. ವಿಜ್ಞಾನದ ಬಗೆಗಿನ ಅಸಂತೋಷದಿಂದ ಕಲೆಯ ಸ್ವಯಂಪೂರ್ಣತಾ ಸಿದ್ಧಾಂತವನ್ನು ರೂಪಿಸಿಕೊಂಡ

ನವ್ಯವಿಮರ್ಶಕರ ಸಮಸ್ಯೆಗಳು ಸಂಸ್ಕೃತ ವಿಮರ್ಶಕರಿಗೆ ಇರಲಿಲ್ಲ. ಕಾವ್ಯದ ಮುಖ್ಯ ಗುರಿಯನ್ನು ಕಂಡುಕೊಂಡು ಅದನ್ನು ನಿರೂಪಿಸಿದ ಗೌರವ ಅವರಿಗೆ ಸಲ್ಲಬೇಕು. ಬದುಕಿನ ನೈತಿಕ ಮೌಲ್ಯಗಳು ಕಾವ್ಯದ ಗುರಿಯಾಗಬಹುದು. ಆದರೆ ಕಾವ್ಯಕ್ಕೆ ತನ್ನದೇ ಆದ ಗುರಿ ಇರುತ್ತದೆ ಮತ್ತು ಅದು ಸ್ವತಃ ತಾನೇ ಒಂದು ಗುರಿಯಾಗಿರುತ್ತದೆ. ಭರತನ ಕಾಲದಿಂದಲೂ ವಿಮರ್ಶಕರು ರಸ ಅಥವಾ ಆಹ್ಲಾದವೇ ಕಾವ್ಯದ ಅಂತಿಮ ಗುರಿ ಎಂದಿದ್ದಾರೆ. ಭರತನ ಮೇಲೆ ಬರೆದ ವ್ಯಾಖ್ಯಾನದಲ್ಲಿ ಅಭಿನವಗುಪ್ತನು ಧರ್ಮ ಮತ್ತು ಜ್ಞಾನಗಳಂತಹ ಮೌಲ್ಯಗಳ ಜತೆಯಲ್ಲಿ ಈ ಆನಂದ ಅಥವಾ ಸುಖದ ಗುಣವನ್ನು ಪಡೆದಿರುವುದರಿಂದ ರಸವೂ ಒಂದು ಮೌಲ್ಯವೆನ್ನುತ್ತಾನೆ. ಮೌಲ್ಯಗಳ ಶ್ರೇಣಿಯಲ್ಲಿ ಅದಕ್ಕೊಂದು ವಿಶಿಷ್ಟಸ್ಥಾನವಿದೆ. ಏಕೆಂದರೆ. ಅದರ ಮೂಲಕವೇ ಮನುಷ್ಯ ತನ್ನ ಮನುಷ್ಯತನವನ್ನು ಉಳಿಸಿಕೊಂಡಿದ್ದು ಬ್ರಹ್ಮಾನಂದಕ್ಕೆ ಕೊಂಚವೇ ಕೆಳಗಿರುವ ಆನಂದದ ಶಿಖರಕ್ಕೆ ಏರಬಲ್ಲ. ರಸವನ್ನು ತನ್ನ ಮುಖ್ಯಗುರಿಯನ್ನಾಗಿ ಹೊಂದಿರುವ ಕಾವ್ಯ ತಾನೇ ಒಂದು ಮೌಲ್ಯವಷ್ಟೇ ಅಲ್ಲ, ಇನ್ನೂ ಹಲವು ಮೌಲ್ಯಗಳ ಗುರಿಯನ್ನು ತನ್ನೊಳಗೆ ಅಳವಡಿಸಿಕೊಂಡಿರುತ್ತದೆ. ಆದ್ದರಿಂದಲೇ ಚರಿತ್ರೆಯ ಪುಸ್ತಕಗಳನ್ನು ನೋಡುವಂತೆ ಕೇವಲ ವ್ಯುತ್ಪತ್ತಿಗಾಗಿ ಕಾವ್ಯವನ್ನು ನೋಡುವವರ ಬಗ್ಗೆ ಧನಂಜಯ ಕನಿಕರಪಡುತ್ತಾನೆ. ಮನುಷ್ಯಸಾಧ್ಯವಾದ ಆನಂದ ಮತ್ತು ಪೂರ್ಣತೆಗಳ ಉತ್ತುಂಗ ಶಿಖರ ರಸವಾದ್ದರಿಂದ ಮತ್ತು ಅದು ಕವಿಯ ಅವಿಭಾಜ್ಯ ಅಂಗವಾಗಿರುವುದರಿಂದ ಸಂಸ್ಕೃತ ವಿಸಮರ್ಶಕರು, ನವ್ಯ ವಿಮರ್ಶಕರಂತೆ ಕಾವ್ಯವನ್ನು ಸ್ವತಂತ್ರವೆಂದಷ್ಟೇ ಅಲ್ಲ. ಸ್ವಯಂ ಕೇಂದ್ರಿತವೆಂದೂ ಗ್ರಹಿಸುತ್ತಾರೆ.

ಸ್ವಲ್ಪಮಟ್ಟಿಗೆ ಕೆಲವು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದ. ಸಂಸ್ಕೃತ ವಿಮರ್ಶಕರು ಸಾಹಿತ್ಯ ಕೃತಿಗಳ ಭಾಷೆ ಮತ್ತು ರಚನೆಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ವ್ಯಾಕರಣ. ಮೀಮಾಂಸೆ ಮತ್ತು ತರ್ಕಗಳಿಂದ ಪಡೆದ ಸಾಧನಗಳು ಮತ್ತು ವಿಧಾನಗಳನ್ನು ವಿಮರ್ಶಕರು ಸಾಹಿತ್ಯಕೃತಿಗಳ ನಿರೂಪಣೆ. ವಿವರಣೆ. ವ್ಯಾಖ್ಯಾನಗಳಿಗೆ ಬಳಸಿದರು. ಧ್ವನಿರೂಪವನ್ನು ಅವರು ವಿವಿಧ ಶಬ್ದಾಲಂಕಾರಗಳನ್ನಾಗಿ ವಿವೇಚಿಸಿದರು. ಶಬ್ದಿಮಗಳ. ವಾಕ್ಯಗಳ ವಿಶ್ಲೇಷಣೆಯನ್ನು. ಶೈಲಿಗಳ ವರ್ಗೀಕರಣದಲ್ಲಿ ಬಳಸಲಾಯಿತು. ಅಲಂಕಾರಗಳು ಬಹುಮಟ್ಟಿಗೆ ತಾರ್ಕಿಕ ವಿಶ್ಲೇಷಣೆಯನ್ನು ಅವಲಂಬಿಸಿವೆ. 'ಧ್ವನಿ', ಅಥವಾ 'ವ್ಯಂಜನ' ಎನ್ನಲಾದ ಅರ್ಥದ ಮೂರನೆಯ ಸ್ತರ ಅರ್ಥ ವಿಜ್ಞಾನದ ಮಾರ್ಗದಲ್ಲಿ ನಡೆಸಿದ ಅನ್ವೇಷಣೆಯ ಫಲ. ಇದು ಭಾರತೀಯ ವಿಮರ್ಶೆಯಲ್ಲೇ ಕ್ರಾಂತಿಯನ್ನುಂಟುಮಾಡಿತು ಮತ್ತು ಶತಮಾನಗಳಿಗೆ ಮೊದಲೇ ಫ್ರೆಂಚ್‌ಸಿಂಬಲಿಸ್ಟ್ ಮತ್ತು ನವ್ಯವಿಮರ್ಶಕರ ನಿಲುವುಗಳನ್ನು ಗ್ರಹಿಸಿತ್ತು. ಬ್ರುಕ್ಸ್ ಮತ್ತು ಎಂಪ್ಸನ್ನರನ್ನು ಓದುವವರಿಗೆ ಮಮ್ಮಟ ಮತ್ತು ವಿಶ್ವನಾಥರಲ್ಲಿನ ಅಲಂಕಾರ ರಸ ಮತ್ತು ಧ್ವನಿಯ ಅಧ್ಯಾಯಗಳು ಹಳೆಯವೆಂದು ಅನ್ನಿಸುವುದೇ ಇಲ್ಲ. ಆನಂತರದ

ಆಲಂಕಾರಿಕರಲ್ಲಿ ಅನವಶ್ಯಕವಾದ ವರ್ಗೀಕರಣಗಳೂ, ಅತಿಯಾದ ವಿಭಾಗಗಳೂ ಇರುವುದು ನಿಜವಾದರೂ, ಅದು ಎಲ್ಲ ಪ್ರಸ್ಥಾನಗಳ ಹಣೆಯ ಬರೆಹ. ತೀರಾ ಹೊಸದಾದ ನವ್ಯ ವಿಮರ್ಶೆಕೂಡ ಅದರಿಂದ ಮುಕ್ತವಾಗಿಲ್ಲ. ಲಕ್ಷ್ಯಗಳ ಆಯ್ಕೆ ಮತ್ತು ಅವುಗಳ ವಿಮರ್ಶಾತ್ಮಕ ವಿಶ್ಲೇಷಣೆಗಳು ಇಂದಿನ ಯಾವ ವಿಮರ್ಶಕನಿಗೂ ಗೌರವ ತರುವಂತಹ ಸಾಹಿತ್ಯಕ ಅಭಿರುಚಿಯ ಸ್ತರವನ್ನೂ ಮತ್ತು ನಿಶಿತ ತರ್ಕವನ್ನೂ ತೋರಿಸುತ್ತವೆ.

ತರ್ಕಬದ್ಧವಾದ ತತ್ತ್ವಗಳನ್ನು ನಿರೂಪಿಸುವ ಜೊತೆಗೆ, ವಿಶ್ಲೇಷಣೆಯ ಸಾಧನಗಳನ್ನು ರಚಿಸಿ, ಅವುಗಳ ಉಪಯುಕ್ತತೆಯನ್ನು ಅಂದಿನ ಕಾವ್ಯಗಳಿಗೆ ಅನ್ವಯಿಸಿ ತೋರಿಸಿಕೊಟ್ಟರು. ಕವಿಗಳ ಮತ್ತು ಕಾವ್ಯಗಳ ಬಗ್ಗೆ ತಮ್ಮ ವೈಯಕ್ತಿಕ ತೀರ್ಮಾನಗಳನ್ನು ಹೇಳುವುದರ ಬದಲು, ಯಾವ ಶ್ರದ್ಧಾವಂತ ಸಾಹಿತ್ಯದ ವಿದ್ಯಾರ್ಥಿಯಾದರೂ ಅಂತಹದೇ ತೀರ್ಮಾನಗಳಿಗೆ ತಲುಪಲು ಸಹಾಯವಾಡುವ, ವಿಶ್ಲೇಷಣಾ ತಂತ್ರಗಳನ್ನು ಬಿಟ್ಟು ಹೋಗಿದ್ದಾರೆ. ಇದು ಯಾವ ಪ್ರಸ್ಥಾನವಾದರೂ ಹೆಮ್ಮೆ ಪಡಬಹುದಾದ ಸಾಧನೆ.

ಸಮಕಾಲೀನ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಕಾವ್ಯವನ್ನು ಪುನಃ ಸ್ಥಾಪನೆಗೊಳಿಸುವುದು ನವ್ಯವಿಮರ್ಶೆಯ ಒಂದು ಗಹನವಾದ ಗುರಿಯಾಗಿದೆ. ಸಂಸ್ಕೃತ ವಿಮರ್ಶಕರು ನಾಗರಿಕ ಬದುಕಿಗೆ ಕಾವ್ಯ ಒಂದು ಅಗತ್ಯವೆಂದು ತಿಳಿದಿದ್ದರು. ಕಾವ್ಯ ಸ್ಪರ್ಶವಿಲ್ಲದ ಸಂಭಾಷಣೆಯನ್ನು ಸುಸಂಸ್ಕೃತವೆನ್ನಬಹುದೇ ಎಂದು ಭಾಮಹ ಪ್ರಶ್ನಿಸುತ್ತಾನೆ. ಕುಂತಕ ಇನ್ನಷ್ಟು ಮುಂದುವರಿದು ನಮ್ಮ ದಿನದ ಬದುಕಿಗೆ ಸೊಗಸನ್ನು ಒಳ್ಳೆಯ ಕಾವ್ಯದ ಅಧ್ಯಯನ ಮಾತ್ರವೇ ತರಬಲ್ಲದೆನ್ನುತ್ತಾನೆ. ಆದ್ದರಿಂದಲೇ ವ್ಯಾಕರಣ ಮತ್ತು ತರ್ಕಗಳೊಡನೆ ಅಲಂಕಾರ ಅಥವಾ ಕಾವ್ಯ ಮೀಮಾಂಸೆಯು ಭಾರತೀಯ ವಿದ್ಯಾಭ್ಯಾಸ ಕ್ರಮದ ಮೂರು ಮುಖ್ಯ ವಿದ್ಯಾಂಗಗಳಲ್ಲಿ ಒಂದಾಗಿತ್ತು. ಸಾಹಿತ್ಯದ ಅಧ್ಯಯನದಲ್ಲಿ ಅದರ ಮಹತ್ತ್ವವನ್ನು ವಿಸ್ತರಿಸಬೇಕಾಗಿಲ್ಲ. ಕ್ಲಿಯಾಂತ್ ಬ್ರೂಕ್ಸ್ ಬರೆಯುತ್ತಾರೆ: "ಶಬ್ದಗಳ ಬಗ್ಗೆ ಮತ್ತೆ ಒಂದು ಗೌರವ ಭಾವನೆ ಮತ್ತು ಅವುಗಳ ಸಂಕೀರ್ಣತೆಗಳ ಅರಿವು ಅಭಿನಂದನಾರ್ಹ ಸಂಗತಿಗಳಾಗಿವೆ. ಇದಕ್ಕೆ ಪ್ರತಿಯಾದುದು ಸ್ವತಂತ್ರಗೊಳಿಸುವುದಿಲ್ಲ: ಅದು ಸಂಪೂರ್ಣವಾಗಿ ಸಾಹಿತ್ಯದಿಂದ ದೂರಕೊಯ್ಯುತ್ತದೆ". ಸಂಸ್ಕೃತ ವಿಮರ್ಶೆ ಈ ಜಾಗೃತಿಯನ್ನು ಯಾವಾಗಲೂ ಪ್ರದರ್ಶಿಸಿದೆ ಮತ್ತು ಈ ದಿಕ್ಕಿನಲ್ಲಿ ಇನ್ನೂ ಮಹತ್ತ್ವದ ಕೊಡುಗೆಯನ್ನು ನೀಡಲು ಶಕ್ತವಾಗಿದೆ.

ಅನು : **ಕೆ. ವಿ. ನಾರಾಯಣ**

ಕಲಸು

ಎನ್. ವಿ. ಭಾಗ್ಯಲಕ್ಷ್ಮಿ

—ಬಿಳಿಹಾಳೆ ಮರೆತ ನೂರು ಚಿತ್ತಾರ
ಕೆಂಪು ಉಂಗುರದ ನಡುವೆ ಬಿಳಿದಾದ ಚುಕ್ಕೆ
ವರ್ಣವೃತ್ತಗಳ ತುಂಬ ವರ್ಣ ಕಾಣದ
ಸಿಕ್ಕು
ಬಿಡಿಯಾಗೊಂದು ವೃತ್ತವೂ ಇಲ್ಲ—ಇದರ
ಕೇಂದ್ರ ಅದಕ್ಕೆ.
ಕಲಸಿದ ಹಿಟ್ಟು ರಂಗೋಲಿ ಚೆಲ್ಲಿದೆ
ಅದರ ಕೇಂದ್ರ ಇದಕ್ಕೆ;

—ಕಂಡಿರದ ದೇಹಕ್ಕೆ ಕಂಡುಂಡ
ಮುಖ
ಸಿದ್ಧವಸ್ತ್ರದ ನಡುವೆ ಗುರಿಯಾದ ದೈವ
ಮುಸುಕಿರದ ಸ್ನೇಹ — ಮುಸುಕಿನಲಿ ಮೋಹ
ಜೇಡಬಲೆಯಲ್ಲಿ ನೀರ ದಾರಿ
ಸಿಕ್ಕದಿದ್ದರು ಕೂಡ
ನೂರು ಸಾಗರದಾಟಿ ರಾಜಕುವರನ
ಭೇಟಿ.
ಹತ್ತಿಹಾರಿದ ಹಕ್ಕಿ ರಾಜಗೆ
ರೆಕ್ಕೆಯೊಂದೊಂದಕ್ಕು ಸಪ್ತವರ್ಣದ ಬೆಡಗು;

—ನೂರು ಕಿರಣದ ನಡುವೆಯೂ
ನೆಲೆಯಿರದ ಗೂಢ.
ಏಳುಗುಹೆಗಳ ಒಳಗೆ
ಕತೆ ಮರೆತ ಎಲುಬು ಹಂದರ;

—ಕಂಡಿರದ ಸುಖ
ಕಂಡಿರುವ ಭಯ
ನೂರುದಾರಿಗಳ ಮುಖಾಂತರ.
ಕನಸ ತೆಕ್ಕೆಗೆ.

ಬಳ್ಳಿಗಾವೆಯ ಕೋಡಿಮಠ

ದೇವರಕೊಂಡರೆಡ್ಡಿ

ಪ್ರಾಚೀನ ಕರ್ನಾಟಕದ ಜನಜೀವನವನ್ನು ತಿಳಿದುಕೊಳ್ಳಬೇಕಾದರೆ ಶಾಸನಗಳೇ ಮುಖ್ಯ ಆಧಾರ. ಶಾಸನಗಳಲ್ಲಿ ಎಲ್ಲ ಬಗೆಯ ವಿಷಯಗಳೂ ಬಂದಿರುತ್ತವೆ. ವೀರಗಲ್ಲುಗಳಲ್ಲಿ ವೀರರ ಶೌರ್ಯದ ಹೊಗಳಿಕೆಯಿದ್ದರೆ, ದಾನ ಶಾಸನಗಳಲ್ಲಿ ದಾನ ಕೊಟ್ಟ ವ್ಯಕ್ತಿಯ ಮನೋಗುಣ ಅಡಗಿರುತ್ತದೆ. ಹಾಗೆಯೇ ಪ್ರಶಸ್ತಿ ಶಾಸನಗಳಲ್ಲಿ ರಾಜರ ಪರಾಕ್ರಮ, ಅವನು ಗೆದ್ದ ಇತರ ರಾಜ್ಯಗಳು, ಇವುಗಳ ವಿಚಾರ ಇರುತ್ತದೆ.

ಹಾಗೆಯೇ ಇಂದು ಹೇಳಲು ಹೆಸರಿಲ್ಲದ ಅನೇಕ ಮತಗಳಿದ್ದುವೆಂದು (ಧರ್ಮ) ತಿಳಿದು ಬರುವುದು ಶಾಸನಗಳಿಂದಲೇ. ಅಂತಹ ಮತಗಳಲ್ಲಿ ಪಾಶುಪತಮತವೂ ಒಂದು. ಇದನ್ನೇ ಶಾಸನಗಳಲ್ಲಿ ಕಾಳಾಮುಖ, ಲಾಕುಳಶೈವ, ಏಕ್ಕೋಟಿ ಸಮಯ, ಇತ್ಯಾದಿ ಹೆಸರುಗಳಿಂದ[1] ಕರೆದಿರುವುದು. ಈ ಮತ ಶೈವಮತದ ಒಂದು ಪ್ರಭೇದ. ಈ ಮತವು ಕರ್ನಾಟಕಕ್ಕೆ ಸೌರಾಷ್ಟ್ರದಿಂದ ಬಂದಿರಬಹುದೆಂದು ವಿದ್ವಾಂಸರ ಊಹೆ. ಬಹುಶಃ 5 ನೇ ಶತಮಾನದ ಉತ್ತರಾರ್ಧದಲ್ಲಿ ಬಂದಿರಬಹುದು. ಬಾದಾಮಿಯ ಬಳಿಯಿರುವ ಮಹಾಕೂಟೇಶ್ವರ ದೇವಾಲಯವು (ಕಾಲ. ಕ್ರಿ.ಶ. 602) ಕಾಳಾಮುಖರ ದೇವಾಲಯವಿರಬಹುದೆಂದು ಅಲ್ಲಿ ಅಳಿದು ಉಳಿದಿರುವ ಆಧಾರಗಳಿಂದ ಊಹಿಸುತ್ತಾರೆ. ಈ ಕಾಳಾಮುಖರದು ಸಾತ್ವಿಕ ಪಂಥ. ಈ ಕಾಳಾಮುಖ ಗುರುಗಳು ವಿದ್ವಾಂಸರೂ ಆಗಿರುತ್ತಿದ್ದರು. ಕ್ರಿ.ಶ. 10 ನೇ ಶತಮಾನದ ಹೊತ್ತಿಗೆ ಈ ಮತ ಕರ್ನಾಟಕದಲ್ಲೆಲ್ಲಾ ಹರಡಿದಂತೆ ಕಾಣುತ್ತದೆ. ಈ ಮತದ ಗುರುಗಳಲ್ಲಿ ಅನೇಕರು ರಾಜಪೂಜಿತರೂ, ರಾಜಗುರುಗಳೂ ಆಗಿದ್ದು ಸಮಾಜದಲ್ಲಿ ಗಣ್ಯವ್ಯಕ್ತಿಗಳಾಗಿದ್ದರು.

ಈ ಕಾಳಾಮುಖಯತಿಗಳು ವಾಸವಾಗಿರಲು ಆರಿಸಿಕೊಂಡ ಸ್ಥಳ ದೇವಸ್ಥಾನಗಳು. ಅಲ್ಲಿಯೇ ಒಂದು ಮಠವನ್ನು ಕಟ್ಟಿಕೊಂಡು ಅಲ್ಲಿ ತಮ್ಮ ಮತ ಪ್ರಚಾರಮಾಡಿ ಅದರ ಸ್ಥಾನಿಕರಾಗಿರುತ್ತಿದ್ದರು. ಇವರ ಪ್ರಭಾವದಿಂದ ದೇವಾಲಯಗಳು ಪ್ರಮುಖವಾಗುತ್ತಾ ಬಂದುವು. ಆ ಊರಿನ ಕೇಂದ್ರಸ್ಥಾನವಾಗಿ ದೇವಾಲಯ ನಿಂತಿತು. ಇದಕ್ಕೆ ಅಂದರೆ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ದಾನಮಾಡಿ

---

1 ಕರ್ನಾಟಕ ಲಾಕುಳ ಶೈವರ ಇತಿಹಾಸ - ಪುಟ ೭೧. ಕಪಟರಾಳ ಕೃಷ್ಣರಾಯ.

ದರೂ ಆ ಮಠದ ಗುರುಗಳ 'ಕಾಲುಂಕರ್ಚಿ' ದಾನಮಾಡಬೇಕಿತ್ತು. ಅಂತೆಯೇ ದೇವಸ್ಥಾನದ ಗೌರವದ ಜವಾಬುದಾರಿ ಆ ಊರಿನವರ ಮೇಲೆ ಬಿದ್ದಿತ್ತು. ಅನೇಕ ಶಾಸನಗಳು 'ಸ್ಥಾನಿಕರು' ಅಲ್ಲಿನ ನಿಯಮಗಳನ್ನು ಪಾಲಿಸದಿದ್ದರೆ ಅವರನ್ನು ಅಲ್ಲಿಂದ ಓಡಿಸಲು ಆ ಊರಿನ ಸಮಸ್ತ ಪ್ರಜೆಗಳಿಗೆ ಕರೆಕೊಟ್ಟಿವೆ. ಉದಾಹರಣೆಗೆ ಸೂಡಿಯ ಶಾಸನವನ್ನು ತೆಗೆದುಕೊಳ್ಳೋಣ. ನಾಗದೇವ ಮಠಕ್ಕೆ ದತ್ತಿ ಬಿಟ್ಟು ಶಾಸನ ಬರೆಯಿಸಿ ಕಡೆಯಲ್ಲಿ ಹೀಗೆ ಹೇಳುತ್ತಾನೆ:—

"ಗೊರವರ್ ಕಾಳಾಮುಖರ್ ನೈಷ್ಠಿಕರೆನಿಸದೊಡಂ ಭೋಗದೊಳ್ ಮೂರು ಪೊರ್ತುಂ।
ವರಕಾಂತಾ ಸಂಕುಳಂ ಬಂದಿರದೆ ತಡೆವಡಂ ವಿಶ್ವವಿದ್ಯಾರ್ಥಿಗಳ್ ಬಿ।
ತ್ತರದಿಂದಾ ಪೊರ್ತು ಪೋದುತ್ತಿರದೊಡ ಮಿರಿಸಲ್ಕಾಗದೆಂದುಂ ವರಾಧೀ।
ಶ್ವರದೆಂದೀ ಧರ್ಮಮಂ ನಿರ್ಮಿಸಿ ನಿಯಮಿಸಿದಂ ಸೂಡಿಯೊಳ್ ನಾಗದೇವಂ"॥ [2]

ನೈಷ್ಠಿಕಮಠದಲ್ಲಿ ಕಾಳಾಮುಖ ಸ್ಥಾನಿಕರು ಮುಖ್ಯವಾಗಿ. ಹಾಗೂ ಕಡ್ಡಾಯ ವಾಗಿ ಬ್ರಹ್ಮಚರ್ಯವನ್ನು ಪಾಲಿಸಬೇಕಿತ್ತು. "ಇದು ನೈಷ್ಠಿಕಸ್ಥಾನಮಿಲ್ಲಿ ನೈಷ್ಠಿಕ ರಲ್ಲದ ತಪೋಧನರುಮಿರಲಾಗದು" ಎಂದು ಕೆಲವು ಶಾಸನಗಳಲ್ಲಿ ಬಂದಿರುವುದ ರಿಂದ ಕೆಲವು ಮಠಗಳು ಮಾತ್ರ ನೈಷ್ಠಿಕಮಠಗಳೆಂದೂ ಮಿಕ್ಕ ಕೆಲವು ಮಠದ ಸ್ಥಾನಿಕರು ಮದುವೆಯಾಗುತ್ತಿದ್ದರೆಂದೂ ತಿಳಿಯಬಹುದು.[3]

ಇಂತಹ ನೈಷ್ಠಿಕಮಠಗಳಲ್ಲಿ ಬಳ್ಳಿಗಾವೆಯ ಕೋಡಿಮಠವೂ ಒಂದು. ಈ ಬಳ್ಳಿ ಗಾವೆ ಬನವಸೆ 12000 ದ ರಾಜಧಾನಿಯೂ ಆಗಿತ್ತು. ಶಾಸನಗಳಲ್ಲಿ ಇದನ್ನು ಬಲಿ ಪುರ. ಬಳ್ಳಿಗಾವೆ. ಬಳ್ಳಿಗಾವೆ, ಬೆಳಗಾವಿ ಇತ್ಯಾದಿ ಹೆಸರುಗಳಿಂದ ಕರೆದಿವೆ. ಈ ಬಳ್ಳಿಗಾವೆ ಅನೇಕ ಮತಗಳ ಕೇಂದ್ರವಾಗಿತ್ತು. ಬೌದ್ಧಮತದ ಅವಶೇಷಗಳು ಶಾಸನಗಳು ಸಿಕ್ಕಿವೆ. ಶಾಸನಗಳು ಈ ಬಳ್ಳಿಗಾವೆಯನ್ನು ಅನೇಕ ರೀತಿಯಲ್ಲಿ ಹೊಗಳಿವೆ.

ಜನಪದ ಕೋಟಿಯೊಳ್ಳಿಗರ್ದ ಕುನ್ತಳದೇಶಮೆ ಸಾರವಲ್ಲಿ ತಾಂ।
ಬನವಸೆನಾಡು ಸಾರವದಱೊಳ್ಪರಿಭಾವಿಸೆ ಬಳ್ಳಿಗಾವೆ ಸ।
ಜ್ಜನನಿಧಿ ಪಟ್ಟಣಂಗಳ ತವರ್ಮನೆ ಸಾರಮೆನಿಪ್ಪ ಕೀರ್ತಿ ತ।
ದ್ವನ ನಿಧಿ ಮೇರೆಯಾಗೆ ಸಲೆಪರ್ವಿದುದುರ್ವೀ ಸಮಸ್ತಧಾತ್ರಿಯಾ॥

ಅದು ವಿಭುದೈಕವಾಸಮಮರಾವತಿಯನ್ತತಿ ಭೋಗಿಸೆವ್ಯವ।
ಸ್ತದು ಪೆಸರ್ವೆತ್ತು ರಂಜಿಸುವ ಭೋಗವತೀ ಪುರದನ್ತೆ ಭಾವಿಸ।
ಲ್ಕದು ಧನದ ಪ್ರಸೇವ್ಯವಳಕಾಪುರದನ್ತೆನೆ ಬಳ್ಳಿಗಾವೆ ಗಾ।
ಪುದೊ ಪವಿಪಟ್ಟಣಂ ನೆಗರ್ದ್ದ ವಾರ್ದ್ಧಿಪರೀತ ಸಮಸ್ತ ಧಾತ್ರಿಯೊಳ್॥
ಮತ್ತಲ್ಲಿ—

---

[2] ಕ.ಸಾ ಪ.ಪ. 1925.

[3] ಕರ್ನಾಟಕ ಲಾಕುಳ ಶೈವರ ಇತಿಹಾಸ– ಪುಟ ೯೦.

ಕಂ॥ ಹರಿಹರ ಕಮಳಾಸನವೀ
ತರಾಗ ಬೌದ್ಧಾಲಯಂಗಳಿನ್ದಿನ್ತುವಸು ।
ನ್ಧರೆಗೆಸೆವ ಪಂಚಸರದ
ಸ್ಥಿರೆ ಪಂಚಮಠಂಗಳೆಸೆವುವಾ ಪಟ್ಟಣದೊಳ್ ॥ [Ec V/I Sk 100]

ಹೀಗೆ ಈ ಬಳ್ಳಿಗಾವೆ ಅನೇಕ ಬ್ರಹ್ಮಪುರಿಗಳಿಂದ, ಮಠಗಳಿಂದ ತುಂಬಿ ತುಳುಕುತ್ತಿತ್ತು. 11 ನೇ ಶತಮಾನದಲ್ಲಿ ಇದು ಒಂದು ರಾಜಕೀಯ ಕೇಂದ್ರವಾಯಿತು. ಈ ಕಾಲದಲ್ಲಿ ಇದು ಬಿಜ್ಜಳನ ಸಾಮಂತ ಕಸಪಯ್ಯನ ನಾಡಾಗಿತ್ತು. ಆಗ ಒಳಸಂಚುಗಳ ಕೇಂದ್ರವಾಗಿತ್ತು.

ಕೋಡಿಮಠವನ್ನು ಶಾಸನಗಳಲ್ಲಿ ಕೇದಾರಮಠವೆಂದೂ ಕರೆಯಲಾಗಿದೆ. ಕೆರೆಯ ಕೋಡಿಯಲ್ಲಿ ಈ ಮಠವಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಇದನ್ನು ದಕ್ಷಿಣ ಕೇದಾರ ಸ್ಥಾನವೆಂದು ಕರೆದಿದೆ. ಅದಕ್ಕೆ ಕಾರಣ ಉತ್ತರದಲ್ಲಿರುವ ಕೇದಾರ ಪರ್ವತಕ್ಕೆ ಸಮನಾಗಿ. ಇಲ್ಲಿನ ತಪೋಧನರು ಅಲ್ಲಿನ ಋಷಿಗಳನ್ನು ಹೋಲುತ್ತಿದ್ದರಂತೆ. ಈ ಮಠದ ಮೂಲಮಠ ಶ್ರೀಶೈಲ "ಶಕ್ತಿಪರ್ಷೆಯ ಪರ್ವತಾವಳಿಗೆ ಸೇರಿದ ಮೂವರು ಕೋಣೆಯ ಸಂತತಿ." "ಪರ್ವತಾಮ್ನಾಯದ ಮೂವರು ಕೋಣೆಯ ಸಂತಾನದ ಶಕ್ತಿಪರ್ಷೆಯೊಳ್ಳಿಗಳ್ತಿವಡೆದು ಶಿಷ್ಯಜಾತಕ ವರ್ಷಾ ಕಾಳಾಮುಖರೆನಿಸಿದ ಕಾಳಾಮುಖರ್" (Sk 99.) ಎಂದು ಶಾಸನಗಳಲ್ಲಿ ಹೇಳಿದೆ. ಶ್ರೀಶೈಲ ಪರ್ವತ ಆಗ ಕಾಳಾಮುಖರ ಬಹು ಪ್ರಸಿದ್ಧ ಕೇಂದ್ರವಾಗಿತ್ತು.

ಬಳ್ಳಿಗಾವೆಯ ಮೊದಲ ಸ್ಥಾನಿಕ ಕೇದಾರ ಶಕ್ತಿ. ಇವನೇ ಕೇದಾರೇಶ್ವರ ದೇವಾಲಯವನ್ನು[4] ಕಟ್ಟಿಸಿರಬಹುದು. ಆಗಿನ ಕಾಲದಲ್ಲಿ ದೇವಾಲಯವನ್ನು ಕಟ್ಟಿಸಿದ ವ್ಯಕ್ತಿಯ ಹೆಸರನ್ನೇ ಆ ದೇವಾಲಯಕ್ಕೆ ಇಡುವ ರೂಢಿ. ಆದ್ದರಿಂದ ಕೇದಾರಶಕ್ತಿ ಕಟ್ಟಿಸಿದ ದೇವಾಲಯ ಕೇದಾರೇಶ್ವರ ದೇವಾಲಯವಾಯಿತು. ಇವನು ಶ್ರೀಶೈಲದಿಂದ ಬಳ್ಳಿಗಾವೆಗೆ ಬಂದಿರಬಹುದು. ಕೇದಾರಮಠ ಎಂದು ಸ್ಥಾಪನೆಯಾಯಿತೆಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಕೇದಾರಮಠದ ಮೊದಲ ಉಲ್ಲೇಖವಿರುವ ಶಾಸನದ ಕಾಲ 1094. 1054 ರ ಶಾಸನದಲ್ಲಿ ಉಲ್ಲೇಖವಾಗಿರುವ ಪಂಚಮಠಗಳ ಜೊತೆಯಲ್ಲಿ ಕೋಡಿಮಠದ ಉಲ್ಲೇಖವಿಲ್ಲ. ಆದ್ದರಿಂದ ಇದು 1054 ರಿಂದ 1094ರ

---

4 ಕೇದಾರೇಶ್ವರ ದೇವಾಲಯವನ್ನು ಯಾರು ಕಟ್ಟಿಸಿದರೆಂಬ ಬಗೆಗೆ ಚರ್ಚೆ ಇದೆ. ವೆಂಕೋಬರಾಯರು 1060 ಇದರ ಕಾಲವೆಂದೂ - ಹೊಯ್ಸಳರು ಇದನ್ನು ಜೀರ್ಣೋದ್ಧಾರ ಮಾಡಿಸಿರುತ್ತಾರೆಂದು ಹೇಳುತ್ತಾರೆ. ಶ್ರೀಕಂಠ ಶಾಸ್ತ್ರಿಗಳು ಉದಯಾದಿತ್ಯ ಅಥವಾ ವಿನಯಾದಿತ್ಯ ಹೊಯ್ಸಳನು ಚಾಳುಕ್ಯರ ಸಾಮಂತನಾಗಿ ಬನವಾಸಿಯನ್ನು ಆಳುತ್ತಿದ್ದಾಗ ಕಟ್ಟಿಸಿರಬಹುದೆಂದು ಅಭಿಪ್ರಾಯ ಪಡುತ್ತಾರೆ.

[ಹೊಯ್ಸಳವಾಸ್ತುಶಿಲ್ಪ - ಶ್ರೀಕಂಠಶಾಸ್ತ್ರಿ]

ಒಳಗೆ ಉದಿಸಿರಬೇಕು. ಅ. ವೆಂಕಟಸುಬ್ಬಯ್ಯನವರು ಇದರ ಕಾಲವನ್ನು 1073 ಎಂದರೆ. ಚಿದಾನಂದಮೂರ್ತಿಗಳು 1060 ಎಂದಿದ್ದಾರೆ. ನಿರ್ದಿಷ್ಟವಾಗಿ ಕಾಲವನ್ನು ಹೇಳಲು ಸಾಧ್ಯವಿಲ್ಲ. 1094 ರ ಶಾಸನದಲ್ಲಿ ಉಕ್ತನಾಗಿರುವ ಗುರು ಸೋಮೇಶ್ವರ ಈ ಮಠದ ಗುರು ಪರಂಪರೆಯಲ್ಲಿ ಮೂರನೆಯವನು. ಈ ಶಾಸನ ರಚನೆಯಾಗುವ ವೇಳೆಗೆ ಇವನು ಗುರುವಾಗಿ ಬಹಳ ವರ್ಷಗಳು ಕಳೆದಿರಲಿಲ್ಲ. ಹಿಂದಿನ ಗುರುಗಳ ಜೀವಿತದ ಕಾಲವನ್ನು ತಲಾ 10 ವರ್ಷಗಳೆಂದಿಟ್ಟುಕೊಂಡರೂ ಸುಮಾರು 1060 ರಲ್ಲಿ ಸ್ಥಾಪಿತವಾಗಿರಬಹುದು.

ಈ ಮಠದ ಗುರು ಪರಂಪರೆಯನ್ನು ಅವಲೋಕಿಸಿದರೆ ಬಹು ಪ್ರಸಿದ್ಧ ಗುರುಗಳು ಬಾಳಿ ಹೋಗಿದ್ದಾರೆ. ಈ ಮಠದ ಮೂಲ ಗುರು ಕೇದಾರಶಕ್ತಿ. ಇವನನ್ನು "ಧರೆಗೆಸೆವ ಶಕ್ತಿಪರ್ಶೆಗೆ ಕರಮುಗ್ರಮಣಿಯೆನಿಪ ಪರ್ವತಾವಳಿಯೊಳ್ ಮೂವರ ಕೋಣೆಯ ಸಂತತಿಗಾಭರಣಂ" ಎಂದು ಶಾಸನಗಳಲ್ಲಿ ಹೊಗಳಿದೆ. ಕೇದಾರ ಮಠವನ್ನು ಸ್ಥಾಪಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನ ಶಿಷ್ಯ ಶ್ರೀಕಂಠ ಪಂಡಿತ. ಶಾಸನಗಳಲ್ಲಿ ಇವನನ್ನು "ವಸುಧೆಯೊಳಿನ್ನೀ ಮಾತೋ ಲಾಕುಲೀಶತ್ವಾಗಮೆಸೆ ಸರ್ವಜ್ಞಕಲ್ಪರೆಸೆದರ್" ಎಂದು ಹೊಗಳಲಾಗಿದೆ. ಇದರಿಂದ ಇವನು ಲಾಕುಳ ಸಿದ್ಧಾಂತದಲ್ಲಿ ಗಟ್ಟಿಗನಾಗಿದ್ದನೆಂದು ಊಹಿಸಬಹುದು. ಇವನ ಶಿಷ್ಯ ಸೋಮೇಶ್ವರ. ಇವನ ಕಾಲದಲ್ಲಿ ಈ ಮಠವು ಬಹು ಪ್ರಸಿದ್ಧಿಯನ್ನು ಪಡೆಯಿತು. ಈ ಮಠದ ನಿಜವಾದ ಇತಿಹಾಸ ಪ್ರಾರಂಭವಾಗುವುದು ಇವನ ಕಾಲದಿಂದ. ಅನೇಕ ರಾಜಮಹಾರಾಜರು, ವರ್ತಕರು ಈ ಮಠದ ವೈಭವವನ್ನು ಕಂಡು "ದೇವರಂಗಭೋಗಕ್ಕಂ ಖಂಡಸ್ಫುಟಿತಕ್ಕಂ ಅಲ್ಲಿಯ ವಿದ್ಯಾರ್ಥಿ ತಪೋಧನರಾಹಾರದಾನಕ್ಕಂ" (Sk 94) ಎಂದು ದತ್ತಿಯನ್ನು ಬಿಟ್ಟುಕೊಟ್ಟಿರುವರು. ಇವನನ್ನು ಶಾಸನಗಳು "ಯಮನಿಯಮ ಸ್ವಾಧ್ಯಾಯ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣಾ ಮೌನಾನುಷ್ಠಾನ ಜಪ ಸಮಾಧಿ ಶೀಲ ಸಂಪನ್ನಸಿದ್ಧಾಂತ ತರ್ಕ ವ್ಯಾಕರಣ ಕಾವ್ಯನಾಟಕ ಭರತಾದ್ಯನೇಕ ಸಾಹಿತ್ಯ ವಿದ್ಯಾ ಪ್ರವೀಣರುಮಪ್ಪ ಸೋಮೇಶ್ವರ ಪಂಡಿತ (Sk 94) ಎಂದು ಹೊಗಳಿವೆ. ಇನ್ನೊಂದು ಶಾಸನದಲ್ಲಿ "ವಿದ್ಯಾಮಹಿಮ ಕ್ಷೀರವಾರ್ಧಿ ವರ್ಧನ ಸೋಮಂ ಸೋಮೇಶ್ವರಾರ್ಯಂ" (Sk 100) ಎಂದಿದೆ. "ಯಮನಿಯಮ ಸ್ವಾಧ್ಯಾಯ ಧ್ಯಾನ ಧಾರಣಾ ಮೌನಾನುಷ್ಠಾನ ಜಪ ಸಮಾಧಿ ಶೀಲ ಸಂಪನ್ನ। ಬುಧ ಜನ ಪ್ರಸನ್ನ ಧಾರಣಾ ಪದ್ಮಗರ್ಭ ಪಟೂತ್ಪಾದನ ಸನ್ದರ್ಭ। ಕವಿತಾಸರೋಜಿನೀ ಮಕರನ್ದ। ಗಮಕಿಮುಖ ಮುಕುರುನ್ದ। ವಾದಿ ಮನೋಹರ। ವಾಗಿತ್ವ ವಿದ್ಯಾಧರ। ನಿರವದ್ಯ ತಪೋಗುಣಾಭ್ಯುದಯ। ಸಾರಸ್ವತಮಹೋದಯ ಶ್ರೀ ಸೋಮೇಶ್ವರ ಪಂಡಿತದೇವ" (Sk 99) "ನೈಯಾಯಿಕಾಗ್ರೇಸರ. ಸಾಂಖ್ಯಾಗಮ ಪ್ರವೀಣಂ। ಸಾಹಿತ್ಯ ವಿದ್ಯಾ ಮಹಾನದೀ ಪ್ರವಾಹಕ್ಕೆ ಈಶ್ವರ" ಇತ್ಯಾದಿಯಾಗಿ

ಇವನನ್ನು ಹೊಗಳಿವೆ. ಇವನು "ಕೇದಾರ ಕ್ಷೇತ್ರಕ್ಕೆ ವಿದ್ಯಾಭ್ಯುದಯಿಸಿ ಕೇದಾರ ಸ್ಥಾನ ಲಕ್ಷ್ಮೀ ಎಂಬ ಕಲ್ಪವಲ್ಲಿಯನ್ನು ಹುಟ್ಟುಹಾಕಿದವನು" (Sk 100). ಇವನ ಹೆಸರನ್ನು ಹೇಳುವ ಮೊದಲನೆಯ ಶಾಸನದ ಕಾಲ 1094. ಆದ್ದರಿಂದ ಇವನು ಸುಮಾರು 1090 ರಲ್ಲಿ ಸ್ಥಾನಿಕನಾಗಿರಬಹುದು. ಇವನ ಕೀರ್ತಿ ಬಹುದೂರದವರೆಗೂ ಹಬ್ಬಿತ್ತು. ಇವನು ಕೇದಾರಸ್ಥಾನವನ್ನೇ ಅಲ್ಲದೆ ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯದ ಆಗುಹೋಗುಗಳನ್ನು ನೋಡಿಕೊಳ್ಳುತ್ತಿದ್ದ. ಈ ಸೋಮೇಶ್ವರನೇ ಅಬ್ಬಲೂರಿನ ಏಚಗಾವುಂಡನ ಗುರುವೂ ಆಗಿದ್ದ. ಈ ಸೋಮೇಶ್ವರ ಸು. 1120 ರಲ್ಲಿ ಕಾಲವಾಗಿರಬಹುದು.

ಸೋಮೇಶ್ವರನ ನಂತರ ಅವನ ತಮ್ಮ (ಅನುಜ) ವಿದ್ಯಾಭರಣನು ಸ್ಥಾನಿಕನಾದ. ಇವನನ್ನು ಶಾಸನಗಳು 'ನೈಯಾಯಿಕಾನಾಂ ಮುನಿಃ' ಎಂದು ಕರೆದು "ಆ ವಿದ್ಯಾಭರಣಂ ವಿದ್ಯಾವ್ಯಾಸಂಗವಲ್ಲದಿತರ ವ್ಯಾಸಂಗಮನೊಲ್ಲದ ಮಠವ್ಯಾಸಂಗಮಂ ನಿಜಾಗ್ರ ಶಿಷ್ಯನುಂ ಗುರುಕುಲ ಸಮುದ್ಧರಣ ವಾಮಶಕ್ತಿಯುಮೆನಿಸಿದ ವಾಮಶಕ್ತಿಯನ್ನು ನಿಯೋಜಿಸಿದನಂತೆ". (Sk 100). ಆದರೆ ಈ ಶಾಸನ ಸ್ವಲ್ಪ ತೊಡಕಾಗಿದೆ. ಅದೇ ಶಾಸನದ ಕಡೆಯಲ್ಲಿ "ವಿದ್ಯಾಭರಣನು ವಿನೋದಯೋಗ ಸೌಖ್ಯ ಸ್ಥಿತಿ ಭಂಗಾವಹ ವೆಸ್ಟವನೇಳಿಸಿ ಭೂವಿನುತ ನಿಜಾಗ್ರ ಶಿಷ್ಯ ಗೌತಮ ಮುನಿಯೊಳ್ ನಿಜಾಧಿಪತ್ಯಮಂ ನಿಯೋಜಿಸಿದಾಗಳ್" (ಅದೇ 100) ಎಂದಿದೆ. ಈ ಶಾಸನದ ಕಾಲ ಕ್ರಿ.ಶ. 1129. ಮುಂದಿನ ಕೋಡಿಮಠ ಶಾಸನಗಳಾವುಗಳಲ್ಲಿಯೂ ಈ ವಾಮಶಕ್ತಿಯ ಹೆಸರು ಗುರುಪರಂಪರೆಯನ್ನು ಹೇಳುವಾಗ ಬರುವುದಿಲ್ಲ. ಡಾ॥ ಎಂ. ಚಿದಾನಂದಮೂರ್ತಿಯವರು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಗ್ರಂಥದ ಪುಟ 221 ರ ಅಡಿ ಟಿಪ್ಪಣಿಯಲ್ಲಿ ಬಳ್ಳಿಗಾವೆಯಲ್ಲಿ ದೊರೆಯುವ ಒಂದು ವೀರಗಲ್ಲಿನ ಸಹಾಯದಿಂದ (Sk 139)... "ಬಹುಶಃ ಯಾವುದೋ ರಾಜಕೀಯ ವ್ಯವಹಾರಕ್ಕೆ ವಾಮಶಕ್ತಿಮುನಿ ಕೈಹಾಕಿರಬೇಕು. ಈ ವಾಮಶಕ್ತಿ ಬಹುಶಃ ಮೊದಲನೇ ವಾಮಶಕ್ತಿ..." ಎಂದಿರುವರು. ಈ ವೀರಗಲ್ಲಿನಲ್ಲಿ ಉಕ್ತವಾಗಿರುವ ವಾಮಶಕ್ತಿಯಂತೂ ಖಂಡಿತ ಮೊದಲನೇ ವಾಮಶಕ್ತಿಯಲ್ಲ. ಈ ವೀರಗಲ್ಲಿನ ಕಾಲ ಸು. 1160. 'ಭುಜಬಳಚಕ್ರವರ್ತಿ' ಬಿಜ್ಜಳನ ಕಾಲದ್ದು. ಬಹುಶಃ ಗೌತಮನು ಪ್ರಾಪ್ತವಯಸ್ಕನಾಗಿ ಮಠದ ಆಡಳಿತವನ್ನು ವಹಿಸಿಕೊಳ್ಳುವವರೆವಿಗೂ ವಿದ್ಯಾಭರಣನ ಆಜ್ಞೆಯಂತೆ ಸ್ಥಾನಿಕನಾಗಿದ್ದ. ಅನಂತರ ಗೌತಮನು ಪ್ರಾಪ್ತವಯಸ್ಕನಾದಮೇಲೆ ಶುಭ ಸಂದರ್ಭದಲ್ಲಿ ಗೌತಮನಿಗೆ ಸ್ಥಾನಿಕನ ಪಟ್ಟ ಕಟ್ಟಿರಬೇಕು. ಈ ದಾನ ಶಾಸನದಲ್ಲಿ (Sk 100) ವಾಮಶಕ್ತಿ ಸ್ಥಾನಿಕನಾಗಿದ್ದರೂ ದಾನ ಕೊಡುವುದು 'ವಿದ್ಯಾಭರಣ ದೇವರಂ ಬರಿಸಿ ಕಾಲಂಕರ್ಚಿ...' ದಾನಬಿಡುವುದು. ವಾಮಶಕ್ತಿಯ ಕಾಲನ್ನಲ್ಲ 'ಕರ್ಚುವುದು'. ಈ ಸಂಗತಿ ಗಮನಾರ್ಹ. ವಾಮಶಕ್ತಿ

ಕೇವಲ ಹೆಸರಿಗೆ ಮಾತ್ರ ಸ್ಥಾನಿಕನಾಗಿದ್ದಂತೆ ತಿಳಿಯಬಹುದು. ಅದೂ ಅಲ್ಲದೆ ಶಾಸನಗಳಲ್ಲಿ ಎಲ್ಲಿಯೂ ಇವನ ಬಗ್ಗೆ ಕೆಟ್ಟಮಾತನ್ನಾಡದೆ "ಕೇದಾರ ಸ್ಥಾನಲಕ್ಷ್ಮೀ ಸ್ವ ಮಜನಿಜಗತೇ ಕಲ್ಪವಲ್ಲೀ ರೋಹಾವಸ್ಥಾ ಸೋಮೇಶ್ವರಾರ್ಯಾದುಚಿತ ತಪಸೋನ ನ್ತರಂ ವಾಮಶಕ್ತೇ। ಸಂಶಾಖಾಪಲ್ಲ ಸತ್ಪಲ್ಲವ ಸಮುಚಿತಾ ಪುಷ್ಪಿತಾಸಂ ಪರೀತಾ ಸರ್ವಾಮುರ್ವೀಂ ತತೋನು ಪ್ರಭವತಿ ಫಳಿತಾ ಗೌತಮಾಚಾರ್ಯ ವರ್ಯ್ಯಾತ್॥" ಅಂದರೆ ಕೇದಾರ ಸ್ಥಾನಲಕ್ಷ್ಮಿ ಎಂಬ ಬಳ್ಳಿಯನ್ನು ಹುಟ್ಟುಹಾಕಿದವನು (ಬೆಳೆಸಿ ದವನು) ಸೋಮೇಶ್ವರ. ಅದು ವಾಮಶಕ್ತಿ ಕಾಲದಲ್ಲಿ ಶಾಖೆಗಳಾಗಿ ಒಡೆಯಿತು. ಗೌತಮನ ಕಾಲದಲ್ಲಿ ಫಲಬಿಡಲು ಪ್ರಾರಂಭಿಸಿತು ಎಂದಿದೆ. ಆದ್ದರಿಂದ ವಾಮ ಶಕ್ತಿ ವಿದ್ಯಾಭರಣನನ ಪ್ರಕಾಶದಿಂದ ಮುಚ್ಚಿ ಹೋಗಿ ಮುಂದೆ ಶಾಸನಗಳು ಅವ ನನ್ನು ಮರೆಯುವಂತೆ ಮಾಡಿದುವೆಂದು ಭಾವಿಸಬಹುದು.

ಗೌತಮ ಮುನಿಗೆ ವಿದ್ಯಾಭರಣನೇ ಪಟ್ಟವನ್ನು ಕಟ್ಟುತ್ತಾನೆ. ಈ ಮುನಿ ಗೌತಮನು "ವಿನಿರ್ಮಳತರ ರತ್ನದೀಪ ಕಾಳಿಕಾಂಕುರದನ್ತೆ ನಿರಂತರಂ ಜಗದ್ವಿಳಸಿತ ಕೀರ್ತಿವಲ್ಲೆಳಗಿದಂ (Sk 100)". ಇವನು ದೀರ್ಘಕಾಲ ಸ್ಥಾನಪತಿಯಾಗಿದ್ದ. 1149 ರ ಶಾಸನದಲ್ಲಿ ಈತನೇ ಕಾಣಿಸಿಕೊಳ್ಳುತ್ತಾನೆ. ಈ ಗೌತಮನು ಬಳ್ಳಿಗಾವೆಯ ಕುಸುಮೇ ಶ್ವರ ದೇವಾಲಯದ ಆಗುಹೋಗುಗಳನ್ನು ನೋಡಿಕೊಂಡು ಆ ದೇವಾಲಯಕ್ಕೆ ಬಿಡುತ್ತಿದ್ದ ದತ್ತಿಗಳನ್ನು ತಾನೇ ಸ್ವೀಕರಿಸುತ್ತಿದ್ದ.

ಈ ಗೌತಮ ಮುನಿಯ ಶಿಷ್ಯನೇ ಎರಡನೇ ವಾಮಶಕ್ತಿ. ಮೊದಲನೇ ವಾಮ ಶಕ್ತಿ ವಿದ್ಯಾಭರಣನ ಶಿಷ್ಯ. ಈ ವಾಮಶಕ್ತಿ ಗೌತಮನ ಶಿಷ್ಯ. ಇವನು 1149–1156 ರ ಮಧ್ಯೆ ಸ್ಥಾನಿಕನಾಗಿ ಬಂದಿರಬಹುದು. ಇವನು ಸ್ಥಾನಿಕನಾದ ಮೇಲೆ ದಾನಸ್ವೀಕರಿಸುವ ವಿಷಯ ತಿಳಿಸುವ ಶಾಸನದ ಕಾಲ 1156. ಆದ್ದ ರಿಂದ ಇವನು ಸು. 1150 ರಲ್ಲಿ ಸ್ಥಾನಿಕನಾದನೆಂದು ಊಹಿಸಬಹುದು. ಈ ವಾಮ ಶಕ್ತಿಯೇ ಕೇದಾರ ಮಠದ ಗುರು ಪರಂಪರೆಯಲ್ಲೆಲ್ಲಾ ಪ್ರಖ್ಯಾತನಾದ ಕೊನೆಯ ಗುರು. ಇವನು ಬಂದ ಮೇಲೆ ಕೋಡಿಮಠ ಅನೇಕ ಚಟುವಟಿಕೆಗಳ ಸ್ಥಾನ ವಾಯಿತು. ಈ ವಾಮಶಕ್ತಿ "ಶಬ್ದೇ ಪಾಣಿನಿ ಪಂಡಿತೋ ನಯಚಯೇ ಶ್ರೀ ಭೂಷಣಾಚಾರ್ಯ್ಯಕಃ ನಾಟ್ಯಾದೌ ಭರತೇ ಮುನಿಸ್ತು ಭರತಃ ಕಾವ್ಯೇಸುಭಂದು ಸ್ವಯಂ ಸಿದ್ಧಾಂತೇ ಲಕುಲೀಶ್ವರಃ ಶಿವಪದೇಸ್ಕಂದೋ ಮಹೀಮಂಡಲೇ ಸೋಯಂ ರಾಜಗುರುರ್ಯ್ಯಥಾರ್ತ ಕಥಿತಃ" (Sk 92) ಎಂದು ಹೊಗಳಿದೆ. ಇವನ ಶಕ್ತಿ ಹೇಗಿತ್ತೆಂದರೆ "ವದನಂವಾಣೀ ನರ್ತನ ಸದನಂ ಮದನ ಪರಂಗನೆ ಭೂತಳ ವಿದಿತ ಯಶವಾಮಶಕ್ತಿಪಣ್ಡಿತದೇವ" (Sk 102). ಇವನಿಗೆ ಕಾಮನು ಭಯಪಟ್ಟು ಕಾಂತೆ ಯರ ಗುಡಿಹುಬ್ಬುಗಳಲ್ಲಿ ತನ್ನ ಬಿಲ್ಲನ್ನು ಅಡಗಿಸಿಟ್ಟಿದ್ದಾನಂತೆ...ಇವನ ಎದುರಿಗೆ ಬರಲಾರದೆ 'ಅನಂಗ'ನಾಗಿದ್ದಾನಂತೆ (102). ಕವಿ. ಗಮಕಿ. ವಾದಿ. ವಾಗ್ಮಿ ಅಪ್ರತ್ಯ

ದೋಷದುರ್ಲಭರುಂ, ಆಶ್ರಿತಜನವಲ್ಲಭರುಂ, ... ವಿಶಿಷ್ಟ ನಾನಾ ಮಂತ್ರ ಸಾಧಕರಪ್ಪ ಶ್ರೀಮದ್ರಾಜಗುರು ವಾಮಶಕ್ತಿ ಪಣ್ಡಿತದೇವ. ಇವನು ಸು. 40 ವರ್ಷಗಳ ಕಾಲ ಮಠಾಧಿಪತಿಯಾಗಿದ್ದ. ಕೋಡಿಮಠ ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಇವನ ಕಾಲದಲ್ಲಿ ಪ್ರಸಿದ್ಧಿಗೆ ಬಂತು. ಇವನ ಕಾಲದಲ್ಲಿ ಬನವಸೆನಾಡು ಅನೇಕ ಬಗೆಯ ದುಷ್ಟ ಯೋಜನೆಗಳ ಸ್ಥಳವಾಗಿತ್ತು. ಚಾಲುಕ್ಯರನ್ನು ಸೋಲಿಸಲು ಬಿಜ್ಜಳನಿಗೆ ಸಹಾಯ ಮಾಡಿದ್ದು ಈ ಬನವಸೆ ನಾಡು. ಇದರ ನಾಯಕ ಆಗ ಕಸಪಯ್ಯ. ಈ ವಾಮಶಕ್ತಿಯು ಬಿಜ್ಜಳ ಹಾಗೂ ಕಸಪಯ್ಯ ಇಬ್ಬರಿಗೂ ರಾಜಗುರು. ಬಿಜ್ಜಳ ಕಸಪಯ್ಯರಿಬ್ಬರೂ ಈ ಮಠಕ್ಕೆ ದತ್ತಿಗಳನ್ನು ಬಿಟ್ಟಿದ್ದಾರೆ. ಈ ವಾಮಶಕ್ತಿ ಕಾಲದಲ್ಲಿ ಕೇದಾರೇಶ್ವರ ಮಠವು ಆ ಊರಿನಲ್ಲೇ ಬಹು ಪ್ರಮುಖವಾಗಿದ್ದಿತು. ಶಿಕಾರಿಪುರ 123 ನೇ ಶಾಸನದಲ್ಲಿ, ಅನೇಕ ದೇವಾಲಯಗಳಿಗೆ ದಾನ ಕೊಡುವಾಗ ಮುಖ್ಯವಾಗಿ ವಾಮಶಕ್ತಿಯ ಕಾಲನ್ನು ತೊಳೆದು ದಾನ ಕೊಡುತ್ತಾರೆ. ವಾಮಶಕ್ತಿಯನ್ನು ಬಂದಿ ಹಿಡಿಯುವ ವಿಚಾರವನ್ನು ತಿಳಿಸುವ ವೀರಗಲ್ಲಿನ ಕಾಲ ಸು. 1160 ಈ ವಾಮಶಕ್ತಿಯ ಕಾಲಕ್ಕೆ ಸಂಬಂಧಿಸಿದ್ದು. ಬಹುಶಃ ಬಿಜ್ಜಳನಿಗಾಗದವರು ಇವನನ್ನು ಬಂದಿ ಹಿಡಿಯಲು ಬಂದಿರಬಹುದು. ಕಾರಣ ಬನವಸೆಯ ರಾಜಧಾನಿ ಬಳ್ಳಿಗಾವೆ. ಆದರಲ್ಲಿ ಮುಖ್ಯವಾದ ಸ್ಥಳ ಆಗ ಕೇದಾರಮಠವೆಂದೇ ಹೇಳಬಹುದು. ಬಿಜ್ಜಳ ಮತ್ತು ಕಸಪಯ್ಯರ ಗುರುವಿದ್ದ ಸ್ಥಳ ಬಹುಶಃ ಬಿಜ್ಜಳ ಮತ್ತು ಕಸಪಯ್ಯ ಇವರು ಮಾಡುತ್ತಿದ್ದ ಒಳಸಂಚಿನಲ್ಲಿ (ಕಲ್ಯಾಣಿ ಚಾಲುಕ್ಯರನ್ನು ಸಿಂಹಾಸನದಿಂದ ಇಳಿಸಿ ಕಳಚೂರ್ಯರು ಸಿಂಹಾಸನವೇರುವುದು) ಈ ಮಠದ ಗುರು ವಾಮಶಕ್ತಿಯೂ ಸೇರಿದ್ದಿರಬಹುದು. ಇದಕ್ಕಿಂತ ಮುಖ್ಯವಾಗಿ ಧಾರ್ಮಿಕವಾಗಿ ನೋಡುವುದಾದರೆ ಕಲ್ಯಾಣದಲ್ಲಿ ಆಗಲೇ ಅನೇಕ ಜನ ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿದ್ದರು. ಆಗ ಆ ಹೊಸ ಪಂಥಕ್ಕೆ ಕಾಳಾಮುಖರು ವಿರೋಧಿಗಳಿದ್ದಿರಬಹುದು. ಈ ವಾಮಶಕ್ತಿ ಕಾಳಾಮುಖ ಪಂಥಕ್ಕೆ ಸೇರಿದವನು; ಬಿಜ್ಜಳನ ಗುರು. ಆಗ ಉಂಟಾಗುತ್ತಿದ್ದ ಘರ್ಷಣೆಯಲ್ಲಿ ಕೆಲವರು ಈ ವಾಮಶಕ್ತಿಯನ್ನು ಬಂಧಿಸಲು ಬಂದಿರಬಹುದು. ಇದೆಲ್ಲಾ ಕೇವಲ ಊಹೆಯ ಮೇಲೆ ನಿಂತಿದೆ. ಹೀಗೆಯೇ ಎಂದು ಹೇಳುವುದು ಕಷ್ಟ. ಅಂತೂ ಬಂಧಿಸಿದಾಗ, ಪದ್ಮರಸನ ಬೆಸದಿಂದ ತೋಣವತ್ತಿಯ ಮೋಜಿಗಾರ ಬಾಚೆಯ ನಾಯು ಕಾದು ಸತ್ತಂತೆ ವೀರಗಲ್ಲು ತಿಳಿಸುತ್ತದೆ. ಬಹುಶಃ ಈ ಕಾಳಾಮುಖ ಪಂಥಕ್ಕೆ ಬಿಜ್ಜಳ ಪ್ರೋತ್ಸಾಹಿಸುತ್ತಾ ಇದ್ದು, ಬಸವಣ್ಣನವರ ಅನುಯಾಯಿಗಳು ಹೆಚ್ಚಾದಾಗ ಇದನ್ನು ಸಹಿಸದೆ ಇದ್ದಿರಬಹುದು. ಅಂತೂ ಈ ವಾಮಶಕ್ತಿಯ ಕಾಲದಲ್ಲಿ ರಾಜಕೀಯವಾಗಿ ಈ ಮಠವು ಬಹು ಪ್ರಸಿದ್ಧವಾಗಿರುತ್ತದೆ.

ಎರಡನೇ ವಾಮಶಕ್ತಿಯ ಕಾಲದಲ್ಲಿಯೇ ಅವನ ಒಬ್ಬ ಶಿಷ್ಯನ ಹೆಸರು ತಿಳಿಯುತ್ತದೆ. ಅವನೇ ಜ್ಞಾನಶಕ್ತಿ (Sk 101). ಆದರೆ ಇವನು ಕೋಡಿಮಠದ

ಗುರುವಾಗಿದ್ದನೆ ಇಲ್ಲವೆ ಎಂಬುದು ಸಂಶಯ. ಎರಡನೇ ವಾಮಶಕ್ತಿ 1192 ರ ವರೆವಿಗೂ ಗುರುವಾಗಿದ್ದಂತೆ ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿಂದ ಮುಂದೆ 1215 ರ ಶಾಸನವೊಂದರಲ್ಲಿ ಶ್ರೀಕಂಠದೇವರ ಶಿಷ್ಯರಪ್ಪ ಮಹಾಬ್ರತಿ ವಾಮಶಕ್ತಿ ಎಂದು ಬರುತ್ತದೆ. 1192–1215 ರ ವೇಳೆಗೆ ಸುಮಾರು ಮೂವರು ಸ್ಥಾನಿಕರು ಆಗಿಹೋದಂತೆ ತಿಳಿದು ಬರುತ್ತದೆ. ಇದರ ನಂತರದ ಇತಿಹಾಸ ಸ್ಪಷ್ಟವಿಲ್ಲ. ಬಹುಶಃ ಅನಂತರ ಇದು ನಿಧಾನವಾಗಿ ವೀರಶೈವರ ಮಠವಾದಂತೆ ಊಹಿಸ ಬಹುದು.

ಕೋಡಿಯಮಠದಲ್ಲಿ ಅನೇಕ ಬಗೆಯ ಚಟುವಟಿಕೆಗಳು ನಡೆಯುತ್ತಿದ್ದುವು. ಮುಖ್ಯವಾಗಿ ಇದೊಂದಂ ಕಾಳಾಮುಖ ಪಂಥದ ಧಾರ್ಮಿಕಮಠ. ಸು 10-11 ನೇ ಶತಮಾನದ ದೇವಾಲಯಗಳೆಲ್ಲಾ ತಮಗೆ ಹೊಂದಿದಂತೆ ಒಂದು ಮಠವನ್ನು ಪಡೆ ದಿರುತ್ತಿದ್ದುವು. ದೇವಾಲಯ ಮತ್ತು ಮಠ ಎರಡೂ ಅವಿಭಾಜ್ಯವಾಗಿರುತ್ತಿದ್ದುವು. ದೇವಾಲಯಕ್ಕೆ ದತ್ತಿ ಬಿಟ್ಟರೂ ಒಂದೆ. ಮಠಕ್ಕೆ ದತ್ತಿ ಬಿಟ್ಟರೂ ಒಂದೆ. ಒಬ್ಬನು ಒಂದು ದೇವಾಲಯವನ್ನು ಕಟ್ಟಿಸಿದನೆಂದರೆ ಉಳಿದವರು ಅವರ ಯೋಗ್ಯತೆಗೆ, ಶಕ್ತಿಗೆ, ವೃತ್ತಿಗೆ ತಕ್ಕಂತೆ ದತ್ತಿ ಬಿಡುತ್ತಿದ್ದರು. ದೇವಾಲಯವೆನ್ನುವುದು ಆ ಊರಿನ ಎಲ್ಲಾ ಚಟುವಟಿಕೆಗಳ ಕೇಂದ್ರವಾಗಿತ್ತೆನ್ನಬಹುದು. ಜನತೆ ಅದರ ಬಗ್ಗೆ ಬಹಳ ಉತ್ಸಾಹ ತೋರಿಸುತ್ತಿದ್ದರು. ಅಂತಹ ದೇವಾಲಯಕ್ಕೆ. ಕೆಲವು ಸಲ ಆ ಊರಿನ ಇನ್ಯಾವುದೇ ಕಾರ್ಯಕ್ಕೆ ದತ್ತಿ ಬಿಡಬೇಕಾಗಿ ಬಂದರೂ ಆ ದೇವಾಲಯದ ಸ್ಥಾನಿಕನ ಮತ್ತು ಆ ಊರಿನ ಮಹಾಜನರ ಒಪ್ಪಿಗೆ ಪಡೆದು ಅವರ 'ಕಾಲಂಕರ್ಚಿ' ದತಿ ಬಿಡಬೇಕಿತ್ತು. ಇದೇ ಮಾತು ಕೋಡಿಯಮಠಕ್ಕೂ ಅನ್ವಯಿಸುತ್ತದೆ. ಬಳ್ಳಿ ಗಾವೆಗೆ ಬಂದವರು ಅಲ್ಲಿನ ವೈಭವವನ್ನು ನೋಡಿ ಏನಾದರೂ ದಾನಕೊಡಬೇಕೆಂದು ಮನಸ್ಸು ಮಾಡುತ್ತಿದ್ದರಂತೆ. "ಮಠ ಧರ್ಮದ ಪೆರ್ಮೆಯುಮಂ ತನ್ಮಠಾಚಾರ್ಯರ ಧರ್ಮವಿದ್ಯಾ ತಪಶ್ಶೀಲತೆಯುಮಂ ಕೇಳ್ದು ರೋಮಾಂಚಕಂಚುಕಿತ ಗಾತ್ರನುಂ ಪ್ರಸನ್ನ ನೇತ್ರನುಮಾಗಿ......ನಾಮೇನಾನುಂ ಧರ್ಮಮನಾ ಸ್ಥಾನದೊಳ್ ಮಾಡ ಲ್ವೇಳ್ಕುಂ" (Sk 100) ಎಂದು ದಾನಬಿಡುತ್ತಿದ್ದರು. ಶಾಸನಗಳಲ್ಲಿ ಆ ಮಠದಲ್ಲಿನ ಚಟುವಟಿಕೆಗಳ ವರ್ಣನೆ ಬರುತ್ತದೆ.

"ಶಿವಲಿಂಗ ಪೂಜಾ ಪ್ರಕಶಸ್ಯ ಸರಸ ಕೇದಾರಸ್ಥಾನಮುಂ. ನೈಷ್ಠಿಕ ಬ್ರಹ್ಮ ಚರ್ಯ ಶಿವಮುನಿಜನಾನುಷ್ಠಾನ ನಿಷ್ಠಿತ ಸ್ಥಾನಮುಂ, ಸಾಂಗಋಗ್ಯಜುಸ್ಸಾಮಾಥರ್ವ ಚತುರ್ವೇದ ಸ್ವಾಧ್ಯಾಯ ಸ್ಥಾನಮುಂ. ಕೌಮಾರ ಪಾಣಿನೀಯ ಶಾಕಟಾಯನ ಶಬ್ದಾನುಶಾಸನಾದಿ ವ್ಯಾಕರಣ ವ್ಯಾಖ್ಯಾನ ಸ್ಥಾನಮುಂ. ನ್ಯಾಯ ವೈಶೇಷಿಕ ಮೀಮಾಂಸಾ ಸಾಂಖ್ಯ ಬೌದ್ಧಾದಿ ಷಡುದರ್ಶನ ವ್ಯಾಖ್ಯಾನಮುಂ. ಲಾಕುಳಸಿದ್ಧಾಂತ ಪಾತಂಜಳಾದಿ ಯೋಗಶಾಸ್ತ್ರ ವ್ಯಾಖ್ಯಾನಮುಂ, ಅಷ್ಟಾದಶ ಪುರಾಣ ಧರ್ಮಶಾಸ್ತ್ರ,

ಸಕಳ ಕಾವ್ಯನಾಟಕ ನಾಟಕಾದಿ ವಿವಿಧ ವಿದ್ಯಾಸ್ಥಾನಮುಂ, ದೀನಾನಾಥ ಪಂಗ್ವಂಧ ಬಧಿರ ಕಥಕ ಗಾಯಕ ವಾದಕ ವಾಂಶಿಕ ನರ್ತಕ ವೈತಾಳಿಕ ನಗ್ನಭಗ್ನ ಕ್ಷಪಣಕೈಕದಂಡಿ ತ್ರಿದಂಡಿ ಹಂಸ ಪರಮಹಂಸಾದಿ ನಾನಾದೇಶ ಭಿಕ್ಷುಕಜನಾಭ್ಯವಹಾರ್ಯಾನ್ನದಾನಾಸ್ಥಾನಮುಂ, ನಾನಾನಾಥ ರೋಗಿಜನ ರೋಗ ಭೈಷಜ್ಯ ಸ್ಥಾನಮುಂ, ಸಕಲ ಭೂತಾಭಯ ಪ್ರದಾನ ಸ್ಥಾನಮುಂ ಆಗಿ ಕೋಡಿಯ ಮಠಮಿರ್ಪ್ಪುದು" (Sk 102). ಹೀಗೆ ಈ ಮಠ ನಾನಾ ದೇಶದ ವಿದ್ಯಾರ್ಥಿಗಳನ್ನು ಬರಮಾಡಿಕೊಂಡಿತ್ತು. ಚತುರ್ವೇದಗಳು, ಕೌಮಾರ ಪಾಣಿನೀಯ ಮುಂತಾದ ವ್ಯಾಕರಣಗಳೂ ನ್ಯಾಯ, ಮೀಮಾಂಸ, ಲಾಕುಳ ಸಿದ್ಧಾಂತ, ಪಾತಂಜಳಯೋಗಶಾಸ್ತ್ರ, ಪುರಾಣ, ಕಾವ್ಯ, ನಾಟಕಗಳ ಅಧ್ಯಯನವೂ ನಡೆಯುತ್ತಿತ್ತು. ಇದೇ ಅಲ್ಲದೆ ನಾನಾ ದೇಶದ ಭಿಕ್ಷುಗಳ, ಸನ್ಯಾಸಿಗಳ, ಅನಾಥರ, ಕಿವುಡ, ಕುಂಟ, ಮೂಗರ ಆಶ್ರಯಸ್ಥಾನವಾಗಿತ್ತು. ಇದಲ್ಲದೆ ನಾನಾ ರೋಗಿ ಜನಗಳಿಗೆ ಔಷಧ ದಾನವೂ ನಡೆಯುತ್ತಿತ್ತು.

ಇವೆಲ್ಲಕ್ಕಿಂತ ಹೆಚ್ಚಾಗಿ ಇದು ಕೈಗೊಂಡ ಕಾರ್ಯವೆಂದರೆ ವಿದ್ಯಾದಾನ. ಜನತೆಯೂ ಇದಕ್ಕೆ ಬಹುವಾಗಿ ಪ್ರೋತ್ಸಾಹಿಸುತ್ತಿದ್ದಂತೆ ಕಂಡುಬರುತ್ತದೆ. ಯಾವುದೇ ಮಠದ ಗುರುಗಳಿಗೆ ದಾನಕೊಡುವಾಗ ಅಲ್ಲಿ ವಿದ್ಯಾಭ್ಯಾಸ ನಡೆಯುತ್ತಿದ್ದರೆ 'ವಿದ್ಯಾರ್ಥಿಗಳಾಹಾರ ದಾನಕ್ಕಂ' ಎಂಬ ಮಾತನ್ನು ಇತರ ದಾನಗಳ ಜೊತೆಯಲ್ಲಿ ಹೆಸರಿಸುತ್ತಿದ್ದರು. ಕೋಡಿಮಠದ ಎಲ್ಲ ಶಾಸನಗಳಲ್ಲಿಯೂ ಈ ಮಾತು ಬಂದಿರುತ್ತದೆ.

ಕೋಡಿಮಠದಲ್ಲಿ ಕಾಳಾಮುಖ ಪಂಥದ ವಿದ್ಯಾಭ್ಯಾಸ ನಡೆಯುತ್ತಿತ್ತು. ಆದರೆ ಕೋಡಿಮಠದಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ವಿದ್ಯೆಕಲಿಯುತ್ತಿದ್ದರೆಂದು ಹೇಳುವುದು ಸಾಧ್ಯವಿಲ್ಲ. ಇಲ್ಲಿನ ಭಾಷೆಯ ಮಾಧ್ಯಮವಾವುದು ಎಂದು ಊಹಿಸುವುದೂ ಕಷ್ಟ. ಬಹುಶಃ ಅದು ಸಂಸ್ಕೃತ. ಕನ್ನಡವನ್ನು ನೆಪಮಾತ್ರಕ್ಕೆ ಕಲಿಸುತ್ತಿದ್ದಿರಬಹುದು. ಬೇರೆ ಕಡೆಯ ಶಾಸನಗಳನ್ನು (ಶಿಕಾರಿಪುರ 185) ಅವಲೋಕಿಸಿದಾಗ ಅಲ್ಲಿ 'ಕನ್ನಡಕ್ಕರಶಿಕ್ಷೆ ಕನ್ನಡುಪಾಧ್ಯಾಯಂಗೆ' ಎಂದು ಬಂದಿರುವುದರಿಂದ ಕನ್ನಡವನ್ನು ಕಲಿಸುತ್ತಿದ್ದರೆಂಬುದಕ್ಕೆ ಆಧಾರ. ಬಾಲಶಿಕ್ಷೆಯ ಬಗ್ಗೆ ಎಲ್ಲಿಯೂ ಸ್ಪಷ್ಟ ಉಲ್ಲೇಖವಿಲ್ಲ. ಕೆಲವು ಶಾಸನಗಳಲ್ಲಿ ವಿದ್ಯಾರ್ಥಿಗಳನ್ನು (1) ವಿದ್ಯಾರ್ಥಿ ಮಾಣಿಯರು (2) ವಿದ್ಯಾರ್ಥಿ ತಪೋಧನರೆಂದು ಎರಡು ಭಾಗವಾಗಿ ವಿಂಗಡಿಸಿರುತ್ತಾರೆ. ಇದನ್ನು ಅವಲೋಕಿಸಿದಾಗ ವಿದ್ಯಾರ್ಥಿ ಮಾಣಿಯರಲ್ಲಿ ಬಾಲ ಶಿಕ್ಷೆಯೂ ಸೇರಿರಬೇಕು. ಈ ವಿದ್ಯಾರ್ಥಿ ಮಾಣಿಯರು ಬಹುಶಃ ಮುಂದೆ ಗೃಹಸ್ಥ ಧರ್ಮವನ್ನು ಸ್ವೀಕರಿಸುತ್ತಿದ್ದರೆನ್ನಬಹುದು. ವಿದ್ಯಾರ್ಥಿ ತಪೋಧನರು ಮುಂದೆ ಅದೇ ಮಠಕ್ಕೆ ಸೇರಿದಂತೆ ಬೇರೆ ಕಡೆಯಲ್ಲಿ ಅದರ ಶಾಖೆಗಳನ್ನು ತೆರೆದು ಆ ಮಠಗಳ ಸ್ಥಾನಿಕರಾಗುತ್ತಿದ್ದರು. ಇಲ್ಲಿ ಬೋಧಿಸುತ್ತಿದ್ದ ವಿಷಯಗಳ ಪಟ್ಟಿಯನ್ನು ನೋಡಿದರೆ, ಇಲ್ಲಿನ

ವಿದ್ಯಾಭ್ಯಾಸ ವೈದಿಕ ರೀತಿಯಲ್ಲಿ ನಡೆಯುತ್ತಿತ್ತೆಂದು ಹೇಳಬಹುದು. ಬೇರೆ ಪರಸ್ಥಳದಿಂದ ಬಂದಂತಹ ವಿದ್ಯಾರ್ಥಿಗಳಿಗೆ ಅನ್ನದಾನವನ್ನು ಮಠದ ಮುಖಾಂತರ ಮಾಡುತ್ತಿದ್ದರು.

ಕೋಡಿಮಠದ ಗುರು ಪರಂಪರೆ ಬಹು ವಿದ್ವತ್ತಿನಿಂದ ಕೂಡಿದ್ದು, ಹಾಗೂ ಬಹುಮುಖ ಚಟುವಟಿಕೆಗಳಿಂದ ಕೂಡಿದ್ದು, ಜನಗಳ ಮನಸ್ಸಿನಲ್ಲಿ ಇದು (ಈ ದೇವಾಲಯ) ಕೇದಾರ ಪರ್ವತದಷ್ಟು ಪವಿತ್ರವೆಂದೂ, ಇಲ್ಲಿ ತಪಸ್ಸು ಮಾಡುತ್ತಿದ್ದ ತಪೋಧನರು ಕೇದಾರ ಪರ್ವತದ ತಪಸ್ವಿಗಳಿಗೆ ಸಮಾನರಾಗಿದ್ದರೆಂದೂ ಆದ್ದರಿಂದಲೇ ಇದು ದಕ್ಷಿಣ ಕೇದಾರವೆಂದು ಹೆಸರನ್ನು ಪಡೆಯಿತೆಂದೂ ಶಾಸನಗಳು ಹೊಗಳುತ್ತವೆ. ರಾಜರು, ವರ್ತಕರು, ಮಾಂಡಳಿಕರು. ಜನಗಳು, ಆ ಕೇದಾರ ದೇವಾಲಯದ ಬಳಿಗೆ ಬಂದು ಅಲ್ಲಿನ ತಪೋಧನರನ್ನೂ, ಅವರ ಶಿಷ್ಯ ಸಮೂಹವನ್ನೂ, ಆ ಮಠದಲ್ಲಿ ನಡೆಯುತ್ತಿದ್ದ ವಿದ್ಯಾದಾನ, ಅನ್ನದಾನ ಇತ್ಯಾದಿಗಳನ್ನು ಕಂಡು ದಾನ ಮಾಡಬೇಕೆಂಬ ಮನಸ್ಸು ಹುಟ್ಟಿ, ಹಾಗೆಯೇ ಸುಮ್ಮನಿರದೆ "ಬಲಿಪುರದ ದಕ್ಷಿಣ ಕೇದಾರದೇವರ ನೈವೇದ್ಯಕ್ಕಂ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕಂ ತಪೋಧನರಾಹಾರದಾನಕ್ಕಂ ವಿದ್ಯಾದಾನಕ್ಕಂ" ಎಂದು ಸೂಚಿಸಿ ದಾನ ಬಿಡುತ್ತಿದ್ದರು. ಚಾಳುಕ್ಯರು, ಕಳಚುರ್ಯರು, ಹೊಯ್ಸಳರು ಈ ಮಠದ ಮುಖ್ಯ ಪೋಷಕರಾಗಿದ್ದರು. ಈ ಮಠ ಸು. 1060 ರಲ್ಲಿ ಪ್ರಾರಂಭವಾಗಿ 2 ನೇ ವಾಮಶಕ್ತಿ ಕಾಲದಲ್ಲಿ ಅತ್ಯುನ್ನತ ಸ್ಥಿತಿಗೇರಿ 1215 ರ ವರೆವಿಗೂ ಜೀವಂತವಾಗಿದ್ದು ಅನಂತರ ಅದು ಕಣ್ಮರೆಯಾಯಿತೆನ್ನಬಹುದು. ಈ ರೀತಿ ಸುಮಾರು 150 ವರ್ಷಗಳು ಬಾಳಿ ಅನೇಕ ರೀತಿಯಲ್ಲಿ ಸಮಾಜಸೇವೆ ಮಾಡಿ ಬಹುಶಃ ವೀರಶೈವ ಮಠದ ಪ್ರಭಾವದಿಂದ ಕಣ್ಮರೆಯಾಯಿತೆನ್ನಬಹುದು. ವೀರಶೈವರ ಪ್ರಾಬಲ್ಯ ಕರ್ಣಾಟಕದಲ್ಲಿ ಹೆಚ್ಚುತ್ತಾ ಹೋದಂತೆ ಕಾಳಾಮುಖ ಮಠಗಳು ಅನೇಕ ವೀರಶೈವಮಠಗಳಾಗಿ ಪರಿವರ್ತನೆ ಹೊಂದಿದುವೆಂಬ ಸಂಗತಿ ಸುಪ್ರಸಿದ್ಧವಾದುದೇ ಆಗಿದೆ.

ಶಾಸನಗಳಿಂದ ತಿಳಿದು ಬರುವ ಕೋಡಿ ಮಠದ ಗುರುಪರಂಪರೆ:

ಕೇದಾರಶಕ್ತಿ
↓
ಶ್ರೀಕಣ್ಠ ಪಣ್ಡಿತ
↓
ಸೋಮೇಶ್ವರ ಪಣ್ಡಿತ
↓
ವಿದ್ಯಾಭರಣ
↓
- 1 ನೇ ವಾಮಶಕ್ತಿ
- ಗೌತಮಮುನಿ
  ↓
  2 ನೇ ವಾಮಶಕ್ತಿ
  ↓
  ಜ್ಞಾನಶಕ್ತಿ
  ↓
  ಶ್ರೀಕಣ್ಠ ಪಣ್ಡಿತ
  ↓
  3 ನೇ ವಾಮಶಕ್ತಿ

ಸಹಾಯಕ ಲೇಖನ ಮತ್ತು ಗ್ರಂಥಗಳು:

(1) EC. Vol VII part I

(2) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ॥ ಎಂ. ಚಿದಾನಂದಮೂರ್ತಿ

(3) ಕರ್ನಾಟಕ ಲಾಕುಳ ಶೈವರ ಇತಿಹಾಸ : ಕಪಟರಾಳ ಕೃಷ್ಣರಾಯ

ಇತರ ಗ್ರಂಥಗಳು :

ಕರ್ನಾಟಕ ವಾಸ್ತುಶಿಲ್ಪ - ವೆಂಕೋಬರಾಯರು

ಹೊಯ್ಸಳ ವಾಸ್ತುಶಿಲ್ಪ : ಎಸ್. ಶ್ರೀಕಂಠಶಾಸ್ತ್ರೀ

ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ - ೧೯೭೩ (ಲೇಖನ)

ಅನಿಷೇಕಜನನ

ಬ. ನಂ. ಚೋಳೇಗೌಡ

ಜೀವಜಗತ್ತಿನಲ್ಲಿ ಸಂತಾನೋತ್ಪತ್ತಿಯ ವಿಧಿವಿಧಾನಗಳು ಅಪಾರ ಹಾಗೂ ವಿಚಿತ್ರ. ಈ ವಿವಿಧ ವಿಧಾನಗಳನ್ನು ಸ್ಥೂಲವಾಗಿ ಎರಡು ಪ್ರಮುಖ ಬಗೆಗಳಾಗಿ ವಿಂಗಡಿಸಬಹುದು. ಒಂದು, ಕಾಯಜನ್ಯ (Somato genic) ಸಂತಾನೋತ್ಪತ್ತಿ. ಮತ್ತೊಂದು ಜೀವಕೋಶಜನ್ಯ (Cytogenic) ಸಂತಾನೋತ್ಪತ್ತಿ. ಮೊದಲನೆಯದು ಪರಿಶುದ್ಧವಾದ ಅಲೈಂಗಿಕ ರೀತಿಯ ಸಂತಾನೋತ್ಪತ್ತಿ. ಇದರಲ್ಲಿ ಸಂಶಯವೇ ಇಲ್ಲ. ಕಬ್ಬು, ಆಲೂಗಡ್ಡೆ, ಗುಲಾಬಿ ಮೊದಲಾದುವುಗಳನ್ನು ಬೆಳೆಯಬೇಕಾದರೆ, ಅವುಗಳ ದೇಹದ (ಗಿಡದ) ಭಾಗಗಳನ್ನು ಕತ್ತರಿಸಿ ಬೆಳೆಸುವ ವಿಧಾನ ಇದಕ್ಕೆ ಉದಾಹರಣೆ. ಹಾಗೆಯೇ ತೇವಮಯ ಅಥವಾ ಜಲಾಶಯ ಪ್ರದೇಶಗಳಲ್ಲಿ ವಾಸಿಸುವ ಚಪ್ಪಟೆ ಹುಳು, ಸಮುದ್ರವಾಸಿ ನಕ್ಷತ್ರಮೀನು, ಕೆಲವು ಬಗೆಯ ಕ್ರಿಮಿ ಮೊದಲಾದ ಪ್ರಾಣಿಗಳ ದೇಹವನ್ನು ತುಂಡರಿಸಿದರೆ, ಪ್ರತಿಯೊಂದು ತುಂಡೂ ತನ್ನ ನಷ್ಟವಾದ ಭಾಗವನ್ನು ಪುನರ್ರಚಿಸಿಕೊಂಡು ಪರಿಪೂರ್ಣ ಜೀವಿಯಾಗಿ ಬೆಳವಣಿಗೆ ಹೊಂದುವುದನ್ನು ಕಾಣ ಬಹುದು. ಹೈಡ್ರಾ ಮೊದಲಾದ ಸೀಲೆಂಟರೇಟ ಪ್ರಾಣಿಗಳ ದೇಹದ ಮೇಲೆ ಅಂಕುರ ಗಳು ಮೂಡಿ, ಅವು ಬೆಳವಣಿಗೆ ಹೊಂದಿ, ಕ್ರಮೇಣ ವಿಭೇದನೆಯಾಗಿ ಪರಿಪೂರ್ಣತೆಯನ್ನು ಹೊಂದಿ ಹೊಸಜೀವಿಗಳಾಗಿ ರೂಪಗೊಳ್ಳುವುದೂ ಕೂಡ ಈ ಗುಂಪಿನ ಉದಾಹರಣೆಗಳೇ. ವಿಖಂಡನ (Fssion) ಮತ್ತು ಅಂಕುರಣಗಳು (Buddings) ಕೆಲವು ಜೀವಿಗಳ ಸಂತಾನೋತ್ಪತ್ತಿಯ ನಿತ್ಯಕರ್ಮ. ಆದರೆ ಜೀವಕೋಶಜನ್ಯ ಸಂತಾನೋತ್ಪತ್ತಿ ಅಲೈಂಗಿಕ ವಾಗಿರಬಹುದು ಅಥವಾ ಲೈಂಗಿಕವಾಗಿರಬಹುದು. ಇದರ ಬಗ್ಗೆ ಹೆಚ್ಚು ಪ್ರಸ್ತೀ ಕರಿಸುವುದು ಇಲ್ಲಿ ಅಪ್ರಕೃತ.

ಲೈಂಗಿಕರೀತಿಯ ಸಂತಾನೋತ್ಪತ್ತಿಯಲ್ಲಿ ಸಾಮಾನ್ಯವಾಗಿ ಹೆಣ್ಣು ಮತ್ತು ಗಂಡು ತನಗಳನ್ನು ಹೊತ್ತ ಲೈಂಗಿಕ ವ್ಯಕ್ತಿಗಳ ಪಾತ್ರ ಬಲು ಹಿರಿದು. ಈ ವ್ಯಕ್ತಿಗಳನ್ನು ವಿಶಿಷ್ಟವಾಗಿ ವಿಭೇದಿಸತಕ್ಕ ಗುಣವಿಶೇಷಗಳೆಂದರೆ ಅವುಗಳಲ್ಲಿ ಉತ್ಪತ್ತಿಯಾಗುವ ಲಿಂಗಕೋಶಿಕಗಳು (sex cells) ಅಥವಾ ಗ್ಯಾಮೀಟುಗಳು (gametes)· ಶುಕ್ರಾಣುಗಳು (sperms) [ಇವಕ್ಕೆ ಗಂಡು ಗ್ಯಾಮೀಟು. ಸೂಕ್ಷ್ಮ ಗ್ಯಾಮೀಟು. ಗಂಡುಜೀವ ಕೋಶಗಳೆಂಬ ಪದಗಳು ಪರ್ಯಾಯಪದಗಳು] ಗಂಡು ಜೀವಿಗೆ ವಿಶಿಷ್ಟ ವಾದುದು. ಅಂಡಾಣುಗಳು (ova) [ಹೆಣ್ಣು ಗ್ಯಾಮೀಟು. ಸ್ಥೂಲಗ್ಯಾಮೀಟು.

ಅಥವಾ ಹೆಣ್ಣು ಜೀವಕೋಶಗಳು) ಹೆಣ್ಣಿಗೆ ಸಂಬಂಧಿಸಿದುವು. ಈ ವಿಶೇಷವಾದ ಗ್ಯಾಮೀಟುಗಳು ಸಾಮಾನ್ಯವಾಗಿ ಪ್ರಾಣಿದೇಹದಲ್ಲಿ ಅಡಕವಾಗಿರುವ ಒಂದು ವಿಶೇಷ ವಾದ ಅಂಗ ಅಥವಾ ಅಂಗಾಂಶದಲ್ಲಿ ಉತ್ಪತ್ತಿಯಾಗುತ್ತವೆ. ಈ ಅಂಗಕ್ಕೆ ಗೋನ್ಯಾಡ್ (Gonad) ಅಥವಾ ಪ್ರಜನನಗ್ರಂಥಿ ಎಂದು ಹೆಸರು. ಇದೇ ಜೀವಿಯ ಪ್ರಾಥಮಿಕ ಲೈಂಗಿಕ ಲಕ್ಷಣ. ಶುಕ್ರಾಣುಗಳನ್ನು ಉತ್ಪಾದಿಸುವ ಅಂಗಕ್ಕೆ ವೃಷಣ (Testis) ಎಂತಲೂ, ಅಂಡಾಣುಗಳು ರೂಪಗೊಳ್ಳುವ ಅಂಗಕ್ಕೆ ಅಂಡಾಶಯ (Overy) ಎಂತಲೂ ಹೆಸರು. ಯಾವ ವ್ಯಕ್ತಿಯಲ್ಲಿ ಶುಕ್ರಾಣುಗಳು ಉತ್ಪತ್ತಿಯಾಗುತ್ತವೆಯೋ ಅಥವಾ ವೃಷಣವಿದೆಯೋ ಅದೇ ಜೈವಿಕವಾಗಿ "ಗಂಡು" ಜೀವಿ. ಹಾಗೆಯೇ ಅಂಡಾಣುಗಳನ್ನು ಉತ್ಪತ್ತಿ ಮಾಡುವ ಅಥವಾ ಅಂಡಾಶಯವನ್ನು ಹೊತ್ತ ಜೀವಿಯೇ "ಹೆಣ್ಣು". ಕೆಲವು ಸಂದರ್ಭಗಳಲ್ಲಿ ಈ ಪ್ರಾಥಮಿಕ ಅಂಗಾಂಗಗಳು ಒಂದೇ ಜೀವಿಯ ದೇಹದಲ್ಲಿ ಅಡಕವಾಗಿದ್ದು ಸಂಕೀರ್ಣವಾಗಿರುತ್ತವೆ. ಉದಾಹರಣೆಗೆ ಎರೆಹುಳು ಮತ್ತು ಜಿಗಣೆಗಳನ್ನು ಹೆಸರಿಸಬಹುದು. ಈ ಬಗೆಯ ಜೀವಿಗಳಿಗೆ ಉಭಯಲಿಂಗಿಗಳು ಅಥವಾ ಹೆರ್ಮಾಫ್ರೊಡೈಟ್‌ಗಳೆಂದೂ (Hermaphrodite) ಹೆಸರು. ಇಂತಹ ಕೆಲವು ಹೆರ್ಮಾಫ್ರೊಡೈಟುಗಳಲ್ಲಿ ಅಂಡಾಣು ಮತ್ತು ವೃಷಣಗಳು ಬೇರೆ ಬೇರೆಯಾಗಿರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಒಂದೇ ಅಂಗಾಂಗದ ವಿವಿಧ ಭಾಗಗಳು ಶುಕ್ರಾಣು ಮತ್ತು ಅಂಡಾಣುಗಳನ್ನು ಉತ್ಪತ್ತಿ ಮಾಡುತ್ತವೆ.

ಅಂತೂ ಲೈಂಗಿಕ ಸಂತಾನೋತ್ಪತ್ತಿಯಲ್ಲಿ ಗಂಡು ಮತ್ತು ಹೆಣ್ಣು ಗ್ಯಾಮೀಟುಗಳು ಅಂದರೆ ಶುಕ್ರಾಣು ಮತ್ತು ಅಂಡಾಣುಗಳು ಸಮ್ಮಿಲನಗೊಂಡು ಒಂದು ಪರಿಪೂರ್ಣ ಜೀವಕೋಶದ ನಿರ್ಮಾಣವಾಗುತ್ತದೆ. ಇದಕ್ಕೆ ಜೈಗೋಟ್ (Zygote) ಎಂದು ಹೆಸರು. ಇದೇ ಹೊಸಜೀವಿಯ ಜೀವನಚಕ್ರದ ಪ್ರಪ್ರಥಮ ಸೋಪಾನ. ಗ್ಯಾಮೀಟು ಗಳ ಈ ಸಮ್ಮಿಲನದ ಪ್ರಕ್ರಿಯೆಗೆ ನಿಷೇಚನ (Fertilization) ಎಂದು ಹೆಸರು. ಇದೇ ಲೈಂಗಿಕ ರೀತಿಯ ಸಂತಾನೋತ್ಪತ್ತಿಯ ತಿರುಳು.

ಲೈಂಗಿಕ ಸಂತಾನೋತ್ಪತ್ತಿಯಲ್ಲಿ ಎರಡು ಪ್ರಮುಖ ಹಾಗೂ ಪರಸ್ಪರ ವಿರುದ್ಧ ವಾದ ಘಟನೆಗಳು ನಡೆಯುವುದು ಸ್ವಾಭಾವಿಕ. ಇವು ಪರಸ್ಪರ ಪೂರಕವೂ ಹೌದು. ಒಂದು, ಗ್ಯಾಮೀಟುಗಳು ರೂಪುಗೊಳ್ಳುವಾಗ ನಡೆಯುವ ಘಟನೆ: ಮತ್ತೊಂದು, ನಿಷೇಚನ ಕಾಲದಲ್ಲಿ ಜರಗುವ ಘಟನೆ. ಮೊದಲನೆಯದು ಗ್ಯಾಮೀಟುಗಳ ಪರಿಪಕ್ವ ತೆಯ ಹಂತದಲ್ಲಿ (Maturation phase) ಕಂಡುಬರುತ್ತದೆ. ಈ ಕಾಲದಲ್ಲಿ ಎರಡು ವಿಶೇಷ ರೀತಿಯ ಕೋಶಿಕ ವಿಭಜನೆಗಳು ಜರಗುತ್ತವೆ. ಈ ವಿಭಜನೆಗಳಿಗೆ ಒಟ್ಟಾರೆ ಮಿಯೋಸಿಸ್ (Meiosis) ಎಂದು ಹೆಸರು. ಮೊದಲನೆ ಮಿಯೋಸಿಸಿನ ವಿಭಜನೆಯ ಕಾಲದಲ್ಲಿ ಜೀವಿಯ ಮೂಲಭೂತವಾದ ಕ್ರೋಮೊಸೋಮುಗಳ ಸಂಖ್ಯೆ (ಇದಕ್ಕೆ ಕಾಯಿಕ ಸಂಖ್ಯೆ, ದ್ವಿಗುಣಿತ ಸಂಖ್ಯೆ, ಅಥವಾ 2n ಸಂಖ್ಯೆ ಎಂಬ

ಇತರ ಹೆಸರುಗಳೂ ಇವೆ) ಅರ್ಧದಷ್ಟು ಕಡಿಮೆಯಾಗುತ್ತವೆ. ಇದರಿಂದಲೇ ಈ ವಿಭಜನೆಗೆ ಕ್ಷೀಣಕಾರಿ ವಿಭಜನೆ (Reduction division) ಎಂದೂ ಹೆಸರಿದೆ. ಎರಡನೆಯ ಮೆಯೋಸಿಸಿನ ಕೋಶಿಕ ವಿಭಜನೆ ಸರಳ ರೀತಿಯದು. ಇದನ್ನು ಮೈಟೋಸಿಸ್ (Mitosis) ರೀತಿಯ ಕೋಶಿಕ ವಿಭಜನೆಗೆ ಹೋಲಿಸಬಹುದು. ಈ ವಿಭಜನೆಯ ಕಾಲದಲ್ಲಿ ಕ್ರೋಮೊಸೋಮುಗಳು ವಿಭಜಿಸಲ್ಪಟ್ಟು ಮರಿ ಜೀವಕೋಶಗಳನ್ನು ಸೇರುತ್ತವೆ. ತತ್ಫಲವಾಗಿ ಅಂತ್ಯದಲ್ಲಿ ಪ್ರತಿ ಗ್ಯಾಮೀಟಿನಲ್ಲೂ ಅಗುಣಿತ ಸಂಖ್ಯೆಯ (Haploid Number) ಕ್ರೋಮೊಸೊಮುಗಳಿರುತ್ತವೆ. ಈ ಸಂಖ್ಯೆಗೆ n ಸಂಖ್ಯೆ. ಅಥವಾ ಗ್ಯಾಮೀಟಿನ ಸಂಖ್ಯೆ ಎಂತಲೂ ಹೆಸರಿದೆ. ಉದಾಹರಣೆಗೆ. ಮಾನವನ ಪ್ರತಿ ಜೀವಕೋಶದಲ್ಲಿಯೂ ದ್ವಿಗುಣಿತ ಸಂಖ್ಯೆಯಲ್ಲಿ 46 ಕ್ರೋಮೊಸೋಮುಗಳಿರುತ್ತವೆ. ಕ್ರೋಮೊಸೋಮುಗಳು ಪ್ರತಿಯೊಂದು ಜೀವಿಯಲ್ಲಿಯೂ ಸಂಖ್ಯೆಯಲ್ಲಿ ವಿಶಿಷ್ಟವಾಗಿರುವುದೇ ಅಲ್ಲದೆ ಅವುಗಳ ಆಕಾರ ಮತ್ತು ಗಾತ್ರದಲ್ಲಿಯೂ ವಿಶೇಷವಾಗಿರುತ್ತವೆ. ಈ ಸಂಖ್ಯೆ ಗ್ಯಾಮಿಟುಗಳಲ್ಲಿ ಕ್ಷೀಣಿಸಿರುವುದರಿಂದ ಇಲ್ಲಿ ಕೇವಲ 23 ಕ್ರೋಮೊಸೋಮುಗಳಿರುತ್ತವೆ. ನಿಷೇಚನ ಕಾಲದಲ್ಲಿ ಗಂಡುಹೆಣ್ಣು ಗ್ಯಾಮೀಟುಗಳು ಸಮ್ಮಿಲನಗೊಂಡಾಗ ಅವುಗಳ ಕ್ರೋಮೊಸೋಮುಗಳು ಒಟ್ಟಾರೆ ಕೂಡಿ ಕ್ರೋಮೊಸೋಮುಗಳ ಸಂಖ್ಯೆ ಮೂಲಸ್ಥಿತಿಗೆ ಬರುತ್ತದೆ.

ಅಂದರೆ ಲಿಂಗಕೋಶಿಕಗಳು ವಾಸ್ತವವಾಗಿ ಅಪೂರ್ಣವಾದ ಜೀವಕೋಶಗಳು. ಇವುಗಳ ಗಾತ್ರ ಬಲುಚಿಕ್ಕದು. ಇವುಗಳ ಪರಿಚಯವಾಗಬೇಕಾದರೆ ಸೂಕ್ಷ್ಮದರ್ಶಿಯ ಸಹಾಯ ಬೇಕೇ ಬೇಕು. ಇವುಗಳ ರೂಪ್ರರಚನೆಯನ್ನು ಪರಿಶೀಲಿಸಿದರೆ ಇವುಗಳಲ್ಲಿ ಸಾಮಾನ್ಯವಾಗಿ ಶ್ರಮವಿಭಜನೆ ಎದ್ದು ಕಂಡುಬರುತ್ತದೆ. ಒಂದು (ಅಂಡಾಣು) ಗಾತ್ರದಲ್ಲಿ ಹಿರಿದಾದರೆ. ಮತ್ತೊಂದು (ಶುಕ್ರಾಣುವು) ಅತ್ಯಂತ ಕಿರಿದು. ಒಂದರಲ್ಲಿ ಬೆಳವಣಿಗೆಗೆ ಬೇಕಾದ ಅತ್ಯಗತ್ಯವಾದ ಆಹಾರಬುತ್ತಿ ಸಂಗ್ರಹವಾಗಿದ್ದರೆ. ಮತ್ತೊಂದರಲ್ಲಿ ಅದು ಲೋಪ. ಒಂದರಲ್ಲಿ ಸಂಚಲನಶೀಲ ಸಾಮರ್ಥ್ಯವಿದ್ದರೆ. ಮತ್ತೊಂದರಲ್ಲಿ ಅದು ಎದ್ದುಕಾಣುವುದಿಲ್ಲ. ಪ್ರಾಣಿಗಳ ಶುಕ್ರಾಣು ಸಾಮಾನ್ಯವಾಗಿ ಗೊದಮೊಟ್ಟೆಯ ಆಕಾರವನ್ನು ಹೋಲುತ್ತದೆ. ರಚನಾದೃಷ್ಟಿಯಲ್ಲಿ ಇದರಲ್ಲಿ ನ್ಯೂಕ್ಲಿಯಸ್ಸನ್ನು (ಕ್ರೋಮೊಸೋಮುಗಳನ್ನು ಒಳಗೊಂಡ ಅಂಗಕ) ಹೊತ್ತ ತಲೆ. ಮತ್ತು ಅದನ್ನು ಅನುಸರಿಸಿದಂತೆ ಸಂಚಲನಕಾರಿಯಾದ ಬಾಲ ಮತ್ತು ಇವುಗಳು ಕೂಡುವ ಕಡೆ "ಮಧ್ಯವಲಯ" ಎಂಬ ವಿಶೇಷ ಭಾಗಗಳನ್ನು ಗುರುತಿಸಬಹುದು. ಈ "ಮಧ್ಯವಲಯ" ದಲ್ಲಿ ಜೀವಕೋಶ ವಿಭಜನೆಯ ಸುಯಂತ್ರವನ್ನು ರೂಪಿಸುವ ಸೆಂಟ್ರಿಯೋಲ್ (Centriole) ಎಂಬ ವಿಶಿಷ್ಟವಾದ ಬಿಂದು ಅಥವಾ ಎರಡು ಕಣಗಳು ಮತ್ತು ಮೈಟೋಕಾಂಡ್ರಿಯಗಳು ಕಂಡುಬರುತ್ತವೆ. ಶುಕ್ರಾಣುವಿನಲ್ಲಿ ಕೋಶಿಕ ದ್ರವ್ಯವು ಇಲ್ಲವೆಂದೇ ಹೇಳುವಷ್ಟು ಕಂಡುಬರುತ್ತದೆ.

ಆದರೆ ಪ್ರಾಣಿಗಳ ಅಂಡಾಣುವಿನ ರಚನೆಯೇ ಬೇರೆ. ಸಾಮಾನ್ಯವಾಗಿ ಇದು ಗೋಳಾಕಾರ. ಇದರಲ್ಲಿ ಕೋಶಿಕದ್ರವ್ಯ ಅಪಾರ. ಅಲ್ಲದೆ ಅಗುಣಿತ ಸಂಖ್ಯೆಯ ಕ್ರೋಮೊಸೋಮುಗಳನ್ನು ಹೊತ್ತ ಒಂದು ಗೋಳಾಕಾರದ ನ್ಯೂಕ್ಲಿಯಸು, ಜೀವಿಯ ಪ್ರಥಮ ಬೆಳವಣಿಗೆಗೆ ಬೇಕಾದ ಆಹಾರ ಸಾಮಗ್ರಿ ಇತ್ಯಾದಿ ಹಾಗೂ ಹಲವು ಜೈವಿಕ ಸಾಮಗ್ರಿಗಳು ಅದರ ಕೋಶಿಕ ದ್ರವ್ಯದಲ್ಲಿ ಅಡಕವಾಗಿರುತ್ತವೆ. ಮೀನು. ಸರೀಸೃಪ ಮತ್ತು ಪಕ್ಷಿಗಳ ಮೊಟ್ಟೆಗಳ ಕೋಶಿಕದ್ರವ್ಯದಲ್ಲಿ ಪೀತಕದ (Yolk) ಉಗ್ರಾಣ ಶ್ರೀಮಂತವಾಗಿರುತ್ತದೆ. ಈ ಕಾರಣದಿಂದಲೇ ಅಂಡ ಜನನ (Oogenesis) ಕಾಲದಲ್ಲಿ ಕೋಶಿಕದ್ರವ್ಯವನ್ನು ಅಪಾರವಾಗಿ ಅಂಡಾಣುವಿನಲ್ಲಿ ಸಂರಕ್ಷಣೆ ಮಾಡುವ ಸಂಯಂತ್ರ ವಿಚಿತ್ರವಾಗಿರುತ್ತದೆ. ಅಂಡಾಣುವಿನ ಪರಿಪಕ್ವತೆಯ ವಿಭಜನೆಗಳ (Maturation divisions) ಕಾಲದಲ್ಲಿ ನಡೆಯುವ ಎರಡು ಕೋಶಿಕ ವಿಭಜನೆಗಳಲ್ಲಿ ಮರಿ ಜೀವಕೋಶಗಳು ಗಾತ್ರದಲ್ಲಿ ಅಜಗಜಾಂತರವಾಗಿರುತ್ತವೆ. ಮುಂದೆ ಅಂಡಾಣುವಾಗಿ ರೂಪುಗೊಳ್ಳುವ ಜೀವಕೋಶವು ಹೆಚ್ಚು ಕೋಶಿಕದ್ರವ್ಯದಿಂದ ಕೂಡಿ ಗಾತ್ರದಲ್ಲಿ ಬಹು ಹಿರಿದಾಗಿರುತ್ತದೆ. ಆದರೆ ಅದರ ಸೋದರ ಮರಿಜೀವಕೋಶವು ಅತ್ಯಲ್ಪ ಪ್ರಮಾಣದ ಕೋಶಿಕ ದ್ರವ್ಯವನ್ನು ಪಡೆದಿರುವುದರಿಂದ ಅದು ಸೂಕ್ಷ್ಮತಮವಾಗಿರುತ್ತದೆ. ಈ ಸೂಕ್ಷ್ಮತಮವಾದ ಜೀವಕೋಶಕಗಳಿಗೆ ಧ್ರುವಕೋಶಿಕಗಳೆಂದು (Polar bodies) ಹೆಸರು .ಮೊದಲನೆಯ ಪರಿಪಕ್ವತೆಯ ವಿಭಜನೆಯ ಅಥವಾ ಮೊದಲನೆಯ ಮಯೋ-ಸಿಸಿನ ವಿಭಜನೆಯ ಅಂತ್ಯದಲ್ಲಿ ಮೊದಲನೆಯ ಧ್ರುವಕೋಶಿಕವೂ ಎರಡನೆಯ ವಿಭಜನೆಯ ಕೊನೆಯಲ್ಲಿ ಎರಡನೆಯ ಧ್ರುವಕೋಶಿಕವೂ ರೂಪುಗೊಳ್ಳುತ್ತವೆ. ಇಲ್ಲಿಯೂ ಕೂಡ ಶುಕ್ರಾಣುಜನನ (Spermatogenesis) ಕಾಲದಲ್ಲಿ ನಡೆಯುವಂತೆ ಮೊದಲನೆಯ ಮಯೋಸಿಸಿನ ವಿಭಜನೆಯ ಕಾಲದಲ್ಲಿಯೇ ಜೀವಿಯ ಕ್ರೋಮೊಸೋಮುಗಳ ಸಂಖ್ಯೆ ಅರ್ಧದಷ್ಟು ಕ್ಷೀಣಿಸುತ್ತದೆ. ಎರಡನೆಯ ವಿಭಜನೆಯಲ್ಲಿ ಕ್ರೋಮೊಸೋಮುಗಳು ಸೀಳಿ ಅವುಗಳ ಭಾಗಗಳು ಮರಿಜೀವಕೋಶಗಳಲ್ಲಿ ಹಂಚಿಹೋಗುತ್ತವೆ.

ಲೈಂಗಿಕ ಜೀವಕೋಶಗಳ ಪೈಕಿ ಅಂಡಾಣುಗಳು ಮಾತ್ರ ನಿಷೇಚನ ಹೊಂದುವ ಸಾಮರ್ಥ್ಯ ಹಾಗೂ ಸೌಲಭ್ಯಗಳನ್ನು ಪಡೆದಿರುತ್ತವೆ. ನಿಷೇಚನ ಹೊಂದಿದ ಮೇಲೆಯೇ ಅಂಡಾಣುವಿನಲ್ಲಿ ಬೆಳವಣಿಗೆಯ ಚಟುವಟಿಕೆಗಳು ಚಿಮ್ಮುತ್ತವೆ. ನಿಷೇಚನಗೊಳ್ಳದಿದ್ದರೆ ಅಂಡಾಣುಗಳು ಅನತಿಕಾಲದಲ್ಲಿಯೇ ಮರಣವನ್ನು ಅಪ್ಪುತ್ತವೆ. ಆದರೆ ಅಲೈಂಗಿಕ ಜೀವಕೋಶ ಅಥವಾ ಅಗ್ಯಾಮೀಟುಗಳಿಗೆ ನಿಷೇಚನ ಹೊಂದುವ ವೈಶಿಷ್ಟ್ಯ ಲವಲೇಶವೂ ಕಂಡುಬರುವುದಿಲ್ಲ. ಅಲ್ಲದೆ ಈ ಗುಂಪಿನ ಕೆಲವು ಬಗೆಯ ಜೀವಕೋಶಗಳಿಗೆ ಪೂರ್ವಭಾವಿಯಾಗಿ ಶುಕ್ರಾಣುಗಳ ಸಂಪರ್ಕವಾಗಲೀ ಅಥವಾ ನೆರವಾಗಲೀ ಬೇಕಿರುವುದಿಲ್ಲ. ಈ ಬಗೆಯ ಅಲೈಂಗಿಕ ಜೀವಕೋಶಗಳು ಮೇಲ್ಮಟ್ಟದ ಸಸ್ಯಗಳಲ್ಲಿ ಬೀಜಕೆ (Spores) ಗಳಾಗಿ ರೂಪುಗೊಂಡು ಜೀವಿಯ ಜೀವನ ಚಕ್ರವನ್ನು ಪ್ರಾರಂಭಿಸುವುದರಲ್ಲಿ ಭಾಗಿಗಳಾಗುತ್ತವೆ.

ಸಹಜಸಾಮಾನ್ಯ ಲೈಂಗಿಕ ವಿಧಾನದ ನಿಷೇಚನ ಕಾಲದಲ್ಲಿ ಎರಡು ಮಹತ್ವಪೂರ್ಣವಾದ ಪರಸ್ಪರ ಸಂಬಂಧವಿಲ್ಲದ ಹಾಗೂ ಪ್ರಯೋಗಾತ್ಮಕವಾಗಿ ಬೇರ್ಪಡಿಸಬಹುದಾದ ಘಟನೆಗಳು ಕಂಡುಬರುತ್ತವೆ. ಒಂದು. ಅಂಡಾಣುವಿನ ಸಕ್ರಿಯಣ ಅಥವಾ ಉದ್ದೀಪನ (Activation of the egg). ಈ ಘಟನೆಯು ಅಂಡಾಣುವಿನ ನ್ಯೂಕ್ಲಿಯಸು ಮತ್ತು ಕೋಶಿಕ ದ್ರವ್ಯಗಳ ವಿಭಜನೆಗೆ ಪೂರ್ವಪೀಠಿಕೆಯಾಗಿರುತ್ತದೆ. ಶುಕ್ರಾಣುವಿನ ತಲೆಯ ಭಾಗದಲ್ಲಿರುವ ನ್ಯೂಕ್ಲಿಯಸು ಅಂಡಾಣುವಿನ ಕೋಶಿಕ ದ್ರವ್ಯವನ್ನು ಪ್ರವೇಶಿಸಿದ ಮೇಲೆ. ಅದರೊಡನೆಯೇ ಪ್ರವೇಶಿಸಿದ ಸೆಂಟ್ರಿಯೋಲಿನಲ್ಲಿ ಚಟುವಟಿಕೆ ಚಿಮ್ಮಿ ವಿಭಜನಾ ಸಂಯಂತ್ರವನ್ನು ರೂಪಿಸಲಾರಂಭಿಸುತ್ತದೆ. ಅಲ್ಲದೆ ಸಾಮಾನ್ಯವಾಗಿ ಇತರ ಶುಕ್ರಾಣುಗಳು ಅಂಡಾಣುವನ್ನು ಪ್ರವೇಶಿಸದಂತೆ ನೋಡಿಕೊಳ್ಳಲು ಅಂಡಾಣುವಿನ ಮೇಲಾಯದಲ್ಲಿ ಒಂದು ಬಗೆಯ ಯಾಂತ್ರಿಕ ರೂಪದ ತಡೆಯುಂಟಾಗುತ್ತದೆ. ಮತ್ತೊಂದು, ಗಂಡು ಮತ್ತು ಹೆಣ್ಣು ಗ್ಯಾಮೀಟುಗಳ ನ್ಯೂಕ್ಲಿಯಸುಗಳ ಸಮ್ಮಿಲನ. ಈ ಸಮ್ಮಿಲನದಿಂದ ನಿಷೇಚಿತ ಅಂಡಾಣು (Fertilized egg)ವಿನಲ್ಲಿ ತಂದೆಯಿಂದ ಬಂದ ಕ್ರೋಮೊಸೋಮುಗಳ ಅರ್ಧ ಸಂಖ್ಯೆ ತಾಯಿಯಿಂದ ಬಂದ ಅರ್ಧ ಸಂಖ್ಯೆ ಕೂಡಿ ಮೂಲ ಕ್ರೋಮೊಸೋಮು ಸಂಖ್ಯೆ ಪ್ರಾಪ್ತವಾಗುತ್ತದೆ.

ಬಹುತೇಕ ಪ್ರಾಣಿ ಮತ್ತು ಸಸ್ಯಗಳಲ್ಲಿ ಅದರಲ್ಲೂ ಮೇಲ್ಮಟ್ಟದ ಜೀವರಾಶಿಗಳಲ್ಲಿ ಅಂಡಾಣುಗಳು ನಿಷೇಚನಗೊಳ್ಳದೆ ಹೋದರೆ. ಅವು ಕೆಲಕಾಲ ಬದುಕಿದ್ದು ಕೊನೆಗೆ ಮಂಗಳ ಹಾಡುತ್ತವೆ. ಆದರೆ ಫ್ಲೂಕ್‌ಗಳು. ರೋಟಿಫೆರಗಳು. ಕೆಲವು ಸಣ್ಣ ಸಣ್ಣ ಕಠಿಣಚರ್ಮಿಗಳು. ಕೆಲವು ಬಗೆಯ ಕೀಟಗಳೇ ಮೊದಲಾದ ಪ್ರಾಣಿಗಳಲ್ಲಿ ಅಂಡಾಣುಗಳು ಪ್ರಕೃತಿದತ್ತವಾಗಿ ಶುಕ್ರಾಣುವಿನ ನೆರವು ಅಥವಾ ಸಂಪರ್ಕವಿಲ್ಲದೆಯೇ ಸ್ವಯಂಸಕ್ರಿಯಗೊಂಡು ಅಥವಾ ಉದ್ದೀಪನಗೊಂಡು ಬೆಳವಣಿಗೆ ಹೊಂದಿ. ಅಡೆತಡೆಗಳಿಲ್ಲದೆ ಸಹಜಸಾಮಾನ್ಯ ಪ್ರೌಢ ಜೀವಿಯಾಗಿ ಬೆಳೆಯುವುದು ಅವುಗಳ ಜೀವನಚಕ್ರದ ರೀತಿನೀತಿಯಾಗಿರುತ್ತದೆ. ಈ ಬಗೆಯ ಬೆಳವಣಿಗೆಗೆ ಅನಿಷೇಕಜನನ ಅಥವಾ ಪಿತೃ ರಹಿತ ಸಂತಾನೋತ್ಪತ್ತಿ ಎಂದು ಹೆಸರು. ಈ ಬೆಳವಣಿಗೆಗೆ ಇಂಗ್ಲೀಷಿನಲ್ಲಿ ಪಾರ್ಥೆನೋಜೆನಿಸಿಸ್ (Parthenogenesis) ಎಂದು ಹೆಸರು. ಈ ಪದವನ್ನು ಇಂಗ್ಲೆಂಡಿನ ಆರ್. ಓವನ್ (R. Owen) ಅವರು 1849ರಲ್ಲಿ ಯಾವುದೋ ಒಂದು ಅರ್ಥದಲ್ಲಿ ಬಳಸಿದ್ದರು. ಆದರೆ ಜರ್ಮನಿಯ ವೋನ್ ಸಿಬೋಲ್ಡ್ (C.T.F. Von Seibold) ಅವರು 1856 ರಲ್ಲಿ ಈ ಪದಕ್ಕೆ ಹೊಸ ಅರ್ಥವನ್ನು ಕಲ್ಪಿಸಿ ಅನಿಷೇಚಿತ ಅಂಡಾಣುವಿನ ಬೆಳವಣಿಗೆಯನ್ನು ಸೂಚಿಸುವ ಅರ್ಥದಲ್ಲಿ ವಿಜ್ಞಾನಸಾಹಿತ್ಯದಲ್ಲಿ ಬಳಕೆಗೆ ತಂದರು. ಈ ಬಗೆಯ ಬೆಳವಣಿಗೆಯನ್ನು ನಿಜವಾಗಿಯೂ ಬೀಜಿಕೆಗಳ ಬೆಳವಣಿಗೆಗೆ ಹೋಲಿಸಬಹುದು.

ಪ್ರಾಣಿಗಳಲ್ಲಿ ಪ್ರಕೃತಿದತ್ತವಾಗಿ ನಡೆಯುವ ಅನಿಷೇಕಜನನವನ್ನು ಪ್ರಥಮ ಬಾರಿಗೆ ಕಂಡುಹಿಡಿದ ಕೀರ್ತಿ ಫ್ರಾನ್ಸ್ ದೇಶದ ಚಾರ್ಲ್ಸ್ ಬೊನೆಟ್ (Charles Bonnet) ಎಂಬ ಕೀಟ ವಿಜ್ಞಾನಿಗೆ ಸಲ್ಲುತ್ತದೆ. ಇವರು 1735–1754ರ ನಡುವಣ ಅಂತರದಲ್ಲಿ ಸಸ್ಯದ ಹೇನುಗಳಾದ ಹೆಣ್ಣು ಎಫಿಡ್ (Aphid) ಕೀಟಗಳನ್ನು ಪ್ರತ್ಯೇಕಿಸಿ ಅವುಗಳನ್ನು ಸೂಕ್ಷ್ಮದರ್ಶಿಯ ಸಹಾಯದಿಂದ ಪರಿಶೀಲಿಸಿ ನೋಡಿದಾಗ, ತಾಯಿಯ ದೇಹದ ಒಳಭಾಗದಲ್ಲಿ ಹಲವಾರು ಸಣ್ಣ ಸಣ್ಣ ಮರಿಗಳು ಬೆಳವಣಿಗೆ ಹೊಂದುತ್ತಿರುವುದನ್ನು ಕಂಡರು. ತಾಯಿದೇಹದಿಂದ ಹೊರಬಂದ ಈ ಮರಿಗಳು ತಮ್ಮ ಹೀರುವ ಮುಖಾಂಗಗಳನ್ನು ಸಸ್ಯದ ಮೃದುವಾದ ಎಲೆಗಳಿಗೆ ಚುಚ್ಚಿ ರಸವನ್ನು ಹೀರಿ ಕ್ರಮೇಣ ದೊಡ್ಡವಾದುವು. ಹೀಗೆ ದೊಡ್ಡದಾದ ಮರಿಗಳು ಹೆಣ್ಣು ಜೀವಿಗಳಾಗಿ ರೂಪುಗೊಂಡು ಗಂಡಿನ ಸಂಪರ್ಕವಿಲ್ಲದೆಯೇ ಮುಂದಿನ ಪೀಳಿಗೆಯನ್ನು ಈನಲಾರಂಭಿಸಿದುವು. ಈ ಮರಿಗಳೂ ಕೂಡ ದೊಡ್ಡದಾಗಿ ಬೆಳೆದು ತಮ್ಮ ತಾಯಿಯಂತೆಯೇ ಗಂಡಿನ ಸಂಭೋಗವನ್ನು ಪಡೆಯದೆ ಮರಿಗಳನ್ನು ತಮ್ಮ ದೇಹದಲ್ಲಿ ಬೆಳೆಸಿ ಹೊರಚೆಲ್ಲಿದುವು. ಇಂತಹ ವಿಚಿತ್ರ ಘಟನೆಯನ್ನು ನೋಡಿದ ಬೊನೆಟ್ ಅವರಿಗೆ ಎಫಿಡ್ ಕೀಟದ ದೇಹದಲ್ಲಿ "ಚೀನಿ ಪೆಟ್ಟಿಗೆಯ" ಸರಣಿಯಲ್ಲಿರುವಂತೆ ಅದರ ಮುಂದಿನ ಪೀಳಿಗೆಗಳೆಲ್ಲವೂ ಒಂದರೊಳಗೊಂದು ಇರುವಂತೆ ಅಳವಡಿಸಿರುವುದೆಂದು ಭಾಸವಾಯಿತು. ಈ ಭಾವನೆ ಆ ಕಾಲದ ಪೂರ್ವರಚನ (Preformation) ವಾದಿಗಳಿಗೆ ತರ್ಕಬದ್ಧವಾದ ಒಂದು ಅಸ್ತ್ರವಾಗಿ ಪರಿಣಮಿಸಿತ್ತು.

ಪ್ರಾಕೃತಿಕ ಅನಿಷೇಕ ಜನನ

ಪ್ರಕೃತಿದತ್ತವಾಗಿ ನಡೆಯುವ ಅನಿಷೇಕಜನನದ ವಿಧಿವಿಧಾನಗಳು ಬಹುಮುಖವಾಗಿವೆ. ಒಂದೊಂದರ ರೀತಿನೀತಿಗಳು ಒಂದೊಂದು ಚೌಕಟ್ಟಿನಲ್ಲಿ ಸೀಮಿತವಾದಂತಿರುತ್ತವೆ. ಕೆಲವು ಸಂದರ್ಭಗಳಲ್ಲಿ ಕೆಲವು ಪ್ರಾಣಿಗಳು ಲೈಂಗಿಕರೀತಿಯ ಸಂತಾನೋತ್ಪತ್ತಿ ಮಾಡುವ ಹಾದಿಯಲ್ಲಿಯೇ ಮುನ್ನಡೆದರೂ ಅವುಗಳಲ್ಲಿ ಆಗಾಗ್ಗೆ ಆಕಸ್ಮಿಕವಾಗಿ ಅನಿಷೇಕ ಜನನದ ಬೆಳವಣಿಗೆಗಳು ಕಾಣಿಸಿಕೊಂಡಿರುವುದೂ ಉಂಟು. ಉದಾಹರಣೆಗೆ ಒಂದೆರಡು ಸಂದರ್ಭಗಳಲ್ಲಿ ಸಾಕು ಕೋಳಿಗಳು ಮತ್ತು ಟರ್ಕಿ ಕೋಳಿಗಳ ಅಂಡಾಣುಗಳು ಶುಕ್ರಾಣುಗಳಿಂದ ನಿಷೇಚನಗೊಳ್ಳದೆ ಬೆಳವಣಿಗೆ ಹೊಂದಿರುವ ಕೆಲವು ದೃಷ್ಟಾಂತಗಳಿವೆ. ಈ ಅನಿಷೇಕ ಜನನದ ಪಕ್ಷಿಗಳು ಗಂಡು ಪಕ್ಷಿಗಳಾಗಿ ರೂಪುಗೊಂಡು ಇತರ ಪ್ರೌಢ ಪುಂಜಗಳಂತೆ ಫಲವಂತವಾಗಿರುತ್ತವೆ. ಅಮೆರಿಕದ ಮೇರಿಲ್ಯಾಂಡಿನ ಬಾಲ್ಟ್ಸ್‌ವಿಲ್ (Balts ville) ನಲ್ಲಿರುವ ಸಂಯುಕ್ತಸಂಸ್ಥಾನದ ವ್ಯಾವಸಾಯಿಕ ಸಂಶೋಧನಾ ಕೇಂದ್ರದಲ್ಲಿ ನಿಯಂತ್ರಿತ ತಳೀಕರಣದಿಂದ ಒಂದು ಬಗೆ ಟರ್ಕಿಕೋಳಿಯ ತಳಿಯಲ್ಲಿ ಶೇಕಡ 17–40 ಮೊಟ್ಟೆಗಳು ಅನಿಷೇಕಜನನದ ರೀತಿಯಲ್ಲಿ ಬೆಳವಣಿಗೆ ಹೊಂದಿರುವುದೆಂಬುದು ತಿಳಿದುಬಂದಿದೆ.

ಆದರೆ ಕೆಲವು ಪ್ರಾಣಿಗಳಲ್ಲಿ ಅನಿಷೇಕಜನನದ ಬೆಳವಣಿಗೆಯು ಜೀವನ ಚಕ್ರದಲ್ಲಿ ನೈಜವಾಗಿರುತ್ತದೆ. ಈ ಬಗೆಯ ಸಂತಾನೋತ್ಪತ್ತಿಯು ಜೀವನ ಕ್ರಮದಲ್ಲಿ ಐಚ್ಛಿಕವಾಗಿರಬಹುದು ಅಥವಾ ವಿಧಿಕೃತವಾಗಿರಬಹುದು. ಐಚ್ಛಿಕ ಅನಿಷೇಕಜನನದ ವಿಧಾನದಲ್ಲಿ ಅಂಡಾಣುಗಳು ಸ್ವಾಭಾವಿಕವಾಗಿ ಶುಕ್ರಾಣುಗಳಿಂದ ನಿಷೇಚನಗೊಳ್ಳುವ ಸಾಮರ್ಥ್ಯವನ್ನು ಪಡೆದಿರುವುದೇ ಅಲ್ಲದೆ. ಸಮಯ ಸಂದರ್ಭಗಳಲ್ಲಿ ಅವು ಶುಕ್ರಾಣುಗಳಿಂದ ನಿಷೇಚನಗೊಳ್ಳದಿದ್ದರೂ ಕೂಡ ನೈಜವಾಗಿ ಬೆಳವಣಿಗೆಯ ಹಾದಿಯನ್ನು ಮೆಟ್ಟಿ ಪೂರ್ಣಜೀವಿಗಳಾಗಿ ರೂಪುಗೊಳ್ಳುವ ಶಕ್ತಿಯನ್ನು ಪಡೆದಿರುತ್ತವೆ. ಹೀಗೆ ಬೆಳವಣಿಗೆ ಹೊಂದಿದ ಪ್ರೌಢಜೀವಿಗಳಲ್ಲಿ ಸಂತಾನೋತ್ಪತ್ತಿ ಮಾಡುವ ಸಾಮರ್ಥ್ಯ ಸ್ವಲ್ಪವೂ ಕುಂದಿರುವುದಿಲ್ಲ. ಕೆಲವು ಪ್ರಾಣಿಗಳ ಜೀವನ ಚಕ್ರದಲ್ಲಿ ಅನಿಷೇಕಜನನದ ಬೆಳವಣಿಗೆಯು ಒಂದು ನಿರ್ದಿಷ್ಟ ಕಾಲದಲ್ಲಿ ಕಂಡು ಬರಬಹುದು. ಅಂತಹ ಸಂದರ್ಭಗಳಲ್ಲಿ ಲೈಂಗಿಕ ಸಂತಾನೋತ್ಪತ್ತಿ ಮತ್ತು ಅನಿಷೇಕಜನನಗಳು ಪರ್ಯಾಯವಾಗಿ ಕಾಣಿಸಿಕೊಳ್ಳಬಹುದು. ಇಂತಹ ಸಂದರ್ಭಗಳಲ್ಲಿ ಅನಿಷೇಕಜನನದ ಹಾಗೂ ಲೈಂಗಿಕ ಸಂತಾನಗಳು ಅನೇಕ ವೇಳೆ ರೂಪರಚನಾತ್ಮಕವಾಗಿ ಬೇರೆ ಬೇರೆಯಾಗಿರುತ್ತವೆ. ಇದರಿಂದಲೇ ಸಸ್ಯಗಂಟಿನ ನೊಣಗಳಲ್ಲಿ (Gall flies) ವಿವಿಧ ಬಗೆಯ ಹೆಣ್ಣುಗಳಿಗೆ ಬೇರೆಬೇರೆಯ ಹೆಸರುಗಳಿರುವುದೂ ಉಂಟು.

ವಿವಿಧ ಬಗೆಯ ಅನಿಷೇಕಜನನದ ಬೆಳವಣಿಗೆಯನ್ನು ಸಂತಾನೋತ್ಪತ್ತಿ ವಿಧಾನ-ಲಿಂಗ ನಿರ್ಧಾರ ಮತ್ತು ಜೀವಕೋಶಿಯ ಆಧಾರಗಳ ದೃಷ್ಟಿಗಳನ್ನಿಟ್ಟುಕೊಂಡು ಮೂರುರೀತಿಯಲ್ಲಿ ವರ್ಗೀಕರಿಸುವುದು ಪರಿಪಾಠವಾಗಿದೆ. ಜೀವವಿಜ್ಞಾನಿಗಳು ಅದರಲ್ಲೂ ಕೀಟಶಾಸ್ತ್ರಜ್ಞರು ಸಂತಾನೋತ್ಪತ್ತಿ ವಿಧಾನಕ್ಕೆ ಪ್ರಾಶಸ್ತ್ಯ ಕೊಟ್ಟ ಕಾಲ ಒಂದಿತ್ತು. ಆದರೆ ಮೊದಲೆರಡು ಬಗೆಯ ವರ್ಗೀಕರಣಗಳು ಸಾಕಷ್ಟು ಮೌಲ್ಯ ಪಡೆದಿರುವಂತೆ ಕಂಡುಬರುವುದಿಲ್ಲ. ಏಕೆಂದರೆ ಅನಿಷೇಕಜನನ ಮೂಲಸಮಸ್ಯೆಯ ಕಗ್ಗಂಟನ್ನು ಬಿಡಿಸುವ ಜೀವಕೋಶಿಯ ಆಧಾರಗಳಿಗೆ ಇಲ್ಲಿ ಎಡೆ ಕಂಡುಬರುವುದಿಲ್ಲ

ಸಂತಾನೋತ್ಪತ್ತಿ ವಿಧಾನವನ್ನನುಸರಿಸಿ ಅನಿಷೇಕಜನನವನ್ನು ವರ್ಗೀಕರಣ ಮಾಡುವವರು ಈ ಕೆಳಕಂಡಂತೆ ವರ್ಗೀಕರಿಸುತ್ತಾರೆ:

1. ಆಕಸ್ಮಿಕ ಅನಿಷೇಕಜನನ
2. ನೈಜ ಅಥವಾ ಸಹಜಸಾಮಾನ್ಯ ಅನಿಷೇಕಜನನ.

(ಅ) ವಿಧಿಕೃತ (obligatory) ಅನಿಷೇಕಜನನ: ಇಲ್ಲಿ ಅಂಡಾಣುಗಳು ಸದಾ ಅನಿಷೇಕಜನನದ ರೀತಿಯಲ್ಲಿಯೇ ಬೆಳವಣಿಗೆ ಹೊಂದುತ್ತವೆ.

(i) ಸದಾ ಅಥವಾ ಪೂರ್ಣ ಅನಿಷೇಕಜನನ: ಇಲ್ಲಿ ಎಲ್ಲಾ ಪೀಳಿಗೆಗಳೂ ಅನಿಷೇಕಜನನದ ರೀತಿಯಲ್ಲಿಯೇ ಬೆಳವಣಿಗೆ ಹೊಂದುತ್ತವೆ. ಈ ಗುಂಪಿನ ಜೀವಿಗಳಲ್ಲಿ ಗಂಡುಗಳು ಕಂಡುಬರುವುದೇ ಇಲ್ಲ.

(ii) ಚಕ್ರೀಯ ಅನಿಷೇಕಜನನ: ಇಲ್ಲಿ ಲೈಂಗಿಕ ಹಾಗೂ ಅನಿಷೇಕಜನನದ ಪೀಳಿಗೆಗಳು ಜೀವನ ಚಕ್ರದಲ್ಲಿ ಪರ್ಯಾಯವಾಗಿ ಕಂಡುಬರುತ್ತವೆ.

(iii) ಶಾವಕೀಜನನ (Paedogenesis): ಇದು ಮೇಲಿನ ಚಕ್ರೀಯ ಅನಿಷೇಕಜನನದ ಬೆಳವಣಿಗೆಯನ್ನು ಹೆಚ್ಚು ಮಟ್ಟಿಗೆ ಹೋಲುವಂತಿದ್ದರೂ, ಲಾರ್ವದ ಘಟ್ಟಗಳಲ್ಲಿಯೇ ಅದರ ಅಂಡಾಣು ಗಳು ಅನಿಷೇಕ ಜನನದ ರೀತಿಯಲ್ಲಿ ಬೆಳವಣಿಗೆ ಹೊಂದುತ್ತವೆ.

(ಆ) ಐಚ್ಛಿಕ (Facultative) ಅನಿಷೇಕಜನನ: ಇಲ್ಲಿ ಅಂಡಗಳು ಶುಕ್ರಾಣುಗಳ ಸಂಪರ್ಕದಿಂದ ನಿಷೇಚನಗೊಳ್ಳಲೂಬಹುದು; ಅಲ್ಲದೆ ಅವು ಶುಕ್ರಾಣುಗಳಿಲ್ಲದೆಯೂ ಅನಿಷೇಕಜನನದ ರೀತಿಯಲ್ಲಿ ಬೆಳವಣಿಗೆ ಹೊಂದಲೂಬಹುದು.

ಅನಿಷೇಕಜನನದ ರೀತಿಯಲ್ಲಿ ಬೆಳೆದ ವ್ಯಕ್ತಿಗಳ ಲಿಂಗದ ಆಧಾರದ ಮೇಲೆ ಅನಿಷೇಕಜನನವನ್ನು ವರ್ಗೀಕರಣ ಮಾಡುವ ಪರಿಪಾಠ ಈ ಕೆಳಕಂಡಂತಿರುತ್ತದೆ.

(1) ಅಂಡಾಣುವು ನಿಷೇಚನಗೊಂಡು ಬೆಳೆದರೆ ಅದು ಯಾವಾಗಲೂ ಹೆಣ್ಣು ಜೀವಿಯಾಗಿಯೂ, ಅನಿಷೇಕಜನನದ ರೀತಿಯಲ್ಲಿ ಬೆಳವಣಿಗೆ ಹೊಂದಿದರೆ ಅದು ಗಂಡು ಜೀವಿಯಾಗಿಯೂ ರೂಪುಗೊಳ್ಳುತ್ತದೆ. ಇದಕ್ಕೆ ಅರೆನೊಟೋಕಿ (Arrhenotoky) ಎಂದು ಹೆಸರು.

(2) ಅನಿಷೇಚಿತ ಅಂಡಾಣುಗಳು ಬೆಳೆದು ಹೆಣ್ಣುಜೀವಿಗಳಿಗೆ ಕಾರಣವಾದರೆ ತೆಲಿಟೋಕಿ (Thelytoky)ಎಂದು ಹೆಸರು.

(3) ಡಾಯಿಟೆರೋಟೋಕಿ (Deuterotoky) ಎಂಬ ಮೂರನೆಯ ಗುಂಪಿನಲ್ಲಿ ಅನಿಷೇಕಜನನದ ಅಂಡಾಣುಗಳು ಬೆಳೆದ ಮೇಲೆ ಗಂಡಾದರೂ ಆಗಬಹುದು ಅಥವಾ ಹೆಣ್ಣಾದರೂ ಆಗಬಹುದು.

ಜೀವಕೋಶೀಯ ಆಧಾರಗಳ ಮೇಲೆ ಅನಿಷೇಕಜನನವನ್ನು ವರ್ಗೀಕರಣ ಮಾಡು ವುದು ನಿಜವಾಗಿಯೂ ತೃಪ್ತಿಕರವಾದ ಮಾರ್ಗ. ಈ ನಿಟ್ಟಿನಲ್ಲಿ ವರ್ಗೀಕರಣ ಮಾಡು ವವರು ಈ ಕೆಳಕಂಡ ರೀತಿ ವರ್ಗೀಕರಿಸುತ್ತಾರೆ:

1. ಅರೆಯುಗ್ಮಕಸಮ (Azygoid) ಅನಿಷೇಕಜನನ ಅಥವಾ ಅಗುಣಿತದ (Haploid) ಅನಿಷೇಕಜನನ:

ಅಂಡಾಣುವಿನಲ್ಲಿ ಪರಿಪಕ್ವತೆಯ ಕಾಲದಲ್ಲಿ ಕ್ರೋಮೊಸೋಮುಗಳ ಸಂಖ್ಯೆ ಅರ್ಧದಷ್ಟು ಕ್ಷೀಣಿಸುವುದರಿಂದ, ಅದರಲ್ಲಿ ತಾಯಿಯ ಕ್ರೋಮೊಸೋಮುಗಳು ಮೂಲ ಸಂಖ್ಯೆಯ ಅರ್ಧದಷ್ಟು ಕಡಿಮೆಯಾಗಿರುತ್ತದೆ. ಇಂತಹ ಅಂಡಾಣುವು

ಅನಿಷೇಕಜನನದ ರೀತಿ ಬೆಳವಣಿಗೆ ಹೊಂದಿದರೆ ಅವರಿಂದ ಉತ್ಪತ್ತಿಯಾಗುವ ಜೀವಿಯಲ್ಲಿ ಕೇವಲ ಅರ್ಧದಷ್ಟು ಕ್ರೋಮೋಸೋಮುಗಳ ಸಂಖ್ಯೆಯಿರುತ್ತದೆ. ಇದು ಬಹುವಾಗಿಲ್ಲ ಗಂಡುಜೀವಿ.

2. ಯುಗ್ಮಕಸಮ ಅನಿಷೇಕಜನನ (Zygoid Partheogenesis) ಅಥವಾ ಕಾಯಿಕ ಅನಿಷೇಕಜನನ (Somatic Parthenogenesis) ಅಂಡಾಣು ಗಳು ಅನಿಷೇಕ ಜನನದ ರೀತಿ ಬೆಳವಣಿಗೆ ಹೊಂದಿದ ಮೇಲೆ. ಅವುಗಳಲ್ಲಿ ದ್ವಿಗುಣಿತ ಸಂಖ್ಯೆಯ ಕ್ರೋಮೋಸೋಮುಗಳಿರುತ್ತವೆ. ಇಲ್ಲಿ ಅನಿಷೇಕಜನನದ ಅಂಡಾಣು ಗಳ ಕ್ರೋಮೋಸೋಮು ಸಂಖ್ಯೆಯ ಆಧಾರದ ಮೇಲೆ ಎರಡು ಬಗೆಗಳನ್ನು ಗುರುತಿಸ ಬಹುದು.

(ಅ) ಸ್ವಕಮಿಶ್ರಣ (Automictic) ಅನಿಷೇಕಜನನ.

ಅನಿಷೇಕಜನನದಿಂದ ಬೆಳವಣಿಗೆ ಹೊಂದುವ ಅಂಡಾಣುಗಳಲ್ಲಿ ಮೂಲ ಕ್ರೋಮೋಸೋಮುಗಳ ಸಂಖ್ಯೆ ಅರ್ಧದಷ್ಟು ಕ್ಷೀಣಿಸಿರುವುದರಿಂ ಅವರಲ್ಲಿ ಅಗುಣಿತ ಸಂಖ್ಯೆಯ ಕ್ರೋಮೋಸೋಮುಗಳಿರುತ್ತವೆ. ಅಂತ ಬೆಳವಣಿಗೆಯ ಪ್ರಾರಂಭದ ಘಟ್ಟಗಳಲ್ಲಿಯೇ ಎರಡು ಅಗುಣಿತ ನ್ಯೂಕ್ಲಿಯಸುಗಳು ಪರಸ್ಪರ ಐಕ್ಯಗೊಳ್ಳುವುದರಿಂದ ಅಂಡಾಣುವಿನಲ್ಲಿ ದ್ವಿಗುಣಿತ ಸಂಖ್ಯೆ ಪ್ರಾಪ್ತವಾಗುತ್ತದೆ.

(ಆ) ಅಂಡಜನನ ಕಾಲದಲ್ಲಿ ಕ್ರೋಮೋಸೋಮುಗಳ ಸಂಖ್ಯೆಯನ್ನು ಕ್ಷೀಣಿಸು ಸಂಯಂತ್ರದಲ್ಲಿ ಬದಲಾವಣೆಗಳಾಗಿರುವುದರಿಂದ ಅಂಡಾಣುವಿನಲ್ಲಿ ಮೂಲಸಂಖ್ಯೆಯೇ ದ್ವಿಗುಣಿತ ಸ್ಥಿತಿಯಲ್ಲಿ ಉಳಿಯುತ್ತದೆ ಅಂತಹ ಅಂಡಾಣುವಿನ ಅನಿಷೇಕಜನನದ ಬೆಳವಣಿಗೆಗೆ ಅಸಂಗಜನ (Apomictic) ಅನಿಷೇಕಜನನ ಎಂದು ಹೆಸರು.

ಅಗುಣಿತದ ಅನಿಷೇಕಜನನ (ಅರೆನೊಟೋಕಿ ಅಥವಾ ಐಚ್ಛಿಕ ಅನಿ ಷೇಕಜನನ): ಈ ಬಗೆಯ ಅನಿಷೇಕಜನನವನ್ನು ಜೇನುನೊಣ. ಇರುವೆ ಮತ್ತು ಕಣಜಗಳನ್ನೊಳಗೊಂಡ ಹೈಮೆನೋಪ್ಟರ (Hymenoptera) ಕೀಟಗಳು. ದೊಡ್ಡ ಮೈಕ್ರೋಮಾಲ್ತಸ್ (Micromalthus) ಎಂಬ ಜೀರುಂಡೆ ಮತ್ತು ಕೆಲ ಹುರುಪೆ ಕೀಟ (Scale insects) ಗಳಲ್ಲಿ ಕಾಣಬಹುದು.

ಜೇನುಗೂಡಿನಲ್ಲಿ ಮೂರು ಬಗೆಯ ಕೀಟಗಳನ್ನು ಗುರುತಿಸಬಹುದು. (1) ರಾಣಿ: ಇದು ಜೇನುಗೂಡಿನ ಯಜಮಾನಿ, ಗೂಡಿನ ಪ್ರತಿಯೊಂದು ಮರಿಯ ತಾಯಿ. ಇವಳ ಕೆಲಸ ಕೇವಲ ಮೊಟ್ಟೆಗಳನ್ನಿಡುವುದು ಅಂದರೆ ಸಂತಾನೋತ್

ಸಾಧ್ಯ. (2) ಕಾವಲುಗಾರರು: ಇವು ಹೆಣ್ಣುಗಳು. ಹೆಣ್ಣುತನವನ್ನು ಬಲಿಕೊಟ್ಟು ನಿಸ್ಸಂತಾನವಾಗಿರುವ ಜೀವಿಗಳು. ಜೇನುಗೂಡಿನ ಸಮಸ್ತ ಉದ್ಯೋಗಕ್ಷೇತ್ರವೆಲ್ಲ ಇವುಗಳಿಗೆ ಸೇರಿದ್ದು. ಆಹಾರಾರ್ಜನೆಯಿಂದ ಹಿಡಿದು ಅದನ್ನು ಜೋಪಾನವಾಗಿ ಗೂಡಿನಲ್ಲಿ ಸಂಗ್ರಹಿಸಿಡುವುದು; ಗೂಡನ್ನು ಕಟ್ಟುವುದರಿಂದ ಹಿಡಿದು ಅದರ ಸಂರಕ್ಷಣೆ ಮತ್ತು ನೈರ್ಮಲ್ಯ ಇವುಗಳ ಪಾಲಿನ ಕೆಲಸ. ರಾಣಿಯ ಆರೈಕೆಯಿಂದ ಹಿಡಿದು ಗೂಡುಗಳಲ್ಲಿ ಬೆಳೆಯುವ ಪುಟ್ಟ ಮರಿಗಳ ಪೋಷಣೆ ರಕ್ಷಣೆಗಳೆಲ್ಲ ಇವುಗಳಿಗೇ ಸೇರಿದ್ದು. (3) ಗಂಡು ಹುಳುಗಳು: ಇವು ಸೋಮಾರಿತನದ ಪ್ರತೀಕಗಳು. ಗೂಡಿನಲ್ಲಿ ಇವುಗಳ ಸಂಖ್ಯೆ ಅಲ್ಪವಾದರೂ ಕಾವಲುಗಾರರು ಕೂಡಿಟ್ಟ ಆಹಾರವನ್ನು ಗೂಡಿನಲ್ಲಿಯೇ ಇದ್ದು ಭುಂಜಿಸುವುದು ಇವುಗಳ ನಿತ್ಯದ ಕೆಲಸ. ಇದಲ್ಲದೆ ಸಂತಾನೋತ್ಪತ್ತಿ ಕಾರ್ಯದಲ್ಲಿ ಇವು ಸಹ ಭಾಗಿ. ಅಂದರೆ ರಾಣಿಕುವರಿಯರನ್ನು ಹಿಂಬಾಲಿಸಿ, ಅಂತರಿಕ್ಷದಲ್ಲಿ ಅವರೊಡನೆ ಸ್ವೇಚ್ಛೆಯಾಗಿ ಹಾರಾಡಿ, ಅವರೊಡನೆ ಸಂಭೋಗ ನಡೆಸುವುದು ಇವುಗಳ ಮುಖ್ಯವಾದ ಕೆಲಸ.

ಕನ್ಯಾವಸ್ಥೆಯಲ್ಲಿರುವ ರಾಣಿಕುವರಿ ಪ್ರಾಯಕ್ಕೆ ಬಂದಮೇಲೆ, ತಾನು ಬೆಳೆದ ಜೇನುಗೂಡು ಮತ್ತು ಅದರ ಪರಿಸರವನ್ನು ಪರಿಚಯ ಮಾಡಿಕೊಂಡ ಮೇಲೆ, ಅದು ಹಲವು ಗಂಡುನೊಣಗಳೊಡನೆ ಸಂಭೋಗಯಾನಕ್ಕೆ ಹೊರಡುತ್ತದೆ. ಗಗನದಲ್ಲಿ ಸ್ವೇಚ್ಛೆಯಾಗಿ ಹಾರಾಡುತ್ತಾ ಗಂಡುಗಳೊಡನೆ ಒಂದಾದ ಮೇಲೊಂದರಂತೆ ಸಂಭೋಗ ನಡೆಸಿ, ಅವುಗಳ ವೀರ್ಯವನ್ನು ತನ್ನ ಅಂಡನಾಳಿ (oviduct) ಯಲ್ಲಿರುವ ಶುಕ್ರ ಪಾತ್ರೆ (Receptaculum Seminis) ಯಲ್ಲಿ ತುಂಬಿಕೊಂಡು ಗೂಡಿಗೆ ಹಿಂದಿರುಗುತ್ತದೆ. ಅಷ್ಟು ಗಂಡುಗಳ ಶುಕ್ರಾಣುಗಳನ್ನು ತುಂಬಿಕೊಳ್ಳುವಷ್ಟು ಗಾತ್ರ ಹಿರಿದಾದುದೆ ಆ ಶುಕ್ರಪಾತ್ರೆ; ರಾಣಿಯು ಬಹು ಗಂಡು ನೊಣಗಳ ವೀರ್ಯವನ್ನು ತುಂಬಿಕೊಂಡು ಗೂಡಿಗೆ ಹಿಂತಿರುಗಿದ ಮೇಲೆ ಕೆಲವು ಕಾವಲುಗಾರರನ್ನು ಕರೆದುಕೊಂಡು ಮತ್ತೊಂದೆಡೆಗೆ ಸಾಗುತ್ತದೆ. ಅದು ಹೊಸ ನೆಲೆಯಲ್ಲಿ ಅದರೊಡನೆ ಬಂದ ಕಾವಲುಗಾರರು ಹೊಸಗೂಡನ್ನು ನಿರ್ಮಿಸುತ್ತವೆ. ಕಟ್ಟಿದ ಗೂಡು ದೊಡ್ಡದಾದಂತೆಲ್ಲಾ ರಾಣಿಯು ತನ್ನ ಜೀವನ ಪರ್ಯಂತರ ಮೊಟ್ಟೆಗಳನ್ನಿಡಲಾರಂಭಿಸುತ್ತದೆ. ಈ ಮೊಟ್ಟೆಗಳ ಮತ್ತು ಅವುಗಳಿಂದ ಹೊರಬರುವ ಮರಿಗಳ ಪೋಷಣೆ, ರಕ್ಷಣೆ, ಆರೈಕೆ ಯೋಗಕ್ಷೇಮಗಳೆಲ್ಲ ಕಾವಲುಗಾರರಿಗೇ ಸೇರಿದ್ದು. ಈ ಮರಿಗಳು ದೊಡ್ಡವಾದರೆ ಕಾವಲುಗಾರರೇ ಅಲ್ಲದೆ ಕೆಲವು ರಾಣಿಕುವರಿಯರೂ ಕೆಲವು ಗಂಡುನೊಣಗಳೂ ರೂಪಗೊಳ್ಳುತ್ತವೆ.


ಗೂಡಿನಲ್ಲಿ ಗಂಡುನೊಣಗಳು ಹುಟ್ಟುವುದು ರಾಣಿಯ ನಿಯಂತ್ರಣದಲ್ಲಿಯೇ ಇರುವುದೆಂದು ತಿಳಿಯಬಹುದು. ರಾಣಿಯು ತನ್ನ ಅಂಡಾಶಯದಲ್ಲಿ ಉತ್ಪತ್ತಿಯಾದ ಅಂಡಾಣುಗಳು ಅಂಡನಾಳಿಯಲ್ಲಿ ಮುಂದುವರಿಯುವಾಗ ಶುಕ್ರಪಾತ್ರೆಯಿಂದ

ಶುಕ್ರಾಣುಗಳನ್ನು ಒಂದೊಂದಾಗಿ ಬಿಟ್ಟು ಅಂಡಾಣುಗಳನ್ನು ನಿಷೇಚನಗೊಳಿಸುತ್ತದೆ.
ಅಂತಹ ನಿಷೇಚಿತ ಅಂಡಾಣುವಿನಿಂದ ಬೆಳೆದ ಮರಿಗಳೆಲ್ಲ ಹೆಣ್ಣು ಜೀವಿಗಳಾಗಿ ರೂಪು
ಗೊಳ್ಳುತ್ತವೆ. ಈ ಮರಿ ಹೆಣ್ಣುಗಳು ಆಹಾರ ಆರೈಕೆಗಳಿಗೆ ಅನುಗುಣವಾಗಿ ಪಾದಿಯ
ರಾಗಿಯೋ ಅಥವಾ ಮುಂದಿನ ರಾಣಿಯರಾಗಿಯೋ ಬೆಳವಣಿಗೆ ಹೊಂದುತ್ತವೆ. ಆದ
ಅಂಡಾಣುಗಳು ಅಂಡನಾಳಿಕೆಯಲ್ಲಿ ಸಾಗಿ ಬರುವಾಗ ರಾಣಿಯು ತನ್ನ ಶುಕ್ರಪಾತ್ರೆಯ
ದ್ವಾರವನ್ನು ಮುಚ್ಚಿಕೊಂಡರೆ ಶುಕ್ರಾಣುವಿನ ಪ್ರವೇಶಕ್ಕೆ ತಡೆಯುಂಟಾಗುತ್ತದೆ
ಈ ಅಂಡಾಣುಗಳು ಶುಕ್ರಾಣುಗಳಿಂದ ನಿಷೇಚನಗೊಳ್ಳದಿದ್ದರೂ ಬೆಳವಣಿಗೆ ಹೊಂದು
ಸಾಮರ್ಥ್ಯವಿರುವುದರಿಂದ ಅವುಗಳ ಬೆಳವಣಿಗೆ ಮುಂದುವರಿಯುತ್ತದೆ. ಈ
ಅನಿಷೇಕ ಜನನದ ರೀತಿಯಿಂದ ಬೆಳೆಯುವ ಅಂಡಾಣುಗಳಲ್ಲಿ ಯಾವಾಗಲೂ ಗಂಡು
ನೊಣಗಳೇ ಹುಟ್ಟುತ್ತವೆ.

1845 ರಲ್ಲಿಯೇ ಡ್ಸಿರ್‌ಸೋನ್ (Dzierzon) ಎಂಬುವರು ಜೇನು ನೊ
ಗಳಲ್ಲಿ ಅಂಡಾಣುಗಳ ನಿಷೇಚನದಿಂದ ರಾಣಿ ಮತ್ತು ಪಾದಿಯರು ಹುಟ್ಟುತ್ತ
ಯೆಂದೂ ಮತ್ತು ಅನಿಷೇಕಜನನದ ಅಂಡಾಣುವಿನಿಂದ ಗಂಡುಜೇನು ಉತ್ಪತ್ತಿಯಾಗು
ದೆಂದೂ ಒಂದು ಸಿದ್ಧಾಂತವನ್ನು ಹೊರಡಿಸಿದ್ದರು. ಇವರ ಅಭಿಪ್ರಾಯವನ್ನು
ಸಿಬೋಲ್ಡ್ ಮತ್ತು ಲ್ಯೂಕಾರ್ಟ್ ಮೊದಲಾದ ಸಂಶೋಧಕರು ಈ ಸಿದ್ಧಾಂತವ
ದೃಢಪಡಿಸಿದರು. ಡಾಂಕ್ಯಾಸ್ಟರ್ (L.Doncaster. 1907) ಮತ್ತು ನಾಕ್ಟ್‌ಶೈ
(H. Nachtscheim 1913) ಎಂಬುವರು ಗಂಡಿನಲ್ಲಿ 16 ಮತ್ತು ಹೆಣ್ಣಿನಲ್ಲಿ
ಕ್ರೋಮೊಸೋಮುಗಳಿರುವುದು ಎಂದು ತೋರಿಸಿಕೊಟ್ಟರು.

ನಿಷೇಚಿತ ಅಂಡಾಣುವಿನಲ್ಲಿ ತಂದೆತಾಯಿಯಿಂದ ಕ್ರೋಮೊಸೋಮುಗಳ ಕೊ
ಯಿರುತ್ತದೆ. ತಾಯಿಯಿಂದ ಹದಿನಾರು ಕ್ರೋಮೊಸೋಮುಗಳ ಒಂದು ತ
ಹಾಗೆಯೇ ತಂದೆಯಿಂದ ಅದೇ ಸಂಖ್ಯೆಯ ಮತ್ತೊಂದು ತಂಡವಿರುವುದರಿಂದ ಹೆ
ಯಲ್ಲಿ ದ್ವಿಗುಣಿತ ಸಂಖ್ಯೆಯ ಕ್ರೋಮೊಸೋಮುಗಳಿರುತ್ತದೆ. ಅನಿಷೇಕಜ
ರೀತಿಯಲ್ಲಿ ಬೆಳೆಯುವ ಅಂಡಾಣುವಿನಲ್ಲಿ ತಾಯಿಯಿಂದ ಬಂದ ಕ್ರೋಮೊಸೋಮು
ಮಾತ್ರ ಇರುತ್ತದೆ. ಇದರಿಂದ ಅಂತಹ ಮೊಟ್ಟೆಯಿಂದ ಹುಟ್ಟುವ ಜೀವಿ
ಕೇವಲ ಹದಿನಾರು ಕ್ರೋಮೊಸೋಮುಗಳು ಅಥವಾ ಏಕಗುಣಿತ ಸಂಖ್ಯೆಯ ಕ್ರೋ
ಸೋಮುಗಳು ಇರುತ್ತವೆ. ಲಿಂಗ ನಿರ್ಧಾರಕ ದೃಷ್ಟಿಯಲ್ಲಿ ನೋಡುವುದಾದರೆ
ಜೇನು ನೊಣದಲ್ಲಿ ಅಂಡಾಣುವು ಯಾವ ರೀತಿ ಬೆಳವಣಿಗೆ ಹೊಂದುತ್ತದೆ ಎಂಬುದ
ಅವಲಂಬಿಸಿರುತ್ತದೆ. ಅಂಡಾಣುವು ಶುಕ್ರಾಣುವಿನಿಂದ ನಿಷೇಚನಗೊಂಡು ಬೆ
ಹೆಣ್ಣು ಜೀವಿಯು ಅನಿಷೇಕಜನನದ ರೀತಿಯಲ್ಲಿಯೇ ಬೆಳೆದ ಗಂಡುಜೀವಿ
ರೂಪುಗೊಳ್ಳುತ್ತದೆಯೆಂಬ ಒಂದು ನಿಯಮವನ್ನು ಇಲ್ಲಿ ಗಮನಿಸಬಹುದು.

ದ್ವಿಗುಣಿತದ ಹೆಣ್ಣಿನಲ್ಲಿ ಅಂಡಜನನ (oogenesis) ಸಹಜರೀತಿಯದು; ಸಾಮಾನ್ಯ ಪ್ರಕೃತವಾದುದು (ಚಿತ್ರ 1). ಇಲ್ಲಿ ಎರಡು ಪಂಗಡ ಕ್ರೋಮೋಸೋಮು



ಚಿತ್ರ 1. ಪ್ರಾಣಿಗಳಲ್ಲಿ ಲಿಂಗ ನಿರ್ಧಾರ

a) ಗಂಡು ಎರಡು ಬಗೆಯ ಶುಕ್ರಾಣುಗಳನ್ನು ಉತ್ಪಾದಿಸಿದಾಗ ಮಾನವ ಇತ್ಯಾದಿ. b) ಹೆಣ್ಣು ಎರಡು ಬಗೆಯ ಅಂಡಾಣುಗಳನ್ನು ಉತ್ಪಾದಿಸಿದಾಗ, ಉದಾ. ಪಕ್ಷಿ, ಚಿಟ್ಟೆ, ಪತಂಗ ಇತ್ಯಾದಿ.


ಗಳಿರುವುದರಿಂದ ಅಂಡಜನನ ಕಾಲದಲ್ಲಿ ನಡೆಯುವ ಮಯೋಸಿಸ್ ರೀತಿಯ ಕೋಶಿಕ ವಿಭಜನೆ ಸಹ ಸಾಮಾನ್ಯ ರೀತಿಯಲ್ಲಿ ನಡೆಯುತ್ತದೆ. ಮೊದಲನೆಯ ಕೋಶಿಕ ವಿಭಜನೆಯಲ್ಲಿ ಕ್ರೋಮೋಸೋಮುಗಳ ಸಂಖ್ಯೆ ಅರ್ಧದಷ್ಟು ಕ್ಷೀಣಿಸುತ್ತದೆ. ಇದರ ಫಲವಾಗಿ ಅಂಡಾಣುವಿನಲ್ಲಿ ಕ್ರೋಮೋಸೋಮುಗಳ ಸಂಖ್ಯೆ ಏಗುಣಿತ ಸ್ಥಿತಿಗೆ (16) ಬರುತ್ತದೆ. ಆದರೆ ಏಗುಣಿತ ಸಂಖ್ಯೆಯ ಕ್ರೋಮೋಸೋಮುಗಳನ್ನುಳ್ಳ ಗಂಡಿನಲ್ಲಿ ಶುಕ್ರಜನನ (spermatogenesis) ಕಾಲದಲ್ಲಿ ನಡೆಯುವ ಮಯೋಸಿಸಿನ ಕೋಶಿಕ ವಿಭಜನೆಯ ರೀತಿನೀತಿಗಳಲ್ಲಿ ಸ್ವಲ್ಪಮಟ್ಟಿನ ಮಾರ್ಪಾಟು ಕಂಡುಬರುತ್ತದೆ. ಇಲ್ಲಿ ಮೊದಲನೆಯ ಮಯೋಸಿಸಿನ ಕೋಶಿಕ ವಿಭಜನೆಯಲ್ಲಿ ಕ್ರೋಮೋಸೋಮುಗಳ ಸಂಖ್ಯೆ ಕ್ಷೀಣಿಸುವುದಿಲ್ಲ. ಇದರ ಎಲ್ಲ ಹದಿನಾರು ಕ್ರೋಮೋಸೋಮುಗಳು ಅಖಂಡವಾಗಿ ಒಂದು ಮರಿಜೀವ ಕೋಶವನ್ನು ಸೇರುತ್ತವೆ. ಆದರೆ ಇದರ ಸೋದರ ಮರಿಜೀವಕೋಶದಲ್ಲಿ ಕ್ರೋಮೋಸೋಮುಗಳಿರುವುದಿಲ್ಲ. ಈ ಅಪಕೃಷ್ಟ (Abortive) ಮಯೋಸಿಸಿನ ಕೋಶಿಕ ವಿಭಜನೆಯ ಫಲವಾಗಿ ಕ್ರಿಯಾತ್ಮಕವಾದ ಪ್ರತಿ ಶುಕ್ರಾಣುವಿನಲ್ಲಿಯೂ ಹದಿನಾರು ಕ್ರೋಮೋಸೋಮುಗಳಿರುವಂತಾಗುತ್ತದೆ.

ಈ ಹಂತದಲ್ಲಿ ಲಿಂಗ ನಿರ್ಧಾರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದು ಸೂಕ್ತ. ಪ್ರಾಣಿಗಳಲ್ಲಿ ಅವುಗಳ ಕ್ರೋಮೋಸೋಮುಗಳು ಮತ್ತು ಅವುಗಳಿಗೆ ಸಂಬಂಧಿ

ಿವ ಜೀವಿಗಳು ಲಿಂಗ ನಿರ್ಧಾರದಲ್ಲಿ ಪ್ರಮುಖ ಪಾತ್ರಗಳನ್ನು ವಹಿಸುತ್ತವೆ. ದ್ವಿಲೈಂಗಿಕ ರೀತಿಯಲ್ಲಿ ಸಂತಾನೋತ್ಪತ್ತಿ ಮಾಡುವ ಎಲ್ಲ ಪ್ರಾಣಿಗಳಲ್ಲಿಯೂ ದ್ವಿಗುಣಿತ ಸಂಖ್ಯೆಯಲ್ಲಿ ಕ್ರೋಮೊಸೋಮುಗಳಿರುತ್ತವೆ. ತಾಯಿಯಿಂದ ಅಂಡಾಣುವಿನ ಮೂಲಕ ಬರುವ ಒಂದು ಕ್ರೋಮೊಸೋಮುಗಳ ತಂಡ ಮತ್ತು ತಂದೆಯಿಂದ ಶುಕ್ರಾಣುಗಳ ಮೂಲಕ ಬರುವ ಮತ್ತೊಂದು ಕ್ರೋಮೋಸೋಮುಗಳ ತಂಡ ಸೈಗೋಟಿನಲ್ಲಿ ಸಂಗಮವಾಗುವುದೇ ಇದಕ್ಕೆ ಕಾರಣ. ಇವೆರಡು ಮೂಲಗಳಿಂದ ಬರುವ ಕ್ರೋಮೊಸೋಮುಗಳು ಅನುಕ್ರಮವಾಗಿ ಸಮಜಾತವಾಗಿರುತ್ತವೆ. ಈ ಕ್ರೋಮೊಸೋಮುಗಳನ್ನು ವಿಶ್ಲೇಷಿಸಿದರೆ ಅವರಲ್ಲಿ ಒಂದೆರಡು ಲಿಂಗನಿರ್ಧಾರಕ ಕ್ರೋಮೊಸೋಮುಗಳೂ ಮತ್ತು ಉಳಿದವು ಆಟೋಸೋಮುಗಳೂ ಇರುತ್ತವೆ. ಉದಾಹರಣೆಗೆ ಮಾನವನ ಕ್ರೋಮೊಸೋಮುಗಳನ್ನು ಪರೀಕ್ಷಿಸಿದರೆ ($2n = 46$) ಅವರಲ್ಲಿ 44 ಆಟೋಸೋಮು ಮತ್ತು ಎರಡು ಲಿಂಗ ಕ್ರೋಮೊಸೋಮುಗಳನ್ನು ಗುರುತಿಸಬಹುದು. ಗಂಡು ಹೆಣ್ಣುಗಳಲ್ಲಿ ಆಟೋಸೋಮುಗಳು (AA) ರೂಪ, ಆಕಾರ ಮತ್ತು ಗಾತ್ರದಲ್ಲಿ ಪರಸ್ಪರ ಹೋಲಿಕೆಯನ್ನು ಪಡೆದಿರುತ್ತವೆ. ಆದರೆ ಲಿಂಗ ಕ್ರೋಮೊಸೋಮುಗಳು ರಚನಾತ್ಮಕ ದೃಷ್ಟಿಯಲ್ಲಿ ಬೇರೆ ಬೇರೆ. ಹೆಣ್ಣಿನಲ್ಲಿ ಈ ಲಿಂಗ ಕ್ರೋಮೊಸೋಮುಗಳು ಒಂದೇ ರೂಪ ರಚನೆಯಿಂದ ಕೂಡಿದ್ದರೆ, ಗಂಡಿನಲ್ಲಿ ಅವು ಬೇರೆ ಬೇರೆ. ಹೆಣ್ಣಿನಲ್ಲಿರುವ ಈ ಲಿಂಗ ಕ್ರೋಮೊಸೋಮುಗಳಿಗೆ × × ಕ್ರೋಮೊಸೋಮುಗಳೆಂದೂ ಗಂಡಿನವಕ್ಕೆ × Y ಕ್ರೋಮೊಸೋಮುಗಳೆಂದೂ ಹೆಸರಿಸಲಾಗಿದೆ. ಅಂಡಜನನ ಕಾಲದಲ್ಲಿ ಪ್ರತಿ ಅಂಡಾಣುವಿನಲ್ಲೂ ಒಂದು ತಂಡ ಆಟೋಸೋಮುಗಳೂ ಮತ್ತು ಒಂದು ×– ಕ್ರೋಮೊಸೋಮು ಸೇರುತ್ತವೆ. ಆದರೆ ಗಂಡಿನ ಶುಕ್ರಾಣುಗಳು ಲಿಂಗಕ್ರೋಮೊಸೋಮುಗಳ ದೃಷ್ಟಿಯಲ್ಲಿ ಎರಡು ಬಗೆಯವಾಗಿರುತ್ತವೆ: (1) ×–ಕ್ರೋಮೊಸೋಮುವನ್ನುಳ್ಳ ಶುಕ್ರಾಣು ಮತ್ತು (2) Y–ಕ್ರೋಮೊಸೋಮನ್ನುಳ್ಳ ಶುಕ್ರಾಣು. ×–ಕ್ರೋಮೊಸೋಮನ್ನುಳ್ಳ ಶುಕ್ರಾಣು ಅಂಡಾಣುವಿನೊಡನೆ ಬೆರೆತರೆ ಆಗ ಸೈಗೋಟಿನಲ್ಲಿ ಎರಡು × ಕ್ರೋಮೊಸೋಮುಗಳು ಸೇರುವುದರಿಂದ ಅದರಿಂದ ಹುಟ್ಟುವ ಜೀವಿ ಹೆಣ್ಣುಜೀವಿ(AA × ×)ಯಾಗಿರುತ್ತದೆ. ಆದರೆ ಅಂಡಾಣುವಿನೊಡನೆ Y –ಕ್ರೋಮೊಸೋಮನ್ನು ಹೊತ್ತ ಶುಕ್ರಾಣುವು ಕೂಡಿದರೆ ಸೈಗೋಟಿನಲ್ಲಿ × Y ಕ್ರೋಮೊಸೋಮುಗಳು ಪ್ರಾಪ್ತವಾಗುವುದರಿಂದ ಅದರಿಂದ ಗಂಡುಜೀವಿಯು (AA × ×) ಬೆಳವಣಿಗೆ ಹೊಂದುತ್ತದೆ. [ಚಿತ್ರ 1_a] ಆದರೆ ಲೆಪಿಡೋಪ್ಟೆರ (ಪತಂಗ ಚಿಟ್ಟೆಗಳ ಗಣ), ಟ್ರೈಕೋಪ್ಟೆರ, ಸರೀಸೃಪ ಮತ್ತು ಪಕ್ಷಿಗಳಲ್ಲಿ ಹೆಣ್ಣುಜೀವಿ ಎರಡು ಬಗೆಯ ಅಂಡಾಣುಗಳನ್ನು ಉತ್ಪತ್ತಿ ಮಾಡಿದರೆ ಗಂಡು ಒಂದೇ ಬಗೆಯ ಶುಕ್ರಾಣುಗಳನ್ನು ಉತ್ಪತ್ತಿ ಮಾಡುತ್ತದೆ. ಈ ಪ್ರರೂಪವನ್ನು ಗುರುತಿಸಲು AAZZ (ಗಂಡು) ಮತ್ತು AAZW (ಹೆಣ್ಣು) ಎಂಬ ಚಿಹ್ನೆಗಳನ್ನು ಕೊಡಲಾಗಿದೆ. Z–ಕ್ರೋಮೊಸೋಮನ್ನು ಹೊತ್ತ ಶುಕ್ರಾಣುವು Z-ಕ್ರೋಮೊಸೋಮಿನಿಂದ ಕೂಡಿದ ಅಂಡಾಣು

ಮತ್ತು ನಿಷೇಚನ ಗೊಳ್ಳದರೆ ಸೈಗೋಟಿನಲ್ಲಿ ಎರಡು ZZ ಗಳು ಪ್ರಾಪ್ತವಾಗುತ್ತವೆ. ಅಂತಹ ಸೈಗೋಟಿನಿಂದ ಬೆಳೆಯುವ ಜೀವಿ ಗಂಡು (AAZZ). ಆದರೆ W–ಯಿಂದ ಕೂಡಿದ ಅಂಡಾಣುವಿನೊಡನೆ ಶುಕ್ರಾಣು ಬೆರೆತರೆ ಆಗ ಸೈಗೋಟಿನಲ್ಲಿ ZW–ಗಳ ಮಿಲನದಿಂದ ಹೆಣ್ಣು (AAZW)ರೂಪುಗೊಳ್ಳುತ್ತದೆ (ಚಿತ್ರ 1a).


ಮೇಲಿನ ಜೇನುನೊಣ, ಇರುವೆ, ಕಣಜಗಳ ಬೆಳವಣಿಗೆಯನ್ನು ನೋಡಿದರೆ ಲಿಂಗನಿರ್ಧಾರಕ್ಕೂ ಅನಿಷೇಕಜನನಕ್ಕೂ ನಿಕಟ ಸಂಬಂಧವಿರುವಂತೆ ಕಂಡುಬರುತ್ತದೆ. ಅಂಡಾಣುವು ಅನಿಷೇಕಜನನದ ರೀತಿಯಲ್ಲಿಯೇ ಬೆಳವಣಿಗೆ ಹೊಂದಿದರೆ ಅದರಲ್ಲಿ ಗಂಡು ರೂಪಗೊಳ್ಳುತ್ತದೆ (ಚಿತ್ರ 2 ಮತ್ತು 3a). ಅದರಲ್ಲಿ ತಾಯಿಯಿಂದ ಪಡೆದ



ಚಿತ್ರ 2. ಜೇನು ಹುಳುವಿನಲ್ಲಿ ಲಿಂಗ ನಿರ್ಧಾರ. ಅಂಡಾಣುವು ನಿಷೇಚನಗೊಂಡು ಬೆಳೆದರೆ ಹೆಣ್ಣು, ಅನಿಷೇಕಜನನದ ರೀತಿಯಲ್ಲಿ ಬೆಳೆದರೆ ಗಂಡು.


ಒಂದು ಕ್ರೋಮೋಸೋಮು ತಂಡಮಾತ್ರವಿರುತ್ತದೆ. ಆದರೆ ಅದು ಗಂಡಿನ ಶುಕ್ರಾಣುವಿನೊಡನೆ ಬೆರೆತರೆ ಸೈಗೋಟಿನಲ್ಲಿ ಕ್ರೋಮೋಸೋಮುಗಳ ಎರಡು ತಂಡಗಳೇರ್ಪಟ್ಟು ಹೆಣ್ಣುಜೀವಿಯಾಗಿ ರೂಪುಗೊಳ್ಳುತ್ತದೆ. ಆದರೆ ವೈಟಿಂಗ್ ಅವರ್ (P.W. Whiting, 1925–27) ಪ್ರಯೋಗ ಮಂದಿರಗಳಲ್ಲಿ ಹಾಬ್ರೋಬ್ರೇಕಾನ್ (Habrobracon) ಜಾತಿಯ ಕಣಜದ ಮೇಲೆ ಸಂಶೋಧನೆಗಳನ್ನು ನಡೆಸಿ ದ್ವಿಗುಣಕ ಸಂಖ್ಯೆಯ ಗಂಡು ಕಣಜಗಳನ್ನು ಪಡೆದಿದ್ದಾರೆ. ಇವು ಸಾಮಾನ್ಯವಾಗಿ ಫಲವಂತತೆಯನ್ನು ಕಳೆದುಕೊಂಡವು ಹಾಗೂ ಹೆಚ್ಚು ಬದುಕುವ ಸಾಮರ್ಥ್ಯವಿಲ್ಲದವು. ಇವರ ಸಂಶೋಧನೆಯಲ್ಲಿ ಹತ್ತು ವರ್ಗಗಳ ದ್ವಿಗುಣಿತದ ಗಂಡುಗಳನ್ನೂ, ಅದೇ ಸಂಖ್ಯೆಯ ಅಗುಣಿತ ಗಂಡುಗಳನ್ನೂ ಮತ್ತು ನಲವತ್ತೆರಡು ವರ್ಗಗಳ ಹೆಣ್ಣು ಕೀಟಗಳನ್ನು ಪಡೆದಿದ್ದಾರೆ. ಇವರು ತಮ್ಮ ಜೀನ್ಯಾತ್ಮಕ ವಿಶ್ಲೇಷಣೆಗಳಿಂದ ಬಹು ಅನ್ಯರೂಪಿ ಜೀನುಗಳ ಸರಣಿಯು ಈ ಕಣಜದಲ್ಲಿ ಲಿಂಗ ನಿರ್ಧಾರ ಮಾಡುತ್ತವೆಯೆಂದು ನಿರ್ಧಾರಕ್ಕೆ ಬಂದಿದ್ದಾರೆ. ಅಂದರೆ ಒಂದು ಲಿಂಗ ನಿರ್ಧಾರಕ ಜೀನು 'x' ಹಲವಾರು ಬಗೆಗಳಲ್ಲಿ ($x_1, x_2, x_3, x_4 \dots x_n$) ಮಾರ್ಪಟ್ಟಿರುವುದು. ಸೈಗೋಟಿನಲ್ಲಿ ಸಮಜಾತಜೀನುಗಳ ಜೋಡಿಯಿದ್ದರೆ (ಉದಾಹರಣೆಗೆ, $x_1x_1, x_2x_2, x_3x_3, x_4x_4$ ಇತ್ಯಾದಿ) ಅದರಲ್ಲಿ ಗಂಡು ಜೀವಿರೂಪಗೊಳ್ಳುತ್ತದೆ. ಆದರೆ ಸೈಗೋಟಿನಲ್ಲಿ ಈ ಜೀನುಗಳು ಅಸಮಜಾತ

[illegible]



a b

[illegible]



ಚಿತ್ರ 3

c d

ಪ್ರಾರಂಭಿಸಿ ಅದರಿಂದ ಮರಿಯೊಂದು ಹೊರಗೆ ಬರುತ್ತದೆ. ಈ ರೀತಿಯಿಂದ ಕ್ರಮವಾಗಿ 7–11 ಅನಿಷೇಕಜನನ ಪೀಳ್ಗೆಗಳ ನಂತರ ಪ್ರಾರಂಭವಾಗುತ್ತದೆ. ಶರತ್ ಕಾಲಕ್ಕೆ ಮೊದಲು ಕೊನೆಯ ಅನಿಷೇಕಜನನ ಪೀಳ್ಗೆ ಗಂಡು ಲೈಂಗಿಕ ಹೆಣ್ಣುಗಳ ಎರಡು ರೂಪವನ್ನು ಉತ್ಪಾದಿಸುತ್ತದೆ. ಲೈಂಗಿಕ ಹೆಣ್ಣುಗಳು ಲೈಂಗಿಕ ಗಂಡಿನಿಂದ ಫಲಿತ ಅಂಡಾಣುವು ನಿಷೇಚನಗೊಂಡು ಸ್ಥಗಿತವಾಗಿ ಚಳಿ ಕಳೆಯುತ್ತದೆ. c) ಫೈಲಾಕ್ಸೆರ ಜೀವನ ಚಕ್ರದ ಪೂರ್ವಾರ್ಧ ಮತ್ತು ಉತ್ತರಾರ್ಧ ಭಾಗಗಳು ಕ್ರಮವಾಗಿ ಓಕ್ ಮತ್ತು ಬೇರು ಗಾಲ್‌ಗಳ ಜೀವನ ಚಕ್ರದ ಭಾಗಗಳನ್ನು ತೋರಿಸುತ್ತದೆ. d) ಗಾಲ್ ಕೀಟದ ಜೀವನ ಚಕ್ರದಲ್ಲಿ ಎರಡು ಬಗೆಯ ಸ್ತ್ರೀರೂಪಗಳಿವೆ. ಒಂದರಲ್ಲಿ ಹೆಣ್ಣಿನ ಕೋಶಗಳು ಹಾಪ್ಲಾಯಿಡ್ ನ್ಯೂಕ್ಲಿಯಸ್‌ನಲ್ಲಿ ಗಂಡು ಕೋಶಗಳು ಹಾಪ್ಲಾಯಿಡ್ ಆಗಿರುತ್ತವೆ. ಇನ್ನು ಅನಿಷೇಕಜನನದ ರೀತಿಯಲ್ಲಿ ಸಂತತಿಗೆ ಜನ್ಮ ಕೊಟ್ಟು ಲೈಂಗಿಕ ಕೀಟಗಳನ್ನು ಉತ್ಪಾದಿಸುತ್ತದೆ. ಲೈಂಗಿಕ ಜೀವಿಗಳ ಜೀವನದ ಕೊನೆಯಲ್ಲಿ ನಿಷೇಚಿತ ಅಂಡಾಣುಗಳು ಉತ್ಪತ್ತಿಗೊಳ್ಳುತ್ತದೆ.

ಚಕ್ರೀಯ ಅನಿಷೇಕಜನನ

ಚಕ್ರೀಯ ಅನಿಷೇಕ ಜನನ ರೀತಿ ಸಂತಾನೋತ್ಪತ್ತಿಯ ಉದಾಹರಣೆಗೆ 'ಏಫಿಡ್' ಕೀಟಗಳನ್ನು ಆರಿಸಿಕೊಳ್ಳಬಹುದು. ಈ ಕೀಟಗಳು ಹೋಮೋಪ್ಟೆರ (Homoptera) ಗಣಕ್ಕೆ ಸೇರಿದುವು. ಇವು ಸಾಮಾನ್ಯವಾಗಿ ಹಸುರು ಎಲೆ ಮತ್ತು ಮೃದುವಾದ ಕಾಂಡಗಳ ಮೇಲೆ ವಾಸಿಸುತ್ತವೆ. ಇವುಗಳ ಗಾತ್ರ ಚಿಕ್ಕದು. ದೇಹ ಮೃದು. ಬಣ್ಣ ಸಾಮಾನ್ಯವಾಗಿ ಹಸಿರು. ಕೆಲವು ಬಗೆ ಏಫಿಡ್ ಕೀಟಗಳು ಕಪ್ಪು ಅಥವಾ ಕಂದು ಬಣ್ಣವಾಗಿರಬಹುದು. ಇವುಗಳ ಮುಖಾಂಗಗಳು ಸಸ್ಯದ ಮೃದುವಾದ ಭಾಗವನ್ನು ಚುಚ್ಚುವುದಕ್ಕೂ ಮತ್ತು ಸಸ್ಯದ ರಸವನ್ನು ಹೀರುವುದಕ್ಕೂ ಪರಿಹೊಂದಾಣಿಕೆಯಾಗಿದೆ. ಇವುಗಳಿಗೆ ಸಸ್ಯದ ಹೇನುಗಳೆಂಬ ಅಡ್ಡ ಹೆಸರಿದೆ. ಇವು ತಮ್ಮ ಗುದದ ಬಳಿಯಿಂದ ಒಂದು ಬಗೆಯ ಸಿಹಿಯಾದ ವಸ್ತು (ಮಧುರದ್ರವ) ವನ್ನು ಸ್ರವಿಸಿ ಹೊರಗೆಡಹುತ್ತಿರುತ್ತವೆ. ಈ ಸ್ರಾವವು ಇರುವೆ, ಜೇನು ನೊಣ ಮತ್ತು ಕಣಜಗಳಿಗೆ ಅಚ್ಚುಮೆಚ್ಚು. ಈ ಕಾರಣದಿಂದಲೇ ಏಫಿಡ್ಸ್‌ಗಳಿಗೂ ಮತ್ತು ಇತರ ಕೀಟಗಳಿಗೂ ಒಂದು ಬಗೆಯ ಕೂಡು ಜೀವನದ (Symbiotic) ಸಂಬಂಧವೇರ್ಪಟ್ಟಿರುತ್ತದೆ.

ಏಫಿಡ್ ಕೀಟಗಳ ಜೀವನಕ್ರಮ ನಿಜವಾಗಿಯೂ ಕೌತುಕಮಯವಾಗಿರುತ್ತದೆ. (ಚಿತ್ರ 3b, 4b ಮತ್ತು c) ವಿವಿಧ ಬಗೆಯ ಏಫಿಡ್ ಕೀಟಗಳಲ್ಲಿ ಕಂಡುಬರುವ ಕೆಲವು ಗೌಣವಾದ ವ್ಯತ್ಯಾಸಗಳನ್ನು ಬಿಟ್ಟರೆ ಈ ಕೆಳಕಂಡ ಜೀವನ ಚಕ್ರ ಒಂದು "ಸ್ಟ್ಯಾಂಡರ್ಡ್" ತಳಿ ಎಂದು ಪರಿಗಣಿಸಬಹುದು. ಶರದೃತುವಿನಲ್ಲಿ ಹೆಣ್ಣು ಕೀಟವು ಗಂಡಿನೊಡನಾಡಿ ಸಂಭೋಗ ಪಡೆದು ತನಗೆ ನೆಲೆಕೊಟ್ಟಿರುವ ಬಹುವಾರ್ಷಿಕ ಸಸ್ಯದ ಎಲೆ ಹಾಗೂ ರೆಂಬೆಗಳ ಮೇಲೆ ನಿಷೇಚಿತ ಅಂಡಾಣುಗಳನ್ನು ಇಡುತ್ತದೆ. ಈ ಮೊಟ್ಟೆಗಳು ಶರತ್ಕಾಲವನ್ನು ಬೆನ್ನಟ್ಟಿ ಬರುವ ಚಳಿಗಾಲವು ಮುಗಿಯುವವರೆಗೂ ಯಾವ ಬಗೆಯ ವ್ಯಾಪಾರವೂ ಅಥವಾ ಬದಲಾವಣೆಗಳೂ ಇಲ್ಲದೆ ಕಾಲ ನೂಕುತ್ತವೆ. ಮುಂದಿನ ವಸಂತಋತುವು ಕಾಲಿಟ್ಟ ಮೇಲೆ ಪರಿಸರದಲ್ಲಿ ಚಳಿ ಕಡಿಮೆಯಾಗಿ ಹಿತಕರವಾದ ವಾತಾವರಣವು ಮರುಕಳಿಸಿದ ಮೇಲೆ ಮೊಟ್ಟೆಗಳಿಂದ ಮರಿಗಳು ಹೊರಬರುತ್ತವೆ. ಈ ಮರಿಗಳೆಲ್ಲ ಅತಿ ಶೀಘ್ರದಲ್ಲಿಯೇ ದೊಡ್ಡವಾಗಿ ಬೆಳೆದು ಹೆಣ್ಣುಕೀಟಗಳಾಗಿ ರೂಪುಗೊಳ್ಳುತ್ತವೆ. ಅಲ್ಲದೆ ಹೆತ್ತವರಿಗಿದ್ದಂತೆ ಈ ಹೆಣ್ಣು ಕೀಟಗಳಿಗೆ ರೆಕ್ಕೆಗಳಿಲ್ಲದಿರುವುದು ಒಂದು ವಿಶೇಷ ಸಂಗತಿ. ಈ ಪ್ರತಿಯೊಂದು ಹೆಣ್ಣು ಕೀಟವೂ ತನ್ನ ಸುತ್ತಲೂ ಹಲವು ಪೀಳಿಗೆಗಳ ಮರಿಮಕ್ಕಳನ್ನು ಬೆಳೆಸಿಕೊಳ್ಳುವುದರಿಂದ ಇವಕ್ಕೆ "ಮೂಲತಾಯಿಯರು" (Stem-mothers) ಎಂದು ಹೆಸರಿಸಲಾಗಿದೆ. ಈ ಹೆಣ್ಣುಕೀಟಗಳು ಗಂಡಿನೊಡನಾಡಿ ಸಂಭೋಗ ಪಡೆಯದೆ ಹಲವಾರು ಮರಿಗಳನ್ನು ಉತ್ಪಾದಿಸುವ ಅಸಾಧಾರಣವಾದ ಸಾಮರ್ಥ್ಯವನ್ನು ಪಡೆದಿರುತ್ತವೆ. ಇವು ತಮ್ಮ ಅನಿಷೇಚಿತ ಮೊಟ್ಟೆಗಳನ್ನು ತಮ್ಮ ಅಂಡವಾಹಿನಿಯಲ್ಲಿಯೇ ಇಟ್ಟುಕೊಳ್ಳುತ್ತವೆ. ಈ ಮೊಟ್ಟೆಗಳಲ್ಲಿ ಅನಿಷೇಕಜನನ

ರೀತಿ ಮರಿಗಳು ಬೆಳವಣಿಗೆ ಹೊಂದಿ. ಅವು ಮೊಟ್ಟೆಗಳಿಂದ ಹೊರಬಂದಮೇಲೂ ತಾಯಿಯ ಬಸುರಿನಲ್ಲಿಯೇ ಆರೈಕೆ ಮತ್ತು ಸಂರಕ್ಷಣೆಗಳನ್ನು ಪಡೆಯುತ್ತವೆ. ಮರಿಗಳು ಒಂದು ನಿರ್ದಿಷ್ಟ ಘಟ್ಟದವರೆಗೆ ಬೆಳವಣಿಗೆ ಹೊಂದಿದಮೇಲೆ ಹೆಣ್ಣು ಕೀಟವು ಮರಿಗಳನ್ನು ಈನುತ್ತದೆ. ಅಂದರೆ ರೆಕ್ಕೆಗಳಿಲ್ಲದ ಈ "ಕನ್ಯಾಮಣಿ"ಯು ಜರಾಯುಜ (Viviparous) ಪ್ರಾಣಿ. ತಾಯಿಯ ಬಸುರಿನಿಂದ ಹೊರಬಂದ ಮರಿಗಳು ಒಂದು ವಾರದೊಳಗೆ ಶೀಘ್ರ ಬೆಳವಣಿಗೆ ಹೊಂದಿ ದೊಡ್ಡದಾಗುತ್ತವೆ. ಇವೂ ಕೂಡ ತಾಯಿಯಂತೆ ರೆಕ್ಕೆಗಳಿಲ್ಲದ ಹೆಣ್ಣುಕೀಟಗಳು. ಅಲ್ಲದೆ ಅನಿಷೇಕಜನನದ ರೀತಿ ಸಂತಾನೋತ್ಪತ್ತಿ ಮಾಡತಕ್ಕವು: ಜರಾಯುಜ ಪ್ರಾಣಿಗಳು. ಈ ರೀತಿ ಬೇಸಿಗೆ ಕಾಲ ಮುಗಿಯುವವರೆಗೂ ಸುಮಾರು 9–11 ಜರಾಯುಜ ಪೀಳಿಗೆಗಳು ಒಂದಾದ ಮೇಲೊಂದರಂತೆ ಹುಟ್ಟುತ್ತಾ ಬರುತ್ತವೆ. ಒಂದೊಂದು ಬಸುರಿನಲ್ಲಿಯೂ 12–100 ಮರಿಗಳು ಬೆಳೆಯುವ ದಾಖಲೆಗಳಿವೆ. ಈ ಅನಿಷೇಕಜನನದ ಹೆಣ್ಣು ಮತ್ತು ಮೂಲತಾಯಿ ಕೀಟಗಳಲ್ಲಿ ಕೆಲವು ಸಾಮ್ಯವೈಷಮ್ಯಗಳನ್ನು ಗುರುತಿಸಬಹುದು. ಇವೆರಡರಲ್ಲೂ ರೆಕ್ಕೆಗಳಿರುವುದಿಲ್ಲ: ಇವೆರಡೂ ಅನಿಷೇಕಜನನದ ರೀತಿಯಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ: ಇವೆರಡೂ ಜರಾಯುಜ ಪ್ರಾಣಿಗಳು. ಆದರೆ ಮೂಲತಾಯಿಯರಿಗೆ ತಂದೆತಾಯಿಗಳಿದ್ದರೆ. ಅನಿಷೇಕಜನನದ ಕೀಟಗಳಿಗೆ ತಾಯಿಯೊಬ್ಬಳೇ ಜನ್ಮದಾತೆ. ಮೂಲತಾಯಿ ಕೀಟಗಳು ಪ್ರಾರಂಭದಲ್ಲಿ ಮೊಟ್ಟೆಗಳಲ್ಲಿ ಬೆಳವಣಿಗೆ ಹೊಂದಿ ಹೊರಬಂದರೆ, ಉಳಿದ ಹೆಣ್ಣುಕೀಟಗಳು ತಾಯಿಯ ಬಸುರಿನಲ್ಲಿ ಬೆಳವಣಿಗೆ ಹೊಂದಿ ಜನನವಾದವು.

ಹೀಗೆ ಬೇಸಿಗೆಯಲ್ಲಿ ಏಫಿಡ್ ಕೀಟಗಳ ಸಂಖ್ಯೆ ಅತ್ಯಧಿಕಗೊಳ್ಳುತ್ತಿರುವಾಗ ಯಾವುದೋ ಒಂದು ಹಂತದಲ್ಲಿ ಎಲ್ಲವೂ ಅಥವಾ ಕೆಲವು ಪೀಳಿಗೆಗಳ ಹೆಣ್ಣು ಕೀಟಗಳು ರೆಕ್ಕೆಗಳನ್ನು ಪಡೆಯುತ್ತವೆ. ಇವು ತಮ್ಮ ಮೂಲಗಿಡವನ್ನು ಬಿಟ್ಟು ಮತ್ತೊಂದು ಪೋಷಕ ಸಸ್ಯಜೀವಿಯನ್ನು ಹುಡುಕಿಕೊಂಡು ವಲಸೆ ಹೋಗುತ್ತವೆ. ಈ ರೆಕ್ಕೆಗಳನ್ನುಳ್ಳ ಹೆಣ್ಣುಕೀಟಗಳಿಗೆ "ವಸಂತಕಾಲದ ವಲಸೆಗಾರ್ತಿಯರು" (Spring migrants) ಎಂದೂ ಇವುಗಳಿಗೆ ಆಶ್ರಯ ಕೊಡುವ ಗಿಡಗಳಿಗೆ "ವಸಂತಕಾಲದ ಪೋಷಕಜೀವಿ (Spring hosts) ಗಳೆಂದೂ ಹೆಸರು. ಈ ವಲಸೆಗಾರ್ತಿಯರೂ ಕೂಡ ಹೊಸ ಪರಿಸರದಲ್ಲಿ ಗಂಡಿನೊಡನಾಡಿ ಸಂಭೋಗ ಪಡೆಯದೆ ಅನಿಷೇಕಜನನದ ರೀತಿಯಲ್ಲಿಯೇ ಸಂತಾನೋತ್ಪತ್ತಿ ಮಾಡಿ ಮರಿಗಳನ್ನು ಈನುತ್ತವೆ. ಹೀಗೆ ಒಂದೆರಡು ಪೀಳಿಗೆಗಳು ಹುಟ್ಟುವ ಹೊತ್ತಿಗೆ ಶರದೃತುವಿನ ಕಾಲ ಮುಗಿಯುತ್ತಾ ಬರುತ್ತದೆ. ಅಷ್ಟರಲ್ಲಿ ರೆಕ್ಕೆಗಳನ್ನುಳ್ಳ ಗಂಡು ಏಫಿಡ್ ಕೀಟಗಳು ಕೊನೆಯ ಪೀಳಿಗೆಯಲ್ಲಿ ಕಾಣಿಸಿಕೊಳ್ಳುತ್ತವೆ. ಈ ಹೆಣ್ಣು ಕೀಟಗಳಿಗೂ ರೆಕ್ಕೆಗಳಿರುವುದರಿಂದ ಇವು ಚಳಿಗಾಲ ಕಾಲಿಡುವ ಮುನ್ನವೇ ತಮ್ಮ ಪೂರ್ವಪೋಷಕ ಜೀವಿಯನ್ನು ಹುಡುಕಿಕೊಂಡು ವಲಸೆ ಬರುತ್ತವೆ. ಈ ಹೆಣ್ಣು ಕೀಟಗಳಿಗೆ "ಚಳಿಗಾಲದ ವಲಸೆಗಾರ್ತಿಯರು" (Winter migrants) ಎಂದು

ಹೆಸರು. ಚಳಿಗಾಲದ ವಲಸೆಗಾರ್ತಿಯರು ವಲಸೆ ಬಂದಮೇಲೆ ಅನಿಷೇಕಜನನದ ರೀತಿಯಲ್ಲಿ ಕೊನೆಯ ಹೆಣ್ಣು ಪೀಳಿಗೆಯನ್ನು ಉತ್ಪಾದಿಸುತ್ತವೆ. ಈ ಮರಿ ಹೆಣ್ಣು ಕೀಟಗಳು ಗಂಡಿನ ಸಂಭೋಗವಿಲ್ಲದೆ ಮುಂದಿನ ಪೀಳಿಗೆಯನ್ನು ಬೆಳೆಸಲಾರವು. ಈ ಲೈಂಗಿಕ ಹೆಣ್ಣುಕೀಟಗಳು ಚಳಿಗಾಲಕ್ಕೆ ಮುನ್ನವೇ ಹಿಂದಿನ ಪೀಳಿಗೆಯಲ್ಲಿ ಬೆಳೆದ ಗಂಡುಕೀಟಗಳೊಡನೆ ಸಂಪರ್ಕ ಬೆಳೆಸಿ. ಸಂಭೋಗ ಹೊಂದುತ್ತವೆ. ಅಂಡಾಣುಗಳು ಹೆಣ್ಣಿನ ಅಂಡವಾಹಿನಿಯಲ್ಲಿ ಗಂಡಿನ ಶುಕ್ರಾಣುಗಳಿಂದ ನಿಷೇಚನ ಹೊಂದುತ್ತವೆ. ಚಳಿಗಾಲ ಬರುವ ಹೊತ್ತಿಗೆ ಹೆಣ್ಣುಕೀಟವು ಅಲ್ಪ ಸಂಖ್ಯೆಯ ನಿಷೇಚಿತ ಅಂಡಾಣುಗಳನ್ನು ಗಿಡದ ಮೇಲಿನ ಸುರಕ್ಷಿತ ಸ್ಥಳಗಳಲ್ಲಿ ಇಡುತ್ತವೆ. ಈ ಮೊಟ್ಟೆಗಳಿಗೆ ಪರಿಸರದ ಪ್ರತಿಕೂಲದ ಸನ್ನಿವೇಶಗಳನ್ನು ಎದುರಿಸುವ ಶಕ್ತಿಸಾಮರ್ಥ್ಯಗಳಿರುತ್ತವೆ. ಇವು ಹಿಮಗಾಲ ಮುಗಿಯುವವರೆಗೂ ಪ್ರಸುಪ್ತವಾಗಿದ್ದು ವಸಂತಋತುವು ತಲೆದೋರಿದ ಮೇಲೆ ಅವುಗಳಿಂದ ಮರಿಗಳು ಹೊರಬಂದು ಜೀವನಚಕ್ರವನ್ನು ಮುಂದುವರಿಸುತ್ತವೆ.

ಎಫಿಡ್ ಕೀಟಗಳ ಜೀವನಚಕ್ರವನ್ನು ಗಮನಿಸಿದರೆ ಕೆಲವು ವಿಚಿತ್ರ ಸಂಗತಿಗಳು ಮನದಟ್ಟಾಗುತ್ತವೆ. ವಸಂತಋತುವಿನಲ್ಲಿ ಕಾಣಿಸಿಕೊಂಡ ಮೊದಲನೆಯ ಪೀಳಿಗೆ (ಮೂಲ ತಾಯಿಯರು) ನಿಷೇಚಿತ ಅಂಡಾಣುಗಳಿಂದ ಬೆಳೆಯುತ್ತವೆ. ಇವುಗಳ ತಾಯಿ (ಲೈಂಗಿಕ ಹೆಣ್ಣುಕೀಟ) ಮೊಟ್ಟೆಗಳನ್ನಿಟ್ಟಿದ್ದರಿಂದ ಇದು ಅಂಡಜ (oviparous) ಪ್ರಾಣಿ. ಮೂಲ ತಾಯಿಯರ ಭ್ರೂಣೋದ್ಭವ ತಾಯಿಯ ದೇಹದ ಹೊರಗೆ ನಡೆಯುತ್ತವೆ. ಈ ಮೊಟ್ಟೆಗಳಿಂದ ಹೊರಬಂದ ಮರಿಗಳು ದೊಡ್ಡವಾಗಿ ಬೆಳೆದಮೇಲೆ ಅಂದರೆ ಅಂಡಜ ಪ್ರಾಣಿಗಳಂತೆ ಹುಟ್ಟಿ ಬೆಳೆದಿದ್ದರೂ ಪ್ರೌಢಾವಸ್ಥೆಯಲ್ಲಿ ತಮ್ಮ ಅನಿಷೇಚಿತ ಅಂಡಾಣುಗಳನ್ನು ತಮ್ಮ ಅಂಡವಾಹಿನಿಯಲ್ಲಿಯೇ ಇಟ್ಟುಕೊಂಡು ಮರಿಗಳು ಬೆಳವಣಿಗೆ ಹೊಂದಿದ ಮೇಲೆ ಅವನ್ನು ಈನುತ್ತವೆ. ಅಂದರೆ ಇವು ವಾಸ್ತವವಾಗಿ ಜರಾಯುಜ ಪ್ರಾಣಿಗಳು. ಈ ಜರಾಯುಜ ಪ್ರಾಣಿಗಳೆಲ್ಲ ನಿಸ್ಸಂದೇಹವಾಗಿ ಅನಿಷೇಕಜನನದ ರೀತಿಯಲ್ಲಿ ಮುಂದಿನ ಪೀಳಿಗೆಗಳನ್ನು ಉತ್ಪತ್ತಿ ಮಾಡುತ್ತವೆ. ಆದರೆ ಅನಿಷೇಕಜನನದ ರೀತಿಯಲ್ಲಿ ಹುಟ್ಟಿದ ಕಟ್ಟಕಡೆಯ ಜರಾಯುಜ ಹೆಣ್ಣು ಕೀಟಗಳು ನಿಜವಾಗಿಯೂ ಜರಾಯುಜಗಳಾಗಿರದೆ. ಶೀತಕಾಲದ ಬಯಲಿನ ಚಳಿಯನ್ನು ಸಹಿಸುವ ನಿಷೇಚಿತ ಅಂಡಾಣುಗಳನ್ನು ಇಡುವ ಅಂಡಜ ಪ್ರಾಣಿಗಳಾಗಿರುತ್ತವೆ.

ಎಫಿಡ್ ಕೀಟಗಳಲ್ಲಿ ಮೂರು ಬಗೆಯ ಹೆಣ್ಣು ಕೀಟಗಳನ್ನು ಮತ್ತು ಎರಡು ಬಗೆಯ ಅಂಡಾಣುಗಳನ್ನು ಗುರುತಿಸಬಹುದು. ಒಂದು ಬಗೆಯ ಹೆಣ್ಣು ಕೀಟವು ಗಂಡಿನ ಸಂಪರ್ಕವಿಲ್ಲದೆಯೇ ಸಂತಾನೋತ್ಪತ್ತಿ ಮಾಡಬಲ್ಲದು. ಮತ್ತೊಂದು ಬಗೆಯ ಹೆಣ್ಣು ಕೀಟವು ಗಂಡಿನೊಡನೆ ಸಂಭೋಗ ನಡೆಸದ ಹೊರತು ಸಂತಾನೋತ್ಪತ್ತಿ ಮಾಡಲಾರದು. ಈ ಕೀಟಗಳನ್ನು ಕ್ರಮವಾಗಿ "ಅನಿಷೇಕಜನನದ ಹೆಣ್ಣು" (Parthenogenetic female) ಮತ್ತು "ಲೈಂಗಿಕಹೆಣ್ಣು" (Sexual female) ಎಂದು


ಗುರುತಿಸಬಹುದು. ಕೆಲವು ಅನಿಷೇಕ ಜನನದ ಹೆಣ್ಣುಗಳಿಗೆ ರೆಕ್ಕೆಗಳಿರಬಹುದು ಅಥವಾ ರೆಕ್ಕೆಗಳಿಲ್ಲದಿರಬಹುದು. ಇವು ಉತ್ಪಾದಿಸುವ ಅಂಡಾಣುಗಳ ಗುಣಲಕ್ಷಣಗಳೂ ಬೇರೆ ಬೇರೆಯಾಗಿರುತ್ತವೆ. ಅನಿಷೇಕ ಜನನದ ಹೆಣ್ಣಿನ ಅಂಡಾಣುವು ನಿಷೇಚನವಿಲ್ಲದೆ ಬೆಳವಣಿಗೆ ಹೊಂದಲು ಸಮರ್ಥವಾಗಿರುತ್ತದೆ. ಆದರೆ ಲೈಂಗಿಕ ಹೆಣ್ಣಿನ ಅಂಡಾಣುವು ಬೆಳವಣಿಗೆ ಹೊಂದಬೇಕಾದರೆ ಅದು ಗಂಡಿನ ಶುಕ್ರಾಣುವಿನಿಂದ ಸಕ್ರಿಯಗೊಳ್ಳಬೇಕು; ನಿಷೇಚನಗೊಳ್ಳಬೇಕು. ಹೀಗೆ ಈ ಅಂಡಾಣುಗಳನ್ನು ಕೂಡ ಕ್ರಮವಾಗಿ "ಅನಿಷೇಕ ಜನನದ ಅಂಡಾಣು" (Parthenogenetic egg) ಮತ್ತು "ಲೈಂಗಿಕ ಅಂಡಾಣು" (Sexual egg) ಎಂದು ಕರೆಯಬಹುದು.

ಏಫಿಡ್ ಕೀಟಗಳ ಜೀವನಚಕ್ರವನ್ನು ಪರೀಕ್ಷಿಸಿದರೆ ಹಿತಕರವಾದ ಪರಿಸರದಲ್ಲಿ ಹೆಣ್ಣುಕೀಟಗಳು 10–15 ದಿನಗಳಲ್ಲಿ ಪೂರ್ಣ ಬೆಳವಣಿಗೆಯನ್ನು ಹೊಂದಿ ಅನಿಷೇಕಜನನದ ರೀತಿಯಲ್ಲಿ ವರ್ಷದ ಹೆಚ್ಚು ಕಾಲ ಸಂತಾನೋತ್ಪತ್ತಿ ಮಾಡುತ್ತವೆ. ಒಂದೊಂದು ಹೆಣ್ಣುಕೀಟವೂ 10–100 ಮರಿಗಳನ್ನು ಈನುವುದರಿಂದ ಐದು ಪೀಳಿಗೆಗಳಲ್ಲಿ ಸುಮಾರು ಐದು ಕೋಟಿ ಕೀಟಗಳು ಉತ್ಪಾದನೆಯಾಗಬಹುದೆಂದು ಅಂದಾಜು ಮಾಡಲಾಗಿದೆ. ಅಲ್ಲದೆ ಈ ಕೀಟಗಳಿಗೆ ಪ್ರಾಯೋಗಿಕವಾಗಿ ಹಿತಕರವಾದ ವಾತಾವರಣವನ್ನು ಒದಗಿಸಿದರೆ ಬಹು ದೀರ್ಘಕಾಲ ಅನಿಷೇಕಜನನದ ಪೀಳಿಗೆಗಳನ್ನು ಪಡೆಯಬಹುದು. ಒಂದು ಪ್ರಯೋಗದಲ್ಲಿ 98 ಅನಿಷೇಕಜನನದ ಹೆಣ್ಣು ಪೀಳಿಗೆಗಳನ್ನು ಪಡೆದಿರುವ ದಾಖಲೆಯಿದೆ. ಆದರೆ ಪ್ರಕೃತಿಯಲ್ಲಿ ತನಗೆ ತಾನೇ ಬರುವ ಶೀತಗಾಲದ ಶೈತ್ಯವನ್ನು ಸಹಿಸುವ ಸಾಮರ್ಥ್ಯ ಈ ಕೀಟಗಳಿಗಿರುವುದಿಲ್ಲ. ಈ ಕಾರಣದಿಂದಲೇ ಜೀವನಚಕ್ರದಲ್ಲಿ ಶೀತಗಾಲ ಬರುತ್ತಿದ್ದಂತೆಯೇ ಗಂಡುಜೀವಿಗಳು ಕಾಣಿಸಿಕೊಳ್ಳುತ್ತವೆ; ಲೈಂಗಿಕ ಹೆಣ್ಣುಜೀವಿಗಳು ರೂಪುಗೊಳ್ಳುತ್ತವೆ. ಗಂಡಿನೊಡನಾಡಿದ ಲೈಂಗಿಕ ಹೆಣ್ಣುಜೀವಿ ಅಲ್ಪಸಂಖ್ಯೆಯ ನಿಷೇಚಿತ ಅಂಡಾಣುಗಳನ್ನಿಡುತ್ತವೆ. ಈ ಶೀತಗಾಲದಲ್ಲಿ ಈ ಅಂಡಾಣುಗಳ ಹೊರತು ಮತ್ತಾವ ಏಫಿಡ್ ಕೀಟಗಳೂ ಇರುವುದಿಲ್ಲ. ಒಂದು ವರ್ಷದಲ್ಲಿ ನಡೆಯುವ ಈ ಜೀವನ ಚಕ್ರದಲ್ಲಿ ಎರಡು ಬಗೆಯ ಪೀಳಿಗೆಗಳು (ಅನಿಷೇಕಜನನದ ಪೀಳಿಗೆಗಳ ಸರಣಿ ಮತ್ತು ಲೈಂಗಿಕ ಪೀಳಿಗೆ) ಪರ್ಯಾಯವಾಗಿ ಕಂಡುಬರುತ್ತವೆ. ಈ ಜೀವನಚಕ್ರಗಳಲ್ಲಿ ಅನಿಷೇಕ ಜನನದ ಪೀಳಿಗೆಗಳ ಸರಣಿಯು ಬಹು ಕ್ಷಿಪ್ರವಾದ ಕಾಲದಲ್ಲಿ ನಡೆಯುತ್ತದೆ. ಈ ಬಗೆಯ ಸಂತಾನೋತ್ಪತ್ತಿಯನ್ನು ಚಕ್ರೀಯ ಅನಿಷೇಕಜನನ (cyclical parthenogenesis) ಎಂದು ಕರೆಯಲಾಗಿದೆ.

ಜೀವನಚಕ್ರದಲ್ಲಿ ಲೈಂಗಿಕ ಹಾಗೂ ಅನಿಷೇಕಜನನಗಳ ಪೀಳಿಗೆಗಳನ್ನು ನಿರ್ದೇಶಿಸುವ ಸಂಯಂತ್ರವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅವುಗಳ ಕ್ರೋಮೊಸೋಮುಗಳ ವರ್ತನೆಯನ್ನು ಅಧ್ಯಯನ ಮಾಡಬೇಕು. ಟೆಟ್ರನ್ಯೂರ ಜಾತಿಯ (Tetraneura ulni) ಏಫಿಡ್ ಕೀಟವನ್ನು ಈ ಸಂದರ್ಭದಲ್ಲಿ ಆರಿಸಿಕೊಳ್ಳಬಹುದು. ಅನಿಷೇಕಜನನದ

ರೀತಿಯಲ್ಲಿ ಸಂತಾನೋತ್ಪತ್ತಿ ಮಾಡುವ ಈ ಜೀವಿಗಳಲ್ಲಿ ಹಾಗೂ ಲೈಂಗಿಕ ಹೆಣ್ಣು ಜೀವಿಯಲ್ಲಿ ಹದಿನಾಲ್ಕು ಕ್ರೋಮೋಸೋಮುಗಳಿ ($2n=14$)ರುತ್ತವೆ. ಅವುಗಳಲ್ಲಿ ಆರು ದೊಡ್ಡವು, ಎಂಟು ಸಣ್ಣವು. ಗಂಡಿನಲ್ಲಿ ಕೇವಲ ಹದಿಮೂರು ಕ್ರೋಮೋಸೋಮುಗಳು ($2n=13$) ಕಂಡುಬರುತ್ತವೆ. ಇಲ್ಲಿ ಲಿಂಗ ನಿರ್ಧಾರಕ ಸಂಯಂತ್ರ $\times\times:\times 0$ ಬಗೆಯ ರೀತಿಯದು, ಅನಿಷೇಕಜನನದ ಹೆಣ್ಣುಜೀವಿ ಮತ್ತು ಲೈಂಗಿಕ ಹೆಣ್ಣುಜೀವಿಗಳು ಜೀನ್ಯಾತ್ಮಕವಾಗಿ ಒಂದೇ ಬಗೆಯವು. ಆದರೆ ಕಟ್ಟಕಡೆಯ ಅನಿಷೇಕಜನನದ ಹೆಣ್ಣುಪೀಳಿಗೆಯಲ್ಲಿ ಅಂಡಜನನ ಇತರ ಅನಿಷೇಕಜನನದ ಹೆಣ್ಣುಗಳಲ್ಲಿ ಕಂಡುಬರುವ ಅಂಡಜನನದ ರೀತಿಯಂತೆ ಇರುವುದಿಲ್ಲ. ಈ ಹೆಣ್ಣುಜೀವಿಯು ಹೆಣ್ಣು ಮತ್ತು ಗಂಡು ಮರಿಜೀವಿಗಳನ್ನು ಈನುತ್ತದೆ. ಇದಕ್ಕೆ ಈ ಹೆಣ್ಣುಜೀವಿ ಎರಡು ಬಗೆಯ ಅಂಡಾಣುಗಳನ್ನು ಉತ್ಪಾದಿಸುವುದೇ ಕಾರಣ. ಈ ಎರಡು ಬಗೆಯ ಅಂಡಾಣುಗಳಲ್ಲಿಯೂ ಮೊದಲನೆಯ ಮ್ಯಯೋಸಿಸಿನ ಕೋಶಿಕ ವಿಭಜನೆ ಸಾಂಗೋಪಾಂಗವಾಗಿ ನಡೆಯುವುದರಿಂದ ಅಗುಣಿತ ಸಂಖ್ಯೆಯ ಕ್ರೊಮೊಸೋಮುಗಳೇರ್ಪಡುತ್ತವೆ. ಹೆಣ್ಣಿಗೆ ಕಾರಣವಾಗುವ ಅಂಡಾಣುವಿನಲ್ಲಿ ಕೂಡಲೇ ಕ್ರೊಮೊಸೋಮುಗಳು ಸೀಳಿ ದ್ವಿಗುಣಿತ ಸಂಖ್ಯೆ ಪ್ರಾಪ್ತವಾಗುತ್ತದೆ. ಆದರೆ ಗಂಡಿನ ಜನನಕ್ಕೆ ಕಾರಣವಾದ ಅಂಡಾಣುವಿನಲ್ಲಿ ಕ್ರೋಮೊಸೋಮುಗಳು ಸೀಳಿ ದ್ವಿಗುಣಿತ ಸ್ಥಿತಿಗೆ ಬಂದರೆ, ಎರಡು ×–ಕ್ರೋಮೊಸೋಮುಗಳ ಪೈಕಿ ಒಂದು ಕ್ರೋಮೋಸೋಮು ಎರಡನೆಯ ಧ್ರುವ ಕೋಶಿಕವನ್ನು ಸೇರುತ್ತದೆ. ತತ್ಫಲವಾಗಿ ಈ ಅಂಡಾಣುವಿನಲ್ಲಿ 12 ಆಟೋಸೋಮುಗಳೂ ಒಂದು × ಕ್ರೋಮೊಸೋಮ ಪ್ರಾಪ್ತವಾಗುತ್ತದೆ.


ಲೈಂಗಿಕ ಹೆಣ್ಣಿನಲ್ಲಿ ಪರಿಪಕ್ವತೆಯ ವಿಭಜನೆಗಳು ಸರಳರೀತಿಯವು: ಸಾಮಾನ್ಯ ನಿಯಮಾವಳಿಗಳಿಗೆ ಸೀಮಿತವಾದುವು. ಅಂಡಾಣುವಿನಲ್ಲಿ ಅಗುಣಿತ ಕ್ರೊಮೊಸೋಮುಗಳು ($n=7$) ಪ್ರಾಪ್ತವಾಗುತ್ತವೆ. ಆದರೆ ಗಂಡಿನಲ್ಲಿ ಶುಕ್ರ ಜನನಕಾಲದಲ್ಲಿ ನಡೆಯುವ ಈ ವಿಭಜನೆಗಳು ವಿಭಿನ್ನವಾದುವು. ಮೊದಲನೆಯ ಮ್ಯಯೋಸಿಸಿನ ವಿಭಜನೆಯಲ್ಲಿ ಆಟೋಸೋಮುಗಳು ಸಮಸಂಖ್ಯೆಯಲ್ಲಿ ಕ್ಷೀಣಿಸುವುದರಿಂದ ಪ್ರತಿ ಮರಿ ಜೀವಕೋಶದಲ್ಲಿ ಆರು ಕ್ರೋಮೊಸೋಮುಗಳಿರುತ್ತವೆ. ಅಲ್ಲದೆ ಇಲ್ಲಿ ಕೇವಲ ಒಂದು ×–ಕ್ರೋಮೊಸೋಮು ಇರುವುದರಿಂದ ಅದು ಕೇವಲ ಒಂದು ಮರಿಜೀವಕೋಶವನ್ನು ಸೇರುತ್ತದೆ. × ಕ್ರೋಮೋಸೋಮನ್ನು ಹೊತ್ತ ಜೀವಕೋಶವು ಮುಂದೆ ವಿಭಜನೆ ಹೊಂದಿ. ಕೊನೆಗೆ ಅವುಗಳಿಂದ ಎರಡು ಶುಕ್ರಾಣುಗಳು ರೂಪಗೊಳ್ಳುತ್ತವೆ. ಉಳಿದ ಜೀವಕೋಶ ಕೇವಲ ಆಟೋಸೋಮುಗಳಿಂದ ಕೂಡಿದ್ದು (ಚಿತ್ರ 4 a) ನಶಿಸಿ ನಾಶವಾಗುತ್ತದೆ. [ಕೆಲವು ಎಫಿಡ್ ಕೀಟಗಳ ಜೀವಪ್ರಭೇದಗಳಲ್ಲಿ ಜೀವನಚಕ್ರದ ಕಡೆಯಲ್ಲಿ ಎರಡು ಬಗೆಯ ಅನಿಷೇಕಜನನದ ಹೆಣ್ಣುಗಳು ಕಾಣಿಸಿಕೊಳ್ಳುತ್ತವೆ (ಚಿತ್ರ 4b). ಒಂದು ಹೆಣ್ಣು ಕೇವಲ ಲೈಂಗಿಕ ಹೆಣ್ಣುಜೀವಿಯನ್ನು ಉತ್ಪಾದಿಸುವುದಾದರೆ ಮತ್ತೊಂದು



a

ಚಿತ್ರ 4 a ಎಫಿಡ್ ಕೀಟಗಳ ಜೀವನ ಚಕ್ರಗಳು ಮತ್ತು ಲಿಂಗ ನಿರ್ಧಾರ. a ಕೊನೆಯ ಅನಿಷೇಕ ಜನನದ ಪೀಳಿಗೆಯ ತಾಯಿ ಎರಡು ಬಗೆಯ ಅಂಡಾಣುಗಳನ್ನು ಉತ್ಪಾದಿಸುತ್ತದೆ.

ಗಂಡುಜೀವಿಯನ್ನು ಮಾತ್ರ ಉತ್ಪಾದಿಸುತ್ತದೆ.] X –ಕ್ರೋಮೋಸೋಮನ್ನು ಹೊತ್ತ ಶುಕ್ರಾಣುವು ಕ್ರಿಯಾತ್ಮಕವಾಗಿದ್ದು ಅಂಡಾಣುವನ್ನು ನಿಷೇಚನಗೊಳಿಸುತ್ತದೆ. ತತ್ಫಲವಾಗಿ ರೂಪಗೊಂಡ ಸೈಗೋಟಿನಿಂದ "ಮೂಲತಾಯಿ"ಬೆಳವಣಿಗೆ ಹೊಂದಿ ಕೊನೆಗೆ ಅನಿಷೇಕ ಜನನದ ಪೀಳಿಗೆಗಳನ್ನು ಉತ್ಪಾದಿಸಲು ಪ್ರಾರಂಭಿಸುತ್ತದೆ. X –ಕ್ರೋಮೋಸೋಮಿಲ್ಲದ ಶುಕ್ರಾಣು ನಿಷೇಚನ ಕ್ರಿಯೆಯಲ್ಲಿ ಭಾಗಿಯಾಗುವುದಿಲ್ಲ: ಅದು ನಶಿಸಿ ನಾಶವಾಗುತ್ತದೆ.



b

ಚಿತ್ರ 4 b ಕೊನೆಯ ಅನಿಷೇಕಜನನದ ಪೀಳಿಗೆಯ ತಾಯಿ ಕಟ್ಟಕಡೆಯ ಲೈಂಗಿಕ ಕೀಟಗಳ ತಾಯಿಯರನ್ನು ಉತ್ಪಾದಿಸುತ್ತದೆ.

ಏಫಿಡ್ ಕೀಟಗಳ ಜೀವನಚಕ್ರಗಳ ವಿವರಣೆಗಳಲ್ಲಿ ಹಲವು ವ್ಯತ್ಯಾಸಗಳನ್ನು ಕಾಣಬಹುದು. ಹಲವಾರು ಏಫಿಡ್‌ಗಳಲ್ಲಿ ಲೈಂಗಿಕ ಜೀವಿಗಳು ಕಾಣಿಸಿಕೊಳ್ಳುವುದಕ್ಕೆ ಪೂರ್ವಭಾವಿಯಾಗಿ 7–10 ಅನಿಷೇಕಜನನದ ಪೀಳಿಗೆಗಳು ಕಂಡುಬರುತ್ತವೆ. ಕೆಲವು

ಫಿಲ್ಲೊಕ್ಸೀರ ಗುಂಪಿನ (phylloxera) ಕೀಟಗಳಲ್ಲಿ ಅನಿಷೇಕಜನನದ ಪೀಳಿಗೆಗಳು ಮೂರೋ, ನಾಲ್ಕೋ? ಪೆಂಫಿಜಿನಿ (pemphiginae) ಎಂಬ ಉಪ ಕುಟುಂಬದಲ್ಲಿ ಜೀವನಚಕ್ರದಲ್ಲಿ ಗಂಡುಜೀವಿಗಳು ಕಂಡುಬರುವುದೇ ಇಲ್ಲ. ಇಲ್ಲಿ ಕೀಟಗಳು ನಿರಂತರ ವಾಗಿ ಅನಿಷೇಕಜನನದ ರೀತಿಯಲ್ಲಿ ಮಾತ್ರ ಸಂತಾನೋತ್ಪತ್ತಿ ಮಾಡಬೇಕಾಗುತ್ತದೆ.

ಚಕ್ರೀಯ ಅನಿಷೇಕಜನನವು ಎಫಿಡ್ ಕೀಟಗಳಲ್ಲಿಯೇ ಅಲ್ಲದೆ ರೋಟಿಫೆರ (Rotifera), ಟ್ರೆಮಟೋಡ (Trematoda), ಕ್ಲಾಡೊಸಿರ (Cladocera), ಗಣದ ಕಠಿಣ ಚರ್ಮಿಗಳು. ಸೆಸಿಡೋಮಿಡೆ ಕುಟುಂಬದ (Cecidomydae) ಕೀಟಗಳು ಮೈಕ್ರೊಮಾಲ್ಥಸ್ ಜಾತಿಯ (Micromalthus) ಜೀರುಂಡೆ ಮತ್ತು ಸಿನಿಫಿಡ್ (Cynipid) ಕಣಜಗಳಲ್ಲಿಯೂ ಕಂಡುಬರುತ್ತದೆ. ಆದರೆ ಇವುಗಳಲ್ಲಿ ಗ್ಯಾಮೀಟು ಜನನದ ಕಾಲದಲ್ಲಿ ನಡೆಯುವ ಕ್ರೋಮೊಸೋಮುಗಳ ವರ್ತನೆ ಬೇರೆ ಬೇರೆಯಾಗಿರುತ್ತದೆ. ಕ್ರೋಮೊಸೋಮುಗಳಿಗೆ ತಕ್ಕಂತೆ ಇಲ್ಲಿ ಅಗುಣಿತ ಹಾಗೂ ದ್ವಿಗುಣಿತದ ಅನಿಷೇಕಜನನಗಳನ್ನು ಗುರುತಿಸಬಹುದು. ಜೇನುಹುಳುಗಳಲ್ಲಿ ಕಂಡುಬರುವಂತೆ ರೋಟಿಫೆರ, ಮೈಕ್ರೋಮಾಲ್ಥಸ್ ಮತ್ತು ಸಿನಿಪಿಡ್ ಕಣಜಗಳಲ್ಲಿ ಅಗುಣಿತ ಸಂಖ್ಯೆಯ ಕ್ರೋಮೊಸೋಮುಗಳನ್ನುಳ್ಳ ಗಂಡುಜೀವಿ ಅನಿಷೇಕಜನನದಿಂದ ಉತ್ಪತ್ತಿಯಾಗುತ್ತದೆ. ಉಳಿದ ಟ್ರೆಮಟೋಡ, ಕ್ಲಾಡೊಸಿರ ಮೊದಲಾದ ಪ್ರಾಣಿಗಳಲ್ಲಿ ಗಂಡುಜೀವಿ ಎಫಿಡ್ ಕೀಟಗಳಲ್ಲಿ ಕಂಡುಬರುವಂತೆ ದ್ವಿಗುಣಿತ ಸಂಖ್ಯೆಯ ಕ್ರೊಮೋಸೋಮುಗಳಿಂದ ಕೂಡಿರುತ್ತದೆ.

ಅನಿಷೇಕಜನನವು ವಿಕಾಸಪಥದಲ್ಲಿ ಮುಂದುವರಿದಂತೆ ಈ ಪ್ರಕ್ರಿಯೆಗಳು ಕಂಡುಬರುವ ಜೀವಿಗಳಲ್ಲಿ ಗಂಡುಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದು, ಕಟ್ಟಕಡೆಗೆ ಅವುಗಳ ಹೆಸರೇ ಇಲ್ಲದಂತೆ ಅಳಿಸಿಹೋಗುತ್ತವೆ. ಅಂತಹ ಜೀವಿಗಳಲ್ಲಿ ಕೇವಲ ಹೆಣ್ಣುಜೀವಿಗಳು ಕಂಡುಬರುತ್ತವೆ. ಗಂಡುಗಳಿಲ್ಲದ ಆ ಸಮಾಜದಲ್ಲಿ ಅನಿಷೇಕಜನನ ಒಂದೇ ಆ ಜೀವಿಗಳ ಪಾಲಿಗೆ ಬಂದದ್ದು. ಈ ಗುಂಪಿನ ಉದಾಹರಣೆಗಳು ಸ್ವತಂತ್ರವಾಗಿ ಜೀವಿಸುವ ರ್ಯಾಬ್ಡಿಟಿಸ್ (Rhabditis)ಜಾತಿಯ ದುಂಡುಹುಳು. ಫಿಲೋಡಿನ (Philodina) ಮತ್ತು ಹೈಡಾಟಿನ್ (Hydatina) ಜಾತಿಯ ರೋಟಿಫೆರ; ಡ್ಯಾಫಿಯ, (Daphnia), ಟ್ರೈಕೋನಿಸ್ಕಸ್ (Trichoniscus) ಜಾತಿಯ ಕಠಿಣಚರ್ಮಿಗಳು, ಲೇಕೇನಿಯಂ (Lacanium) ಜಾತಿಯ ಹೋಮೋಪ್ಟೆರದ ಕೀಟಗಳು ಪ್ರಮುಖವಾದುವು.

ರೋಟಿಫೆರ ಪ್ರಾಣಿಗಳು ಸೂಕ್ಷ್ಮದರ್ಶಿಯ ದೇಹವುಳ್ಳ ಜಲಚರ ಪ್ರಾಣಿಗಳು. ಇಲ್ಲಿ ವಿವಿಧ ಬಗೆಯ ಸಂತಾನೋತ್ಪತ್ತಿ ಕಂಡುಬರುತ್ತದೆ. (1) ಸಿಯಿಸೋನ್ (Seison) ಜಾತಿಯ ರೋಟಿಫೆರದಲ್ಲಿ ಗಂಡುಹೆಣ್ಣುಗಳು ಸುಮಾರು ಸಮಸಂಖ್ಯೆಯಲ್ಲಿ ವರ್ಷವಿಡೀ ಕಂಡುಬರುತ್ತವೆ. ಇಲ್ಲಿ ಇವೆರಡೂ ಸಂತಾನೋತ್ಪತ್ತಿ ಕಾರ್ಯದಲ್ಲಿ ಭಾಗಿಗಳಾಗಿರುತ್ತವೆ. (2) ಫಿಲೋಡೈನ ಜಾತಿಯ ರೋಟಿಫೆರದಲ್ಲಿ ಎಲ್ಲ ಪ್ರಾಣಿಗಳೂ

ಹೆಣ್ಣು ಜೀವಿಗಳು. ಇಲ್ಲಿ ಗಂಡುಜೀವಿಗಳೇ ಕಂಡುಬರುವುದಿಲ್ಲ. ಇದರ ಫಲವಾಗಿ ಅಂಡಾಣುಗಳು ಅನಿಷೇಕಜನನದ ರೀತಿಯಲ್ಲಿ ಮಾತ್ರ ಬೆಳವಣಿಗೆ ಹೊಂದಬೇಕಾಗುತ್ತವೆ. ಈ ಬಗೆಯ ಅಂಡಾಣುಗಳು ರೂಪುಗೊಳ್ಳುವಾಗ ನಡೆಯುವ ಮೈಯೋಸಿಸಿನ ಪ್ರಕ್ರಿಯೆಗಳಲ್ಲಿ ಮಾರ್ಪಾಡಾಗಿರುವುದರಿಂದ ಅಂಡಾಣುಗಳಲ್ಲಿ ತಾಯಿಯ ದ್ವಿಗುಣಿತ ಸಂಖ್ಯೆಯ ಕ್ರೋಮೊಸೋಮುಗಳೇ ಉಳಿದುಬಿಡುತ್ತವೆ. ಇಂತಹ ದ್ವಿಗುಣಿತದ ಮೊಟ್ಟೆಯಿಂದ ಒಂದೆರಡು ದಿನಗಳಲ್ಲಿಯೇ ಅನಿಷೇಕಜನನದ ಫಲವಾಗಿ ಮರಿಗಳು ಬೆಳವಣಿಗೆ ಹೊಂದಿ ಹೊರಬಂದು ಒಂದು ವಾರದೊಳಗೆ ಪ್ರೌಢಾವಸ್ಥೆಗೆ ಕಾಲಿಡುತ್ತವೆ. ಇವೆಲ್ಲವೂ ಹೆಣ್ಣು ಜೀವಿಗಳೇ. ಇವೂ ಕೂಡ ತಮ್ಮ ಹೆತ್ತವರಂತೆ ಅನಿಷೇಕಜನನದ ರೀತಿ ಸಂತಾನೋತ್ಪತ್ತಿ ಮಾಡುತ್ತವೆ. (3) ಮೂರನೆಯ ಗುಂಪಿನ ಕೆಲವು ರೋಟಿಫೆರಗಳಲ್ಲಿ. ಏಫಿಡ್ ಕೀಟಗಳಲ್ಲಿ ಕಂಡುಬರುವಂತೆ. ಲೈಂಗಿಕ ಹಾಗೂ ಅನಿಷೇಕಜನನದ ಪೀಳಿಗೆಗಳು ಜೀವನ ಚಕ್ರದಲ್ಲಿ ಪರ್ಯಾಯವಾಗಿ ಕಂಡುಬರುತ್ತವೆ. ಇಲ್ಲಿ ಜೀವನಚಕ್ರದ ಪೂರ್ವಾರ್ಧ ಏಫಿಡ್‌ಗಳ ಜೀವನಚಕ್ರದ ಭಾಗವನ್ನು ಹೋಲುತ್ತದೆ: ಉತ್ತರಾರ್ಧ ಜೇನುನೊಣದ ಜೀವನ ಚಕ್ರದ ಭಾಗವನ್ನು ಹೋಲುತ್ತದೆ (ಚಿತ್ರ 3c). ಇಲ್ಲಿಯೂ ಕೂಡ ಸೈಗೋಟು ಅಥವಾ ನಿಷೇಚಿತ ಅಂಡಾಣುವಿನಿಂದ ಹೆಣ್ಣುಜೀವಿ ರೂಪುಗೊಳ್ಳುತ್ತದೆ. ಇದು ಅನಿಷೇಕಜನನದ ರೀತಿಯಲ್ಲಿಯೇ ಸಂತಾನೋತ್ಪತ್ತಿ ಮಾಡಲಾರಂಭಿಸುತ್ತದೆ. ಇದರಿಂದ ಹಲವಾರು ಅನಿಷೇಕಜನನದ ಹೆಣ್ಣು ಪೀಳಿಗೆಗಳು ಒಂದಾದಮೇಲೊಂದರಂತೆ ಹುಟ್ಟುತ್ತವೆ. ಕೆಲವು ಸಂದರ್ಭಗಳಲ್ಲಿ ಅಥವಾ ಒಂದು ನಿರ್ದಿಷ್ಟ ಋತುವಿನಲ್ಲಿ ಲೈಂಗಿಕ ಹೆಣ್ಣು ಜೀವಿಯನ್ನು ಉತ್ಪತ್ತಿ ಮಾಡುತ್ತದೆ. ಈ ಲೈಂಗಿಕ ಹೆಣ್ಣುಜೀವಿ ಸಣ್ಣ ಸಣ್ಣ ಮೊಟ್ಟೆಗಳನ್ನಿಡುತ್ತದೆ. ಈ ಅಂಡಾಣುಗಳು ರೂಪುಗೊಳ್ಳುವಾಗ ಮೈಯೋಸಿಸಿನ ಪ್ರಕ್ರಿಯೆಗಳು ಸಹಜ ಸಾಮಾನ್ಯವಾಗಿರುವುದರಿಂದ ಅಂಡಾಣುಗಳಲ್ಲಿ ಅಗುಣಿತ ಸಂಖ್ಯೆಯ ಕ್ರೋಮೊಸೋಮುಗಳೇರ್ಪಡುತ್ತವೆ. ಇಂತಹ ಮೊಟ್ಟೆಗಳಿಂದ ಹೊರ ಬರುವ ಜೀವಿ ಗಂಡು. ಇದು ಬೇಗನೆ ಪ್ರಾಯಕ್ಕೆ ಬಂದು ತಮ್ಮ ತಾಯಿಪೀಳಿಗೆಯ ಹೆಣ್ಣುಗಳೊಡನೆ ಸಂಭೋಗನಡೆಸುತ್ತವೆ. ಇದರ ಫಲವಾಗಿ ಲೈಂಗಿಕ ಹೆಣ್ಣಿನ ಅಂಡಾಣುಗಳು ಗಂಡಿನ ಶುಕ್ರಾಣುಗಳಿಂದ ನಿಷೇಚನಗೊಳ್ಳುತ್ತವೆ. ಹೀಗೆ ಸೈಗೋಟಿನಲ್ಲಿ ಕ್ರೋಮೊಸೋಮುಗಳ ಸಂಖ್ಯೆ ದ್ವಿಗುಣಿತತ್ವವನ್ನು ಮುಟ್ಟಿದಮೇಲೆ ಅಂಡಾಣುವಿನ ಸುತ್ತ ದಪ್ಪ ಕವಚದ ಹೊದಿಕೆ ಸೃಷ್ಟಿಯಾಗುತ್ತದೆ. ಇಂತಹ ಮೊಟ್ಟೆಗಳಿಗೆ ಚಳಿಗಾಲದ ಚಳಿಯನ್ನು ತಡೆಯುವ ಸಾಮರ್ಥ್ಯವಿರುತ್ತದೆ. ಹಿತಕರವಾದ ವಾತಾವರಣ ಬಂದ ಮೇಲೆ ಈ ಮೊಟ್ಟೆಗಳಿಂದ ಹೊರಬರುವ ಮರಿಜೀವಿಗಳೆಲ್ಲ ಹೆಣ್ಣು ಜೀವಿಗಳೇ.

ಹೈಮೆನೋಪ್ಟೆರ ಗಣದ ಸಿನಿಪಿಡೆ (Cynipidae) ಕುಟುಂಬದ "ಗಾಲ್ ಕೀಟ" ಅಥವಾ "ಗಂಟುಕಣಜ"ಗಳ (gall wasps) ಲ್ಲಿಯೂ ಕೂಡ ರೋಟಿಫೆರಗಳಲ್ಲಿ ಕಂಡುಬರುವಂತೆ ಮೂರು ಬಗೆಯ ಜೀವಿಗಳಿವೆ. (1) ಅತ್ಯಂತ ಅಲ್ಪಜೀವ

ಪ್ರಭೇದಗಳಲ್ಲಿ ದ್ವಿಲೈಂಗಿಕ ಪೀಳಿಗೆ ಕಂಡುಬರುತ್ತದೆ. ಇಲ್ಲಿ ಲೈಂಗಿಕ ರೀತಿಯ ಸಂತಾನೋತ್ಪತ್ತಿ ಪ್ರಧಾನ. (2) ಕೆಲವು ಅತ್ಯಂತ ವಿಶಿಷ್ಟವಾದ ಗಂಟು ಕಣಜಗಳಲ್ಲಿ ಗಂಡುಗಳಿಲ್ಲದ ಹೆಣ್ಣು ಸಮಾಜವಿರುತ್ತದೆ. ಆಂಡ್ರಿಕಸ್ (Andricus), ರೋಡಿಟೆಸ್ (Rhodites) ಗಳಲ್ಲಿ ಅನಿಷೇಕಜನನದ ಬೆಳವಣಿಗೆ ಮಾತ್ರ ಕಂಡುಬರುತ್ತದೆ. (3) ಆದರೆ ಹಲವು ಗಂಟುಕಣಜಗಳಲ್ಲಿ ಲೈಂಗಿಕ ಹಾಗೂ ಅನಿಷೇಕಜನನದ ಪೀಳಿಗೆಗಳು ಪರ್ಯಾಯವಾಗಿ ಹಾಗೂ ನಿಯಮಬದ್ಧವಾಗಿ ಕಂಡುಬರುತ್ತವೆ (ಚಿತ್ರ 3d); ಇಲ್ಲಿ ಚಕ್ರೀಯ ಅನಿಷೇಕಜನನವು ಏಫಿಡ್‌ಗಳಲ್ಲಿ ಕಂಡುಬರುವುದಕ್ಕಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಇಲ್ಲಿ ಕಂಡುಬರುವುದು ವರ್ಷಕ್ಕೆ ಕೇವಲ ಎರಡು ಪೀಳಿಗೆಗಳು. ಒಂದು ಲೈಂಗಿಕ ಪೀಳಿಗೆ ಮತ್ತೊಂದು ಅನಿಷೇಕಜನನದ ಪೀಳಿಗೆ. ಮೊದಲನೆಯದು ಬೇಸಿಗೆಯಲ್ಲಿ ಕಂಡುಬಂದರೆ, ಎರಡನೆಯದು ಚಳಿಗಾಲದಲ್ಲಿ ಕೀಟಜನ್ಯ ಗಂಟುಗಳಿಂದ ಹೊರಗೆ ಬರುತ್ತದೆ. ಗಂಡುಕೀಟದೊಡನೆ ಸಂಭೋಗ ಪಡೆದ ಹೆಣ್ಣು ಕೀಟವು (ಸೀನಿಪ್ಸ್: Cynips ಜಾತಿಯ ಕೀಟ) ತನ್ನ ನಿಷೇಚಿತ ಅಂಡಾಣುಗಳನ್ನು ಓಕ್ ಮರದ ಮೃದುಭಾಗದ ಒಳಭಾಗದಲ್ಲಿ ಇಡುತ್ತದೆ. ಗಿಡದ ಅಂಗಾಂಶದಲ್ಲಿ ಮೊಟ್ಟೆಗಳು ಒಡೆದು ಲಾರ್ವಗಳನ್ನು ಹೊರಗೆಡಹುತ್ತದೆ. ಲಾರ್ವಗಳು ಬೆಳೆದಂತೆಲ್ಲ ಅವುಗಳ ಸುತ್ತಲೂ ಇರುವ ಅಂಗಾಂಶ ಗಂಟು ರೂಪ ತಾಳುತ್ತದೆ. ಇದಕ್ಕೆ ಗಾಲ್ (gall) ಅಥವಾ "ಕೀಟಜನ್ಯ ಗಂಟು" ಎಂದು ಹೆಸರು. ಈ ಲಾರ್ವಗಳಿಗೆ ಕಾಲುಗಳಿರುವುದಿಲ್ಲ. ಇವು ಗಂಟಿನೊಳಗೆ ಪ್ಯೂಪಾವಸ್ಥೆ ಅಥವಾ ಕೋಶಾವಸ್ಥೆಗೆ ಬರುವುದಿಲ್ಲ. ಲಾರ್ವಗಳು ಬೇಸಿಗೆಯ ಕಾಲದಲ್ಲಿ ಗಂಟಿನ ಒಳಭಾಗದಲ್ಲಿಯೇ ರೂಪ ಪರಿವರ್ತನೆ ಹೊಂದಿ ಚಳಿಗಾಲ ಬಂದಂತೆ ಗಂಟಿನಿಂದ ಹೊರಬರುತ್ತವೆ. ಹೊರಬಂದ ಜೀವಿಗಳೆಲ್ಲ ಹೆಣ್ಣುಜೀವಿಗಳಾಗಿ ರೂಪುಗೊಳ್ಳುತ್ತವೆ. ಈ ಹೆಣ್ಣು ಕೀಟಗಳ ನಡುವೆ ಗಂಡುಕೀಟಗಳಿಲ್ಲದೇ ಇರುವುದರಿಂದ ಇವು ಅನಿಷೇಕಜನನದ ರೀತಿಯಲ್ಲಿ ಸಂತಾನೋತ್ಪತ್ತಿಮಾಡುತ್ತವೆ. ಇವೂ ಕೂಡ ತಮ್ಮ ಮೊಟ್ಟೆಗಳನ್ನು ಮರದ ಮೊಗ್ಗುಗಳಲ್ಲಿಡುತ್ತವೆ. ಸಣ್ಣ ಸಣ್ಣ ಗಂಟುಗಳಲ್ಲಿ ಬೆಳವಣಿಗೆ ಹೊಂದಿದ ಇವುಗಳ ಲಾರ್ವಗಳು ರೂಪಪರಿವರ್ತನೆ ಹೊಂದಿ ವಸಂತ ಮಾಸ ಬರುವ ಹೊತ್ತಿಗೆ ಗಂಡು ಮತ್ತು ಹೆಣ್ಣು ಕೀಟಗಳಾಗಿ ಹೊರಬರುತ್ತವೆ.

ನ್ಯೂರೋಟೆರಸ್ ಜಾತಿಯ (Neuroterus lenticulatris) ಗಂಟು ಕಣಜದಲ್ಲಿ ಸಾಕಷ್ಟು ಕೋಶಿಕೀಯ ಅಧ್ಯಯನಗಳು ನಡೆದಿವೆ. ನಿಷೇಚಿತ ಅಂಡಾಣುಗಳಿಂದ ಹುಟ್ಟುವ ಕೀಟಗಳೆಲ್ಲ ಹೆಣ್ಣುಜಾತಿಯವು; ಅನಿಷೇಕಜನನದ ರೀತಿಯಲ್ಲಿ ಸಂತಾನೋತ್ಪತ್ತಿ ಮಾಡತಕ್ಕವು. ಈ ಎಲ್ಲ ಹೆಣ್ಣುಕೀಟಗಳೂ ಒಂದೇ ಬಗೆಯ ರೂಪರಚನೆಯಿಂದ ಕೂಡಿದ್ದರೂ ಕೆಲವು ಹೆಣ್ಣುಕೀಟಗಳನ್ನು ಮಾತ್ರ ಉತ್ಪಾದನೆ ಮಾಡುವಂತಿರುತ್ತವೆ. ಇನ್ನುಳಿದವು ಕೇವಲ ಗಂಡು ಕೀಟಗಳನ್ನು ಉತ್ಪಾದನೆ ಮಾಡುವಂತಿರುತ್ತವೆ. ಗಂಡು ಕೀಟಗಳ ತಾಯಿಯರಲ್ಲಿ ಅಂಡಜನನವಾಗುವಾಗ ಕ್ರೊಮೊಸೋಮು ಸಂಖ್ಯೆ ಅರ್ಧದಷ್ಟು

ಕ್ಷೀಣಿಸುವುದರಿಂದ ಅವುಗಳ ಕ್ರೋಮೋಸೋಮು ಸಂಖ್ಯೆ ಅಗುಣಿತ ($n = 10$) ವಾಗಿರುತ್ತವೆ. ಲೈಂಗಿಕ ಹೆಣ್ಣುಗಳಂತೂ ಅನಿಷೇಕಜನನದ ಹೆಣ್ಣು ಕೀಟಗಳಂತೆ ದ್ವಿಗುಣಿತದ ಜೀವಿಗಳು ($2n = 20$).


ಮೈಕ್ರೋಮಾಲ್ತಸ್ (Micromalthus debilis) ಜಾತಿಯ ಜೀರುಂಡೆಯಲ್ಲಿ ನಿರ್ದಿಷ್ಟವಾದ ಲೈಂಗಿಕ ಹಾಗೂ ಅನಿಷೇಕಜನನದ ಪೀಳಿಗೆಗಳು ಕಂಡುಬರುವುದಿಲ್ಲ. ಆದರೆ ಇಲ್ಲಿ ಅನಿಷೇಕಜನನದ ಜೊತೆಗೆ ಶಾವಕೀಜನನ (padogenesis) ವು ಬೆರೆತು ಜೀವನಚಕ್ರ ಸ್ವಲ್ಪಮಟ್ಟಿಗೆ ಸಂಕೀರ್ಣವಾಗಿರುತ್ತದೆ. ಅಂದರೆ ಇಲ್ಲಿ ಅಂಡಾಣುಗಳು ಅನಿಷೇಕಜನನದ ರೀತಿಯಲ್ಲಿ ಬೆಳವಣಿಗೆ ಹೊಂದುವುದೇ ಅಲ್ಲದೆ ಲಾರ್ವಾ ಹಂತದಲ್ಲಿಯೇ ಸಂತಾನೋತ್ಪತ್ತಿ ಮಾಡುವ ವೈಚಿತ್ರ್ಯವಿದೆ. ಈ ಜೀರುಂಡೆಯಲ್ಲಿ ನಾಲ್ಕುಬಗೆಗಳಲ್ಲಿ ಸಂತಾನೋತ್ಪತ್ತಿ ಮಾಡುವ ಹೆಣ್ಣು ಜೀವಿಗಳನ್ನು ಗುರುತಿಸಬಹುದು. ಇವುಗಳಲ್ಲಿ ಒಂದು ಪ್ರೌಢಾವಸ್ಥೆಯ ಹೆಣ್ಣು ಕೀಟವಾಗಿದ್ದರೆ. ಉಳಿದವು ಲಾರ್ವಾಗಳು: (1) ಪ್ರಾಯಸ್ಥ ಹೆಣ್ಣುಕೀಟ. (2) ಅನಿಷೇಕ ಜನನದ ರೀತಿಯಲ್ಲಿಯೇ ಹೆಣ್ಣುಗಳನ್ನು ಉತ್ಪತ್ತಿ ಮಾಡುವ ಲಾರ್ವ, (3) ಅನಿಷೇಕಜನನದ ರೀತಿಯಲ್ಲಿ ಗಂಡುಗಳನ್ನು ಉತ್ಪತ್ತಿ ಮಾಡುವ ಲಾರ್ವ ಮತ್ತು (4) ಗಂಡು ಮತ್ತು ಹೆಣ್ಣುಗಳೆರಡನ್ನು ಅನಿಷೇಕಜನನದ ರೀತಿಯಲ್ಲಿ ಉತ್ಪತ್ತಿ ಮಾಡುವ ಲಾರ್ವ. ಎರಡನೆಯ ಗುಂಪಿನ ಲಾರ್ವದಿಂದ ಉತ್ಪತ್ತಿಯಾಗುವ ಮರಿಹೆಣ್ಣು ಲಾರ್ವವು ಮೇಲಿನ ನಾಲ್ಕು ಬಗೆಯ ಹೆಣ್ಣುಗಳನ್ನು ಉತ್ಪತ್ತಿ ಮಾಡಬಲ್ಲದು. ಇವುಗಳಲ್ಲದೆ ಆಗಸ್ಟ್ ತಿಂಗಳಲ್ಲಿ ಗಂಡುಕೀಟಗಳು ಕಾಣಿಸಿಕೊಳ್ಳುವುದೂ ಉಂಟು. ಈ ಗಂಡುಕೀಟಗಳಲ್ಲಿ ಹೆಣ್ಣುಕೀಟಗಳ ಅರ್ಧದಷ್ಟು ಸಂಖ್ಯೆಯ ಕ್ರೋಮೋಸೋಮುಗಳಿರುತ್ತವೆ. ಆದರೆ ಹೆಣ್ಣು ಈ ಗಂಡಿನೊಡನಾಡುವ ಸಂದರ್ಭ ವಿಜ್ಞಾನಿಗಳ ಕಣ್ಣಿಗೆ ಬಿದ್ದಿಲ್ಲ. ಪ್ರಾಯಶಃ ಅವು ಬಂಜೆಯರಾಗಿರಬೇಕು.

ಅಂಡಜನನಕಾಲದಲ್ಲಿ ಜೀವಿಯ ಕ್ರೋಮೋಸೋಮುಗಳ ಮೂಲಸಂಖ್ಯೆ ಅರ್ಧದಷ್ಟು ಕ್ಷೀಣಿಸುವುದರಿಂದ ಅಂಡಾಣುವಿನಲ್ಲಿ ಅಗುಣಿತದ ಕ್ರೋಮೋಸೋಮುಗಳಿರುತ್ತವೆ. ಅಂತಹ ಅಂಡಾಣುಗಳು ಅನಿಷೇಕಜನನದ ರೀತಿಯಲ್ಲಿ ಬೆಳವಣಿಗೆ ಹೊಂದಿದರೆ ಆ ಜೀವಿಯಲ್ಲಿ ಅಗುಣಿತದ ಕ್ರೋಮೋಸೋಮುಗಳಿರುತ್ತವೆ. ಉದಾಹರಣೆಗೆ ಜೇನುಹುಳು. ರೋಟಿಫೆರ ಮತ್ತು ಸಿನಿಪಿಡ್ ಕಣಜಗಳಗಂಡುಜೀವಿಗಳನ್ನು ಇಲ್ಲಿ ಹೆಸರಿಸಬಹುದು. ಒಂದುವೇಳೆ ದ್ವಿಗುಣಿತತ್ವದ ಕ್ರೋಮೋಸೋಮುಗಳಿಂದ ಕೂಡಿದ ಅಂಡಾಣುವು ಅನಿಷೇಕಜನನದ ರೀತಿ ಬೆಳವಣಿಗೆ ಹೊಂದಿದರೆ ಸ್ವಾಭಾವಿಕವಾಗಿ ದ್ವಿಗುಣಿತತ್ವ ಆ ಪ್ರೌಢಜೀವಿಯಲ್ಲೂ ಕಾಣಬಹುದು. ಆದರೆ ಅಗುಣಿತತ್ವದ ಅಂಡಾಣುವು ಶುಕ್ರಾಣುವಿನ ಸಂಪರ್ಕವಿಲ್ಲದೆಯೇ ಅನಿಷೇಕಜನನದ ರೀತಿಯಲ್ಲಿ ಬೆಳವಣಿಗೆ ಹೊಂದುವ ಮೊಟ್ಟೆಗಳಲ್ಲೂ ಕೆಲವು ಬಗೆಗಳಲ್ಲಿ ದ್ವಿಗುಣಿತತ್ವ ಪ್ರಾಪ್ತವಾಗುವ ಸನ್ನಿವೇಶಗಳೂ ಉಂಟು. ಈ ಬಗೆಯ ದ್ವಿಗುಣಿತತ್ವದ ಪ್ರಾಪ್ತಿಗೂ ದ್ವಿಲೈಂಗಿಕ ರೀತಿಯಲ್ಲಿ ಏರ್ಪಡುವ ದ್ವಿಗುಣಿ

ತತ್ತ್ವಕ್ಕೂ ವ್ಯತ್ಯಾಸವಿದೆ. ಎರಡನೆಯ ರೀತಿಯಲ್ಲಿ ತಂದೆಯಿಂದ ಬಂದ ಒಂದು ಕ್ರೋಮೋಸೋಮು ತಂಡ ಹಾಗೂ ತಾಯಿಯಿಂದ ಬಂದ ಮತ್ತೊಂದು ಕ್ರೋಮೋಸೋಮುಗಳ ತಂಡಗಳ ಸಂಗಮವಾಗುತ್ತದೆ.. ಆದರೆ ಮೊದಲನೆಯದರಲ್ಲಿ ತಾಯಿಯ ಕ್ರೋಮೋಸೋಮು ತಂಡವೇ ಎರಡರಷ್ಟಾಗಿ ದ್ವಿಗುಣತತ್ತ್ವಕ್ಕೆ ಬರುತ್ತದೆ.

ಸೋಲೆನೋಬಿಯ ಟ್ರೈಕಿಟ್ರೆಲ್ಲ (Solenobia triquitrella) ಎಂಬುದು ಲೆಪಿಡೋಪ್ಟೆರ (Lepidoptera) ಗಣಕ್ಕೆ ಸೇರಿದ ಒಂದು ಪತಂಗ. ಇದರಲ್ಲಿ ಮೂರು ಬಗೆಯ ಜೀವಿ ಸಂಕುಲಗಳನ್ನು ಗುರುತಿಸಬಹುದು. 1) ದ್ವಿಗುಣಿತದ ದ್ವಿಲೈಂಗಿಕ ಸಂಕುಲ; ಅಂದರೆ ಎರಡು ತಂಡ ಕ್ರೋಮೋಸೋಮುಗಳನ್ನುಳ್ಳ ಗಂಡು ಮತ್ತು ಹೆಣ್ಣುಗಳಿಂದ ಕೂಡಿದ ಜೀವಿಗಳು. ಇವುಗಳ ದ್ವಿಗುಣತ್ವದಲ್ಲಿರುವ ಕ್ರೋಮೋಸೋಮುಗಳ ಸಂಖ್ಯೆ ಅಥವಾ 2 n ಕೇವಲ 62. 2) ದ್ವಿಗುಣಿತದ ಅನಿಷೇಕಜನನದ ಸಂಕುಲ. ಇಲ್ಲಿ ಕೇವಲ ಹೆಣ್ಣುಜೀವಿಗಳು ಕಂಡು ಬರುತ್ತವೆ. ಇವುಗಳ ಕ್ರೋಮೋಸೋಮು ಸಂಖ್ಯೆಯೂ ಕೂಡ 62 (2n = 62). 3) ಚತುರ್ಥ ಗುಣಿತದ ನಿಷೇಕಜನನದ ಸಂಕುಲ. ಇಲ್ಲಿ ಗಂಡುಜೀವಿಗಳಿಲ್ಲದ ಹೆಣ್ಣು ಸಮಾಜವೇ ವೈಶಿಷ್ಟ್ಯ. ಇವುಗಳ ಕ್ರೋಮೋಸೋಮು ಸಂಖ್ಯೆ ಅಥವಾ 4 n ಸಂಖ್ಯೆ 124. ದ್ವಿಲೈಂಗಿಕ ಸಂಕುಲವು ಯೂರೋಪಿನ ಸ್ವಿಟ್ಜರ್ಲೆಂಡ್ ಮತ್ತು ಆಲ್ಪ್ಸ್ ಪರ್ವತದ ಉತ್ತರ (ಜರ್ಮನಿಯ ನ್ಯೂರೆಂಬರ್ಗ್) ಪ್ರದೇಶದಲ್ಲಿ ಕಂಡುಬರುತ್ತದೆ. ಎರಡನೆಯ ದ್ವಿಗುಣಿತ ಅನಿಷೇಕಜನನದ ಸಂಕುಲವು ಸ್ವಿಟ್ಜರ್ಲೆಂಡಿನಲ್ಲೆಲ್ಲ ಹರಡಿದೆ. ಚತುರ್ಥ ಗುಣಿತದ ಸಂಕುಲದ ವ್ಯಾಪ್ತಿ ಅಪಾರ. ಇದು ಸ್ವಿಟ್ಜರ್ಲೆಂಡ್‌ನಲ್ಲಿಯೇ ಅಲ್ಲದೆ ಮಧ್ಯ ಯೂರೋಪಿನಲ್ಲೆಲ್ಲ (ಉತ್ತರದಲ್ಲಿ ಸ್ಕಾಂಡಿನೇವಿಯದವರೆಗೆ, ಪಶ್ಚಿಮದಲ್ಲಿ ರುಮೇನಿಯದವರೆಗೆ) ಕಂಡುಬರುತ್ತದೆ.

ಈ ಹೆಣ್ಣು ಪತಂಗಗಳಲ್ಲಿ ನಡೆಯುವ ಅಂಡಜನನ ಸರಳರೀತಿಯದು. ಸಾರ್ವತ್ರೀಕೃತವಾದುದು (ಚಿತ್ರ 5a ಮತ್ತು 5b). ಪರಿಪಕ್ವತೆಯ ಮೊದಲನೆಯ ಕೋಶಿಕ ವಿಭಜನೆಯಲ್ಲಿ ಮೂಲ ಕ್ರೋಮೋಸೋಮು ಸಂಖ್ಯೆಯಲ್ಲಿ ಅರ್ಧಭಾಗ ಮುಂದಿನ ಅಂಡಾಣುಕೋಶದಲ್ಲಿ ಉಳಿದರೆ ಉಳಿದರ್ಧ ಧ್ರುವಕೋಶಿಕಗಳನ್ನು ಸೇರುತ್ತವೆ. ತತ್ಪರಿಣಾಮವಾಗಿ ಪರಿಪಕ್ವಗೊಂಡ ಅಂಡಾಣುವಿನಲ್ಲಿ ಮೂಲಸಂಖ್ಯೆಯ ಅರ್ಧದಷ್ಟು ಕ್ರೋಮೋಸೋಮುಗಳಿರುತ್ತವೆ. ಅಂದರೆ ದ್ವಿಗುಣಿತ ಸಂಖ್ಯೆಯ ಕ್ರೋಮೋಸೋಮುಗಳನ್ನೊಳಗೊಂಡ ಜೀವಿಯ ಅಂಡಾಣುವಿನಲ್ಲಿ 31 ಕ್ರೋಮೋಸೋಮುಗಳಿದ್ದರೆ. ಚತುರ್ಥ ಗುಣಿತದ ಹೆಣ್ಣಿನ ಅಂಡಾಣುವಿನಲ್ಲಿ 62 ಕ್ರೋಮೋಸೋಮುಗಳಿರುತ್ತವೆ. ದ್ವಿಲೈಂಗಿಕ ಸಂಕುಲದಲ್ಲಿ ಇಂತಹ ಅಂಡಾಣುವಿನೊಡನೆ ಶುಕ್ರಾಣುವು ಬೆರೆತರೆ ನಿಷೇಚಿತ ಅಂಡಾಣು ಅಥವಾ ಸೈಗೋಟಿನಲ್ಲಿ ದ್ವಿಗುಣತತ್ತ್ವ (31 + 31 = 62) ಪ್ರಾಪ್ತವಾಗುತ್ತದೆ. ಅಂಡಾಣುವು ಅನಿಷೇಕಜನನದ ರೀತಿಯಲ್ಲಿ ಬೆಳವಣಿಗೆ ಹೊಂದಲು ಪ್ರಾರಂಭಿಸಿದರೆ,




ಚಿತ್ರ 5a ಮತ್ತು b ಸೊಲೆನೋಬಿಯ ಟ್ರೈಕೆಟ್ರೆಲ್ಲಿ (a) ದ್ವಿಗುಣಿತ ಸಂಕುಲ ಮತ್ತು (b) ಚತುರ್ಥ ಗುಣಿತ ಸಂಕುಲಗಳಲ್ಲಿ ಅಂಡಜನನ ಮತ್ತು ಅನಿಷೇಕಜನನದ ಕಾಲದಲ್ಲಿ ಕ್ಷೀಣಿಸಿದ ಕ್ರೋಮೊಸೋಮು ಸಂಖ್ಯೆ ಮೂಲಸ್ಥಿತಿಗೆ ಬರುವಿಕೆ. 1. ಪರಿಪಕ್ವತೆಯ ಮೊದಲನೆಯ ವಿಭಜನೆಯಲ್ಲಿ ಮೂಲ ಕ್ರೋಮೊಸೋಮು ಸಂಖ್ಯೆ ಅರ್ಧದಷ್ಟು ಕ್ಷೀಣಿಸುವಿಕೆ ಮತ್ತು ಮೊದಲನೆಯ ಧ್ರುವ ನ್ಯೂಕ್ಲಿಯಸಿನ ರೂಪಿಕೆ. 2. ಎರಡನೆಯ ವಿಭಜನೆಯ ಕಾಲದಲ್ಲಿ ಎರಡನೆಯ ಧ್ರುವ ನ್ಯೂಕ್ಲಿಯಸಿನ ರೂಪಿಕೆ 3 ಮತ್ತು 4. ಅಂಡಾಣುವಿನ ನ್ಯೂಕ್ಲಿಯಸು ಎರಡಾಗಿ ಮತ್ತು ನಾಲ್ಕಾಗಿ ದ್ವಿಪ್ರತಿಗೊಳ್ಳುವಿಕೆ. 5. ಎರಡೆರಡು ನ್ಯೂಕ್ಲಿಯಸುಗಳು ಪರಸ್ಪರ ಕೂಡುವಿಕೆ. 6. ತತ್ಫಲವಾಗಿ ಮೂಲ ಕ್ರೋಮೊಸೋಮು ಸಂಖ್ಯೆ ಪ್ರಾಪ್ತವಾಗುವಿಕೆ.

ಪ್ರಪ್ರಥಮದಲ್ಲಿ ಕೇವಲ ಅಗುಣಿತದ ಕ್ರೋಮೊಸೋಮುಗಳಿರುತ್ತವೆ. ಅಂಡಾಣುವಿನ ನ್ಯೂಕ್ಲಿಯಸು ಎರಡಾಗಿ, ನಂತರ ನಾಲ್ಕಾಗಿ ವಿಭಜನೆ ಹೊಂದುತ್ತದೆ. ಪ್ರತಿ ವಿಭಜನೆಯ ಕಾಲದಲ್ಲೂ ಕ್ರೋಮೊಸೋಮುಗಳು ಸೀಳಿ ಪ್ರತ್ಯೇಕಗೊಳ್ಳುವುದರಿಂದ ಪ್ರತಿ ನ್ಯೂಕ್ಲಿಯಸಿನಲ್ಲಿಯೂ ಅಗುಣಿತ ಸಂಖ್ಯೆಯ ಕ್ರೋಮೊಸೋಮುಗಳಿರುತ್ತವೆ. ದ್ವಿಗುಣಿತ ಅಂಡಾಣುವಿನ ನ್ಯೂಕ್ಲಿಯಸಿನಲ್ಲಿ 31 ಕ್ರೋಮೊಸೋಮುಗಳಿದ್ದರೆ, ಚತುರ್ಥ ಗುಣಿತದ ಅಂಡಾಣುವಿನಲ್ಲಿ 62 ಇರುತ್ತವೆ. ನಾಲ್ಕು ನ್ಯೂಕ್ಲಿಯಸುಗಳಿಂದ ಕೂಡಿದ ಬೆಳವಣಿಗೆಯ ಹಂತಕ್ಕೆ ಕಾಲಿಟ್ಟ ಭ್ರೂಣದಲ್ಲಿ ಎರಡೆರಡು ನ್ಯೂಕ್ಲಿಯಸುಗಳು ಪರಸ್ಪರ ಹತ್ತಿರ ಬಂದು ಕೊನೆಗೆ ಬೆರೆತು ಒಂದಾಗುತ್ತವೆ. ಅಗುಣಿತ ಸಂಖ್ಯೆಯ ಎರಡು ನ್ಯೂಕ್ಲಿಯಸುಗಳು ಕೂಡುವುದರಿಂದ ದ್ವಿಗುಣಿತ ಸಂಖ್ಯೆಯ ನ್ಯೂಕ್ಲಿಯಸು ಕಾರಣವಾಗುತ್ತದೆ. ತತ್ಫಲವಾಗಿ ದ್ವಿಗುಣಿತದ ಹಾಗೂ ಚತುರ್ಥ ಗುಣಿತದ ಜೀವಿಗಳಲ್ಲಿ ಮೂಲ ಕ್ರೋಮೊಸೋಮುಗಳ ಸಂಖ್ಯೆ ಮರುಕಳಿಸುತ್ತದೆ.

ಈ ಪತಂಗಗಳ ಬಗ್ಗೆ ಬಹು ದೀರ್ಘ ಕಾಲ ಅಧ್ಯಯನ ಮಾಡಿರುವ ಸೈಯಲರ್ (J. Seiler) ಮತ್ತು ಅವರ ಸಹ ಸಂಶೋಧಕರು ಬಹು ಸ್ವಾರಸ್ಯಕರವಾದ ಫಲಿತಾಂಶಗಳನ್ನು ಪಡೆದಿದ್ದಾರೆ. ಅವರು ದ್ವಿಗುಣಿತದ ಅನಿಷೇಕಜನನದ ಹೆಣ್ಣು ಪತಂಗದೊಡನೆ ಗಂಡನ್ನು ಅಡ್ಡ ಹಾಯಿಸಿ ಮೊದಲನೆಯ ತಳಿಪೀಳಿಗೆಯಲ್ಲಿ ಗಂಡು ಹಾಗೂ ಹೆಣ್ಣು ಪತಂಗಗಳನ್ನು ಪಡೆದಿದ್ದಾರೆ. ಈ ತಳಿಪೀಳಿಗೆಯ ಪತಂಗಗಳನ್ನು ಪರೀಕ್ಷಿಸಿದರೆ ಹೆಣ್ಣು ಜೀವಿಗಳು ಗಂಡು ಜೀವಿಗಳಿಗಿಂತ ಅತ್ಯಧಿಕ ಸಂಖ್ಯೆಯಲ್ಲಿರುವುದು ಕಂಡುಬಂದಿದೆ. ಆದರೆ ಚತುರ್ಥ ಗುಣಿತದ ಅನಿಷೇಕ ಜನನದ ಹೆಣ್ಣಿನೊಡನೆ ಗಂಡು ಪತಂಗ (ದ್ವಿಗುಣಿತ ಸಂಖ್ಯೆಯ ಕ್ರೋಮೊಸೋಮುಗಳನ್ನುಳ್ಳ) ವನ್ನು ಅಡ್ಡ ಹಾಯಿಸಿದರೆ ಮೊದಲನೆಯ ತಳಿಪೀಳಿಗೆಯಲ್ಲಿ ತ್ರಿಗುಣಿತದ ಅಂತರ ಲಿಂಗಿ (Triploid intersex) ಗಳು ಅತ್ಯಧಿಕ ಸಂಖ್ಯೆಯಲ್ಲಿ ಕಂಡುಬಂದಿವೆ. ಇಲ್ಲಿ ದ್ವಿಗುಣಿತ ಸಂಖ್ಯೆಯ ಕ್ರೋಮೊಸೋಮುಗಳನ್ನುಳ್ಳ ಅಂಡಾಣುಗಳಲ್ಲಿ ಶುಕ್ರಾಣುಗಳಿಂದ ತಂದೆಯ ಒಂದು ಕ್ರೋಮೊಸೋಮು ತಂಡ ಕೂಡಿ ತ್ರಿಗುಣಿತತ್ವ ಪ್ರಾಪ್ತವಾಗಿದೆ. ಟ್ರೈಯಲುರೋಡೆಸ್ (Trialurodes vaporarium) ಜಾತಿಯ ಹೋಮೋಪ್ಟೆರ ಕೀಟದಲ್ಲಿ (ಈ ಸಂಕುಲದಲ್ಲಿ ಗಂಡು ಕೀಟಗಳಿರುವುದಿಲ್ಲ) ಅಗುಣಿತ ಸಂಖ್ಯೆಯ ಕ್ರೋಮೊಸೋಮುಗಳಿಂದ ಕೂಡಿದ ಅಂಡಾಣುವು ಮೊದಲನೆಯ ವಿದಲನದಲ್ಲಿಯೇ ದ್ವಿಗುಣಿತತೆಯನ್ನು ಸಂಪಾದಿಸುತ್ತದೆ. ಇಲ್ಲಿ ಕ್ರೋಮೊಸೋಮುಗಳು ಸೀಳಿ ಬೇರ್ಪಟ್ಟು ಎರಡು ನ್ಯೂಕ್ಲಿಯಸುಗಳಾಗಿ ರೂಪುಗೊಳ್ಳುವುದಕ್ಕೆ ಮೊದಲೇ ಸೀಳಿ ಬೇರ್ಪಟ್ಟ ಕ್ರೋಮೊಸೋಮುಗಳು ಒಂದೇ ನ್ಯೂಕ್ಲಿಯಸಿನಲ್ಲಿ ಸೇರುತ್ತವೆ.

ಮೇಲಿನ ಪತಂಗದಲ್ಲಿ ಅಂಡಾಣುವು ಪರಿಪಕ್ವತೆಯನ್ನು ಹೊಂದಿ ವಿದಲನದ ಹಂತವನ್ನು ಮುಟ್ಟಿದ ಮೇಲೆ ತನ್ನ ದ್ವಿಗುಣಿತತೆಯನ್ನು ಗಳಿಸಿದರೆ, ಕೆಲವಲ್ಲಿ ಪರಿಪಕ್ವತೆಯ

ವಿಭಜನೆಯ ಹಂತದಲ್ಲಿಯೇ ದ್ವಿಗುಣಿತತ್ವವನ್ನು ವಿವಿಧ ಹಂತಗಳಲ್ಲಿ ಪಡೆಯುತ್ತವೆ. ಇಂತಹ ಒಂದು ಸನ್ನಿವೇಶವನ್ನು ಲೇಕೇನಿಯಂ (Lecanium hespidium) ಜಾತಿಯ ಕೀಟದಲ್ಲಿ (ಚಿತ್ರ 6) ಕಾಕಿಡೆ ಕುಟುಂಬ (Coccidae) ಕ್ಕೆ ಸೇರಿದ ಈ ಹೋಮೋ



ಚಿತ್ರ 6. ಲೇಕೇನಿಯಂ ಕೀಟದಲ್ಲಿ ಅಗುಣಿತದ ಅಂಡಾಣುವು ದ್ವಿಗುಣಿತತ್ವಕ್ಕೆ ಬರುವುದು 1) ಮೂಲ ಕ್ರೋಮೊಸೋಮು ಸಂಖ್ಯೆ 2) ಮೊದಲನೆಯ ಧ್ರುವ ಕೋಶಿಕೆಯ ರೂಪಿಕೆ ಮತ್ತು ಕ್ರೋಮೊಸೋಮು ಸಂಖ್ಯೆಯಲ್ಲಿ ಕ್ಷೀಣತೆ 3) ಎರಡನೆಯ ಮೈಯೋಸಿಸಿನ ವಿದಲನದಿಂದ ಎರಡನೆಯ ಧ್ರುವಕೋಶಿಕೆಯ ನ್ಯೂಕ್ಲಿಯಸಿನ ರೂಪಿಕೆ. 4) ಅಂಡಾಣುವಿನ ಮತ್ತು ಎರಡನೆಯ ಧ್ರುವಕೋಶಿಕೆಯ ನ್ಯೂಕ್ಲಿಯಸುಗಳ ಸಮಾಗಮ ಮತ್ತು ಮೂಲ ಕ್ರೋಮೊಸೋಮು ಸಂಖ್ಯೆಯ ಪ್ರಾಪ್ತಿ.

ಪ್ಟೆರ ಕೀಟದಲ್ಲಿ ದ್ವಿಗುಣಿತ ಸಂಖ್ಯೆಯ ಕ್ರೋಮೊಸೋಮುಗಳು 14. ಇಲ್ಲಿ ಪರಿಪಕ್ವತೆಯ ವಿಭಜನೆಗಳು ಸಹಜಸಾಮಾನ್ಯ ರೀತಿಯಲ್ಲಿ ನಡೆಯುತ್ತವೆ. ಇಲ್ಲಿ ನಡೆಯುವ ನೈಜ ಪ್ರಕ್ರಿಯೆಗಳ ಫಲವಾಗಿ ಮೊದಲನೆಯ ವಿಭಜನೆಯ ಕಾಲದಲ್ಲಿ ಮೊದಲನೆಯ ಧ್ರುವಕೋಶಿಕವೂ, ಎರಡನೆಯ ವಿಭಜನೆಯ ಕಾಲದಲ್ಲಿ ಎರಡನೆಯ ಧ್ರುವಕೋಶಿಕವೂ ರೂಪುಗೊಳ್ಳುತ್ತವೆ. ಅಗುಣಿತ ಸಂಖ್ಯೆಯ ಕ್ರೋಮೊಸೋಮುಗಳನ್ನುಳ್ಳ ಅಂಡಾಣುವಿಗೆ ಎರಡು ಭವಿಷ್ಯದ ಹಾದಿಗಳಿವೆ. ಒಂದು ಪಥದಲ್ಲಿ ಇದು ಶುಕ್ರಾಣುವಿನಿಂದ ನಿಷೇಚನ ಹೊಂದಿ ದ್ವಿಗುಣಿತತ್ವವನ್ನು ಸಂಪಾದಿಸಿ ಬೆಳವಣಿಗೆಯ ಹಂತವನ್ನು ಪ್ರವೇಶಿಸಬಹುದು. ಇಲ್ಲದೇ ಹೋದರೆ ಎರಡನೆಯ ಧ್ರುವಕೋಶಿಕದ ನ್ಯೂಕ್ಲಿಯಸು ಅಂಡಾಣುವಿನಲ್ಲಿಯೇ ಉಳಿದು ಅಂಡಾಣುವಿನ ನ್ಯೂಕ್ಲಿಯಸಿನೊಡನೆ ಬೆರೆತು ಅನಿಷೇಕಜನನದ ರೀತಿಯಲ್ಲಿ ಬೆಳವಣಿಗೆ ಹೊಂದಬಹುದು. ಅಂಡಾಣುವಿನ ನ್ಯೂಕ್ಲಿಯಸು ಮತ್ತು ಎರಡನೆಯ ಧ್ರುವಕೋಶಿಕದ ನ್ಯೂಕ್ಲಿಯಸುಗಳು ಬೆರೆಯುವುದರಿಂದ ಕ್ರೋಮೊಸೋಮುಗಳ ಸಂಖ್ಯೆ ದ್ವಿಗುಣಿತತ್ವಕ್ಕೆ ಬರುತ್ತದೆ.

ತನ್ನದೇ ಆದ ಧ್ರುವಕೋಶಿಕವು ಶುಕ್ರಾಣುವಿನಂತೆ ವರ್ತಿಸಿ ಅಂಡಾಣುವಿನಲ್ಲಿ ದ್ವಿಗುಣಿತ್ವವನ್ನು ರೂಪಿಸುವ ಉದಾಹರಣೆಗಳು ಆರ್ಟೀಮಿಯ (Artemia salina) ಎಂಬ ಕಠಿಣಚರ್ಮಿ. ಪ್ರಿಸ್ಟಿಫೋರ (Pristiphora pallipes). ಡೈಪ್ರಿ

ಯಾನ್ (Diprion polytomum) ಎಂಬ ಹೈಮೆನೋಪ್ಟೆರದ ಪ್ರತಿನಿಧಿಗಳ ಅನಿಷೇಕಜನನದ ಸಂಕುಲಗಳಲ್ಲಿ ಕಾಣಬಹುದು. ಇವೇ ಅಲ್ಲದೆ, ಅಂಡಜನನ ಕಾಲದಲ್ಲಿಯೇ ಅಂಡದ ನ್ಯೂಕ್ಲಿಯಸಿನ ಸೋದರ ನ್ಯೂಕ್ಲಿಯಸು ವಿವಿಧ ಘಟ್ಟಗಳಲ್ಲಿ ಪರಸ್ಪರ ಬೆರೆತು ದ್ವಿಗುಣಿತತ್ವ ಪ್ರಾಪ್ತವಾಗುವ ಸನ್ನಿವೇಶಗಳು ಹಲವು ಪ್ರಾಣಿಗಳಲ್ಲಿ ಕಂಡುಬಂದಿವೆ.

ನೆಮಟೋಡ ವರ್ಗದ ಜಂತುಹುಳುಗಳು ಸಾಮಾನ್ಯವಾಗಿ ದ್ವಿಲೈಂಗಿಕ ರೀತಿಯಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ಇಲ್ಲಿ ಗಂಡು ಹೆಣ್ಣು ಜೀವಿಗಳು ಸದಾ ಸುಮಾರು ಸಮಸಂಖ್ಯೆಯಲ್ಲಿ ಕಂಡುಬರುತ್ತವೆ. ಆದರೆ ಮಣ್ಣಿನಲ್ಲಿ ಸ್ವತಂತ್ರವಾಗಿ ಜೀವಿಸುವ ರ್‍ಯಾಬ್ಡಿಟಿಸ್ (Rhabditis monohysteru) ಜಾತಿಯ ದುಂಡುಹುಳು ಈ ನಿಯಮಕ್ಕೆ ಅಪವಾದ. ಇದರ ಕೆಲವು ಜೀವಪ್ರಭೇದಗಳಲ್ಲಿ ಮೂರು ಬಗೆಯ ಲಿಂಗತನಗಳನ್ನು ಗುರುತಿಸಬಹುದು. (1) ಕೆಲವಲ್ಲಿ ಗಂಡು ಮತ್ತು ಹೆಣ್ಣು ಜೀವಿಗಳೆರಡೂ ಕಂಡುಬರುತ್ತವೆ. ಇಲ್ಲಿ ಗಂಡಿನೊಡನಾಡದ ಹೆಣ್ಣು ಮುಂದಿನ ಪೀಳಿಗೆಯನ್ನು ಉತ್ಪತ್ತಿ ಮಾಡಲಾರದು. ಗಂಡಿನೊಡನಾಡಿ ಸಂಭೋಗ ಪಡೆದ ಹೆಣ್ಣಿನ ಅಂಡಾಣುಗಳು ಉದ್ದೀಪನಗೊಳ್ಳುತ್ತವೆ; ನಿಷೇಚನಗೊಳ್ಳುತ್ತವೆ. ಆದರೆ ಅಂಡಾಣುವನ್ನು ಪ್ರವೇಶಿಸಿದ ಶುಕ್ರಾಣುವು ಅನತಿಕಾಲದಲ್ಲಿಯೇ ಅಪಭ್ರಷ್ಟವಾಗಿ ನಾಶ ಹೊಂದುತ್ತದೆ. ತತ್ಫಲವಾಗಿ ತಂದೆಯಿಂದ ಬಂದ ಕ್ರೋಮೊಸೋಮುಗಳು ಅಂಡಾಣುವಿನಲ್ಲಿ ವಿನಾಶಗೊಳ್ಳುತ್ತವೆ. ಈ ತೆರನ ನಿಷೇಚನಕ್ಕೆ "ಮಿಥ್ಯಾ ನಿಷೇಚನ" (Pseudogamy) ಎಂದು ಹೆಸರು. (2) ಕೆಲವು ಜೀವಪ್ರಭೇದಗಳಲ್ಲಿ ಉಭಯ ಲಿಂಗಿಗಳೂ (Hermaphrodites) ಮತ್ತು ಅಲ್ಪಪ್ರಮಾಣದಲ್ಲಿ ಎಣಿಸುವಷ್ಟು ಗಂಡುಜೀವಿಗಳೂ ಇರುತ್ತವೆ. (3) ಉಳಿದವುಗಳಲ್ಲಿ ಹೆಣ್ಣುಜೀವಿಗಳು ಮಾತ್ರ ಕಂಡು ಬರುತ್ತವೆ. ಇಲ್ಲಿ ಗಂಡುಜೀವಿಗಳಿಲ್ಲದೇ ಇರುವುದರಿಂದ ಇವಕ್ಕೆ ಅನಿಷೇಕಜನನವ ಬೆಳವಣಿಗೆಯೊಂದೇ ಮಾರ್ಗ. ಇಲ್ಲಿಯೂ ಕೂಡ ಅನಿಷೇಕಜನನದ ಹೆಣ್ಣುಗಳು ಭಾಗಶಃ ಉಭಯಲಿಂಗಿಗಳಾಗಿ ಪರಿವರ್ತನೆ ಹೊಂದುತ್ತವೆ. ಇವುಗಳ ಅಂಡಾಶಯದ ಸ್ವಲ್ಪ ಭಾಗದಲ್ಲಿ ಶುಕ್ರಾಣುಗಳು ರೂಪುಗೊಳ್ಳುತ್ತವೆ. ಅಂಡಾಣುಗಳು ಈ ಶುಕ್ರಾಣುಗಳಿಂದ ಉದ್ದೀಪನಗೊಂಡರೆ ಮಾತ್ರ. ಅವು ಮುಂದಿನ ಬೆಳವಣಿಗೆಯ ಹಂತವನ್ನು ಮುಟ್ಟುತ್ತವೆ: ಆದರೆ ಇಲ್ಲಿಯೂ ಕೂಡ ಶುಕ್ರಾಣುವಿನ ನ್ಯೂಕ್ಲಿಯಸು ಅತಿ ಶೀಘ್ರದಲ್ಲಿಯೇ ವಿನಾಶಗೊಳ್ಳುವುದರಿಂದ, ಬೆಳೆಯುವ ಭ್ರೂಣಕ್ಕೆ ಶುಕ್ರಾಣುವಿನ ಕ್ರೋಮೊಸೋಮುಗಳ ಕೊಡಿಗೆಯಿರುವುದಿಲ್ಲ.

ಅನಿಷೇಕಜನನವು ಲೈಂಗಿಕ ರೀತಿಯ ಸಂತಾನೋತ್ಪತ್ತಿಯ ಶ್ರೇಣಿಯಲ್ಲಿ ಅಡ್ಡ ಹಾದಿಯನ್ನು ಹಿಡಿದಂತಿದೆ. ಇದರ ಉಗಮ ವಿಕಾಸಗಳು ಉತ್ಪರಿವರ್ತನೆಯ ಫಲಗಳು. ಸಾಮಾನ್ಯವಾಗಿ ಲೈಂಗಿಕ ಸಂತಾನೋತ್ಪತ್ತಿಯ ವಿಕಾಸದಲ್ಲಿ ಹೆಣ್ಣಿನ ಅಂಡಾಣುವು

ನಿಷೇಚನಗೊಳ್ಳದೆ ಬೆಳೆಯುವಂತಿರುವುದಿಲ್ಲ. ಈ ವಿಶಿಷ್ಟತೆಯಿಂದಲೇ ಅನಿಷೇಚಿತ ಅಂಡಾಣುವು ಅನತಿ ಕಾಲದಲ್ಲಿಯೇ ಕ್ಷಯವಾಗಿ ನಶಿಸಿ ಹೋಗುತ್ತದೆ. ಆದರೆ ಒಮ್ಮ ಹಂತದಲ್ಲಿ ದ್ವಿಲೈಂಗಿಕ ರೀತಿಯ ಸಂತಾನೋತ್ಪತ್ತಿಯಲ್ಲಿ ತಾಯಿಯ ಅಂಡಾಣುವು ನಿಷೇಚನಗೊಳ್ಳದೇ ಉತ್ಪರಿವರ್ತನೆಯ ಫಲವಾಗಿ ಬೆಳವಣಿಗೆ ಹೊಂದುವ ಸಾಮರ್ಥ್ಯ ವನ್ನು ಗಳಿಸುತ್ತದೆ. ಹೆಣ್ಣಿನ ಪ್ರಜನನಗ್ರಂಥಿ ಅಥವಾ ಗೋನ್ಯಾಡ್ ಎಂಬ ವಿಶೇಷವಾದ ಅಂಗದಲ್ಲಿ ಉತ್ಪತ್ತಿಯಾದ ಅಂಡಾಣುವು ಅನಿಷೇಕಜನನದ ರೀತಿಯಲ್ಲಿ ಬೆಳವಣಿಗೆ ಹೊಂದುವುದನ್ನು ಏಕಲೈಂಗಿಕ ಸಂತಾನೋತ್ಪತ್ತಿ (Unisexual reproduction) ಎಂದು ಕರೆಯಬಹುದು. ಇದು ನಿಜವಾಗಿಯೂ ಅಲೈಂಗಿಕ ಸಂತಾನೋತ್ಪತ್ತಿಯಾಗ ಲಾರದು. ಅನಿಷೇಕಜನನದ ರೀತಿಯಲ್ಲಿ, ದ್ವಿಲೈಂಗಿಕ ರೀತಿಯ ಸಂತಾನೋತ್ಪತ್ತಿಯಲ್ಲಿ ಕಂಡುಬರುವ ಹೇರಳವಾದ ವಿವಿಧತೆಗಳಿಗೆ ಅಡೆತಡೆಗಳುಂಟಾಗುತ್ತವೆ. ತತ್ಫಲವಾಗಿ ತಾಯಿಯ ಗುಣಲಕ್ಷಣಗಳೇ ಮುಂದಿನ ಪೀಳಿಗೆಗಳಲ್ಲಿ ಮುಂದುವರಿಯುವಂತಾಗುತ್ತವೆ. ಒಂದುವೇಳೆ ಅಂಡಾಣುವಿನಲ್ಲಿ ಉತ್ಪರಿವರ್ತನೆಗಳುಂಟಾದಲ್ಲಿ ಅವು ಪ್ರಬಲವೇ ಆಗಿರಲಿ ಅಥವಾ ಅಪ್ರಬಲವೇ ಆಗಿರಲಿ—ಅವು ಮುಂದಿನ ಪೀಳಿಗೆಗಳಲ್ಲಿ ಸ್ವಯಂ ಪ್ರಕಟವಾಗು ತ್ತವೆ. ಅಂತಹ ಜೀವಿಗಳ ಅಳಿವು ಉಳಿವು ಪ್ರಕೃತಿ ಕೈವಾಡದ (natural selection) ಕೃಪಾಕಟಾಕ್ಷವನ್ನವಲಂಬಿಸಬೇಕಾಗುತ್ತದೆ. ಇದೇ ಅಲ್ಲದೆ, ಪ್ರಾಣಿಗಳಲ್ಲಿ ಅಪರೂಪ ವಾಗಿರುವ ಕ್ರೋಮೊಸೋಮುಗಳ ಬಹುಗುಣಿತತ್ವ (Polyploid) ಇಲ್ಲಿ ಮೂಡಲು ಅವಕಾಶಗಳಿರುತ್ತವೆ. ಇಂತಹ ಬಹುಗುಣಿತ ಸಂಕುಲಗಳು ಪ್ರಕೃತಿ ಕೈವಾಡದ ತೆಕ್ಕೆಯಲ್ಲಿ ಬದುಕಲು ಸಮರ್ಥವಾಗಿದ್ದರೆ ಅವು ಉಳಿಯುತ್ತವೆ. ಅಂತಹ ಸಂಕುಲಗಳನ್ನು ಸೊಲೆನೋಬಿಯ ಟ್ರೈಕೆಟ್ರೆಲ್ಲ ಎಂಬ ಪತಂಗ ಹಾಗೂ ಆರ್ಟೀಮಿಯ ಜಾತಿಯ ಕಠಿಣಚರ್ಮಿಯಲ್ಲೂ ಕಾಣಬಹುದು.

ಕೃತಕ ಅಥವಾ ಪ್ರಾಯೋಗಿಕ ಅನಿಷೇಕಜನನ

ಅನಿಷೇಚಿತ ಅಂಡಾಣುಗಳಿಗೆ ಸಾಮಾನ್ಯವಾಗಿ ಆಯುಸ್ಸು ಕಡಿಮೆ. ಆದುದರಿಂದ ಅವು ಅನತಿಕಾಲದಲ್ಲಿಯೇ ಸತ್ತು ಹೋಗುತ್ತವೆ. ಕೆಲವು ಜೀವಪ್ರಭೇದಗಳಲ್ಲಿ ಅಂಡಾಶಯದಿಂದ ಹೊರಬಂದ ಅಂಡಾಣುಗಳು ಒಂದರಿಂದ ಹಲವು ದಿನಗಳವರೆಗೆ ಬದುಕಿರಬಲ್ಲವು: ಕ್ರಿಯಾಚಟುವಟಿಕೆಗಳಿಂದ ಕೂಡಿರಬಲ್ಲವು: ನಿಷೇಚನಗೊಳ್ಳುವ ಸಾಮರ್ಥ್ಯವನ್ನು ಪಡೆದಿರಬಲ್ಲುವು. ಆದರೆ ಅವುಗಳ ಬದುಕಿಗೂ ಸಾಮರ್ಥ್ಯಕ್ಕೂ ಕೆಲವು ಇತಿಮಿತಿಗಳಿವೆ. ಆ ಮಿತಿಯನ್ನು ಮೀರಿದ ಪಕ್ಷಕ್ಕೆ ಅವುಗಳಿಗೆ ಸಾವು ಕಟ್ಟಿಟ್ಟದ್ದು. ಆದರೆ ಹಲವು ಪ್ರಾಣಿಗಳ ಅನಿಷೇಚಿತ ಅಂಡಾಣುಗಳನ್ನು ಕೆಲವು ಬಗೆಯ ರಾಸಾಯನಿಕ ಭೌತಿಕ ಹಾಗೂ ಯಾಂತ್ರಿಕ ಘಟಕಗಳ ಸಹಾಯದಿಂದ ಉದ್ದೀಪನಗೊಳಿಸಿ ಬೆಳವಣಿ ಗೆಯ ಹಂತಕ್ಕೆ ಕೊಂಡೊಯ್ಯಬಹುದು. ಈ ನಿಟ್ಟಿನಲ್ಲಿ ನಡೆಯುವ ಪ್ರಯೋಗ

ಪರೀಕ್ಷೆಗಳು ಕೃತಕ ಅಥವಾ ಪ್ರಾಯೋಗಿಕ ಅನಿಷೇಕಜನನ ಎಂದೆನಿಸಿಕೊಳ್ಳುತ್ತವೆ. ಅಲ್ಲದೆ ಇವು ವಿಪುಲವಾದ ಪ್ರಯೋಗಾತ್ಮಕ ಅಧ್ಯಯನಗಳಿಗೆ ಎಡೆಕೊಟ್ಟಿವೆ.

ಕೃತಕ ಅನಿಷೇಕ ಜನನವು ಪರಿಚಯವಾಗುವುದಕ್ಕೆ ಬಹು ಹಿಂದೆಯೇ ಅನಿಷೇಚಿತ ಅಂಡಾಣುಗಳಲ್ಲಿ ಕೋಶಿಕ ವಿಭಜನೆಯ ಚಟುವಟಿಕೆಗಳನ್ನು ಉಂಟುಮಾಡಬಹುದೆಂಬುದನ್ನು ಕಂಡುಹಿಡಿಯಲಾಯಿತು. 1886ರಲ್ಲಿ ಪ್ರಪ್ರಥಮವಾಗಿ ಟಿಕೋಮಿರೋಫ್ (A. Tichomiroff) ಎಂಬುವರು ರೇಷ್ಮೆಹುಳುವಿನ ಅಂಡಾಣುಗಳನ್ನು ಪ್ರಾಯೋಗಿಕವಾಗಿ ಅನಿಷೇಕಜನನದ ರೀತಿಯಲ್ಲಿ ಉದ್ದೀಪನಗೊಳಿಸಬಹುದೆಂದು ತೋರಿಸಿಕೊಟ್ಟಿದ್ದರು. ಆದರೆ ಅವರ ಸಂಶೋಧನೆಗಳು ಆಗಿನ ಕಾಲದ ಭ್ರೂಣಶಾಸ್ತ್ರಜ್ಞರ ಗಮನವನ್ನು ಹೆಚ್ಚು ಸೆಳೆಯಲಿಲ್ಲ. ಹೆರ್ಟ್‌ವಿಗ್ (R. Hertwig) ಅವರು 1896ರಲ್ಲಿ ಕಡಲುವಾಸಿ ಮುಳ್ಳುಗೊಂಡೆ (Sea urchin) ಯ ದೇಹದಿಂದ ಹೊರಬಂದ ಪರಿಪಕ್ವವಾದ ಅಂಡಾಣುಗಳನ್ನು ಕ್ಲೋರೋಫಾರಂ ಅಥವಾ ಸ್ಟ್ರಿಕ್ನೀನ್ ಎಂಬ ರಾಸಾಯನಿಕ ವಸ್ತುಗಳಿರುವ ಮಾಧ್ಯಮದಲ್ಲಿಟ್ಟರೆ ಅವುಗಳಲ್ಲಿ ಬೆಳವಣಿಗೆಯ ಚಟುವಟಿಕೆಗಳನ್ನು ಮೂಡಿಸಬಹುದೆಂಬುದನ್ನು ಕಂಡುಹಿಡಿದರು. 1896–1900ರ ಅವಧಿಯಲ್ಲಿ ಮೋರ್ಗನ್ (T. H. Morgan). ಮೀಡ್ (A. D. Mead), ಲೋಎಬ್ (J. Loeb) ಮೊದಲಾದವರು ಮುಳ್ಳುಗೊಂಡೆ, ನಕ್ಷತ್ರಮೀನು (Star fish), ಕೆಲವು ವಲಯವಂತಗಳು. ಕೆಲವು ಮೃದ್ವಂಗಿ ಹಾಗೂ ಕಪ್ಪೆಗಳ ಅಂಡಾಣುಗಳನ್ನು ಕ್ರಿಯಾತ್ಮಕ ಸಮನಾಮಿತಿಯೊಳಗಿನ ಲವಣದ್ರಾವಣಗಳಲ್ಲಿಟ್ಟು ಅವುಗಳಲ್ಲಿ ಬೆಳವಣಿಗೆಯನ್ನು ಉದ್ದೀಪನ ಮಾಡುವುದರಲ್ಲಿ ಯಶಸ್ವಿಯಾದರು. ಈ ಪ್ರಾಣಿಗಳೆಲ್ಲ ಸ್ವಾಭಾವಿಕವಾಗಿ ತಮ್ಮ ಅಂಡಾಣುಗಳನ್ನು ಪರಿಸರದಲ್ಲಿ ಹೊರಗೆಡೆದು ಗಂಡಿನ ಶುಕ್ರಾಣುಗಳಿಂದ ನಿಷೇಚನ ಮಾಡಿಕೊಂಡು ಬೆಳೆಯುವಂತವು. ಇವರಲ್ಲಿ ಲೋಎಬ್ (Loeb), ಡೆಲಾಗೆ (Y. Delage). ಬಾತ್ತೈಯೋ (E. Battaiuon) ಮೊದಲಾದವರು ಅಂಡಾಣುಗಳಲ್ಲಿ ಬೆಳವಣಿಗೆಯನ್ನು ಮುಂದುವರಿಸಿ ಸಹಜ ಸಾಮಾನ್ಯ ಲಾರ್ವಗಳಂತಿರುವ ಮರಿಜೀವಿಗಳನ್ನು ಪಡೆದುದೇ ಅಲ್ಲದೆ, ಅವು ರೂಪಪರಿವರ್ತನೆ ಹೊಂದಿ ಪ್ರೌಢಾವಸ್ಥೆಗೆ ಬರುವವರೆಗೂ ಬೆಳೆಸಿದರು.

ಪ್ರಯೋಗಾತ್ಮಕವಾಗಿ ಅನಿಷೇಕಜನನದ ಬೆಳವಣಿಗೆಯಲ್ಲಿ ಉಪಯೋಗಿಸುವ ಕಾರಕ ಅಥವಾ ಘಟಕಗಳು ಬಗೆಬಗೆಯಾಗಿರುತ್ತವೆ. ಇವನ್ನು ಮೂರು ಬಗೆಗಳಾಗಿ ವಿಂಗಡಿಸಬಹುದು: (1) ರಾಸಾಯನಿಕ ಘಟಕಗಳು: ಪರಿಸರದಲ್ಲಿ ಆಮ್ಲೀಯತೆ ಅಥವಾ ಕ್ಷಾರೀಯತೆಯನ್ನು ಅಧಿಕಗೊಳಿಸುವ ರಾಸಾಯನಿಕ ವಸ್ತುಗಳು, ಇಂಗಾಲದ ಡೈ ಆಕ್ಸೈಡ್. ಪೊಟ್ಯಾಸಿಯಂ. ಮೆಗ್ನೀಸಿಯಂ ಅಥವಾ ಸೋಡಿಯಂಗಳ ಕ್ಲೋರೈಡುಗಳು, ಮೇದಸ್ಸಿನ ವಿಲಾಯಕಗಳು ಇತ್ಯಾದಿ. (2) ಭೌತಿಕ ಘಟಕಗಳು: ವಿದ್ಯುದ್ದೀಪನಗೊಳಿಸುವಿಕೆ. ಶಾಖ ಅಥವಾ ಶೀತವನ್ನು ಒಡ್ಡುವಿಕೆ. ರೇಡಿಯಂ ಮತ್ತು ಅತಿನೀಲ

ಕಿರಣಗಳಿಗೆ ಒಳಪಡಿಸುವಿಕೆ, ಒತ್ತಡವನ್ನು ಅಧಿಕಗೊಳಿಸುವುದು ಇತ್ಯಾದಿ. 3) ಯಾಂತ್ರಿಕ ಘಟಕಗಳು: ಅಂಡಾಣುಗಳನ್ನು ಸೂಜಿಯಿಂದ ಅಥವಾ ಪ್ಲಾಟಿನಂ ತಂತಿಯಿಂದ ಚುಚ್ಚುವುದು ಅಂಡಾಣುಗಳನ್ನು ಅಲ್ಲಾಡಿಸುವುದು ಇತ್ಯಾದಿ.

ಒಂದೇ ಜಾತಿಯ ಅಂಡಾಣುಗಳನ್ನು ವಿವಿಧ ಬಗೆಯ ಘಟಕಗಳಿಗೆ ಒಡ್ಡಿ ಕೃತಕವಾಗಿ ಉದ್ದೀಪನಗೊಳಿಸಬಹುದು. ಉದಾಹರಣೆಗೆ, ಅರ್ಬೇಸಿಯ (Arbacia) ಜಾತಿಯ ಮುಳ್ಳುಗೊಂಡೆಯ ಅಂಡಾಣುಗಳಿಗೆ ಪರಿಸರದಲ್ಲಿ ಆಮ್ಲೀಯತೆಯನ್ನು ಅಥವಾ ಕ್ಷಾರೀಯತೆಯನ್ನು ಅಧಿಕಗೊಳಿಸುವುದರಿಂದ ಅದರಲ್ಲಿ ಬೆಳವಣಿಗೆಯ ಚಟು ವಟಿಕೆಗಳನ್ನು ಪ್ರೇರೇಪಿಸಬಹುದು. ಇದೇ ಫಲಿತಾಂಶಗಳನ್ನು ಅಂಡಾಣುಗಳನ್ನು ಶಾಖ ಅಥವಾ ಶೀತ ಇಲ್ಲವೆ ಅತಿನೀಲಕಿರಣ, ರೇಡಿಯಂ ಕಿರಣಗಳಿಗೆ ಒಡ್ಡುವುದರಿಂದಲೂ ಪಡೆಯಬಹುದು. ಆದರೆ ಈ ಎಲ್ಲ ಘಟಕಗಳೂ ಬೆಳೆಯುವ ಭ್ರೂಣಗಳ ಮೇಲೆ ಒಂದೇ ಬಗೆಯ ಪ್ರಭಾವವನ್ನು ಬೀರಲಾರವು. ಅಂತೂ ಹಲವು ಬಗೆಯ ಘಟಕಗಳು ಒಂದೇ ಬಗೆಯ ಫಲಿತಾಂಶಗಳನ್ನು ಕೊಟ್ಟಿರುವ ಕೆಲವು ನಿದರ್ಶನಗಳಿವೆ.

ಆದರೆ ಕೆಲವು ಜೀವಪ್ರಭೇದಗಳ ಅಂಡಾಣುಗಳು ಉದ್ದೀಪನಕ್ಕೆ ಕೆಲವು ಬಗೆಯ ಘಟಕಗಳು ಪ್ರಭಾವಶಾಲಿಯಾಗಿರುತ್ತವೆ. ಕೆಲವು ಅಂಡಾಣುಗಳ ಉದ್ದೀಪನಕ್ಕೆ ಪ್ರಭಾವಶಾಲಿಯಾದ ಘಟಕಗಳು ಇತರ ಪ್ರಾಣಿಗಳ ಅಂಡಾಣುಗಳನ್ನು ಉದ್ದೀಪನ ಗೊಳಿಸುವಷ್ಟು ಸಮರ್ಥವಾಗಿರುವುದಿಲ್ಲ. ಉದಾಹರಣೆಗೆ ತಾಲಸೀಮ (Thalasseema) ಜಾತಿಯ ವಲಯದಂತಹ ಅಥವಾ ನಕ್ಷತ್ರಮೀನಿನ ಮೊಟ್ಟೆಗಳನ್ನು ಕೇವಲ ಇಂಗಾಲದ ಡೈಆಕ್ಸೈಡಿನಿಂದ ಉದ್ದೀಪನಗೊಳಿಸಬಹುದು. ಆದರೆ ಈ ಪ್ರಯೋಗ ಕಡಲಿನ ಮುಳ್ಳು ಗೊಂಡೆಗಳ ಅಂಡಾಣುಗಳಿಗೆ ಪ್ರಭಾವಶಾಲಿಯಾಗಿರುವುದಿಲ್ಲ. ರಾನ ಪಾಲುಸ್ಟ್ರೀಸ್ (Rana palustris) ಎಂಬ ಅಮೆರಿಕದ ಕಪ್ಪೆಯ ಅಂಡಾಣುಗಳನ್ನು ಸೂಜಿ ಯಿಂದ ಚುಚ್ಚಿದರೇ ಸಾಕು. ಈ ಮೊಟ್ಟೆಗಳಲ್ಲಿ ಬೆಳವಣಿಗೆಯ ಚಟುವಟಿಕೆಗಳಿಗೆ ನಾಂದಿಯಾಗುತ್ತದೆ. ಆದರೆ ಯೂರೋಪಿನ ರಾನ ಫುಸ್ಕ (Rana fusca) ಎಂಬ ಕಪ್ಪೆಯ ಅಂಡಾಣುಗಳ ಉದ್ದೀಪನಕ್ಕೆ ಸೂಜಿಯಿಂದ ಚುಚ್ಚುವುದರ ಜೊತೆಗೆ, ಸೂಜಿಯ ಮೊನೆಯನ್ನು ಪೂರ್ವಭಾವಿಯಾಗಿ ರಕ್ತದಲ್ಲಿ ಅದ್ದಿದರೆ ಮಾತ್ರ ಸಾಧ್ಯವಾಗುತ್ತದೆ.

ಒಂದು ವೇಳೆ ಅಂಡಾಣುವಿಗೆ ಸೂಕ್ತವಾದ ಘಟಕಗಳಿಗೆ ಬದಲಾಗಿ ಇತರ ಘಟಕಗಳನ್ನು ಉಪಯೋಗಿಸಿದ್ದೇ ಆದರೆ ಉದ್ದೀಪನಗೊಂಡು ಬೆಳೆಯುವ ಅಂಡಾಣು ವಿನಲ್ಲಿ ಹಲವು ಬಗೆಯ ರೋಗಕಾರಕವಾದ ಅಥವಾ ವಿಕೃತಿರೂಪದ ಪ್ರಕ್ರಿಯೆಗಳು ಕಂಡುಬರುವುದುಂಟು. ತತ್ಫಲವಾಗಿ ಬೆಳೆಯುವ ಲಾರ್ವ ಅಥವಾ ಡಿಂಬ ಸಹಜ ಸಾಮಾನ್ಯ ಲಾರ್ವವನ್ನು ಹೋಲುವುದೇ ಇಲ್ಲ.

ಮೇಲೆ ನಿರೂಪಿಸಿದ ಹಲವಾರು ಘಟಕಗಳ ಸ್ವರೂಪವನ್ನು ಪರೀಕ್ಷಿಸಿದರೆ, ಅವುಗಳಲ್ಲಿ ಅಧಿಕ ಸಂಖ್ಯೆಯ ಘಟಕಗಳು ಜೀವಕೋಶವನ್ನು ಅಥವಾ ಅಂಡಾಣುವನ್ನು

ಸಾಕಷ್ಟು ಪ್ರಮಾಣದಲ್ಲಿ ನಷ್ಟಪಡಿಸುವ ಸಾಮರ್ಥ್ಯವುಳ್ಳವು. ಅಂದರೆ ಅಂಡಾಣು ಗಳನ್ನು ಈ ಘಟಕಗಳನ್ನೊಳಗೊಂಡ ವಾತಾವರಣದಲ್ಲಿ ಹೆಚ್ಚು ಕಾಲ ಬಿಟ್ಟರೆ ಅಥವಾ ಪರಿಸರದಲ್ಲಿ ಅವುಗಳ ಪರಿಮಾಣವನ್ನು ಅಧಿಕಗೊಳಿಸಿದರೆ ಅಂಡಾಣುವಿನಲ್ಲಿ ಅನಿಷೇಕ ಜನನವಾಗುವುದರ ಬದಲು ಅದರ ನಾಶವಾಗುವುದನ್ನು ಕಾಣಬಹುದು.

ಪ್ರಾರಂಭದಲ್ಲಿ ಲೋಎಬ್ ಅವರು ಮುಳ್ಳುಗೊಂಡೆಯ ಅಂಡಾಣುಗಳಿಗೆ ಕೇವಲ ಒಂದೇ ಒಂದು ರಾಸಾಯನಿಕ ಕಾರಕವನ್ನೊದ್ದಿ [ಅಂಡಾಣುಗಳನ್ನು ಅತಿಪರಾಸಾರಿಯಾದ (Hypertonic) ಸಮುದ್ರದ ನೀರಿನಲ್ಲಿಡುವುದು] ಅವುಗಳಲ್ಲಿ ಬೆಳವಣಿಗೆಯ ಚಟುವಟಿಕೆಗಳನ್ನು ಪ್ರಚೋದಿಸಿದರು. ಈ ಪ್ರಯೋಗ ಸಾಕಷ್ಟು ಪ್ರಮಾಣದ ಯಶಸ್ವಿಯಾದ ಫಲಿತಾಂಶಗಳನ್ನು ಕೊಡಲಿಲ್ಲ. ಇದಕ್ಕಾಗಿ ಅವರು ತಮ್ಮ ಪ್ರಯೋಗ ವನ್ನು ಉತ್ತಮಪಡಿಸಿ ಹೆಚ್ಚು ಪರಿಣಾಮಕಾರಿಯಾದ "ಎರಡು ಘಟಕಗಳ ಬಳಕೆ"ಯನ್ನು ಜಾರಿಗೆ ತಂದರು. ಈ ಪ್ರಯೋಗ ಹೆಚ್ಚು ತೃಪ್ತಿಕರವಾದ ಫಲಿತಾಂಶಗಳನ್ನು ಕೊಟ್ಟಿತು. ಅವರು ಅನುಸರಿಸಿದ ಪ್ರಯೋಗ ಈ ರೀತಿಯದು: ಮೊದಲು ಮುಳ್ಳುಗೊಂಡೆಯ ಅನಿಷೇಚಿತ ಅಂಡಾಣುಗಳನ್ನು ಬ್ಯೂಟಿರಿಕ್ ಆಮ್ಲದಿಂದ ಕೂಡಿದ ಸಮುದ್ರದ ನೀರಿನಲ್ಲಿ (25 Vol. ಸಮುದ್ರದ ನೀರು + 1 Vol IN ಬ್ಯೂಟಿರಿಕ್ ಆಮ್ಲ) 1–3 ನಿಮಿಷಗಳ ಕಾಲ ಇಟ್ಟರು. ಅನಂತರ ಅಂಡಾಣುಗಳನ್ನು ಶುದ್ಧ ಸಮುದ್ರದ ನೀರಿನಲ್ಲಿ 15 ನಿಮಿಷಗಳ ಕಾಲ ವರ್ಗಾಯಿಸಿದರು. ತದನಂತರ ಆ ಅಂಡಾಣುಗಳನ್ನು ಅತಿಪರಾಸಾರಿಯಾದ ಸಮುದ್ರದ ನೀರಿನಲ್ಲಿ (4 Vol. ಸಮುದ್ರದ ನೀರು + 1Vol. 2.5 N ಸೋಡಿಯಂ ಕ್ಲೋರೈಡು ಅಥವಾ ಅಡಿಗೆ ಉಪ್ಪು) ಹತ್ತು ನಿಮಿಷಗಳ ಕಾಲ ಬಿಟ್ಟು ಕೊನೆಗೆ ಶುದ್ಧ ಸಮುದ್ರದ ನೀರಿನಲ್ಲಿ ಅಂಡಾಣುಗಳನ್ನು ಕೊಂಡೊಯ್ದರು. ಈ ಸಂವಿಧಾನದಿಂದ ಅಧಿಕ ಸಂಖ್ಯೆಯ ಅಂಡಾಣುಗಳು ಸಾಮಾನ್ಯ ರೀತಿಯ ಬೆಳವಣಿಗೆ ಹೊಂದಿದವು.

ಲೋಎಬ್ ಅವರು ತಮ್ಮ ಪ್ರಯೋಗ ಪ್ರಣಾಳಿಕೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು ಪ್ರತಿಘಟ್ಟದಲ್ಲಿಯೂ ಏನೇನಾಗುತ್ತದೆಯೆಂದು ವಿವರಿಸತೊಡಗಿದರು. ಆದರೆ ಅವರ ತರ್ಕಬದ್ಧವಾದ ವಿಶ್ಲೇಷಣೆ ಕಾಲಕ್ರಮೇಣ ಮುರಿದುಬೀಳುವಂತಾಯಿತು. ತಮ್ಮ ಪ್ರಯೋಗಗಳಲ್ಲಿ ಎರಡು ಘಟಕಗಳ ಬಳಕೆಯನ್ನು ತಿರುವುಮುರುವು ಮಾಡಿದ ಮೇಲೆ ತೃಪ್ತಿಕರವಾದ ಫಲಿತಾಂಶಗಳು ದೊರೆತವು. ಅಲ್ಲದೆ ಅದೇ ಬಗೆಯ ಫಲಿತಾಂಶಗಳನ್ನು ಕೇವಲ ಒಂದೇ ಒಂದು ಘಟಕದ ಬಳಕೆಯಿಂದಲೇ (ಒಂದು ನಿರ್ದಿಷ್ಟ ಪರಿಮಾಣದಲ್ಲಿ ಉಪಯೋಗಿಸುವುದರಿಂದ) ತೃಪ್ತಿಕರವಾದ ಯಶಸ್ಸನ್ನು ಪಡೆಯ ಬಹುದೆಂಬ ಆಧಾರಗಳು ದೊರೆತವು.

ಕ್ರೋಮೋಸೋಮುಗಳಿಗೆ ಸಂಬಂಧಿಸಿದಂತೆ ಕೃತಕ ಅನಿಷೇಕಜನನದಲ್ಲಿಯೂ ಕೂಡ ಏಗುಣಿತ ಮತ್ತು ದ್ವಿಗುಣಿತ ಬಗೆಯ ಅನಿಷೇಕಜನನಗಳನ್ನು ಕಾಣಬಹುದು.

ಮುಳ್ಳುಗೊಂಡೆಯು ಅಂಡಾಣುವಿನಲ್ಲಿ ಪರಿಪಕ್ವತೆಯ ವಿಭಜನೆಗಳ ಮುಕ್ತಾಯಗೊಂಡಿರುವುದರಿಂದ ಅದರಲ್ಲಿ ಕ್ರೋಮೋಸೋಮುಗಳ ಒಂದು ತಂಡ ಅಥವಾ ಅಗುಣಿತ ಸಂಖ್ಯೆ ಕಂಡುಬರುತ್ತದೆ. ಕೇವಲ ತಾಯಿಯ ಕ್ರೋಮೋಸೋಮುಗಳನ್ನುಳ್ಳ ಈ ಅಂಡಾಣುವಿನಿಂದ ಬೆಳೆದ ಜೀವಿ ಅಗುಣಿತ ಸಂಖ್ಯೆಯ ಕ್ರೋಮೋಸೋಮುಗಳಿಂದ ಕೂಡಿರುತ್ತದೆ.

ಆದರೆ ನಕ್ಷತ್ರಮೀನು, ಮೃದ್ವಂಗಿ, ವಲಯವಂತಗಳು ಹಾಗೂ ಕಪ್ಪೆಗಳ ಅಂಡಾಣುಗಳನ್ನು ಪರಿಪಕ್ವತೆಯ ವಿಭಜನೆಗಳು ಪೂರ್ಣಗೊಳ್ಳುವ ಪೂರ್ವಭಾವಿಯಾಗಿಯೇ ಅನಿಷೇಕಜನನವನ್ನುಂಟುಮಾಡಬಹುದು. ಅಂತಹ ಸಂದರ್ಭಗಳಲ್ಲಿ ಬೆಳೆಯುವ ಭ್ರೂಣದ ಕ್ರೋಮೋಸೋಮುಗಳ ಸಂಖ್ಯೆ ಬೇರೆಯಾಗಿರುತ್ತದೆ. ತಾಲಸೀಮ ಜಾತಿಯ ವಲಯವಂತ ಕ್ರಿಮಿಯಲ್ಲಿ ಪ್ರಾಯೋಗಿಕ ಘಟಕಗಳ ಬಳಕೆಯಿಂದ ಅರ್ಧದಲ್ಲಿಯೇ ನಿಂತಿದ್ದ ಪರಿಪಕ್ವತೆಯ ವಿಭಜನೆಯನ್ನು ಪೂರ್ಣಗೊಳಿಸಿ ಅಂಡಾಣುವು ಅನಿಷೇಕಜನನ ಹೊಂದಿ ಬೆಳವಣಿಗೆಯನ್ನು ಮುಂದುವರಿಸುತ್ತದೆ. ಈ ಸಂದರ್ಭದಲ್ಲಿ ರೂಪುಗೊಳ್ಳುವ ಲಾರ್ವದಲ್ಲಿ ಕೇವಲ ಅಗುಣಿತ ಸಂಖ್ಯೆಯ ಕ್ರೋಮೋಸೋಮುಗಳಿರುತ್ತವೆ. ಆದರೆ ಮ್ಯಾಕ್ಟ್ರ (Mactra) ಜಾತಿಯ ಮೃದ್ವಂಗಿ ಮೊದಲಾದ ಕೆಲವು ಪ್ರಾಣಿಗಳ ಅಂಡಾಣುಗಳಲ್ಲಿ ಪ್ರಾರಂಭದಲ್ಲಿಯೇ ಅಗುಣಿತ ಸಂಖ್ಯೆಯ ಕ್ರೋಮೋಸೋಮುಗಳಿದ್ದರೂ ಕಾಲಕ್ರಮೇಣ ಬಗೆಬಗೆಯ ರೀತಿಯಲ್ಲಿ ದ್ವಿಗುಣಿತ ಸ್ಥಿತಿ ಪ್ರಾಪ್ತವಾಗುತ್ತದೆ.

ಹಲವು ಬಗೆಯ ಮೇಲ್ಮಟ್ಟದ ಪ್ರಾಣಿಗಳಲ್ಲಿ ಕೃತಕ ಅನಿಷೇಕಜನನದ ಬೆಳವಣಿಗೆಯಿಂದ ಪ್ರೌಢಜೀವಿಗಳನ್ನು ಪಡೆದಿದ್ದಾರೆ. ಲೈಂಗಿಕವಾಗಿ ಪ್ರಾಯಕ್ಕೆ ಬಂದ ರೇಷ್ಮೆ ಹುಳುವಿನ ಅಂಡಾಣುಗಳನ್ನು ಶಾಖ ಮತ್ತು ಕೆಲವು ಬಗೆಯ ದುರ್ಬಲ ಆಮ್ಲಗಳ ಸಹಾಯದಿಂದ ಉದ್ದೀಪನಗೊಳಿಸಿ ಬೆಳವಣಿಗೆಯ ಪಥಕ್ಕೆ ನೂಕಬಹುದು. ಕಾರ್ಪ್ (Carp) ಮೀನುಗಳ ಮೊಟ್ಟೆಗಳನ್ನು ಮನುಷ್ಯನ ಜೊಲ್ಲುರಸದಿಂದ ಅಥವಾ ವಿದ್ಯುತ್ತಿನ ಬಳಕೆಯಿಂದ ಉದ್ದೀಪನಗೊಳಿಸಬಹುದು. ಕೆಲವು ಕಪ್ಪೆಗಳ ಮೊಟ್ಟೆಗಳನ್ನು ಚೂಪಾದ ಸೂಜಿ ಅಥವಾ ಪ್ಲಾಟಿನಂ ತಂತಿಯಿಂದ ಚುಚ್ಚಿ ಬೆಳವಣಿಗೆಯನ್ನು ಪ್ರಚೋದಿಸಿ ಮರಿಗಪ್ಪೆಗಳನ್ನು ಪಡೆಯಬಹುದು. ಸಸ್ತನಿಗಳಲ್ಲಿ ಪ್ರಾಯೋಗಿಕ ಅನಿಷೇಕಜನನವನ್ನು ಮಾಡಿ ಸಫಲರಾಗಿರುವ ಕೀರ್ತಿ ಎರಡು ಸಂಶೋಧನಾಲಯಗಳಿಗೆ ಸಲ್ಲುತ್ತದೆ. ಹಾರ್ವರ್ಡ್ ವಿಶ್ವವಿದ್ಯಾನಿಲಯದ ಗ್ರೆಗೊರಿ ಪಿಂಕಸ್ (Gregory Pincus) ಅವರು 1936-40 ವರ್ಷಗಳ ಅವಧಿಯಲ್ಲಿಯೇ ಏಳು ಅನಿಷೇಕಜನನದ ಮೊಲಗಳನ್ನು ಬೆಳೆಸಿದ್ದಾರೆ. ಇವರು ತಾಯಿಯ ಅಂಡಾಶಯದಲ್ಲಿ ಪೂರ್ಣವಾಗಿ ಬೆಳೆದ ಅಂಡಾಣುಗಳಿಗೆ ರಾಸಾಯನಿಕ ಹಾಗೂ ಶಾಖದ ಅಭಿಕ್ರಿಯೆಗಳನ್ನು ಒಡ್ಡಿ ಅವುಗಳನ್ನು ಉದ್ದೀಪನಗೊಳಿಸಿದರು. ಹೀಗೆ ಸಕ್ರಿಯಗೊಂಡು ಬೆಳೆಯುತ್ತಿರುವ ಮೊಟ್ಟೆಗಳನ್ನು ಕನ್ಯಾವಸ್ಥೆಯಲ್ಲಿಯೇ ಇರುವ ಹೆಣ್ಣು ಮೊಲದ ಗರ್ಭಾಶಯಕ್ಕೆ ವರ್ಗಾಯಿಸಿ ಬೆಳವಣಿಗೆಯನ್ನು

ಮುಂದುವರಿಸಿದರು. ಸಾಕುತಾಯಿಯ ಗರ್ಭಾಶಯದಲ್ಲಿ ಭ್ರೂಣಗಳು ಪೂರ್ಣ ಬೆಳವಣಿಗೆ ಹೊಂದಿ ಕೊನೆಗೆ ಅವುಗಳ ಜನನವಾದುವು. ಹಾನೆಮನ್ ಮೆಡಿಕಲ್ ಕಾಲೇಜಿನ ಹರ್ಬರ್ಟ್ ಷಾಪಿರೋ ಅವರು 1941ರಲ್ಲಿ ಇದೇ ತಂತ್ರಕೌಶಲವನ್ನು ಮುಂದುವರಿಸಿ ಯಶಸ್ವಿಯಾಗಿದ್ದಾರೆ. ಅವರು ಕನ್ಯಾವಸ್ಥೆಯಲ್ಲಿದ್ದ ಹೆಣ್ಣು ಮೊಲದ ಉದರಭಾಗದ ಇಕ್ಕೆಡೆಗಳಿಗೆ ಮಂಜುಗಡ್ಡೆಗಳನ್ನು ಕಟ್ಟಿ ಆ ಪ್ರದೇಶವನ್ನು ಅತ್ಯಧಿಕವಾಗಿ ಶೀತಗೊಳಿಸಿದರು. ಇದರ ಫಲವಾಗಿ ಅಂಡಾಶಯಗಳಲ್ಲಿ ಅಂಡೋತ್ಸರ್ಜನೆಯಾಯಿತು. ಅಂಡಾಶಯದಿಂದ ಹೊರಬಿದ್ದ ಅಂಡಾಣುಗಳು ಅಂಡವಾಹಿನಿಯನ್ನು ಹೊಕ್ಕು ಅನಿಷೇಕಜನನದ ರೀತಿಯಲ್ಲಿಯೇ ಬೆಳವಣಿಗೆ ಹೊಂದಲಾರಂಭಿಸಿದುವು. ತಾಯಿಯ ಗರ್ಭದಲ್ಲಿ ಮರಿಗಳು ಪೂರ್ಣ ಬೆಳವಣಿಗೆ ಹೊಂದಿ ಕೊನೆಗೆ ಅವುಗಳ ಜನನವಾಯಿತು. ಈ ಬಗೆಯ ಫಲಪ್ರದವಾದ ಪ್ರಯೋಗ ಪರೀಕ್ಷೆಗಳು ಪಂಡಿತ ಪಾಮರರನ್ನೆಲ್ಲ ಚಕಿತಗೊಳಿಸಿವೆ. ಆದರೂ ಈ ಪ್ರಯೋಗಗಳು ಬೆಳವಣಿಗೆಯ ಪ್ರಕ್ರಿಯೆಗಳನ್ನು ಕೂಲಂಕಷವಾಗಿ ವಿವರಿಸುವಷ್ಟು ಸಮರ್ಥವಾಗಿಲ್ಲದೇ ಉಳಿದಿವೆ!

ಆಧಾರ ಗ್ರಂಥಗಳು

SUOMALAINEN, E., (1950), *Parthenogenesis in Animals. Advances in Genetics*, Vol. 3. p. 193–253.

WHITE, M.J.D. (1954), *Animal Cytology and evolution*, Cambridge Univ Press,

WILSON, E. B. (1925), *The Cell in development and Heredity*, Macmillan, Newyork.

ಕದಂಬರ ವಂಶಮೂಲ — ಒಂದು ಜಿಜ್ಞಾಸೆ

ಎಚ್. ವಿ. ಶ್ರೀನಿವಾಸಮೂರ್ತಿ

ಕರ್ನಾಟಕದ ಇತಿಹಾಸದಲ್ಲಿ ಶಾತವಾಹನರ ಆಧಿಪತ್ಯ ಅಳಿದಮೇಲೆ ಎರಡನೇ ಕರ್ನಾಟಕ ಸಾಮ್ರಾಜ್ಯ ಸ್ಥಾಪಿಸಿದ ಕೀರ್ತಿ ಬನವಾಸಿಯ ಕದಂಬರಿಗೆ ಸಲ್ಲತಕ್ಕದ್ದಾಗಿದೆ. ಅವರು ಕ್ರಿ. ಶ. ಮೂರನೇ ಶತಮಾನದ ಅಂತ್ಯದಿಂದ ಏಳನೇ ಶತಮಾನದ ಮಧ್ಯದವರೆಗೆ, ಸುಮಾರು 375 ವರ್ಷಗಳ ಕಾಲ ಆಳಿದ ಮೇಲೆ ಆ ವಂಶದ ಇತರ ಶಾಖೆಗಳಾದ ಹಾನುಗಲ್ಲು, ಗೋವೆ, ಬಯಲ್ ನಾಡು ಮತ್ತು ಇತರ ಕದಂಬ ಶಾಖೆಗಳು ಕ್ರಿ. ಶ. ಹತ್ತನೇ ಶತಮಾನದಿಂದ ಹದಿನಾಲ್ಕನೇ ಶತಮಾನದ ತನಕ ಕರ್ನಾಟಕದ ಹಲವು ಭಾಗಗಳಲ್ಲಿ ಮೂಲ ಕದಂಬರ ಪ್ರತಿನಿಧಿಗಳಾಗಿ ಕರ್ನಾಟಕ ಸಂಸ್ಕೃತಿಯ ಹಿರಿಮೆಗೆ ಹಲವು ರೀತಿಯಲ್ಲಿ ಶ್ರಮಿಸಿದರು. ಕದಂಬರ ಕೀರ್ತಿ ದಕ್ಷಿಣಾಪಥದಲ್ಲಿಯೇ ಅಲ್ಲದೆ ಉತ್ತರ ಭಾರತದಲ್ಲಿಯೂ ವ್ಯಾಪಿಸಿದ್ದಿತು. ಅವರ ಸಮಕಾಲೀನ ರಾಜರಾದ ಪಲ್ಲವರು, ಗಂಗರು ಮತ್ತು ಗುಪ್ತ ಸಾಮ್ರಾಟರು ಕದಂಬರಲ್ಲಿ ಸ್ನೇಹಭಾವದಿಂದ ನಡೆದುಕೊಂಡರು. ರಾಜಕೀಯ ಇತಿಹಾಸದಲ್ಲಿಯೇ ಅಲ್ಲದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿಯೂ ಸಹ ಕರ್ನಾಟಕಕ್ಕೆ ಹಿರಿಯ ಸ್ಥಾನವನ್ನು ಗಳಿಸಿಕೊಟ್ಟ ಕೀರ್ತಿ ಕದಂಬರಿಗೆ ಸಲ್ಲುತ್ತದೆ.

ಕದಂಬರ ವಂಶಮೂಲದ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಅವರ ವಂಶ ಮೂಲವನ್ನು ತಾಳಗುಂದ ಶಾಸನ ಒಂದು ರೀತಿಯಲ್ಲಿ ತಿಳಿಸಿದರೆ, ಹತ್ತನೇ ಶತಮಾನದಿಂದ ಪ್ರಾರಂಭವಾದ ಶಾಸನಗಳು ಅವರ ಮೂಲಪುರುಷನು ದೈವಾಂಶಸಂಭೂತನೆಂದೂ, ಈಶ್ವರ ಪಾರ್ವತಿಯರಿಗೆ ಜನಿಸಿದವನೆಂದೂ ತಿಳಿಸುತ್ತವೆ. ಶಾಸನಗಳಲ್ಲಿ ಕಂಡುಬರುವ ದಂತಕಥೆಗಳು ತುಳು ಬ್ರಾಹ್ಮಣರ "ಗ್ರಾಮ ಪದ್ಧತಿ" ಎಂಬ ಇತಿಹಾಸದಲ್ಲಿ ಬಹು ಪ್ರಾಮುಖ್ಯ ಗಳಿಸಿವೆ.

ಒಂದು ಕಥೆಯ ಪ್ರಕಾರ ಮಯೂರವರ್ಮನ ಮೂಲವಂಶಜನು ಮುಕ್ಕಣ್ಣ ಕದಂಬನೆಂದು ತಿಳಿಯುತ್ತದೆ. ಶಿವನ ಹಣೆಯಿಂದ ಬೆವರು ತೊಟ್ಟು ಕದಂಬ ವೃಕ್ಷದ ಅಡಿಯಲ್ಲಿ ಬಿದ್ದಾಗ ಅದರಿಂದ ನಾಲ್ಕು ಬಾಹುಗಳು, ಮೂರು ಕಣ್ಣುಗಳುಳ್ಳ, ವಿದ್ಯಾ ಪಾರಂಗತನೂ, ಸುಸಂಸ್ಕೃತನೂ, ಸುಶಿಕ್ಷಿತನೂ, ಶಿವನನ್ನೇ ಹೋಲುವಂತಹವನೂ ಆದ ಕದಂಬನು ಉದ್ಭವಿಸಿದನು. ಅವನ ಮಗ ಮಯೂರಶರ್ಮ (SK. 117).

ಶಾಸನವೊಂದು ಈ ಕಥೆಯನ್ನು ಇನ್ನೊಂದು ರೀತಿಯಲ್ಲಿ ಪ್ರಸ್ತಾಪಿಸುತ್ತದೆ. ರುದ್ರ ಮತ್ತು ಪೃಥ್ವಿಗೆ, ಮಂಗಳದಾಯಕವಾದ ಕದಂಬ ವೃಕ್ಷದ ಕೆಳಗೆ ಮಯೂರವರ್ಮ

ಜನಿಸಿದನು. ಅವನು ಶತ್ರುಗಳನ್ನು ನಿಗ್ರಹಿಸಿ, ಪರಾಜಿತರಾದ ಅರಸರಿಂದ ಸನ್ಮಾನ ಪಡೆಯುತ್ತಿದ್ದನು. ಅವನಿಗೆ ಎರಡು ಕಣ್ಣುಗಳ ಜೊತೆಗೆ ಹಣೆಯ ಮೇಲೆ ಮತ್ತೊಂದು ಕಣ್ಣಿತ್ತು. ತಲೆಯಮೇಲೆ ಮಕುಟವಿಟ್ಟಲ್ಲಿ, ಕಣ್ಣುಮುಚ್ಚಿ ಹೋಗುತ್ತಿದ್ದುದರಿಂದ, ಮಕುಟವನ್ನು ಶೋಭಾಯಮಾನವಾಗಿ ಕಾಣುವಂತೆ ಮೊಣಕಾಲಿನ ಹತ್ತಿರದಲ್ಲಿ ಕಟ್ಟಿದ್ದರು. ಅವನು ಕದಂಬ ವೃಕ್ಷದ ನೆರಳಿನಲ್ಲಿ ಬೆಳೆದದ್ದರಿಂದ ಅವನ ವಂಶಕ್ಕೆ ಕದಂಬವಂಶವೆಂದು ಹೆಸರಾಯಿತು (Dg. 35).

ಇನ್ನೊಂದು ಕಥೆ ಕದಂಬರ ವಂಶಜನು ನಂದರಿಂದ ಹುಟ್ಟಿದನೆಂದು ತಿಳಿಸುತ್ತದೆ. ತುಳು ಬ್ರಾಹ್ಮಣರ 'ಗ್ರಾಮ ಪದ್ಧತಿ'ಯಲ್ಲಿ ಈ ಕಥೆಗಳಿಗೆ ಮಹತ್ವ ನೀಡಲಾಗಿದೆ.

ಇನ್ನೊಂದು ಶಾಸನವು ಮಯೂರವರ್ಮನು ಜೈನಮತಸ್ಥನೆಂದು ತಿಳಿಸುತ್ತದೆ. ಅವನು ಜೈನ ತೀರ್ಥಂಕರ ಆನಂದಜಿನವೀರೇಂದ್ರನ ಸೋದರಿಯ ಮಗನೆಂದೂ ಕದಂಬ ವೃಕ್ಷದ ಕೆಳಗೆ ಜನಿಸಿದನೆಂದೂ ತಿಳಿಸುತ್ತದೆ. ಅವನಿಗೆ ಶಾಸನದೇವಿಯಿಂದ ಒಂದು ರಾಜ್ಯವನ್ನು ಸಂಪಾದಿಸಿಕೊಟ್ಟು, ವ್ಯವಸಾಯಕ್ಕೆ ಅನುಕೂಲವಾಗುವಂತೆ ಅರಣ್ಯ ಪ್ರದೇಶವನ್ನು ಹಸನುಮಾಡಿಕೊಡಲಾಯಿತೆಂದು ಈ ಶಾಸನ ತಿಳಿಸುತ್ತದೆ.

ಕಡೆಯದಾಗಿ ಶಾಂತಿವರ್ಮನ ತಾಳಗುಂದ ಶಾಸನ ಕದಂಬರ ವಂಶಮೂಲದ ಬಗ್ಗೆ ಹೇಳುವುದನ್ನು ನೋಡಬಹುದು. ಮಾನವ್ಯಗೋತ್ರಕ್ಕೆ ಸೇರಿದ, ಹಾರೀತಪುತ್ರರೆಂದು ಕರೆಸಿಕೊಂಡ ಒಂದು ಬ್ರಾಹ್ಮಣ ಕುಟುಂಬವಿದ್ದಿತು. ಇವರ ಮನೆಯ ಹತ್ತಿರ ಕದಂಬವೃಕ್ಷವಿದ್ದುದರಿಂದ ಅವರಿಗೆ ಕದಂಬರೆಂದು ಹೆಸರು ಬಂದಿತು. ಈ ಕುಟುಂಬಕ್ಕೆ ಸೇರಿದ ಮಯೂರಶರ್ಮನು ತನ್ನ ಗುರುವಾದ ವೀರಶರ್ಮನೊಡನೆ ವಿದ್ಯಾರ್ಜನೆಗಾಗಿ ಪಲ್ಲವೇಂದ್ರಪುರಿಯಲ್ಲಿದ್ದ ವಿಶ್ವವಿದ್ಯಾಲಯಕ್ಕೆ ಹೋದನು. ಅಲ್ಲಿ ಅಶ್ವಮೇಧಯಜ್ಞದ ಸಮಯದಲ್ಲಿ ಕ್ಷತ್ರಿಯರು ಬ್ರಾಹ್ಮಣರನ್ನು ಆದರಿಸದಿದ್ದಕ್ಕೆ ಜಗಳವಾಯಿತು. ಕೋಪಗೊಂಡ ಮಯೂರಶರ್ಮ ತಾನೂ ಕ್ಷಾತ್ರ ಬಲವನ್ನು ಮೆರೆಸುತ್ತೇನೆಂದು ಪಣತೊಟ್ಟು, ಯೋಧ ವೃತ್ತಿಯನ್ನು ಅವಲಂಬಿಸಿದನು. ಪಲ್ಲವಪುರಿಯನ್ನು ಬಿಟ್ಟು, ರಾಜ್ಯದ ಉತ್ತರ ಸರಹದ್ದಿನ ಶ್ರೀ (ತ್ರಿ?) ಪರ್ವತದ ಆಶ್ರಯ ಪಡೆದು ಪಲ್ಲವರ ಗಡಿನಾಡು ಪ್ರದೇಶವನ್ನು ಕಾಡತೊಡಗಿ ಬೃಹತ್ ಬಾಣ ಮೊದಲಾದವರ ಮೇಲೆ ಕಪ್ಪಕಾಣಿಕೆಗಳನ್ನು ವಿಧಿಸಿದನು. ಪಲ್ಲವರಾಜನಿಗೆ ಅವನನ್ನು ನಿಗ್ರಹಿಸಲು ಸಾಧ್ಯವಾಗದೆ ಅವನನ್ನು ಅಮರಾರ್ಣವದಿಂದ ಪ್ರೇಮಾರದವರೆಗಿನ ಪ್ರದೇಶಕ್ಕೆ ರಾಜನನ್ನಾಗಿ ಮಾಡಿದನು. ಹೀಗೆ ಮಯೂರಶರ್ಮನು ಕದಂಬವಂಶವನ್ನು ಸ್ಥಾಪಿಸಿದನು.

ಈ ವಿಚಾರಗಳಿಂದ ಕಂಡು ಬರುವ ಒಂದು ಸಾಮಾನ್ಯ ಅಂಶವೆಂದರೆ ಕದಂಬವೃಕ್ಷಕ್ಕೂ ಕದಂಬ ವಂಶದ ಮೂಲಪುರುಷನಿಗೂ ಇರುವ ನಿಕಟವಾದ ಸಂಬಂಧ. ಎರಡನೆಯದು

ಕದಂಬವಂಶ ಸ್ಥಾಪಕನು ದೈವಾಂಶ ಸಂಭೂತನೆಂಬುದು. ಈ ಹೇರಿಕೆಯೊಡನೆ ಅಂಗೀಕೃತವಾಗಬಲ್ಲ ಕದಂಬವಂಶ ಮೂಲದ ಅವಲೋಕನವನ್ನು ಪ್ರಯುಕ್ತಿಸೋಣ.

ತಾಳಗುಂದ ಶಾಸನವನ್ನು ಪ್ರಕಟಿಸುತ್ತಾ ರೈಸ್ ಅವರು ಈ ಶಾಸನದಲ್ಲಿ "ಕ್ಷತ್ರಿಯ ರನ್ನು ನಿಗ್ರಹಿಸಿ ಬ್ರಾಹ್ಮಣರನ್ನು ಉನ್ನತಿಗೆ ತರುವ ಪ್ರತ್ಯಕ್ಷ ಉದ್ದೇಶವಿದೆ" ಎಂದು ಹೇಳಿದ್ದಾರೆ. ಈ ಅಭಿಪ್ರಾಯದಲ್ಲಿ ಗೂಢಾರ್ಥವಿದೆ. ಇದು ಬ್ರಾಹ್ಮಣ-ಕ್ಷತ್ರಿಯ ಇವರಿಗಿದ್ದ ಅಸಮಾಧಾನವನ್ನು ಸೂಚಿಸುತ್ತದೆ ಈ ಅಸಮಾಧಾನ ವೇದಗಳ ಕಾಲ ದಿಂದಲೂ ಹೊಗೆಯಾಡುತ್ತಿತ್ತೆಂಬುದು ಇತರ ಮೂಲಗಳಿಂದ ನಮಗೆ ತಿಳಿಯುತ್ತದೆ.

ಸಮಾಜದಲ್ಲಿ ಉಚ್ಚ ಸ್ಥಾನಕ್ಕಾಗಿ ಬ್ರಾಹ್ಮಣ ಕ್ಷತ್ರಿಯರ ಹೋರಾಟ ವೈದಿಕ ಯುಗದ ಅಂತ್ಯದಲ್ಲಿ ಪ್ರಾರಂಭವಾಯಿತು. ಈ ವೇಳೆಗೆ ವರ್ಣಗಳ ಬೆಳವಣಿಗೆ ಪೂರ್ಣವಾಗಿಲ್ಲದಿದ್ದರೂ, ವರ್ಣಗಳ ಸಂಬಂಧ ನಿರ್ಧಾರವಾಗಿತ್ತು. ದೇವ ಮಾನವರ ಮಧ್ಯಸ್ಥರಾಗಿ ಪುರೋಹಿತರ ಸ್ಥಾನ ಸ್ಥಿರವಾಗಿತ್ತು. ಬ್ರಾಹ್ಮಣರು ಉನ್ನತ ಅಧಿಕಾರ ಹೊಂದಿದ್ದುದೇ ಅಲ್ಲದೆ ರಾಜರ ಅಧೀನಕ್ಕೆ ಒಳಪಟ್ಟಿರಲಿಲ್ಲ. ಬ್ರಾಹ್ಮಣನನ್ನು ಮನಸ್ಸಿಗೂ (Mind) ಕ್ಷತ್ರಿಯನನ್ನು ಚಿತ್ತಕ್ಕೂ (Will) ಹೋಲಿಸಿ. ಮನಸ್ಸು ಚಿತ್ತದ ಅಧೀನವಲ್ಲವೆಂದೂ, ಚಿತ್ತವು ಜ್ಞಾನವನ್ನವಲಂಬಿಸಿರುವಂತೆ ಕ್ಷತ್ರಿಯನು ಬ್ರಾಹ್ಮಣನನ್ನು ಅವಲಂಬಿಸಿದರೆ ಮಾತ್ರ ರಾಷ್ಟ್ರದ ಬದುಕು ಸಾಧ್ಯವೆಂದೂ ನಂಬಲಾಗಿತ್ತು. ಮೊದಲಿಗೆ ಬ್ರಾಹ್ಮಣನೊಬ್ಬನೇ ಇದ್ದನೆಂದೂ, ಶ್ರೇಷ್ಠ ವರ್ಗವಾದ ಕ್ಷತ್ರಿಯನನ್ನು ಅವನೇ ನಿರ್ಮಿಸಿದನೆಂದೂ ಬೃಹದಾರಣ್ಯಕ ಉಪನಿಷತ್ತು ತಿಳಿಸುತ್ತದೆ. ಈ ಹೇಳಿಕೆ ಯನ್ನು ಅನುಮೋದಿಸುವಂತೆ ಶತಪಥ ಬ್ರಾಹ್ಮಣ ಈ ರೀತಿ ತಿಳಿಸುತ್ತದೆ. "ಕ್ಷತ್ರಿಯ ರಿಗಿಂತ ಉನ್ನತವಾದುದು ಯಾವುದೂ ಇಲ್ಲ.........ಆದರೆ ಬ್ರಾಹ್ಮ ಕ್ಷಾತ್ರದ ಮೂಲ. ಆದ್ದರಿಂದ ರಾಜನಾದ ಕ್ಷತ್ರಿಯನು ಎಷ್ಟೇ ಪ್ರಾಬಲ್ಯ ಗಳಿಸಿದರೂ. ಅವನು ತನ್ನ ಮೂಲವಾದ ಬ್ರಾಹ್ಮಣನನ್ನು ಅವಲಂಬಿಸಿರುತ್ತಾನೆ. ಯಾವನು ಬ್ರಾಹ್ಮಣನಿಗೆ ಅಪಕಾರಮಾಡುತ್ತಾನೋ ಅವನು ತನ್ನ ಮೂಲವನ್ನೇ ಬಾಧಿಸುತ್ತಾನೆ." ಬ್ರಾಹ್ಮಣ ನನ್ನು ಆಲೋಚನೆಗೂ, ಕ್ಷತ್ರಿಯನನ್ನು ಶಕ್ತಿಗೂ ಹೋಲಿಸಿ, ಶತಪಥ ಬ್ರಾಹ್ಮಣ "ಬ್ರಾಹ್ಮಣನು ಗ್ರಹಿಸಿದ್ದನ್ನು ಕ್ಷತ್ರಿಯನು ಸಾಧಿಸುತ್ತಾನೆ. ಆದ್ದರಿಂದ ಇಬ್ಬರೂ ಒಂದಾಗಿ-ದ್ದಾರೆ"" ಎಂದು ತಿಳಿಸುತ್ತದೆ.

ಕಾಲಕ್ರಮೇಣದಲ್ಲಿ ಬ್ರಾಹ್ಮಣ-ಕ್ಷತ್ರಿಯರಲ್ಲಿದ್ದ ಹಿತಕರವಾದ ಸಂಬಂಧ ಕುಸಿಯಿತು. ಬ್ರಾಹ್ಮಣನಿಗೆ ಮೀಸಲಾಗಿದ್ದ ನ್ಯಾಯ ವಿಚಾರಣೆ ಕೆಲಸವನ್ನು ರಾಜ ತಾನೇ ನಿರ್ವಹಿಸಲು ಪ್ರಾರಂಭಿಸಿದನು. ಇವರಲ್ಲಿನ ಪೈಪೋಟಿ ಇತರ ವರ್ಗಗಳ ಮೇಲೆ ತನ್ನ ಪ್ರಭಾವವನ್ನು ಬೀರಲು ತಡವಾಗಲಿಲ್ಲ. ಕ್ರಿ. ಪೂ. ಆರನೇ ಶತಮಾನದಲ್ಲಿ ಇದು ವರ್ಣಾಶ್ರಮದಲ್ಲಿ ಆಂದೋಲನವನ್ನುಂಟುಮಾಡಿತು. ಡಾ. ಆರ್. ಕೆ. ಮುಖರ್ಜಿಯವರು ಅಭಿಪ್ರಾಯ

ಪಡುವಂತೆ. "ಕ್ರಿ. ಪೂ. ಆರನೇ ಮತ್ತು ಐದನೇ ಶತಮಾನಗಳು ಅಪರಿಚಿತ ಚಮತ್ಕಾರಗಳನ್ನು ಪ್ರತಿಪಾದಿಸುತ್ತವೆ. ಆರ್ಯಾವರ್ತದಲ್ಲಿ ಕ್ಷತ್ರಿಯ ನಾಯಕರು ಜನಪ್ರಿಯ ಧಾರ್ಮಿಕ ಪಂಥಗಳನ್ನೂ ಶೂದ್ರಪ್ರಮುಖರು ಕ್ಷತ್ರಿಯ ರಾಜ್ಯಗಳ ಅವಶೇಷಗಳ ಮೇಲೆ ದೊಡ್ಡ ಸಾಮ್ರಾಜ್ಯ ಸ್ಥಾಪಿಸುವುದನ್ನು ನೋಡುತ್ತೇವೆ." ಇದರಿಂದ ಅನಾದಿ ಕಾಲದಿಂದ ಉಳಿದು ಬಂದಿದ್ದ ಕ್ಷತ್ರಿಯ ಪ್ರಾಬಲ್ಯವು ಕುಂದಿತು.

ಈ ಪ್ರವೃತ್ತಿಯು ಕ್ರಿ. ಪೂ. ನಾಲ್ಕನೇ ಶತಮಾನದಲ್ಲಿಯೂ ಮುಂದುವರಿಯಿತೆಂಬುದು ಕೌಟಿಲ್ಯನ ಅರ್ಥಶಾಸ್ತ್ರದಿಂದ ತಿಳಿಯುತ್ತದೆ. "ಸೇವಕನು ಸ್ವಾಮಿಯನ್ನು ಅನುಸರಿಸುವಂತೆ. ರಾಜನು ಪುರೋಹಿತನನ್ನು ಅನುಸರಿಸಬೇಕು" ಎಂದು ಕೌಟಿಲ್ಯ ಹೇಳುತ್ತಾನೆ. ಇವರಲ್ಲಿ ಅನ್ಯೋನ್ಯತೆಯನ್ನು ಸಾಧಿಸಲು ಕೌಟಿಲ್ಯ ಶ್ರಮಿಸಿದನೆಂಬುದು ಅರ್ಥಶಾಸ್ತ್ರದಿಂದ ಗೊತ್ತಾಗುತ್ತದೆ. ಈ ಅನ್ಯೋನ್ಯತೆಯೇ ಚಂದ್ರಗುಪ್ತನು ಸಾಮ್ರಾಜ್ಯ ಸ್ಥಾಪಿಸಲು ಸಾಧಕವಾಯಿತೆಂದರೆ ಅತಿಶಯೋಕ್ತಿಯಾಗಲಾರದು. ಆದರೆ ಅಶೋಕನ ಕಡೆಯ ದಿನಗಳಲ್ಲಿ ಈ ಸಮನ್ವಯ ಶಿಥಿಲವಾಗತೊಡಗಿತು. ಅವನ ಮರಣಾನಂತರ ಬಂದ ಅರಸರು ಇದರ ಬಗ್ಗೆ ಹೆಚ್ಚು ಗಮನ ಹರಿಸಿದಂತೆ ತೋರುವುದಿಲ್ಲ. ಇದರಿಂದ ಬ್ರಾಹ್ಮಣರ ಪ್ರತಿಷ್ಠೆ ಕಳೆಗುಂದಿ ಅವರು ಹೋರಾಟದ ಹಾದಿಯನ್ನು ಹಿಡಿದರು. ಇದು ಮೌರ್ಯಸೇನಾನಿ ಪುಷ್ಯಮಿತ್ರ ತನ್ನ ಸ್ವಾಮಿ ಬೃಹದ್ರಥನನ್ನು ಕೊಂದು ಶುಂಗ ಸಂತತಿಯನ್ನು ಸ್ಥಾಪಿಸುವುದರಲ್ಲಿ ಕೊನೆಗೊಂಡಿತು.

ಈ ದೀರ್ಘ ಚರ್ಚೆಯಿಂದ ನಮಗೆ ತಿಳಿಯುವ ಮುಖ್ಯ ಅಂಶವೆಂದರೆ ಬ್ರಾಹ್ಮಣ ಕ್ಷತ್ರಿಯರ ಅಂತಸ್ತಿನ ಪ್ರಶ್ನೆ ಬ್ರಾಹ್ಮಣನು ರಾಜಕೀಯವನ್ನು ಪ್ರವೇಶಿಸಲು ಕಾರಣವಾಯಿತು. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಮಯೂರಶರ್ಮ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದನು. ತಾಳಗುಂದ ಶಾಸನದಲ್ಲಿ ಹೇಳಿರುವಂತೆ ಕದಂಬ ವಂಶದ ಸ್ಥಾಪಕನು ಮಯೂರಶರ್ಮನೆಂಬುದರಲ್ಲಿ ಸಂದೇಹವಿಲ್ಲ. ಅವನು ಬ್ರಾಹ್ಮಣ ಮತಸ್ಥನಾಗಿದ್ದು, ಮಾನವ್ಯಗೋತ್ರಕ್ಕೆ ಸೇರಿದವನು. ಹಿಂದೂಧರ್ಮದ ಪ್ರಕಾರ ಕ್ಷಾತ್ರಧರ್ಮ ಪಾಲನೆಯು ಬ್ರಾಹ್ಮಣರಿಗೆ ಸಲ್ಲದ್ದರಿಂದ ಶರ್ಮನೆಂಬ ಬ್ರಾಹ್ಮಣ ಧರ್ಮಸೂಚಕವಾದ ವಂಶನಾಮವನ್ನು ಬಿಟ್ಟುಕೊಟ್ಟು ವರ್ಮನೆಂಬ ಕ್ಷತ್ರಿಯ ಸೂಚಕ ನಾಮವನ್ನು ಸ್ವೀಕರಿಸಿ ಕ್ಷಾತ್ರಧರ್ಮವನ್ನು ಮೆರೆಸಲು ಪಣತೊಟ್ಟನು.

ರಾಜ್ಯ ಸ್ಥಾಪನೆಯಾದ ಮೇಲೆ ಅದಕ್ಕೆ ಹೆಸರು ಕೊಡುವುದರ ಬಗ್ಗೆ ವಿಚಾರ ನಡೆದಿರಬಹುದು. ಮಧ್ಯಕಾಲದ ರಾಜಪುತ್ರರ ಶಾಖೆಯೊಂದು ತಮ್ಮ ವಂಶದ ಮೂಲಪುರುಷನು ಹಿಡಿದಿದ್ದ ಹುದ್ದೆಯ ಸ್ಮಾರಕಾರ್ಥವಾಗಿ 'ಪ್ರತಿಹಾರ' ಎಂದು ತಮ್ಮ ವಂಶಕ್ಕೆ ನಾಮಕರಣ ಮಾಡಿದಂತೆ. ಮಯೂರವರ್ಮನು ತನ್ನ ಮನೆಯ ಹತ್ತಿರ ಬೆಳೆದಿದ್ದ ಕದಂಬ ವೃಕ್ಷದ ಪ್ರತೀಕವಾಗಿ ತನ್ನ ವಂಶಕ್ಕೆ ಕದಂಬವಂಶವೆಂದು ನಾಮಕರಣ ಮಾಡಿದನು.

ಕದಂಬವಂಶ ಸ್ಥಾಪಕನು ದೇವಾಂಶಸಂಭೂತನೆಂಬುದು 10ನೇ ಶತಮಾನದಿಂದ ಪ್ರಾರಂಭವಾಗುತ್ತದೆ. ಕ್ರಿ. ಶ. ಏಳನೇ ಶತಮಾನದಲ್ಲಿ ಕದಂಬರ ಆಳ್ವಿಕೆಯು ಕೊನೆಗೊಂಡಿತು. ಕ್ರಿ. ಶ. ಹತ್ತನೇ ಶತಮಾನದಲ್ಲಿ ಇವರ ಪ್ರತಿನಿಧಿಗಳು ಹಾನಗಲ್ಲು. ಗೋವೆ, ಮೊದಲಾದ ಸ್ಥಳಗಳಲ್ಲಿ ರಾಜ್ಯ ಸ್ಥಾಪಿಸುವ ಕಾಲಕ್ಕೆ ಮೂಲ ಕದಂಬವಂಶ ಸ್ಥಾಪಕನಾದ ಮಯೂರವರ್ಮನ ವೃತ್ತಾಂತ ಮರೆತುಹೋಗಿ ಅವನು ದಂತ ಕಥೆಗಳ ನಾಯಕನಾಗಿ ಮೆರೆಯುತ್ತಿದ್ದನು. ಈ ಕಥೆಗಳಿಗೆ ತುಳುವರ ಗ್ರಾಮಪದ್ಧತಿಯಲ್ಲಿ ಉತ್ತೇಜನ ದೊರೆತು ಕಾಲ್ಪನಿಕ ಕಥೆಗಳು ನಿಜವೆಂಬಂತೆ ಮೆರೆದವು. ಈ ಕಥೆಗಳಿಂದ ಸ್ಫೂರ್ತಿಗೊಂಡ ಮೂಲ ಕದಂಬರ ಪ್ರತಿನಿಧಿಗಳು ಜನರ ಗೌರವ ಸಂಪಾದಿಸಲು ತಮ್ಮ ಮೂಲವಂಶಜನು ದೇವಾಂಶಸಂಭೂತನೆಂದು ಹೇಳಿಕೊಂಡಿದ್ದಾರೆ. ಭಾರತೀಯ ಇತಿಹಾಸದಲ್ಲಿ ಇದು ಅಪರೂಪವಾದ ಸಂಗತಿಯೇನಲ್ಲ.

[ವೀರಶರ್ಮನೆಂಬಾತನು ಮಯೂರವರ್ಮನ ಅಜ್ಜನೆಂದೂ (ತಾಳಗುಂದ ಶಾಸನದ 'ಗುರು'; ಗುರು ಎಂದರೆ ಹಿರಿಯ ಎಂದೂ ಅರ್ಥವಿದೆ), ಮಯೂರನ ತಂದೆ—ವೀರಶರ್ಮನ ಪುತ್ರ—ಬಂಧುಕ್ಷೇಣ ಎಂಬಾತ ಆಗಲೇ ಕ್ಷಾತ್ರವನ್ನು ಪ್ರದರ್ಶಿಸಿ ಚಿಕ್ಕ ಪಾಳಯವನ್ನು ಕಟ್ಟಿದ್ದನೆಂದೂ ಇತ್ತೀಚೆಗೆ ದೊರೆತ ಗುಡ್ನಾಪುರ ಶಾಸನ ಹೇಳಿದೆ. ಬಂಧುಕ್ಷೇಣನನ್ನು ಹಲಸಿ ತಾಮ್ರಪಟಗಳು ಕೂಡ ಉಲ್ಲೇಖಿಸಿವೆ. ಆದರೆ ವಿಶಾಲ ರಾಜ್ಯ ಕಟ್ಟಿದ ಮೊದಲ ದೊರೆ ಮಯೂರನೇ ಎಂಬ ಬಗ್ಗೆ ಸಂದೇಹವಿಲ್ಲ—ಸಂ॥]

ಬೈಜಿಕ ಕಾಂತತ್ವ ಮತ್ತು ಬೈಜಿಕ ಕಾಂತ ಅನುನಾದ

ಎಸ್. ವಿ. ಭಟ್

ಕ್ರಿ. ಶ. 1946ನೇ ವರ್ಷದ ಆದಿಭಾಗದಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ಎಡ್ವರ್ಡ್ ಪರ್ಸೆಲ್ ಮತ್ತು ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾಲಯದ ಫೆಲಿಕ್ಸ್-ಬ್ಲಾಃಖ್ ಭೌತಶಾಸ್ತ್ರದ ಒಂದು ಸ್ವಾರಸ್ಯಕರವಾದ ಸಂಶೋಧನೆಯನ್ನು ಪ್ರಕಟಿಸಿದರು. ಪರಮಾಣು ಬೀಜಗಳ ಕಾಂತಕ್ಷೇತ್ರಗಳನ್ನು ಶ್ರುತಿಗೊಳಿಸುವ ವಿಧಾನವೊಂದನ್ನು ಅವರು ಕಂಡುಹಿಡಿದಿದ್ದರು. ಈ ಸಂಶೋಧನೆ ಎಷ್ಟು ಮಹತ್ವಪೂರ್ಣವಾಗಿತ್ತೆಂದರೆ, ಆರೇ ವರ್ಷಗಳಲ್ಲಿ, ಪರ್ಸೆಲ್ ಮತ್ತು ಬ್ಲಾಃಖ್ ಇಬ್ಬರಿಗೂ 1952ರ ಭೌತಶಾಸ್ತ್ರ ಕುರಿತಾದ ನೊಬೆಲ್ ಪಾರಿತೋಷಕವನ್ನು ನೀಡಲಾಯಿತು.

ಮೊದ-ಮೊದಲು ಈ ಸಂಶೋಧನೆಯ ಉಪಯುಕ್ತತೆಯನ್ನು ಅರಿತವರು ಕೆಲವು ಬೈಜಿಕ ಭೌತಶಾಸ್ತ್ರಜ್ಞರೇನೋ. ಆದರೆ ಕೆಲವೇ ವರ್ಷಗಳಲ್ಲಿ, "ಬೈಜಿಕ ಕಾಂತ ಅನುನಾದ" (Nuclear Magnetic Resonance: NMR) ಎಂದು ಕರೆಯಲ್ಪಟ್ಟ ಈ ವೈಜ್ಞಾನಿಕ ಪ್ರಯೋಗ-ತಂತ್ರ ವಿಜ್ಞಾನಲೋಕದಾದ್ಯಂತ ಆಸ್ಥೆಯನ್ನು ಕೆರಳಿಸಿರುವ ವಿಷಯುವಾಗಿ ಮಾರ್ಪಟ್ಟಿದೆ. ವಿಧ-ವಿಧವಾದ ವಿಶೇಷ ವಿಭಾಗಗಳಲ್ಲಿ ಸಂಶೋಧನಾ ನಿರತರಾಗಿರುವ ವೈಜ್ಞಾನಿಕರು ಬೈಜಿಕ ಭೌತಶಾಸ್ತ್ರಜ್ಞರಿಗಿಂತಲೂ ಅಧಿಕವಾಗಿ ಕಾಂತ ಅನುನಾದದ ಬಗೆಗೆ ಉತ್ಸಾಹ ತಾಳಿದ್ದಾರೆ. ಕಾರಣವಿಷ್ಟೆ: ಈ ಸಂಶೋಧನೆ ಅನಿರೀಕ್ಷಿತವಾಗಿ. ಖನಿಜಗಳಿಗಾಗಿ ಭೂಮಿಯ ಸರ್ವೇಕ್ಷಣ (Survey) ಮಾಡುವುದರಿಂದ ತೊಡಗಿ, ಸಜೀವ ವಸ್ತುಗಳ ರಾಸಾಯನಿಕ ವಿಶ್ಲೇಷಣೆಯವರೆಗೆ, ಅಗಣಿತ ಉದ್ದೇಶಗಳಿಗೆ ಉಪಯುಕ್ತವಾದ ಸೂಕ್ಷ್ಮಾತಿಸೂಕ್ಷ್ಮ ಸಾಧನವಾಗಿ ಮಾರ್ಪಟ್ಟಿದೆ.

ಬೈಜಿಕ ಭ್ರಮಣ ಮತ್ತು ಕಾಂತ ಭ್ರಾಮಕ ಶಕ್ತಿ
(Nuclear Spin and Magnetic Moment)

ಬೈಜಿಕ ಕಾಂತ ಅನುನಾದವನ್ನು ವಿವರಿಸುವ ಮೊದಲು ಬೈಜಿಕ-ಕಾಂತತ್ವದ ಬಗೆಗೆ ಅರಿಯುವುದು ಅಗತ್ಯ. ವಿಷಮಕಾಂತತ್ವ (diamagnetism), ಸಮಕಾಂತತ್ವ (paramagnetism) ಮತ್ತು ಲೋಹಕಾಂತತ್ವ (ferromagnetism) ಮುಂತಾದ

ವಸ್ತುವಿನ ಕಾಂತೀಯ ಗುಣಧರ್ಮಗಳಿಗೆ, ಆ ವಸ್ತುವಿನ ಪರಮಾಣುಗಳಲ್ಲಿನ ಇಲೆಕ್ಟ್ರಾನುಗಳ ರಚನೆಯೇ ಕಾರಣವೆಂಬುದು ತಿಳಿದ ವಿಷಯವೇ. ಸರ್ವೇಸಾಮಾನ್ಯವಾಗಿ ಇಲೆಕ್ಟ್ರಾನುಗಳೇ ಕಾಂತತ್ವದ ಮೂಲಕಾರಣವೆಂದು ಹೇಳಬಹುದು. ಆದರೆ ಹಲವಾರು ವಸ್ತುಗಳು ಇಲೆಕ್ಟ್ರಾನುಗಳು ಮಾತ್ರವೇ ಕಾಂತತ್ವವನ್ನು ಹೊಂದಿರುವ ಘಟಕಗಳಾಗಿರುವುದಿಲ್ಲ. ಹಲವು ವಸ್ತುಗಳ ಪರಮಾಣು–ಬೀಜಗಳು ಕೂಡ ಕಾಂತೀಯ ಗುಣಧರ್ಮಗಳನ್ನು ಪಡೆದಿರುತ್ತವೆ. ಇದಕ್ಕೆ ಕಾರಣ : ಬೀಜಗಳ ಭ್ರಾಮಕ ಶಕ್ತಿ (angular momentum). ನಮಗೆ ಸಾಮಾನ್ಯವಾಗಿ ಪರಿಚಯವಿರುವ ದ್ರವ್ಯರಾಶಿ (mass) ಮತ್ತು ವಿದ್ಯುದಾವೇಶ (electric charge)ಗಳ ಜೊತೆಗೆ ಬಹಳಷ್ಟು ಪರಮಾಣು ಬೀಜಗಳು 'ಭ್ರಮಣ' (spin) ಮತ್ತು 'ಭ್ರಾಮಕ ಶಕ್ತಿ'ಯನ್ನೂ ಕಾಂತ ಭ್ರಾಮಕ ಶಕ್ತಿ (magnetic moment)ಯನ್ನೂ ಹೊಂದಿರುತ್ತವೆ. ಅಂದರೆ, ಬೀಜವು ಧ್ರುವಾಕ್ಷ (polar axis)ದ ದಿಶೆಯಲ್ಲಿ ಒಂದು ಕಾಂತವನ್ನು ಹೊಂದಿರುವ ಬುಗುರಿಯಂತೆ ವರ್ತಿಸುತ್ತದೆ. ಬೈಜಿಕ ಕಾಂತತ್ವದ ಮೂಲವನ್ನು ಈ ಧನವಿದ್ಯುದಾವೇಶ ಭ್ರಮಣದಲ್ಲಿ ಹುಡುಕುವುದು ಸ್ವಾಭಾವಿಕ. ಎಲ್ಲರಿಗೂ ತಿಳಿದಿರುವಂತೆ ಚಲಿಸುತ್ತಿರುವ ವಿದ್ಯುದಾವೇಶವು ವಿದ್ಯುತ್ಪ್ರವಾಹಕ್ಕೆ ಸಮಾನ ಮತ್ತು ವಿದ್ಯುತ್ಪ್ರವಾಹಗಳು ಕಾಂತಕ್ಷೇತ್ರಗಳನ್ನು ಹುಟ್ಟಿಸುತ್ತವೆ. ಈ ಪ್ರಕಾರವಾಗಿ. ಧನವಿದ್ಯುದಾವೇಶವನ್ನೂ, ಒಂದು ನಿಶ್ಚಿತ ಭ್ರಾಮಕ ಶಕ್ತಿಯನ್ನೂ ಹೊಂದಿ ಭ್ರಮಿಸುತ್ತಿರುವ ಪ್ರೋಟಾನುಗಳನ್ನು ಪುಟ್ಟ ಕಾಂತಧ್ರುವಯುಗ್ಮ (magnetic dipole)ಗಳನ್ನಾಗಿ ತಿಳಿಯಬಹುದು. ಈ ರೀತಿಯ ವಿವರಣೆ ತಾತ್ವಿಕವಾಗಿ ಸಂಪೂರ್ಣ ಸಮರ್ಪಕವಾಗಿಲ್ಲದಿದ್ದರೂ ಕೂಡ ನಮ್ಮ ಮುಂದಿನ ಚರ್ಚೆಗೆ ತೀರ ಉಪಯುಕ್ತವಾದುದೆಂದು ಇದನ್ನಿಲ್ಲಿ ಅನುಸರಿಸಲಾಗಿದೆ.

ಬೀಜದ ಭ್ರಮಣವನ್ನು $\frac{h}{2\pi}$ ಏಕಮಾನಗಳಲ್ಲಿ 'I' ಸಂಖ್ಯೆಯಿಂದ ವ್ಯಕ್ತಪಡಿಸಲಾಗುತ್ತದೆ. 'I' ಪೂರ್ಣಾಂಕ ಇಲ್ಲವೇ ಅರ್ಧ ಪೂರ್ಣಾಂಕವಾಗಿರಬಹುದು. '$I\frac{h}{2\pi}$' ಒಂದು ನಿರ್ದಿಷ್ಟಪಡಿಸಿದ ದಿಕ್ಕಿನಲ್ಲಿ ಭ್ರಮಣ ಸದಿಶ (spin vector)ದ ಅತಿ ಹೆಚ್ಚಿನ ಘಟಕ. ಕಾಂತ ಭ್ರಾಮಕ ಶಕ್ತಿ 'μ'ನ ಏಕಮಾನ 'ಬೈಜಿಕ ಚುಂಬಿಕೆ ಅಥವಾ ಬೈಜಿಕ ಮ್ಯಾಗ್ನೆಟಾನ್ (nuclear magneton). $\frac{eh}{\pi 4CM}$ ಇಲ್ಲಿ e : ಇಲೆಕ್ಟ್ರಾನಿನ ವಿದ್ಯುದಾವೇಶ. M : ಪ್ರೊಟಾನಿನ ದ್ರವ್ಯರಾಶಿ. C: ಬೆಳಕಿನ ವೇಗ ಮತ್ತು h : ಪ್ಲಾಂಕಿನ ಸ್ಥಿರಾಂಕ. ತುಲನಾತ್ಮಕವಾಗಿ. ಇಲೆಕ್ಟ್ರಾನಿನ ಕಾಂತಭ್ರಾಮಕ ಶಕ್ತಿ $eh/4\pi MC$. ಇಲ್ಲಿ M : ಇಲೆಕ್ಟ್ರಾನಿನ ದ್ರವ್ಯರಾಶಿ. ಇದರಿಂದ ಬೈಜಿಕ ಕಾಂತ

ಭ್ರಾಮಕ ಶಕ್ತಿಗಳು ಇಲೆಕ್ಟ್ರಾನಿನ ಕಾಂತಭ್ರಾಮಕ ಶಕ್ತಿಗಿಂತ ಸುಮಾರು 1000 ಪಾಲು ಚಿಕ್ಕವೆಂಬುದು ವ್ಯಕ್ತವಾಗುತ್ತದೆ.

ಭ್ರಮಣಾಂಕ 'I' ಮತ್ತು ಕಾಂತಭ್ರಾಮಕ ಶಕ್ತಿ 'μ' ಇವು ಒಂದು ಬೀಜದ ಶಾಶ್ವತವೂ ನಿಶ್ಚಿತವೂ ಆದ ಗುಣಗಳು. ಬೀಜಗಳನ್ನು ಉತ್ತೇಜಿತ ಸ್ಥಿತಿ (excited state) ಗಳಿಗೆ ಕೊಂಡೊಯ್ಯಲ್ಲದೆ ಇವುಗಳನ್ನು ಬದಲಿಸಲು ಅಸಾಧ್ಯ. ಪ್ರಸ್ತುತ ಚರ್ಚೆ ಸಾಧಾರಣ ಸ್ಥಿತಿ (ground state)ಯಲ್ಲಿರುವ ಬೀಜಗಳಿಗೆ ಮಾತ್ರ ಸೀಮಿತ.

1924ನೇ ವರ್ಷದಲ್ಲಿ, ಪೌಲಿ, ಬೀಜಗಳು ಭ್ರಮಣ ಮತ್ತು ಕಾಂತ ಭ್ರಾಮಕ ಶಕ್ತಿಗಳನ್ನು ಹೊಂದಿರುವವೆಂದು ತಿಳಿದಲ್ಲಿ ವರ್ಣಕ್ರಮರೇಖೆ (spectral line)ಗಳ ಅತಿ ಸೂಕ್ಷ್ಮ ಸಂರಚನೆ (hyper fine structure) ಯನ್ನು ವೈಜ್ಞಾನಿಕ ವಾಗಿ ವಿವರಿಸಲು ಸಾಧ್ಯವೆಂದು ಸೂಚಿಸಿದರು. ಅಧಿಕ ವಿಘಟನ ಸಾಮರ್ಥ್ಯ (resolving power)ವುಳ್ಳ ವರ್ಣಕ್ರಮಲೇಖಕಗಳನ್ನು ಬಳಸಿ ಕೆಲವು ಮೂಲವಸ್ತು ಗಳ ವರ್ಣಕ್ರಮರೇಖೆಗಳನ್ನು ನಿರೀಕ್ಷಿಸಿದಲ್ಲಿ ಅವು ಒಂದಕ್ಕೊಂದು ತೀರ ಹತ್ತಿರ ಹತ್ತಿರವಾಗಿರುವ ಹಲವು ರೇಖೆಗಳನ್ನು ಹೊಂದಿರುವ 'ಬಹುಕ' ಅಥವಾ 'ಬಹು ಘಟಕ' (multiplet) ಗಳಾಗಿರುವದು ಕಂಡುಬರುತ್ತದೆ. ಬೈಜಿಕ ಕಾಂತವು ತನ್ನ ಸುತ್ತ ಪ್ರದಕ್ಷಿಣೆ ಹಾಕುತ್ತಿರುವ ಇಲೆಕ್ಟ್ರಾನುಗಳ ಕಾಂತ ಕ್ಷೇತ್ರದೊಡನೆ ಅನ್ಯೋನ್ಯ ಕ್ರಿಯೆಯನ್ನು ಅನುಭವಿಸುತ್ತದೆಂದು ತಿಳಿದಲ್ಲಿ ಈ ಅತಿಸೂಕ್ಷ್ಮ ಸಂರಚನೆ (ಅಸೂಸ) ವನ್ನು ಪಾರಿಮಾಣಿಕವಾಗಿ ವಿವರಿಸಬಹುದು. ಗೌಡ್‌ಸ್ಮಿಟ್ ಮತ್ತು ಉಹ್ಲೆನ್ ಬೆಕ್ ಇವರು ಇಲೆಕ್ಟ್ರಾನಿನ ಭ್ರಮಣ ಮತ್ತು ಕಾಂತಭ್ರಾಮಕ ಶಕ್ತಿಗಳನ್ನು ಗುರುತಿಸಿದುದೂ, ಅದನ್ನನುಸರಿಸಿದ ಪರಮಾಣು ವರ್ಣಕ್ರಮ ಮತ್ತು ಪರಮಾಣು ರಚನೆಗಳ ನಡುವಿನ ಸಂಬಂಧದ ಕುರಿತಾದ ಜ್ಞಾನದ ತೀವ್ರ ಪ್ರಗತಿಯೂ 'ಅಸೂಸ'ದ ವಿವರಣೆಗೆ ಕಾರಣೀಭೂತವಾದವು. ಹೀಗಿರಲು ಅಸೂಸದ ಪ್ರಾಯೋಗಿಕ ಅಳತೆಗಳಿಂದ ಬೈಜಿಕ ಭ್ರಾಮಕ ಶಕ್ತಿಯ ಪರಿಮಾಣ ಮತ್ತು ಕಾಂತಭ್ರಾಮಕ ಶಕ್ತಿಗಳನ್ನು ಕಂಡುಹಿಡಿಯಬಹುದೆಂಬುದು ಸುಲಭವೇದ್ಯ. ಈ ಪ್ರಕಾರವಾಗಿ ಕಂಡುಹಿಡಿಯಲ್ಪಟ್ಟ ಕೆಲವು ಬೀಜಗಳ ಕಾಂತಭ್ರಾಮಕ ಶಕ್ತಿ ಗಳನ್ನು 1ನೇ ತಃಖ್ತೆಯಲ್ಲಿ ಕೊಡಲಾಗಿದೆ.

$\frac{h}{2\pi}$ ಏಕಮಾನಗಳಲ್ಲಿ ಬೈಜಿಕ ಭ್ರಮಣ ಮತ್ತು ಬೈಜಿಕ ಚುಂಬಿಕೆ (magneton) ಯ 'μ_0' ಏಕಮಾನಗಳಲ್ಲಿ ಬೈಜಿಕ ಕಾಂತಭ್ರಾಮಕ ಶಕ್ತಿ. ಕಾಂತ ಅನು ನಾದದಿಂದ ಕಂಡುಹಿಡಿದ ನಿಷ್ಕೃಷ್ಟವಾದ ಬೆಲೆಗಳನ್ನು ಆವರಣಗಳಲ್ಲಿ ಕೊಡಲಾಗಿದೆ.

ತಃಖ್ತೆ 1

ಬೀಜ	I	μ/μ_0	ಬೀಜ	I	μ/μ_0
O_n^1	$\frac{1}{2}$	-1.910 (−1.9315)	$_4Be^9$	$\frac{3}{2}$	-1.176 (1.1773)
$_1H^1$	$\frac{1}{2}$	2.7896 (2.79268)	$_5B^{10}$	3	1 8005
$_1H^2$	1	0.8564 (0.857386)	$_5B^{11}$	$\frac{3}{2}$	2.687 (2.6880)
$_1H^3$	$\frac{1}{2}$	2.9756 (2.9788)	$_6C^{12}$	0	0
$_2Hc^3$	$\frac{1}{2}$	−2.1274	$_6C^{13}$	$\frac{1}{2}$	0.701 (0.70220)
$_2Hc^4$	0	0	$_7N^{14}$	1	0.403 (0.40358)
$_3Li^6$	1	0.8214 (0.82192)	$_7N^{15}$	$\frac{1}{2}$	0.280 (0.28306)
$_3Li^7$	$\frac{3}{2}$	3.2535 (3.2560)	$_8O^{16}$	0	0

ಈ ತಃಖ್ತೆಯನ್ನು ನಿರೀಕ್ಷಿಸಿದಲ್ಲಿ ವಿದ್ಯುದಾವೇಶಾಂಕ ಅಥವಾ ದ್ರವ್ಯರಾಶ್ಯಂಕ (mass number) ಮತ್ತು ಕಾಂತಭ್ರಾಮಕ ಶಕ್ತಿಗಳ ನಡುವೆ ಏನೂ ವ್ಯವಸ್ಥಿತ ಸಂಬಂಧವಿದ್ದಂತೆ ತೋರುವದಿಲ್ಲ. 'ಭ್ರಮಣ' ವು ಸರ್ವೇಸಾಮಾನ್ಯವಾಗಿ ಎರಡು ನಿಯಮಗಳನ್ನು ಪಾಲಿಸುತ್ತದೆ. 1) ಭ್ರಮಣಾಂಕ 'I' ಇದು. ದ್ರವ್ಯರಾಶ್ಯಂಕ A ಯು ಸಮವಿದ್ದರೆ $\frac{1}{2}$ ದ ಸಮಗುಣಕವೂ. A ಯು ಬೆಸವಿದ್ದರೆ $\frac{1}{2}$ ದ ಬೆಸಗುಣಕವೂ ಆಗಿರುತ್ತದೆ. ಇದು ಪ್ರೋಟಾನು ಮತ್ತು ನ್ಯೂಟ್ರಾನುಗಳು $\frac{1}{2}$ ಭ್ರಮಣಾಂಕವನ್ನು ಪಡೆದಿರುವುದರ ನೇರ ಪರಿಣಾಮ. 2) ಸಮಸಂಖ್ಯೆಯ ಪ್ರೋಟಾನುಗಳನ್ನೂ, ಸಮಸಂಖ್ಯೆಯ ನ್ಯೂಟ್ರಾನ್‌ಗಳನ್ನೂ ಹೊಂದಿರುವ $8^{\circ\,16}$. $38\,Sr^{88}$ ಮುಂತಾದ ಬೀಜಗಳು ಶೂನ್ಯ ಭ್ರಮಣವನ್ನೂ, ಶೂನ್ಯ ಕಾಂತಭ್ರಾಮಕ-ಶಕ್ತಿಯನ್ನೂ ಹೊಂದಿರುತ್ತವೆ. ಈ 'ಅನುಭವಾತ್ಮಕ' (empirical - ಅಳಲೇಕಾಯಿ) ತತ್ವಕ್ಕೆ ಇಲ್ಲಿಯ ತನಕ ಅಪವಾದವಾವುದೂ ಕಂಡುಬಂದಿಲ್ಲ. ಇದಕ್ಕೂ ಮುಂದೆ, ಬೀಜಗಳ ಕಾಂತಭ್ರಾಮಶಕ್ತಿಗಳನ್ನು, ಬೀಜ-ರಚನೆಯ ವಿವರಗಳೊಂದಿಗೆ ಪರಿಮಾಣಾತ್ಮಕವಾಗಿ ಸಂಬಂಧಿಸುವುದು ತಾತ್ವಿಕ ಬೈಜಿಕ ಭೌತ ಶಾಸ್ತ್ರಜ್ಞರು ಮಾಡಬೇಕಾದ ಕೆಲಸ. ಈ ಸಮಸ್ಯೆಯ ಕ್ಲಿಷ್ಟತೆ ಮತ್ತು 'ಭ್ರಮಿಸುತ್ತಿರುವ, ವಿದ್ಯುದಾವಿಷ್ಟಗೋಳ'ದೊಡನೆ ಪರಮಾಣು ಬೀಜಗಳನ್ನು ಹೋಲಿಸುವುದರ ಅಸಮರ್ಪಕತೆಗೆ ಒಂದೇ ಉದಾಹರಣೆ ಸಾಕು. ವಿದ್ಯುದಾವೇಶವೇ ಇಲ್ಲದ ಮೂಲ ಕಣವಾದ ನ್ಯೂಟ್ರಾನಿಗೂ ಕೂಡ ಕಾಂತಭ್ರಾಮಕ ಶಕ್ತಿಯುಂಟು!


'ಅಸೂಸ' ಪರಿಣಾಮದಿಂದ ಬೈಜಿಕ ಕಾಂತಭ್ರಾಮಕ ಶಕ್ತಿಯನ್ನು ನಿರ್ಧರಿಸಲು ಅತಿ ನಿಕಟವಾಗಿರುವ ರೇಖೆಗಳ ಆವರ್ತ ಸಂಖ್ಯೆಯನ್ನು ಅಳೆಯಬೇಕಾಗುತ್ತದೆ. ಅತಿ ಹೆಚ್ಚಿನ ವಿಘಟನ ಸಾಮರ್ಥ್ಯವುಳ್ಳ ವರ್ಣಾಕ್ರಮ ಲೇಖಕಗಳಿಂದ ಕೂಡ ನಿಸ್ಪಷ್ಟವಾದ

ವಸ್ತುಗಳನ್ನು ಕಂಡುಹಿಡಿಯುವುದು ತೀರ ಕಷ್ಟ. ಇಂತಹ ಪರಿಸ್ಥಿತಿಯಲ್ಲಿ ಸೂಕ್ಷ್ಮಾತಿ ಸೂಕ್ಷ್ಮವಾದ ಬೈಜಿಕ ಕಾಂತಭ್ರಾಮಕ ಶಕ್ತಿಗಳನ್ನು ನಿರ್ಣಯಿಸಲು ಹೊಸತೊಂದು ಪ್ರಯೋಗ ತಂತ್ರ ಸಹಾಯಮಾಡಿತು. ಅದೇ ಬೈಜಿಕ ಕಾಂತ ಅನುನಾದ! ಅದೃಷ್ಟವಶಾತ್ ಈ ಹೊಸ ಪ್ರಯೋಗತಂತ್ರವನ್ನು ಅಭ್ಯಸಿಸಲು ನಾವು ಬೈಜಿಕ ರಚನೆಯ ಕ್ಲಿಷ್ಟ ವಿವರಗಳನ್ನು ಅರ್ಥಮಾಡಿಕೊಳ್ಳಬೇಕಾಗಿಲ್ಲ. ಪರಮಾಣು ಬೀಜವನ್ನು ಖಂಡವಾದದ ನಿಯಮಗಳನ್ನು ಪಾಲಿಸುವ, ಭ್ರಮಣ ಮತ್ತು ಕಾಂತ ಭ್ರಾಮಕ ಶಕ್ತಿಗಳ ವಾಹಕ ಎಂದು ತಿಳಿದರೆ ಸಾಕು. ಕಾಂತಶಕ್ತಿಯಿಂದೊಡಗೂಡಿದ ಬೀಜ ಮತ್ತು ಅದರ ಸುತ್ತಲ ವಾತಾವರಣದ ನಡುವಿನ ಅನ್ಯೋನ್ಯಕ್ರಿಯೆ (interaction) ಯನ್ನು ಅಭ್ಯಸಿಸುವುದೇ ನಮ್ಮ ಉದ್ದೇಶ. ಪ್ರಾತಿನಿಧಿಕವಾಗಿ, ಅಂತರಿಕ ಭ್ರಮಣ $\frac{1}{2}\frac{h}{2\pi}$ ಯನ್ನೂ ಕಾಂತಭ್ರಾಮಕ ಶಕ್ತಿ 2.79268 ಬೈಜಿಕ ಮ್ಯಾಗ್ನೆಟಾನನ್ನೂ ಹೊಂದಿದ ಪ್ರೋಟಾನನ್ನು ತೆಗೆದುಕೊಂಡಲ್ಲಿ ನಮ್ಮ ಚರ್ಚೆ ಅತಿ ಸೀಮಿತವಾಗಲಾರದೆಂದೆನಿಸುತ್ತದೆ.

ಈ ಪುಟ್ಟ ಕಾಂತ ಪ್ರೋಟಾನನ್ನು ಇನ್ನೊಂದು ಕಾಂತ ಕ್ಷೇತ್ರದಲ್ಲಿಟ್ಟರೆ ಏನಾಗಬಹುದು? ವಸ್ತುವೊಂದರಲ್ಲಿ ಸದಾಕಾಲವು ಭ್ರಮಿಸುತ್ತಿರುವ ಪ್ರೋಟಾನುಗಳ ವರ್ತನೆಯನ್ನು ಬೇರೊಂದು ಕಾಂತಕ್ಷೇತ್ರದ ಸಹಾಯದಿಂದ ನಿಯಂತ್ರಿಸಬಹುದೆ? ಉತ್ತರ ದಕ್ಷಿಣ ಧ್ರುವಗಳು ಅದಲುಬದಲಾಗುವಂತೆ ಅವುಗಳನ್ನು ಪಲ್ಟಿ ಹೊಡೆಸಲು ಸಾಧ್ಯವೆ? ಎಂಬುದಾಗಿ ಬ್ಲಾಕ್ ಮತ್ತು ಪರ್ಸೆಲ್ ಯೋಚಿಸಿದರು.

ಈ ಸಂದರ್ಭದಲ್ಲಿ ತಿರುಗುವ ಬುಗುರಿಯ ಉದಾಹರಣೆ ತುಂಬಾ ಉಪಯುಕ್ತವಾದುದು. ಎಲ್ಲರಿಗೂ ತಿಳಿದಿರುವಂತೆ, ತಿರುಗುವ ಬುಗುರಿಯನ್ನು ಲಂಬಾಕ್ಷ (vertical axis)ದಿಂದ ಕೊಂಚ ನೂಕಿದಲ್ಲಿ ಅದು ಕೆಳಗೆ ಬೀಳುವುದಿಲ್ಲ. ಅದರ ಬದಲು ಬುಗುರಿಯು ಮೇಲ್ತುದಿ ಲಂಬಾಕ್ಷದ ಸುತ್ತಲೂ ನಿಧಾನವಾಗಿ ಪುರಸ್ಸರಣ (Precession) ಮಾಡತೊಡಗುತ್ತದೆ (ಚಿತ್ರ 1 ಅ). ಕೆಳಮುಖವಾಗಿ ವ್ಯವಹರಿಸುತ್ತಿರುವ ಗುರುತ್ವಾಕರ್ಷಣ ಶಕ್ತಿ ಬುಗುರಿಯ ಧ್ರುವಾಕ್ಷವನ್ನು ಇನ್ನೂ ಕೆಳಕ್ಕೆ ವಾಲಿಸದೆ ಅದು ಲಂಬಾಕ್ಷದ ಸುತ್ತ ಪುರಸ್ಸರಿಸುವಂತೆ ಪ್ರೇರೇಪಿಸುತ್ತದೆ. ಅದೇ ಪ್ರಕಾರವಾಗಿ ಭ್ರಮಿಸುತ್ತಿರುವ ಪ್ರೋಟಾನನ್ನು ಹೊರಗಿನ ಒಂದು ಕಾಂತಕ್ಷೇತ್ರದಲ್ಲಿಟ್ಟರೆ ಅದು ಪುರಸ್ಸರಿಸಲು ಪ್ರಾರಂಭಿಸುವುದೇ ವಿನಹ ಪಲ್ಟಿ ಹೊಡೆಯುವುದಿಲ್ಲ ಅಥವಾ ಇನ್ನೂ ವಾಲುವುದಿಲ್ಲ (ಚಿತ್ರ 1 ಬ). ಕಾಂತಶಕ್ತಿಯನ್ನು ಹೆಚ್ಚು ಮಾಡುತ್ತ ಹೋದಲ್ಲಿ ಪ್ರೋಟಾನು ಇನ್ನೂ ಹೆಚ್ಚಿನ ವೇಗದಿಂದ ಪುರಸ್ಸರಿಸುವುದೇ ಹೊರತು ಇನ್ನೇನೂ ಪ್ರಯೋಜನವಾಗಲಾರದು.

ಆದರೆ ಪ್ರೋಟಾನುಗಳ ಚಾಣಾಕ್ಷತನವನ್ನು ಮೀರಿಸಲು ಒಂದು ಮಾರ್ಗವಿದೆ. ಮೊದಲಿನ ಕಾಂತಕ್ಷೇತ್ರಕ್ಕೆ ಲಂಬವಾಗಿ ಇನ್ನೊಂದು ಕಾಂತಕ್ಷೇತ್ರವನ್ನು ಪ್ರಯೋಗಿಸೋಣ.




ಚಿತ್ರ 1. ಪ್ರದಕ್ಷಿಣೆ ಹಾಕುತ್ತಿರುವ ಬುಗುರಿಯ ಅಥವಾ ಪ್ರೋಟಾನಿನ ಕಾಂತಕ್ಷೇತ್ರದಲ್ಲಿನ
ಜೈರೋಸ್ಕೋಪಿಕ್ ಕ್ರಿಯೆ

(ಚಿತ್ರ 1 ಇ). ಈ ದೊಡ್ಡ ಕಾಂತಕ್ಷೇತ್ರವು ದೊರೆತರೆ ಕಾಂತಕ್ಷೇತ್ರದ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದರೆ [ಒಂದು ಕುಂಡಲ (coil) ದಲ್ಲಿ ಪ್ರತ್ಯಾವರ್ತಕ (a.c.) ವಿದ್ಯುತ್ತನ್ನು ಹಾಯಿಸುವುದರ ಮೂಲಕ ಈ ಪ್ರದಕ್ಷಿಣೆಯ ಕಾಂತ ಕ್ಷೇತ್ರವನ್ನು ಪಡೆಯಬಹುದು.] ಮತ್ತು ಈ ಪ್ರದಕ್ಷಿಣೆಯ ಆವರ್ತ ಸಂಖ್ಯೆಯು ಪ್ರೋಟಾನುಗಳ ಪ್ರದಕ್ಷಿಣೆ ಆವರ್ತ ಸಂಖ್ಯೆಯಷ್ಟೇ ಇದ್ದರೆ ಪ್ರೋಟಾನುಗಳು ತಲೆ ಕೆಳಗಾಗುತ್ತವೆ. ಸಂಕ್ಷೇಪವಾಗಿ,

ರೇಡಿಯೋ ತರಂಗಗಳ ವ್ಯಾಪ್ತಿಯಲ್ಲಿ ಪ್ರೋಟಾನುಗಳ ಪುರಸ್ಸರಣದ ಆವರ್ತ ಸಂಖ್ಯೆಗೆ ಶ್ರುತಿಮಾಡಿದಲ್ಲಿ ಅವುಗಳನ್ನು ಪಲ್ಟಿ ಹೊಡೆಸುವ ನಮ್ಮ ಉದ್ದೇಶವನ್ನು ಸಾಧಿಸಬಹುದು.


ಒಂದು ಹೊಸ ವರ್ಣಕ್ರಮ ಲೇಖನಶಾಸ್ತ್ರ

ಹೀಗಿರುವಾಗ ಅನುನಾದ-ಆವರ್ತ ಸಂಖ್ಯೆಯನ್ನು, ಪ್ರೋಟಾನುಗಳ ಮೇಲೆ ಅದರ ಪರಿಣಾಮವನ್ನು ಕಂಡುಹಿಡಿಯುವುದೇ ಇನ್ನು ಉಳಿದಿರುವ ಕೆಲಸ. ಪರ್ಸೆಲ್ ಮತ್ತು ಬ್ಲಾಚ್ ಇವರಿಬ್ಬರು ಪ್ರತ್ಯೇಕ-ಪ್ರತ್ಯೇಕ ಪ್ರಯೋಗ ತಂತ್ರಗಳನ್ನು ಉಪಯೋಗಿಸಿದರು. ಪರ್ಸೆಲ್ ಉಪಕರಣದಲ್ಲಿ ವಸ್ತುವಿನ ಪ್ರತಿದರ್ಶ (sample) ವನ್ನು



ಚಿತ್ರ 2 (ಅ) ಪರ್ಸೆಲ್ ಉಪಯೋಗಿಸಿದ ಬೈಜಿಕ ಕಾಂತ ಅನುನಾದದ ಉಪಕರಣ

ಕಾಂತದ ಎರಡು ಧ್ರುವಗಳ ಮಧ್ಯಭಾಗದಲ್ಲಿ ಇಡಲಾಗುತ್ತದೆ. (ಚಿತ್ರ 2 ಅ). ಇದರ ಸುತ್ತಲೂ ಪ್ರದಕ್ಷಿಣೆ ಹಾಕುವ ಕಾಂತಕ್ಷೇತ್ರವನ್ನು ಕೊಡುವ ಕುಂಡಲಿಯಿರುವುದು. ಈ ಕಾಂತಕ್ಷೇತ್ರದ ಆವರ್ತ ಸಂಖ್ಯೆಯು ಯಾವಾಗ ಪ್ರೋಟಾನುಗಳ ಪುರಸ್ಸರಣದ ಆವರ್ತ ಸಂಖ್ಯೆಯಷ್ಟೇ ಆಗುವದೋ ಆಗ ಪ್ರತಿದರ್ಶಿಯಲ್ಲಿರುವ ಪ್ರೋಟಾನುಗಳು ಕುಂಡಲಿಯಲ್ಲಿ ಹರಿಯುತ್ತಿರುವ ವಿದ್ಯುತ್ಪ್ರವಾಹದಿಂದ ಶಕ್ತಿಯನ್ನು ಹೀರಿಕೊಳ್ಳುವವು ಮತ್ತು ಪಲ್ಟಿ ಹೊಡೆಯುವವು. ಈ ಹೀರಿಕೊಂಡ ಶಕ್ತಿಯನ್ನು ಒಂದು ರೇಡಿಯೋ ಗ್ರಾಹಕಕ್ಕೆ ಹೋಗಿ ಮುಟ್ಟುತ್ತಿರುವ ಸಂಕೇತದಲ್ಲಿ ಉಂಟಾಗುವ ಅವನತಿ (dip)ಯು ಸೂಚಕ



ಚಿತ್ರ 2 (ಬ) ಬ್ಲಾಖ್ ಉಪಯೋಗಿಸಿದ ಬೈಜಿಕ ಕಾಂತ ಅನುನಾದದ ಉಪಕರಣ

ಅಭಿಲೇಖಿ (record) ಮಾಡಿಕೊಳ್ಳಬಹುದು. ಬ್ಲಾಖ್‌ರ ಗುಂಪು ಬೇರೊಂದು ಮಾರ್ಗವನ್ನು ಅನುಸರಿಸಿತು. ಪ್ರೋಟಾನುಗಳು ಲಾಗ ಹಾಕಿದೊಡನೆ, ಅವುಗಳ ಕಾಂತ ಕ್ಷೇತ್ರವು ಪ್ರತಿವರ್ತಿಯನ್ನು ಸುತ್ತುವರಿಯುವ ಎರಡನೆ ಕುಂಡಲವೊಂದರಲ್ಲಿ ವೋಲ್ಟತೆ (voltage) ಯನ್ನು ಪ್ರೇರೇಪಿಸುವವು ಮತ್ತು ಈ ಸಂಕೇತವು ಆವರ್ತ ದರ್ಶಕ (axcilloscope) ದ ಮೇಲೆ ದಾಖಲು (register) ಆಗುವದು. (ಚಿತ್ರ 2 ಬ).

ಪ್ರೋಟಾನಿನಂತೆಯೇ ಇಲೆಕ್ಟ್ರಾನು ಕೂಡ ವಿದ್ಯುದಾವಿಷ್ಟ ಮೂಲಭೂತ ಕಣ. ಇಲೆಕ್ಟ್ರಾನಿಗೂ ಅದರದೇ ಆದ ಭ್ರಮಣ ಮತ್ತು ಕಾಂತಭ್ರಾಮಕ ಶಕ್ತಿಗಳಿರುವವು. ಆದರೆ ಪ್ರೋಟಾನಿಗಿಂತಲೂ ಇಲೆಕ್ಟ್ರಾನು ಜಾಸ್ತಿ ವೇಗದಿಂದ ಪ್ರದಕ್ಷಿಣೆ ಹಾಕುತ್ತಿರುವುದರಿಂದ ಇದರ ಕಾಂತಕ್ಷೇತ್ರವು ಪ್ರೋಟಾನಿನ ಕಾಂತಕ್ಷೇತ್ರಕ್ಕಿಂತಲೂ ಹೆಚ್ಚು ಶಕ್ತಿಶಾಲಿಯಾದದ್ದು. ಇಲೆಕ್ಟ್ರಾನು ಕೂಡ ಕಾಂತ ಅನುನಾದವನ್ನು ಅನುಭವಿಸುತ್ತದೆ. ಇದು ಪ್ರೋಟಾನಿಗಿಂತಲೂ ಕಡಿಮೆ ದ್ರವ್ಯರಾಶಿಯುಳ್ಳದ್ದಾಗಿರುವುದರಿಂದಲೂ, ಹೆಚ್ಚು ಶಕ್ತಿಶಾಲಿಯಾದ ಕಾಂತವಾಗಿದ್ದುದರಿಂದಲೂ, ಒಂದು ನಿಶ್ಚಿತ ಕಾಂತಕ್ಷೇತ್ರದಲ್ಲಿ ಇದು ಪ್ರೋಟಾನಿಗಿಂತಲೂ ಹೆಚ್ಚಿನ ಆವರ್ತ ಸಂಖ್ಯೆಯಿಂದ ಪುರಸ್ಸರಿಸುವದು. ಹಾಗಾಗಿ ಪ್ರೋಟಾನುಗಳನ್ನು ಶ್ರುತಿ ಮಾಡಲು ರೇಡಿಯೋ ತರಂಗಗಳನ್ನು ಉಪಯೋಗಿಸಬೇಕಾಗಿದ್ದಲ್ಲಿ (11 ರಿಂದ 500 ಮೀ. ಉದ್ದದ ತರಂಗಗಳು—ಮನೆಯಲ್ಲುಪಯೋಗಿಸುವ ರೇಡಿಯೋದ ತರಂಗಗಳ ಸಮೀಪ) ಇಲೆಕ್ಟ್ರಾನ್ ಕಾಂತ ಅನುನಾದವನ್ನು ಪಡೆಯಲು

ಸೂಕ್ಷ್ಮತರಂಗ (microwave) ಗಳನ್ನು (1 ರಿಂದ 4 ಸೆಂ. ಮೀ. ಉದ್ದದ ತರಂಗಗಳು) ಉಪಯೋಗಿಸಬೇಕಾಗುತ್ತದೆ.


ಪ್ರೋಟಾನುಗಳ ಮತ್ತು ಇಲೆಕ್ಟ್ರಾನುಗಳ ಕಾಂತ ಅನುನಾದದಿಂದ ಪರಮಾಣು ಬೀಜಗಳು, ಪರಮಾಣುಗಳ ಮತ್ತು ಅಣುಗಳ ಬಗೆಗಿನ ಅದೆಷ್ಟೋ ಸಮಾಚಾರವನ್ನು ತಿಳಿದುಕೊಳ್ಳಬಹುದು. ಈ ಕಾಂತಾನ್ವೇಷಕ (magnetic probe)ವು ಹೊಸದೊಂದು ವರ್ಣಕ್ರಮ ಶೋಧನ ಶಾಸ್ತ್ರದ ತಳಹದಿ ಹಾಕಿತು.

ಅಣುಗಳ ರಚನೆ

ಉದಾಹರಣೆಗಾಗಿ ಸಾವಯವ ಸಂಯುಕ್ತ (organic compound) ವಾದ ಸೈಕ್ಲೋ ಪಕ್ಟೀನ(C_8H_8)ನ್ನು ತೆಗೆದುಕೊಳ್ಳೋಣ. ಬೈಜಿಕ ಕಾಂತ ಅನುನಾದವನ್ನು ಉಪಯೋಗಿಸಿ ಈ ಸಂಯುಕ್ತದ ಅನುನಾದ ವರ್ಣಕ್ರಮವನ್ನು ಪರೀಕ್ಷಿಸುವ ಈ ಅನುನಾದವನ್ನು ಪ್ರೋಟಾನುಗಳ ಪುರಸ್ಸರಣದ ಆವರ್ತ ಸಂಖ್ಯೆಯ ರೂಪದಲ್ಲಿ ಅಳೆಯೋಣ. ಅಂದರೆ ಪ್ರದಕ್ಷಿಣೆಯನ್ನು ಹಾಕುತ್ತಿರುವ ಕಾಂತಕ್ಷೇತ್ರದ ಆವರ್ತ ಸಂಖ್ಯೆಯನ್ನು ಬದಲಾಯಿಸಿ ಅನುನಾದವನ್ನು ತಲುಪುವ ಬದಲು ಪುರಸ್ಸರಣದ ಆವರ್ತ ಸಂಖ್ಯೆಯನ್ನು ನಿಯಂತ್ರಿಸುವ ಕಾಂತಕ್ಷೇತ್ರದ ಶಕ್ತಿಯನ್ನು ಬದಲಾಯಿಸಿ ಅನುನಾದವನ್ನು ಪಡೆಯೋಣ. ಅಂದರೆ ಬೀಜಗಳು ಪಲ್ಟಿಹೊಡೆಯುತ್ತಿರುವಾಗ ಇರುವ ಬಾಹ್ಯ ಕಾಂತಕ್ಷೇತ್ರದ ಶಕ್ತಿಯನ್ನು (ಗೌಸ್ ಅಥವಾ ಓರ್ಸ್ಟೆಡ್‌ಗಳಲ್ಲಿ ಅಳೆದು) ಅನುನಾದದ ಅಳತೆಯೆಂದು ತಿಳಿಯೋಣ.

ಗೃಹ ತಾಪಮಾನ (Room temperature) ದಲ್ಲಿ ಸೈಕ್ಲೋ-ಪಕ್ಟೀನಿನ ಪ್ರತಿದರ್ಶನವೊಂದನ್ನು ಸರಿಯಾದ ಕಾಂತಕ್ಷೇತ್ರಕ್ಕೊಳಪಡಿಸಿದರೆ ತೀಕ್ಷ್ಣವಾದ ಅನುನಾದ ರೇಖೆಯೊಂದು ದೊರೆಯುತ್ತದೆ. ಈ ಸಂಯುಕ್ತದ ಹೈಡ್ರೊಜನ್ ಬೀಜಗಳು ಒಂದು ನಿಶ್ಚಿತ ಕಾಂತಕ್ಷೇತ್ರದಲ್ಲಿ ಏಕ ಕಾಲದಲ್ಲಿ ಲಾಗ ಹಾಕುತ್ತವೆ [ಕಾರ್ಬನ್ ಪರಮಾಣುಗಳ ಮೇಲೆ ಅನುನಾದ ಪರಿಣಾಮವಾಗುವುದಿಲ್ಲ] ಈ ಸಂದರ್ಭದಲ್ಲಿ ಅನುನಾದ ರೇಖೆಯ ತೀಕ್ಷ್ಣತೆಯನ್ನು ವಿವರಿಸಬಹುದಾಗಿತ್ತು. ಪ್ರತಿಯೊಂದು ಬೀಜವೂ ಬಾಹ್ಯಕಾಂತಕ್ಷೇತ್ರದೊಂದಿಗೆ ಅಕ್ಕಪಕ್ಕದ ಬೈಜಿಕ ಕಾಂತಗಳ ಪ್ರಭಾವಕ್ಕೆ ಕೂಡ ಒಳಪಟ್ಟಿರುತ್ತದೆ. ಸುತ್ತಮುತ್ತಲಿನ ಪುಟ್ಟ ಕಾಂತಗಳು ಬೇರೆ ಬೇರೆ ದಿಕ್ಕುಗಳ ಕಡೆಗೆ ನಿರ್ದೇಶಿತವಾಗಿರುವುದರಿಂದ ಒಂದು ಬೀಜದ ಮೇಲಿರುವ ಒಟ್ಟು ಕಾಂತಕ್ಷೇತ್ರವು ಒಂದು ವಸ್ತುವಿನಲ್ಲಿ ಸ್ಥಳದಿಂದ ಸ್ಥಳಕ್ಕೆ ಬೇರೆಯಾಗಿರುತ್ತದೆ. ಇದರ ಪರಿಣಾಮವಾಗಿ ಬಾಹ್ಯ ಕಾಂತಕ್ಷೇತ್ರದೊಡನೆ ಬೇರೆ ಬೇರೆ ಬೀಜಗಳ ಆವೃತ್ತಿ ಬೇರೆಬೇರೆಯಾಗಿರುತ್ತದೆ. ಕೆಲವು ಬೀಜಗಳನ್ನು ಪಲ್ಟಿ ಹೊಡೆಸಲು ಇನ್ನುಳಿದ ಬೀಜಗಳಿಗಿಂತ ಸ್ವಲ್ಪ ಹೆಚ್ಚಿನ ಕಾಂತಕ್ಷೇತ್ರದ

ಅಗತ್ಯವುಂಟಾಗುತ್ತದೆ. ಹೀಗಾಗಿ ಬೀಜಗಳ ಈ ಗುಂಪಿನ ಅನುನಾದ ವ್ಯಾಪ್ತಿ (reson and range) ಒಂದು ತೀಕ್ಷ್ಣ ರೇಖೆಯಾಗಿರದೆ ಅಗಲವಾದ ಸಮೂಹ ಅಥವಾ ಪಟ್ಟಿ (band) ಯಾಗಿರುತ್ತದೆ. ಆದರೆ ದ್ರವ ಪದಾರ್ಥಗಳಲ್ಲಿ ಈ ಸ್ಥಳದಿಂದ ಸ್ಥಳಕ್ಕಾಗುವ ಬದಲಾವಣೆ ಅಣುಗಳ ವೇಗವಾದ ಅನಿಯಮಿತ (random) ಚಲನೆಯಿಂದ ಅತ್ಯಲ್ಪಕಾಲ ಪರಿಣಾಮವುಳ್ಳದ್ದಾಗಿರುವುದರಿಂದ ಎಲ್ಲ ಬೀಜಗಳು ಒಂದೇ ಸರಾಸರಿ



ಘನ ಪದಾರ್ಥಗಳು ದ್ರವ ಪದಾರ್ಥಗಳು


ಚಿತ್ರ 3 ಘನ ಮತ್ತು ದ್ರವಪದಾರ್ಥಗಳಲ್ಲಿನ ಕಾಂತ ಅನುನಾದ ರೇಖೆಗಳು

(average) ಕಾಂತಕ್ಷೇತ್ರಕ್ಕೊಳಪಟ್ಟಿರುತ್ತವೆ. ಈ ಕಾರಣದಿಂದ ಗೃಹತಾಪಮಾನದಲ್ಲಿ ದ್ರವವಾಗಿರುವ ಸೈಕ್ಲೋ ಹೆಕ್ಸೇನ್ ತೀಕ್ಷ್ಣವಾದೊಂದು ಅನುನಾದ ರೇಖೆಯನ್ನು ಕೊಡುತ್ತದೆ [ಚಿತ್ರ 3].

ಘನಪದಾರ್ಥಗಳಲ್ಲಿನ ಪರಿಸ್ಥಿತಿಯೇ ಬೇರೆ. ಪರಮಾಣುಗಳು ನಿಶ್ಚಿತ ಸ್ಥಳಗಳನ್ನು ಆಕ್ರಮಿಸಿರುವುದರಿಂದ ಸ್ಥಳದಿಂದ ಸ್ಥಳಕ್ಕೆ ಕಾಂತಕ್ಷೇತ್ರವು ಬೇರೆಬೇರೆಯಾಗಿದ್ದು ಘನ ಪದಾರ್ಥಗಳ ಅನುನಾದ ರೇಖೆ ಸರ್ವೇಸಾಮಾನ್ಯವಾಗಿ ಅಗಲವಾಗಿರುತ್ತದೆ. ತುಲನಾತ್ಮಕವಾಗಿ, ದ್ರವ ಪದಾರ್ಥಗಳ ಅನುನಾದರೇಖೆ ಒಂದು ಗೌಸಿನ 10.000 ದಲ್ಲಿ ಒಂದು ಭಾಗದಷ್ಟು ತೀಕ್ಷ್ಣವಾಗಿದ್ದರೆ ಘನಪದಾರ್ಥಗಳ ಅನುನಾದ ಪಟ್ಟಿ 20 ಗೌಸುಗಳಷ್ಟು ಅಗಲವಾಗಿರಬಹುದು. ಆದರೆ ಸೈಕ್ಲೋ ಹೆಕ್ಸೇನ್ ಒಂದು ವಿಶೇಷವಾದ ಮತ್ತು ಬೋಧಪ್ರದವಾದ ಉದಾಹರಣೆ. ಅತಿ ಶೈತ್ಯದಲ್ಲಿಟ್ಟು ಇದನ್ನು ಘನೀಭವಿಸಿದರೂ ಕೂಡ ಇದರ ಘನೀಭವನ ಬಿಂದುಗಿಂತ 90° ಸೆಂ. ಕಡಿಮೆ ತಾಪಮಾನದ

ಸಾಕಷ್ಟು ಇದರ ಅನುನಾದ ರೇಖೆ ತೀಕ್ಷ್ಣವೇ ಆಗಿರುತ್ತದೆ. ಇದರಿಂದ ಘನಪದಾರ್ಥಗಳಲ್ಲಿ ಕೂಡ ಅಣುಗಳು ಒಂದು ಪ್ರಕಾರದ ಚಲನೆ (motion) ಯಲ್ಲಿರುತ್ತವೆಂದು ಊಹಿಸಲು ಸಾಧ್ಯ. ಅಣುಗಳು ಸ್ಫಟಿಕದಲ್ಲಿನ ತಮ್ಮ ಸ್ಥಳಗಳ ಸುತ್ತ ಒಂದಲ್ಲ ಒಂದು ರೀತಿಯಲ್ಲಿ ಚಲಿಸುತ್ತಿರುತ್ತವೆ ಮತ್ತು ಈ ಕಾರಣದಿಂದ ಅವುಗಳ ಕಾಂತಕ್ಷೇತ್ರಗಳು ಸರಾಸರಿಯಾದೊಂದು ಮೌಲ್ಯವನು ಪಡೆದುಬಿಟ್ಟು ತೀಕ್ಷ್ಣ ಅನುನಾದ ರೇಖೆಯನ್ನು ನೀಡುತ್ತವೆ.

ಹಲವು ಘನ ಮತ್ತು ದ್ರವ ಪದಾರ್ಥಗಳ ಅನುನಾದ ರೇಖೆಗಳ ವಿವರವಾದ ಅಭ್ಯಾಸ ಇನ್ನೂ ಮಹತ್ವದ ಬೆಳವಣಿಗೆಗಳಿಗೆ ಕಾರಣವಾಯಿತು. ಜಿಪ್ಸಮ್‌ನಲ್ಲಿರುವ



ಚಿತ್ರ 4 ಅ) ನೀರಿನ ಅಣು HO-H ಗಳನ್ನು ಹೊಂದಿದ ಜಿಪ್ಸಮ್ ಸ್ಫಟಿಕ
ಬ) ಜಿಪ್ಸಮ್‌ನ ಕಾಂತ ಅನುನಾದ ವರ್ಣಕ್ರಮ


ಪ್ರೋಟಾನುಗಳು ನಾಲ್ಕು ಬೇರೆ ಬೇರೆ ಅನುನಾದ ರೇಖೆಗಳನ್ನು ನೀಡುತ್ತವೆ [ಚಿತ್ರ 4]. ಜಿಪ್ಸಮ್‌ನಲ್ಲಿನ ಕಾಂತಕ್ಷೇತ್ರವು ಸ್ಥಳದಿಂದ ಸ್ಥಳಕ್ಕೆ ಬೇರೆ ಬೇರೆಯಾಗಿರುವುದು ಇದರಿಂದ ವಿದಿತ. ತಾತ್ವಿಕ ವಿಶ್ಲೇಷಣೆಯಿಂದ. ಈ ಜ್ಞಾನವನ್ನು ಸ್ಫಟಿಕದಲ್ಲಿನ ಹೈಡ್ರೋಜನ್ ಪರಮಾಣುಗಳು ಎಲ್ಲೆಲ್ಲಿವೆ ಎಂಬುದನ್ನು ಗೊತ್ತುಹಚ್ಚಲು ಉಪಯೋಗಿಸಲಾಯಿತು. ಹೀಗೆ ಅನುನಾದವು ಕ್ಷ-ಕಿರಣ ಮತ್ತು ನ್ಯೂಟ್ರಾನ್ ತಂತ್ರಗಳಿಗೆ ಪೂರಕವಾದ. ಸ್ಫಟಿಕಗಳ ರಚನೆಯನ್ನು ತಿಳಿಯುವ ಒಂದು ಮಹತ್ವಪೂರ್ಣವಾದ ಸಾಧನವೆಂಬುದರ ಅರಿವಾಯಿತು. ಹೈಡ್ರೋಜನ್ (ಜಲಜನಕ). ಲೀಥಿಯಮ್ ಮುಂತಾದ ಹಗುರಾದ ಬೀಜಗಳು ಕ್ಷ ಕಿರಣಗಳನ್ನು ತುಂಬಾ ಕಡಿಮೆ ಪ್ರಮಾಣದಲ್ಲಿ ಬಾಗಿಸುವುದರಿಂದ ಕ್ಷ ಕಿರಣಗಳ ಉಪಯೋಗ ಇಂಥ ಪರಮಾಣುಗಳ ವಿಷಯದಲ್ಲಿ ಕಡಿಮೆ. ಆದರೆ ಅದೇ ಕೆಲಸವನ್ನು ಕಾಂತ ಅನುನಾದವು ತುಂಬಾ ತೃಪ್ತಿಕರವಾಗಿ ಮಾಡಬಲ್ಲದು. ಇಂದು ಜಗತ್ತಿನ ನಾನಾ ಭಾಗಗಳಲ್ಲಿ ಸ್ಫಟಿಕಗಳ ರಚನೆಯನ್ನು ತಿಳಿಯಲು ಕಾಂತ ಅನುನಾದವನ್ನು ತುಂಬಾ ಯಶಸ್ವೀ ರೀತಿಯಿಂದ ಬಳಸಲಾಗುತ್ತಿದೆ.

ಸ್ಫಟಿಕಗಳಿಂದ, ವಿಜ್ಞಾನಿಗಳ ಲಕ್ಷ್ಯ ಸ್ವಾಭಾವಿಕವಾಗಿಯೇ ರಬ್ಬರ್. ಪಾಲಿಥಿಲೀನ್ ಮತ್ತು ಉಳಿದ ಪ್ಲಾಸ್ಟಿಕ್ ವಸ್ತುಗಳ ಘಟಕಗಳಾದ ದೈತ್ಯಾಣು (giant molecule) ಗಳ ಕಡೆಗೆ ಹೊರಳಿತು. ಈ ವಸ್ತುಗಳು ಎಷ್ಟರಮಟ್ಟಿಗೆ ವ್ಯವಸ್ಥಿತವಾಗಿರುವವು, ಸ್ಫಟಿಕೀಯವಾಗಿರುವವು ಎಂಬುದನ್ನು ಅರಿಯುವದು ಇವುಗಳ ರಚನಾ-ವಿಶ್ಲೇಷಣೆಯಲ್ಲಿ ಒಂದು ಮಹತ್ವದ ಹೆಜ್ಜೆ. ಸಿ. ಡಬ್ಲ್ಯು. ವಿಲ್ಸನ್ ಎಂಬ ವಿಜ್ಞಾನಿ ಕಾಂತ ಅನುನಾದವು ಈ ವಿಚಾರವನ್ನು ತಿಳಿಯಲು ತುಂಬ ಉಪಯುಕ್ತವೆಂಬುದನ್ನು ತೋರಿಸಿಕೊಟ್ಟರು.

ಅಣುಗಳ ಹೆಬ್ಬೆರಳೊತ್ತು

ಆದರೆ ರಚನಾ-ವಿಶ್ಲೇಷಣೆಯ ಕ್ಷೇತ್ರದಲ್ಲಿ ಮಹಾ ವಿಜಯವನ್ನು ಕಾಂತ ಅನುನಾದವು ಸಾಧಿಸಿದ್ದು ದ್ರವ ಪದಾರ್ಥಗಳಲ್ಲಿ ಈ ಮೊದಲೇ ಹೇಳಿದಂತೆ ದ್ರವ ಪದಾರ್ಥಗಳಲ್ಲಿ ಸ್ಥಳೀಯ ಕಾಂತಕ್ಷೇತ್ರವು ಏಕರೂಪ (uniform) ವಾಗಿರುವುದರಿಂದ ಅವು ತೀಕ್ಷ್ಣವಾದ ಅನುನಾದ ರೇಖೆಯನ್ನು ನೀಡುತ್ತವೆ. ಆದರೆ ಅತ್ಯಂತ ಏಕರೂಪವಾದ (homogeneous) ಬಾಹ್ಯ ಕಾಂತಕ್ಷೇತ್ರದಲ್ಲಿ ದ್ರವಗಳ ಅನುನಾದವನ್ನು ಪರೀಕ್ಷಿಸಲಾಗಿ ಕೆಲವು ಅನಿಯಮಿತತೆಗಳು (irregularities) ಕಂಡುಬರುವವು. ಇಂಥ ಉದಾಹರಣೆಗಳಲ್ಲಿ ಅನುನಾದ ವರ್ಣಕ್ರಮವನ್ನು ಆ ಅಣುವಿನ ಹಸ್ತಮುದ್ರೆಯಂತೆ ಪರಿಗಣಿಸಬಹುದು. ಈ ಜ್ಞಾನವನ್ನುಪಯೋಗಿಸುವ ಅತಿ ವಿಘಟಕ ಕಾಂತ ಅನುನಾದವೂ (high resolution NMR) ರಸಾಯನ ಶಾಸ್ತ್ರಜ್ಞರಿಗೆ ಅತ್ಯುಪಕಾರಿಯಾದ ಸಾಧನವಾಗಿದೆ.

ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯದ ಜೇಮ್ಸ್ ಅರ್ನಾಲ್ಡ್ ಮತ್ತು ಮಾರ್ಟಿನ್ ಪ್ಯಾಕಾರ್ಡ. ಅತ್ಯಧಿಕ ಏಕರೂಪತೆ ಇರುವ ಬಾಹ್ಯ ಕಾಂತಕ್ಷೇತ್ರವನ್ನುಪಯೋಗಿಸಿ ಇಥೈಲ್ ಅಲ್ಕೋಹಾಲಿನ ಪ್ರೊಟೋನುಗಳ ಅನುನಾದವನ್ನು ಮೂರು ಪ್ರತ್ಯೇಕವಾದ ರೇಖೆಗಳಲ್ಲಿ ವಿಂಗಡಿಸಲು ಸಮರ್ಥರಾದರು (ಚಿತ್ರ 5). ಇವು ಈ ಅಣುವಿನ ಘಟಕಗಳಾದ CH_3. CH_2 ಮತ್ತು OH ಈ ಮೂರು ಬೇರೆ ಬೇರೆ ಗುಂಪುಗಳನ್ನು ಪ್ರತ್ಯೇಕಿಸಿದವು. ಇದಕ್ಕೆ ಕಾರಣ ಇಲೆಕ್ಟ್ರಾನುಗಳ ಪರಿರಕ್ಷಣ ಪರಿಣಾಮ (shielding effect) ದಿಂದ ಈ ಮೂರು ಗುಂಪುಗಳಲ್ಲಿನ ಹೈಡ್ರೋಜನ್ (ಜಲಜನಕ) ದ ಬೀಜಗಳು ಬಾಹ್ಯ ಕಾಂತಕ್ಷೇತ್ರದಿಂದ ಬೇರೆ ಬೇರೆ ಪ್ರಮಾಣಗಳಲ್ಲಿ ಪ್ರಭಾವಿತವಾಗುವವು. ಒಂದು ಅಣುವಿನ ಸಂಘಟನೆಯಾಗುವಾಗ ಸಾಮಾನ್ಯವಾಗಿ ಇಲೆಕ್ಟ್ರಾನುಗಳು ಜೊತೆ-ಜೊತೆಯಾಗಿರುವುದರಿಂದ ಅವು ತಮ್ಮದೇ ಆದ ಕಾಂತತ್ವವನ್ನು ತೋರಿಸದಿದ್ದರೂ. ಬಾಹ್ಯ ಕಾಂತಕ್ಷೇತ್ರವು ಬೀಜಗಳ ಸುತ್ತಲಿನ ಇಲೆಕ್ಟ್ರಾನುಗಳ ಪ್ರದಕ್ಷಿಣೆಯನ್ನು ಕೊಂಚ ಬದಲಾಯಿಸುವದು. ಈ ಪ್ರಕಾರವಾಗಿ ಪ್ರೇರಿತವಾದ ಚಲನೆಗಳು ಕಾಂತಕ್ಷೇತ್ರಕ್ಕೆ ವಿರುದ್ಧ ದಿಕ್ಕಿನಲ್ಲಿ ಅತಿ ಚಿಕ್ಕದಾದೊಂದು ಕಾಂತಕ್ಷೇತ್ರವನ್ನು ಹುಟ್ಟಿಸುವವು. ಈ ಪ್ರೇರಿತ ವಿಷಮಕಾಂತತ್ವ



ಚಿತ್ರ 5 (ಅ) ಇಥೈಲ್ ಆಲ್ಕೊಹಾಲಿನ ರಾಸಾಯನಿಕ ಸೂತ್ರ

(ಬ) ಏಕರೂಪ ಕಾಂತಕ್ಷೇತ್ರದಲ್ಲಿ ಇಥೈಲ್ ಆಲ್ಕೊಹಾಲಿನ ಅನುನಾದ ವರ್ಣಕ್ರಮ

(ಕ) ಅತ್ಯಧಿಕ ಏಕರೂಪ ಕಾಂತಕ್ಷೇತ್ರದಲ್ಲಿನ ಅನುನಾದ ವರ್ಣಕ್ರಮ

(induced diamagnestism) ಬೀಜಗಳನ್ನು ಬಾಹ್ಯ ಕಾಂತಕ್ಷೇತ್ರದಿಂದ ಕೊಂಚ ಮರೆಮಾಡುತ್ತದೆ. ಬೇರೆ ಬೇರೆ ಗುಂಪುಗಳು ಬೇರೆ ಬೇರೆ ಪ್ರಮಾಣಗಳಲ್ಲಿ ಪರಿರಕ್ಷಿತ ವಾಗಿರುವದರಿಂದ ಇಥೈಲ್ ಆಲ್ಕೋಹಾಲಿನಲ್ಲಿ ಮೂರು ಬೇರೆ ಬೇರೆ ಗುಂಪು ಗಳಲ್ಲಿರುವ ಪ್ರೋಟಾನುಗಳು ಮೂರು ಬೇರೆ ಬೇರೆ ಅನುನಾದ ರೇಖೆಗಳನ್ನು ಪ್ರಕಟಿ ಸುವವು.

ಇನ್ನೂ ಅಧಿಕವಾದ ವಿಘಟನದಿಂದ (ಅಂದರೆ ಇನ್ನೂ ಹೆಚ್ಚುವ ಏಕರೂಪ ವಾದ ಕಾಂತಕ್ಷೇತ್ರವನ್ನುಪಯೋಗಿಸಿ) ಇಥೈಲ್ ಆಲ್ಕೋಹಾಲಿನ ಕಾಂತ ಅನು ನಾದ ವರ್ಣಕ್ರಮವು ಆಶ್ಚರ್ಯಕರವಾದ ಅನುನಾದರೇಖೆಗಳ ಸರಣಿಯಾಗಿರುವದನ್ನು ಕಾಣಬಹುದು (ಚಿತ್ರ 5). ಈ ವರ್ಣಕ್ರಮವು ಈ ಅಣುವಿನ ಹಸ್ತಾಕ್ಷರವಾಗಿರು ವದೇ ಅಲ್ಲದೆ ಅಣುವಿನ ರಚನೆಯ ಬಗೆಗೂ ಇದು ತುಂಬಾ ಜ್ಞಾನವನ್ನು ಕೊಡ ಬಲ್ಲುದು. ಇಂಥ ಹಸ್ತಮುದ್ರೆಗಳಿಂದ ರಸಾಯನ ಶಾಸ್ತ್ರಜ್ಞರು ಅಣುವಿನ ವರ್ತನೆ ಯನ್ನು ಪೂರ್ವಭಾವಿಯಾಗಿಯೇ ನಿರ್ಣಯಿಸಬಹುದಾಗಿದೆ.

ಇಂದು ರಸಾಯನ ಶಾಸ್ತ್ರಜ್ಞರು ರಸಾಯನ ವಿಜ್ಞಾನದ ಎಲ್ಲ ಶಾಖೋಪ ಶಾಖೆಗಳಲ್ಲಿ, ಸೋಪು ಮತ್ತು ಮೋಟಾರೆಣ್ಣೆಯಿಂದ ಪ್ರಾರಂಭಿಸಿ ಸಜೀವ ವಸ್ತುಗಳ ಅತಿ ಕ್ಲಿಷ್ಟ ಅಣುಗಳ ತನಕ ರಚನೆಯ ಗುಟ್ಟನ್ನು ಅರಿಯಲು ಕಾಂತ ಅನುನಾದವನ್ನು ಎಡೆಬಿಡದೆ ಉಪಯೋಗಿಸುತ್ತಿದ್ದಾರೆ. ಈ ಹೊಸ ವಿಶ್ಲೇಷಣ ಸಾಧನದ ಒಂದು ವೈಶಿಷ್ಟ್ಯವೆಂದರೆ ಇದು ವಿಶ್ಲೇಷಿಸಲ್ಪಡುತ್ತಿರುವ ವಸ್ತುವನ್ನು ವಿನಾಶಮಾಡುವುದಿಲ್ಲ. ಪ್ರತಿದರ್ಶಿಯನ್ನು ಕುಂಡಲದಲ್ಲಿಟ್ಟರಾಯಿತು. ರೇಡಿಯೋ ಅಲೆಗಳನ್ನೂ ಕಾಂತಕ್ಷೇತ್ರ ವನ್ನೂ ಪ್ರಯೋಗಿಸಿದರಾಯಿತು. ಅನುನಾದವನ್ನು ಅಭಿಲೇಖಿಸ ಮಾಡಿಕೊಂಡು ಪ್ರತಿದರ್ಶಿಯನ್ನು ಬೇರೆ ಉಪಯೋಗಕ್ಕೆ ತೆಗೆದಿಟ್ಟರಾಯಿತು. ಈ ಸಾಧನ ವಿಷ್ಟು ಅನುಕೂಲವಾಗಿರುವುದೆಂದರೆ ಜೀವಂತ ಇಲಿ ಹೆಗ್ಗಣಗಳ ಅನುನಾದ ವರ್ಣಕ್ರಮ ಗಳನ್ನು ಕೂಡ ಅಭಿಲೇಖನ ಮಾಡಿಕೊಳ್ಳಲಾಗಿದೆ.

ಭೂಕಾಂತಕ್ಷೇತ್ರದ ನಿರ್ಣಯ

ಕಾಂತ ಅನುನಾದದ ಕಟ್ಟಕೊನೆಯ ಉದಾಹರಣೆಯಾಗಿ ಉಳಿದವುಗಳಿಗಿಂತ ತೀರ ಭಿನ್ನವಾದೊಂದು ಉಪಯೋಗವನ್ನು ಆರಿಸಿಕೊಳ್ಳೋಣ — ಭೂಮಿಯ ಕಾಂತ ಕ್ಷೇತ್ರದ ಪರಿಶೋಧನೆಯೇ ಅದು.

ದ್ರವ ಪದಾರ್ಥವೊಂದರ ಅನುನಾದವನ್ನು ಅವಗಾಹಿಸಲು ತೀರ ನಿಷ್ಕೃಷ್ಟವಾದ ಕಾಂತಕ್ಷೇತ್ರವನ್ನು ಉಪಯೋಗಿಸಬೇಕೆಂಬುದನ್ನು ನೋಡಿದೆವು. ಆ ವಿಧಾನವನ್ನೇ ಒಂದು ಮುಂದು ಮಾಡಿದರೆ ಕಾಂತಕ್ಷೇತ್ರವನ್ನು ಅತ್ಯಂತ ನಿಷ್ಕೃಷ್ಟವಾಗಿ ಅಳೆಯಬಹು ದಲ್ಲವೆ? ಆದರೆ ಭೂ ಕಾಂತಕ್ಷೇತ್ರವನ್ನು ಅಳೆಯುವಾಗ ಎದುರಿಸಬೇಕಾದ ದೊಡ್ಡ

ದೊಂದು ಕಷ್ಟ. ಅದರ ಅತಿ ಕಡಿಮೆಶಕ್ತಿ ಅರ್ಧಗೌಸಿಗಿಂತಲೂ ಕಡಿಮೆ. ಪ್ರಯೋಗಶಾಲೆಯಲ್ಲಿ ಸಾವಿರಗಟ್ಟಲೆ ಗೌಸ್ ಶಕ್ತಿಯ ಕಾಂತಕ್ಷೇತ್ರವನ್ನು ಉಪಯೋಗಿಸಿ ಅಭ್ಯಸಿಸುವ ಅನುನಾದಕ್ರಿಯೆಯನ್ನು ಉಪಯೋಗಿಸಿ ಈ ಗುರಿಯನ್ನು ಸಾಧಿಸುವದು ವಿಜ್ಞಾನಿಗಳೆದುರಿಸಿದ ದೊಡ್ಡದೊಂದು ಆಹ್ವಾನವೇ ಆಗಿತ್ತು. ಆದರ ರಸೆಲ್ ವೇರಿಯನ್ ಮತ್ತು ಪ್ಯಾಕಾರ್ಡ ಈ ಸಮಸ್ಯೆಯನ್ನು ಚತುರಪೂರ್ಣವಾದ ವಿಧಾನವೊಂದರ ಮೂಲಕ ಬಗಿಹರಿಸಿದರು.

ಅವರ ಉಪಕರಣದಲ್ಲಿ, ಪ್ರಾರಂಭದಲ್ಲಿ. ದ್ರವಪದಾರ್ಥವೊಂದರಲ್ಲಿನ ಪ್ರೋಟಾನುಗಳನ್ನು ನಿರ್ಬಲವಾದ ಕಾಂತಕ್ಷೇತ್ರವೊಂದರೊಡನೆ ಸಾಲುಗೂಡಿಸಲಾಗುತ್ತದೆ. ಎಲ್ಲ ಪ್ರೋಟಾನುಗಳೂ ಒಂದೇ ದಿಕ್ಕಿನತ್ತ ನಿರ್ದೇಶಿತವಾಗಿರುವುದರಿಂದ ಇಡೀ ಪ್ರತಿದರ್ಶಿಯನ್ನೇ ಒಂದು ಪುಟ್ಟ ಕಾಂತವನ್ನಾಗಿ ತಿಳಿಯಬಹುದು. ಆಮೇಲೆ ಧ್ರುವೀಕರಿಸುವ (polorising) ಈ ಕಾಂತಕ್ಷೇತ್ರವನ್ನು ಹಠಾತ್ತಾಗಿ ಆರಿಸಲಾಗುತ್ತದೆ. ಪ್ರೋಟಾನುಗಳ ಕಾಲ್ಕೆಳಗಿಂದ ಕಾಂತೀಯ ಕಣ್ಣನ್ನು ಎಳೆದುಹಾಕಿದಂತೆ. ಇಲ್ಲಿಯತನಕ ಭೂಕಾಂತ ದಿಕ್ಕಿನತ್ತ ನಿರ್ದೇಶಿತವಾಗಿರದೇ ಇದ್ದ ಕಾಂತಗಳು ಈ ದಿಕ್ಕಿನ ಸುತ್ತ ಪುರಸ್ಸರಣ ಮಾಡತೊಡಗುತ್ತವೆ. ಅವುಗಳ ಸಂರೇಖಣೆ (alignment) ಯು ಒಡನೆಯೆ ನಾಶವಾಗತೊಡಗುತ್ತದೆ. ಆದರೆ. ಪ್ರವಾಹೀ ಬೆಂಜೀನ್ ನಲ್ಲಿ ಅದು ಸುಮಾರು ೨೦ ಸೆಕೆಂಡುಗಳ ತನಕ ಹಾಗೆಯೇ ಇರುತ್ತದೆ. ಇಷ್ಟು ಹೊತ್ತು ಕಾಂತಕ್ಷೇತ್ರವನ್ನು ೧೦ ಮಿಲಿಯಗಳಲ್ಲಿ ಒಂದು ಭಾಗದಷ್ಟು ನಿಷ್ಕೃಷ್ಟವಾಗಿ ಅಳೆಯಲು ಸಾಕಾಗುತ್ತದೆ. ಈ ಅಳತೆಯು ತೀರ ಸರಳ. ಪ್ರೋಟಾನುಗಳ ಪುರಸ್ಸರಣದ ಆವರ್ತ ಸಂಖ್ಯೆಗೆ ಶ್ರುತಿಮಾಡಿದರಾಯಿತು. ಭೂಕಾಂತಕ್ಷೇತ್ರವೇ ಪುರಸ್ಸರಣದ ಮೂಲ ಕಾರಣವಾಗಿರುವದರಿಂದ ಪುರಸ್ಸರಣದ ಆವರ್ತಸಂಖ್ಯೆಯಿಂದ ಕಾಂತಕ್ಷೇತ್ರದ ಮೌಲ್ಯವನ್ನು ಕಂಡುಹಿಡಿಯಬಹುದು.

ಪ್ರೋಟಾನ್ ಪುರಸ್ಸರಣ ಕಾಂತಮಾಪಕ (Proton precessional magnetometer) ಎಂದು ಹೆಸರಿಸಲ್ಪಟ್ಟ ಈ ಅದ್ಭುತ ಸಂವೇದನೆ (sensitivity)ಯ ಉಪಕರಣವನ್ನು ಭೂಕಾಂತಕ್ಷೇತ್ರದ ಮಾರ್ಪಾಡನ್ನು ಕಂಡುಹಿಡಿಯಲು ಬಳಸಬಹುದು. ಈಗಾಗಲೇ ಇದನ್ನು ಖನಿಜಗಳಿಗಾಗಿ ಭೂಮಿಯ ಸರ್ವೇಕ್ಷಣವನ್ನು ಭೂಮಿಯ ಮೇಲೂ, ವಿಮಾನಗಳ ಮೇಲಿಂದಲೂ ಮಾಡಲು ಉಪಯೋಗಿಸಲಾಗಿದೆ. ಹಾರಿಬಿಟ್ಟ ರಾಕೆಟ್ಟುಗಳಲ್ಲಿ ಇದನ್ನಿಟ್ಟು ಭೂಮಿಯಿಂದ ಎತ್ತರ ಎತ್ತರ ಹೋದಂತೆ ಬದಲಾಗುವ ಕಾಂತಕ್ಷೇತ್ರವನ್ನು ಅಳೆಯಲಾಗಿದೆ. ಕೃತಕ ಉಪಗ್ರಹಗಳಲ್ಲಿ ಕೂಡ ಇದನ್ನು ಹಾರಿಬಿಡಲಾಗಿದೆ.

ಬೈಜಿಕ ಕಾಂತ ಅನುನಾದದ ಅವಳಿಗಳಾದ ಇಲೆಕ್ಟ್ರಾನ್ ಸಮಕಾಂತೀಯ ಅನುನಾದ (electron paramagnetic resonance) ಮತ್ತು ಬೈಜಿಕ ಧ್ರುವ

ಚತುಷ್ಟಯ ಅನುನಾದ (nuclear quadrupole resonance) ಗಳು ಕೂಡ ವಸ್ತುರಚನೆಯ ಕ್ಲಿಷ್ಟಾತಿಕ್ಲಿಷ್ಟವಾದ ರಹಸ್ಯಗಳನ್ನರಿಯಲು ಅತ್ಯುಪಕಾರಿಯಾಗಿವೆ. ಇನ್ನೂ ಸುಧಾರಿಸಿದ ಪ್ರಯೋಗ ತಂತ್ರಗಳಾದ ಓವರ ಹೌಸರ್ ಪರಿಣಾಮ, ಇಲೆಕ್ಟ್ರಾನ್ ಬೈಜಿಕ ಅನುನಾದದ್ವಯಂ (electron-nuclear double resonance) ಮುಂತಾದುವುಗಳನ್ನೂ, ಲೋಹ ವಿದ್ಯುಚ್ಛಕ್ತಿ (ferro electricity) ಯೇ ಮುಂತಾದ ವಸ್ತು-ಸ್ಥಿತ್ಯಂತರ (phase transition) ಗಳ ಆಗುಹೋಗುಗಳನ್ನರಿಯಲು ಡ್ಯೂಟರಾನ್ ಕಾಂತ ಅನುನಾದದ ಉಪಯೋಗವನ್ನೊಳಗೊಂಡು ಕಾಂತ ಅನುನಾದದ ಇನ್ನೂ ಅಗಣಿತವಾಗಿರುವ ಉಪಯೋಗಗಳನ್ನೂ ಸ್ಥಳಾಭಾವದ ಮೂಲಕ ಹೆಸರಿಸಿಯೇ ತೃಪ್ತಿ ಪಡಬೇಕಾಗಿದೆ.

ಪರ್ಸೆಲ್ ಮತ್ತು ಬ್ಲಾಃಖ್ ಅವರು ಮಾಡಿದ ಪ್ರೋಟಾನಿನ ಕಾಂತತ್ವದ ಕುರಿತಾದ ಮೂಲಭೂತ ಅಭ್ಯಾಸ ಇಂತಹ ಬೆಳವಣಿಗೆಗಳಿಗೆ ಎಡೆಕೊಡುತ್ತದೆಂದು ಕನಸಾದರೂ ಕಂಡಿದ್ದರೊ ಇಲ್ಲವೋ !

ಗ್ರಂಥಋಣ

1. The Principles of Nuclear Magnetism,
   by A. Abragam. Clarendon Press, Oxford (1961).
2. Principles of Magnetic Resonance.
   by C. P. Slichter. Harper and Row, Publishers, New York (1965).
3. Magnetic Resonance.
   by G. E. Pake *Scientific American.* **199** (2), pp. 58–66. (1958).
4. Nuclear Magnetism in relation to problems of the liquid and solid states,
   by E. M. Purcell, *Science,* **107**, pp. 433–440 (1948).

ಇಂಗ್ಲಿಷ್ ಭಾಷೆ: ಹುಟ್ಟು, ಬೆಳವಣಿಗೆ (ಅಮೆರಿಕನ್ ಇಂಗ್ಲಿಷೂ ಸೇರಿ)

ಎಸ್. ಕೃಷ್ಣಭಟ್ಟ

ಇಂಗ್ಲಿಷ್ ವಿಶಾಲಾರ್ಥದಲ್ಲಿ, ಇಂಗ್ಲಿಷರು ಬ್ರಿಟನ್ನಿನಲ್ಲಿ ನೆಲಸಿದಂದಿನಿಂದ ಇದುವರೆಗೂ ಉಪಯೋಗಿಸುತ್ತಿರುವ ಭಾಷೆ, ಅದರ ವಿಭಾಗಗಳು ಹಾಗೂ ಒಳನುಡಿಗಳು (dialects) —ಇವುಗಳಿಗೆ ಬಂದಿರುವ ಹೆಸರು. ಇದರ ಚರಿತ್ರೆ ಪ್ರಾರಂಭವಾಗುವುದು ಕ್ರಿ.ಶ. 5ನೇ ಶತಮಾನದಲ್ಲಿ; ಆಗ ಬ್ರಿಟನ್ನನ್ನು ಗೆದ್ದ ಆಂಗ್ಲರು, ಸಾಕ್ಸನ್ನರು ಮತ್ತು ಜೂಟರೊಡನೆ ಬಂದ ಒಳನುಡಿಗೂ (ಆಡುನುಡಿಗೂ), ಹಳೆಯ ಇಂಗ್ಲಿಷಿಗೂ ತುಂಬಾ ಸಾಮ್ಯವಿತ್ತು. ಈ ಆಂಗ್ಲೋ–ಸಾಕ್ಸನ್ ಭಾಷೆಯು ಆರ್ಯನ್ ಭಾಷೆಗಳ ಕುಟುಂಬದ ಇಂಡೋ–ಜರ್ಮಾನಿಕ್ ವರ್ಗಕ್ಕೆ ಸೇರಿದೆ. ಮೂರು ವಿಭಾಗಗಳು:

1. ಪ್ರಾಚೀನ ಇಂಗ್ಲಿಷ್
   Old English ಕ್ರಿ. ಶ. ಸುಮಾರು 700 ರಿಂದ 1150
2. ಮಧ್ಯಕಾಲೀನ ಇಂಗ್ಲಿಷ್
   Middle English " 1150 ರಿಂದ 1500
3. ಆಧುನಿಕ ಇಂಗ್ಲಿಷ್
   Modern English " 1500 ರಿಂದ ಇಂದಿನವರೆಗೆ

ಪ್ರಾಚೀನ ಇಂಗ್ಲಿಷ್‌ನ ಕಾಲದಲ್ಲಿ ಇದು ಕೇವಲ ಗ್ರಾಮ್ಯ ಅಥವಾ ಮಾತಿನ ಭಾಷೆಯಾಗಿತ್ತು. ವಿಭಕ್ತಿ, ಕಾಲ ಮುಂತಾದ ವ್ಯಾಕರಣದ ಸಂಬಂಧಗಳನ್ನು ತಿಳಿಸಲು ಪದಗಳ ಅಂತ್ಯದಲ್ಲಿ ಪ್ರತ್ಯಯಗಳನ್ನು ಜೋಡಿಸುತ್ತಿದ್ದರು. ಉದಾ: eallum mannum ಅಂದರೆ to all men (ಎಲ್ಲಾ ಜನರಿಗೂ). ಕ್ರಮೇಣ, ಡೇನಿಷ್ ಮತ್ತು ಇತರ ಭಾಷೆಗಳ ಪ್ರಭಾವದಿಂದ ಅಂತ್ಯ ಪ್ರತ್ಯಯಗಳ ಪ್ರಯೋಗ ಕಡಿಮೆಯಾಗುತ್ತಾ ಬಂದಿತು. ಕ್ರಿಸ್ತಮತದ ಪ್ರಚಾರದಿಂದಾಗಿ hymn (ಸ್ತೋತ್ರ), Priest (ಪುರೋಹಿತ), School (ಪಾಠಶಾಲೆ) ಮುಂತಾದ ಶಬ್ದಗಳು ಲ್ಯಾಟಿನ್‌ನಿಂದ ಬಂದವು. 9, 10ನೇ ಶತಮಾನಗಳಲ್ಲಿ ದಂಡಯಾತ್ರೆಮಾಡಿದ ಸ್ಕ್ಯಾಂಡಿನೇವಿಯನ್ನರ ಭಾಷೆಯಿಂದ, ಕಾನೂನು ಹಾಗೂ ಪುನರ್ವ್ಯವಸ್ಥೆಗೆ ಸಂಬಂಧಿಸಿದ ಕೆಲವು ಶಬ್ದಗಳೂ, they (ಅವರು, ಅವು), their (ಅವರ, ಅವುಗಳ)

ಮುಂತಾದ ಸರ್ವನಾಮಗಳೂ ಬಂದವು: ನಾಮಪದಗಳಿಗೂ, ಸರ್ವನಾಮಗಳಿಗೂ ಇದ್ದ ಲಿಂಗಗಳು ಅದೃಶ್ಯವಾದುವು. ಈ ಕಾಲದಲ್ಲಿ ಶೈಲಿ ಹಾಗೂ ಪ್ರಯೋಗಗಳಲ್ಲಿನ ಅವ್ಯವಸ್ಥೆಯನ್ನು ಸುಧಾರಿಸಲು ನಿಧಾನವಾಗಿ "ಶಿಷ್ಟ ಭಾಷೆ" (Standard English) ಯೊಂದರ ಉಗಮವಾಗುತ್ತಿತ್ತು.

11ನೇ ಶತಮಾನದಲ್ಲಿ ನಾರ್ಮನರ ವಿಜಯದ ನಂತರ ನಾರ್ಮನ್-ಫ್ರೆಂಚ್ ಭಾಷೆಯು ಬ್ರಿಟನ್ನಿನ ಅಧಿಕೃತ ಭಾಷೆಯಾಗಿತ್ತು. ಈ ಎಲ್ಲ ಪ್ರಭಾವಗಳಿಂದ, ಪ್ರತ್ಯಯಗಳ ಜೋಡಣೆ ಇನ್ನೂ ಶಿಥಿಲಗೊಳ್ಳುತ್ತಾ ಬಂದು, ಚಾಸರನ ಕಾಲಕ್ಕೆ ಬಹುಮಟ್ಟಿಗೆ ಇಲ್ಲದಂತಾಯಿತು; ಅಥವಾ ದುರ್ಬಲವಾದ ಅಂತ್ಯ-e ಮಾತ್ರ ಉಳಿದಿತ್ತು (ಉದಾ: queene); ಹಾಗೆಯೇ ಪ್ರತ್ಯೇಕ ಅವ್ಯಯಗಳ (prepositions) ಪ್ರಯೋಗವನ್ನೂ, ಪ್ರಾಸವು ಕಡಿಮೆಯಾದದ್ದನ್ನೂ ಕಾಣಬಹುದು. ಫ್ರೆಂಚ್ ಶಬ್ದಗಳಿಂದ ಭಾಷೆಯು ಸಮೃದ್ಧಿಗೊಂಡಿತಲ್ಲದೆ, ಫ್ರೆಂಚ್ ಅವ್ಯಯಗಳು, ಸಮುಚ್ಚಯಾರ್ಥಕಗಳು ಹಾಗೂ ಕ್ರಿಯಾವಿಶೇಷಣಗಳಿಂದ ಭಾಷೆಯ ರಚನೆ ಸುಲಭವಾಯಿತು. ಕೆಲವು ದೇಶೀಯ ಶಬ್ದಗಳು ಪರ್ಯಾಯ ಶಬ್ದಗಳಾಗಿ ಉಳಿದುವು. ಇಂಗ್ಲಿಷ್-ಫ್ರೆಂಚ್ ಶಬ್ದಗಳ ಜೋಡಣೆ (ಉದಾ: ಫ್ರೆಂಚ್‌ನ court + ಇಂಗ್ಲಿಷಿನ ship = courtship; ಇಂಗ್ಲಿಷಿನ forbear + ಫ್ರೆಂಚ್‌ನ ance = (forbearance) ಮತ್ತು ಉಚ್ಚಾರಣೆಯಲ್ಲಿ ಮಾರ್ಪಾಟುಗಳು ಮುಂತಾದ ಅಂಶಗಳನ್ನೂ ಗಮನಿಸಬಹುದು. ಲೇಖಕರು ತಮಗೆ ಬಳಕೆಯಲ್ಲಿದ್ದ ಆಡುನುಡಿಗಳ ಶೈಲಿಗಳಲ್ಲಿ ಬರೆಯುತ್ತಿದ್ದರು.

ಮಧ್ಯಕಾಲೀನ ಇಂಗ್ಲಿಷ್‌ನಿಂದ ಕ್ರಮೇಣ ಆಧುನಿಕಭಾಷೆ ರೂಪುಗೊಳ್ಳಲು ಅವಕಾಶಗಳು ಒದಗಿದುವು. 15ನೇ ಶತಮಾನದ ಕೊನೆಯಲ್ಲಿ ವ್ಯಾಕರಣದ ರೂಪ–ರಚನೆ ಮತ್ತು ಕಾಗುಣಿತಗಳಲ್ಲಿದ್ದ ವ್ಯತ್ಯಾಸಗಳು, ಪದ್ಯಕ್ಕೆ ಕ್ರಮ ರೂಪವಿಲ್ಲದ್ದು ಹಾಗೂ ಭಾಷೆಯ ಒರಟುತನ ಮುಂತಾದುವುಗಳನ್ನು ಪರಿಹರಿಸಬೇಕಾಗಿತ್ತು. ಈ ದಿಸೆಯಲ್ಲಿ ನಡೆದ ಪ್ರಯತ್ನಗಳಿಂದಾಗಿ, ಮಧ್ಯಕಾಲೀನ ಇಂಗ್ಲಿಷ್‌ನ ಕೊನೆಯ ಅವಧಿಯಲ್ಲಿ, ಮಿಡ್ಲ್ ಸೆಕ್ಸ್‌ನ ಒಳನುಡಿ ಮತ್ತು ಪೂರ್ವ ಮಿಡ್‌ಲಾಂಡ್ ಹಾಗೂ ಕೆಂಟಿಷ್ ರೂಪಗಳಿಂದ ಕೂಡಿದ ಲಂಡನ್ ಇಂಗ್ಲಿಷ್ ಭಾಷೆಯೇ "ಶಿಷ್ಟ ಇಂಗ್ಲಿಷ್" (Standard English) ಎನ್ನಿಸಿಕೊಂಡಿತು. ಈ ಭಾವನೆಯ ಬೆಳವಣಿಗೆ, ಮುದ್ರಣಯಂತ್ರವನ್ನು ಕಂಡುಹಿಡಿದದ್ದು, ಶಿಕ್ಷಣ ಪ್ರಸಾರ — ಇವುಗಳಿಂದ ವ್ಯಾಕರಣ, ಕಾಗುಣಿತಾದಿಗಳು ಭದ್ರವಾದುವು. ಲ್ಯಾಟಿನ್, ಫ್ರೆಂಚ್ ಮೂಲಗಳಿಂದಲೂ ಹಾಗೂ ಇಂಗ್ಲಿಷರು ವ್ಯಾಪಾರ ಸಂಬಂಧವಿಟ್ಟುಕೊಂಡಿದ್ದ ಭಾರತ, ಅಮೆರಿಕ ಮೊದಲಾದ ದೇಶಗಳ ಭಾಷೆಗಳಿಂದಲೂ, ಪತ್ರಕರ್ತರು ಮುಂತಾದವರು ತಂದ ಹೊಸಶಬ್ದಗಳಿಂದಲೂ ಇವರ ಶಬ್ದಸಂಪತ್ತು ಹೆಚ್ಚಿತು. ಉದಾ: ಫ್ರೆಂಚ್‌ನಿಂದ

depot (ಮಳಿಗೆ), debris (ಭಗ್ನಾವಶೇಷ); ಪೋರ್ಚುಗೀಸಿನಿಂದ Caste (ಜಾತಿ); ಡಚ್‌ನಿಂದ yacht (ಚಿಕ್ಕದೋಣಿ); ಸ್ಪ್ಯಾನಿಷ್‌ನಿಂದ ಅಥವಾ ಅಮೆರಿಕನ್ ಪದಗಳ ಸ್ಪ್ಯಾನಿಷ್‌ರೂಪದಿಂದ potato (ಆಲೂಗೆಡ್ಡೆ), tobacco (ಹೊಗೆಸೊಪ್ಪು), cargo (ಹಡಗಿನ ಸರಕು) ಮುಂತಾದುವು. ಹೀಗೆ ಇದು ಕಾವ್ಯ, ತತ್ತ್ವಶಾಸ್ತ್ರ ಹಾಗೂ ಧರ್ಮ, ವಿಜ್ಞಾನಗಳಿಗೆ ತಕ್ಕ ಯೋಗ್ಯತೆಯುಳ್ಳ ಭಾಷೆಯಾಯಿತು; ಅಲ್ಲದೆ, ಆಗ ಅಂಕುರಿಸಿದ ರಾಷ್ಟ್ರೀಯತೆಯ ದೆಸೆಯಿಂದ ಈ ಅರ್ಹತೆಗೆ ರಕ್ಷಣೆ ದೊರೆಯಿತು.

16ನೇ ಶತಮಾನದಲ್ಲಿ ಪ್ರಾಚೀನ ಜ್ಞಾನದ ಪುನರುಜ್ಜೀವನ ಹಾಗೂ ಇತರ ಯೂರೋಪಿಯನ್ ಭಾಷೆಗಳಲ್ಲಿನ ಆಸಕ್ತಿಯಿಂದ ಬರವಣಿಗೆಯ ಭಾಷೆಯಲ್ಲಿ ಜಾಗರೂಕತೆ, ಕ್ರಮಬದ್ಧ ಗದ್ಯಶೈಲಿಯ ಬೆಳವಣಿಗೆ ಉಂಟಾದುವು. ಬಹುವಚನದ ರೂಪಗಳಲ್ಲಿನ ಅಕ್ರಮವೂ ಎಲಿಜಬೆತ್ ಕಾಲದಲ್ಲಿ ಕಡಿಮೆಯಾಯಿತು. ಈ ಕಾಲದಿಂದ ಅಥವಾ ಸ್ವಲ್ಪ ಮುಂಚಿನಿಂದ ಇದ್ದ ಭಾಷೆಯೇ "ಆಧುನಿಕ ಇಂಗ್ಲಿಷ್". 17ನೇ ಶತಮಾನದಲ್ಲಿ ವಿಜ್ಞಾನದ ಬೆಳವಣಿಗೆಯಿಂದಾಗಿ ಬರವಣಿಗೆಯ ಭಾಷೆಯಲ್ಲಿ ಖಚಿತತೆ ಹಾಗೂ ಪಾರಿಭಾಷಿಕ ಶಬ್ದ ಸಂಪತ್ತು ಹೆಚ್ಚಿದುವು. ಉದಾ: chemistry (ರಸಾಯನಶಾಸ್ತ್ರ), electricity (ವಿದ್ಯುತ್), consciousness (ಅರಿವು); ಹಾಗೆಯೇ, ವಾಣಿಜ್ಯಕ್ಕೆ ಸಂಬಂಧಿಸಿದಂತೆ, banking (ಬ್ಯಾಂಕಿನ ಲೇವಾದೇವಿ), currency (ನಾಣ್ಯ), finance (ಹಣಕಾಸು) ಮುಂತಾದುವು. ಈ ನಡುವೆ ಪರಭಾಷಾ ಶಬ್ದಗಳ ಅತಿಪ್ರವೇಶವನ್ನು ತಡೆಯುವ ಪ್ರಯತ್ನಗಳೂ ಸ್ವಲ್ಪ ಮಟ್ಟಿಗೆ ನಡೆದವು; ಪರಿಣಾಮಕಾರಿಯಾಗಲಿಲ್ಲ. ನಿಶ್ಚಿತತೆಗೆ ಪ್ರಾಧಾನ್ಯಕೊಟ್ಟು, ಡಾ। ಜಾನ್‌ಸನ್‌ರ ಭಾಷಾ ನಿಘಂಟು ಹಾಗೂ ಉಚ್ಚಾರಣೆಯ ಇತರ ನಿಘಂಟುಗಳು ಪ್ರಕಟವಾದುವು. ಇಂಗ್ಲಿಷ್ ವ್ಯಾಕರಣವನ್ನೇ ವಿಷಯವಾಗಿ ವ್ಯಾಸಂಗಮಾಡುವುದು ಪ್ರಾರಂಭವಾಯಿತು; ಪರಿಣಾಮವಾಗಿ, ಮಾತಿನ ಹಾಗೂ ಬರವಣಿಗೆಯ ಭಾಷೆಗಳ ಅಂತರ ಹೆಚ್ಚಿತು. ಪುನಃ ಭಾಷೆಯಲ್ಲಿ ಸರಳತೆಯನ್ನುಂಟುಮಾಡುವುದು (ವರ್ಡ್ಸ್‌ವರ್ತ್ ನಿಂದ). ಹಳೆಯ ಶಬ್ದಗಳನ್ನು ಮತ್ತೆ ಬಳಕೆಗೆ ತರುವುದು (ಕೋಲ್‌ರಿಜ್, ಸ್ಕಾಟ್ ಮುಂತಾದವರಿಂದ)—ಈ ಕ್ರಮಗಳಿಂದ ಸಮತೋಲನ ಸಾಧ್ಯವಾಯಿತು. ಅಲ್ಲದೆ, ಕೆಲವು ಹಳೆಯ ಶಬ್ದಗಳಿಗೆ ಹೊಸ ಅರ್ಥಗಳೂ ಬಂದವು; ಉದಾ: broadcast = ಮೊದಲು, 'ಬೀಜ ಬಿತ್ತುವುದು'; ಈಗ 'ರೇಡಿಯೋ ಪ್ರಸಾರ'. ಹಾಗೆಯೇ, ಶಬ್ದಗಳ ವಿನಿಮಯ, ಶೈಲಿಯ ಬದಲಾವಣೆಗಳು, ವ್ಯಾಕರಣದ ರೂಪಗಳನ್ನು ಉದ್ದೇಶಪೂರ್ವಕವಾಗಿ ಕ್ರಮಬದ್ಧಗೊಳಿಸುವುದು ಇವೆಲ್ಲಾ ನಡೆಯುತ್ತಲೇ ಇವೆ. ಅಲ್ಲದೆ, ಬಾಹ್ಯಾಕಾಶಯಾನ, ಚಂದ್ರಗ್ರಹಯಾತ್ರೆಯಲ್ಲಿ ಮಾನವ ಸಾಧಿಸಿದ ಅಮೋಘ ವಿಜಯ ಮುಂತಾದ ವಿಜ್ಞಾನದ ಮುನ್ನಡೆಯ ಅದ್ಭುತ ಮೈಲಿಗಲ್ಲುಗಳನ್ನು ತೋರಿಸುವ astronauts, lunar module ಮುಂತಾದ ಶಬ್ದಗಳೂ ಸೃಷ್ಟಿಯಾಗುತ್ತಿವೆ.

ವಿಶ್ವದಲ್ಲಿನ ವಿವಿಧ ಪ್ರದೇಶಗಳ ನಡೆ, ನುಡಿ, ಸಂಸ್ಕೃತಿಗಳ ಪ್ರಭಾವದಿಂದ ಅಲ್ಲಲ್ಲಿಯ ಇಂಗ್ಲಿಷ್‌ನಲ್ಲಿ ಹಲವು ವ್ಯತ್ಯಾಸಗಳು ಕಂಡುಬರುವುವು. ಆಸ್ಟ್ರೇಲಿಯನ್, ನ್ಯೂಜೀಲೆಂಡ್ ಮತ್ತು ದಕ್ಷಿಣ ಆಫ್ರಿಕಾಗಳ ಇಂಗ್ಲಿಷು ಬ್ರಿಟನ್ನಿನ ಶಿಷ್ಟ ಭಾಷೆಯನ್ನೂ ಕೆನಡಾದ್ದು ಅಮೆರಿಕನ್ ಭಾಷೆಯನ್ನೂ ಹೋಲುತ್ತವೆ. ಉದಾ: ಇಂಕೂಸ್ (inkoos) ಅಥವಾ ಇಂಕೋಸಿ (inkosi) ಎಂಬುದು 'ಮುಖ್ಯಸ್ಥ' ಎಂಬುದಕ್ಕೆ ದಕ್ಷಿಣ ಆಫ್ರಿಕಾದ ಜೂಲುಜನರ ಶಬ್ದ: ಇದನ್ನು ಅಲ್ಲಿ thanks (ವಂದನೆಗಳು) ಎಂಬರ್ಥದಲ್ಲಿ ಉಪಯೋಗಿಸುವರು. ಹಾಗೆಯೇ ಅಲ್ಲಿ The river is down ಎಂದರೆ, ಪ್ರವಾಹ ಬಂದಿದೆ ಎಂದರ್ಥ. ಆಸ್ಟ್ರೇಲಿಯದ great outback ಎಂಬುದು ಶಿಷ್ಟ ಇಂಗ್ಲಿಷಿನ great plains (ದೊಡ್ಡ ಮೈದಾನ): ಕೆನಡಾದ The gridiron ಎಂದರೆ, ಪ್ರಾಚೀನ ವೈಭವ. ಅರ್ಥ ಹಾಗೂ ಪ್ರಯೋಗಗಳಲ್ಲಿರುವಂತೆಯೇ ಉಚ್ಚಾರಣೆಯಲ್ಲೂ ವ್ಯತ್ಯಾಸಗಳಿವೆ: ಉದಾ: ಭಾರತದಲ್ಲೇ why, where ನಂತಹ ಶಬ್ದಗಳನ್ನು ಉಚ್ಚರಿಸಲು ಮಹಾರಾಷ್ಟ್ರೀಯರು ಹೆಚ್ಚು ಉಸಿರನ್ನು ಕೊಟ್ಟರೆ, possible, audible ಮುಂತಾದ ಶಬ್ದಗಳ ಅಂತ್ಯ '—ಲ್'ನ್ನು ತಮಿಳರೂ, ಮಲೆಯಾಳಿಗಳೂ '—ಳ್' ಮಾಡುತ್ತಾರೆ.

ಅಮೆರಿಕನ್ ಇಂಗ್ಲಿಷ್ ಎಂಬುದು ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಮಾತನಾಡುವ ಹಾಗೂ ಬರೆಯುವ ಭಾಷೆ; ಮುಖ್ಯವಾಗಿ ಯೂರೋಪಿಯನ್ನರು ಅಲ್ಲಿಗೆ ಹೋಗಿ ನೆಲಸಿದ ನಂತರ ಸುಮಾರು ಮೂರು ಶತಮಾನಗಳ ಅವಧಿಯಲ್ಲಿ ಬೆಳೆದಿದೆ. ವಿವಿಧ ಭಾಷೆಗಳಿಂದ ಬಂದ ಹೊಸಶಬ್ದಗಳು, ಶಬ್ದಗಳು ಪಡೆದ ಹೊಸ ಅರ್ಥಗಳು, ಕಾಗುಣಿತದ ಸುಧಾರಣೆ ಮುಂತಾದುವುಗಳ ದೆಸೆಯಿಂದ ಬ್ರಿಟಿಷ್ "ಶಿಷ್ಟ ಭಾಷೆ" (Standard English) ಯಿಂದ ಇದು ಸ್ವಲ್ಪ ಮಟ್ಟಿಗೆ ದೂರವಾಗಿದೆ. ಕೆಲವು ಶಬ್ದಗಳು ಮೊದಲು ಇಂಗ್ಲೆಂಡಿನಲ್ಲಿ ಪ್ರಯೋಗದಲ್ಲಿದ್ದು ಈಗ ಅಮೆರಿಕದಲ್ಲಿ ಮಾತ್ರ ಉಳಿದಿರುವುವು: ಉದಾ: fall ಎಂಬುದು autumn ಋತುವಿಗೆ; dry goods ಬಟ್ಟೆಬರೆಗಳಿಗೆ: gotten. ಎಂಬುದು got ನ ಬದಲು. ಎರಡನೆಯದಾಗಿ, ಅಲ್ಲಿಗೆ ಹೋಗಿ ನೆಲಸಿದ ಫ್ರೆಂಚ್, ಸ್ಪಾನಿಷ್, ಡಚ್, ಜರ್ಮನ್ ಮುಂತಾದವರ ಭಾಷೆಗಳಿಂದ ಕೆಲವು ಶಬ್ದಗಳು: ಉದಾ; ಫ್ರೆಂಚ್‌ನಿಂದ prairee (ವಿಸ್ತಾರವಾದ ಹುಲ್ಲುಗಾವಲು), Portage (ಸಾಗಾಣಿಕೆ); ಸ್ಪಾನಿಷ್‌ನಿಂದ corral (ದನವಕೊಟ್ಟಿಗೆ): adobe (ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆ), sombrero (ಅಗಲವಾದ ಅಂಚುಳ್ಳ ಹ್ಯಾಟು); ಡಚ್‌ನಿಂದ boss (ಯಜಮಾನ), spook (ದೆವ್ವ), sleigh (ಹಿಮದ ಮೇಲೆ ಹೋಗುವ ಜಾರುಬಂಡಿ); ಜರ್ಮನ್‌ನಿಂದ

dumb ಮತ್ತು fresh (ಇವುಗಳು ಕ್ರಮವಾಗಿ ಜರ್ಮನ್‌ನ dumn, frisch ಗಳಿಗೆ ಸಮೀಪ). ಮೂರನೆಯದಾಗಿ, ಅಮೆರಿಕನ್ ಇಂಡಿಯನ್ ನಡೆ ನುಡಿಗಳ ಪ್ರಭಾವದಿಂದ; ಉದಾ: moccasin (ಒಂದು ಜಾತಿಯ ಪಾದರಕ್ಷೆ); squash (ಒಂದು ತರಕಾರಿ); hickory (ಒಂದು ಜಾತಿಯ ಮರ): opossum raecoon ಅಥವಾ coon ಮುಂತಾದ ಪ್ರಾಣಿಗಳು; to bury the hatchet (ದ್ವೇಷವನ್ನು ಮರೆಯುವುದು). ನಾಲ್ಕನೆಯದಾಗಿ, ತನ್ನಲ್ಲೇ ಮಾಡಿಕೊಂಡ ಬದಲಾವಣೆಗಳು ಮತ್ತು ಶಬ್ದ ಸಂಪತ್ತು; ಉದಾ: corn (ಇಂಗ್ಲೆಂಡ್‌ನಲ್ಲಿ, ದ್ವಿದಳ ಧಾನ್ಯಗಳು, ಮುಖ್ಯವಾಗಿ ಓಟ್ಸ್; ಅಮೆರಿಕದಲ್ಲಿ— ಜೋಳ): creek (ಇಂ.—ಸಮುದ್ರ ತೀರದಲ್ಲಿ ಒಳಚಾಚಿರುವ ನೀರಿನ ಭಾಗ; ಅಮೆ.—ತೊರೆ); ಹಾಗೆಯೇ, ಇಂ. ನ dynamo, ಅಮೆ.ದ generator: ಇಂ. ನ bonnet, ಅಮೆ.ದ hood; ಇಂ. ನ hood, ಅಮೆ.ದ top; ಇಂ. ನ biscuits, ಅಮೆ. ದ crackers. ಐದನೆಯದಾಗಿ, ಹೊಸ ಸಮಾಸ ಪದಗಳು; ಉದಾ: back-woods, beeline, drug-store: bear ಎಂಬ ಪದದಿಂದಲೇ bear-bacon, bear-grass ಮುಂತಾದ ಸುಮಾರು 30 ಸಮಾಸಪದಗಳು, buffaloದಿಂದ 75 ಇವೆ. ಅಲ್ಲದೆ ಕಳೆದ ಸುಮಾರು 1½ ಶತಮಾನದಿಂದ ಕೆಲವು ಗ್ರಾಮ್ಯ ಹಾಗೂ ಅಸಂಸ್ಕಾರಿ ಶಬ್ದಗಳು ಸೇರಿವೆ: ಉದಾ: bogus (ಕೃತ್ರಿಮ); bunkum (ಬೂಟಾಟಿಕೆ), O K. (ಎಲ್ಲಾ ಸರಿ). ಹಾಗೆಯೇ ಉಚ್ಚಾರಣೆ, ಕಾಗುಣಿತ ಮುಂತಾದುವುಗಳಲ್ಲೂ ಕೆಲವು ಬದಲಾವಣೆಗಳಿವೆ: ಉದಾ: colour-color, labour-labor, programme -program, centre-center

ಪಿಡ್‌ಜಿನ್ (Pidgin) ಎಂಬುದು 17ನೇ ಶತಮಾನದಲ್ಲಿ ಬ್ರಿಟಿಷ್ ವರ್ತಕರು ದಕ್ಷಿಣ ಚೀಣಾದ ರೇವುಗಳಲ್ಲಿನ ನಿವಾಸಿಗಳೊಂದಿಗೆ ವ್ಯವಹರಿಸಲು ಮಾಡಿಕೊಂಡ ಒಂದು ಅಶುದ್ಧ ಉಚ್ಚಾರಣೆಯುಳ್ಳ ವಿಕಾರ ಭಾಷೆ; ಇದರಲ್ಲಿ ಇಂಗ್ಲಿಷಿನ ಶಬ್ದಗಳನ್ನು ಚೀಣೀಯಂತಹ ಭಾಷೆಯ ರಚನೆಯಂತೆ ಪ್ರಯೋಗಿಸುವರು: ಉದಾ: ಚೀಣೀ ಜಾತಿಯದು: cow-child—ಎಂದರೆ ಹುಡುಗಿ. bull-child ಎಂದರೆ ಹುಡುಗ. ಮಲನೇಷಿಯನ್: Kai-kai ಎಂದರೆ ತಿನ್ನುವುದು. shoot in kai-kai ಎಂದರೆ ಊಟವನ್ನು ಬಡಿಸು: belly-belong-me-plenty walk-about ಎಂದರೆ I am hungry (ನನಗೆ ಹಸಿವಾಗಿದೆ). ಈಗ ಇದರ ಬಳಕೆ ಚೀಣಾದ ಸಮುದ್ರ ತೀರ, ದಕ್ಷಿಣ ಸಮುದ್ರ ದ್ವೀಪಗಳು (south see Islands), ಆಸ್ಟ್ರೇಲಿಯ, ಮಲಯ ಮತ್ತು ಆಫ್ರಿಕದ ಪಶ್ಚಿಮ ತೀರಗಳಲ್ಲಿ.

ಹೀಗೆ, ಇಂಗ್ಲಿಷ್ ಭಾಷೆಯು ನಾನಾ ರೀತಿಯಲ್ಲಿ ಸಂದರ್ಭ, ಸನ್ನಿವೇಶ, ವಿಷಯಗಳಿಗನುಗುಣವಾಗಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ, ಶಬ್ದ ಸಂಪತ್ತನ್ನು

ಹೆಚ್ಚಿಸಿಕೊಂಡು ಸರ್ವತೋಮುಖವಾಗಿ ಬೆಳೆಯುತ್ತಿದೆ. ಈಗಾಗಲೇ ವಿಶ್ವದಲ್ಲೆಲ್ಲಾ ಹೆಚ್ಚಾಗಿ ಬಳಕೆಯುಳ್ಳ ಭಾಷೆಯಾಗಿದೆ. ಎಲ್ಲಾ ವಾಣಿಜ್ಯ ವ್ಯವಹಾರಗಳ ಜೊತೆಗೆ, ಪ್ರಪಂಚದ ಒಟ್ಟು ಅಂಚೆ ವ್ಯವಹಾರದಲ್ಲಿ 3/4 ಭಾಗ, ವೃತ್ತ ಪತ್ರಿಕೆಗಳಲ್ಲಿ 1/2 ಕ್ಕಿಂತ ಹೆಚ್ಚು, ರೇಡಿಯೋ ನಿಲಯಗಳಲ್ಲಿ ಸುಮಾರು 3/5, ವೈಜ್ಞಾನಿಕ ಹಾಗೂ ತಾಂತ್ರಿಕ ಪತ್ರಿಕೆಗಳಲ್ಲಿ 1/2 ಕ್ಕಿಂತ ಹೆಚ್ಚು ಬಳಸಲಾಗುತ್ತಿದೆ; ಮೂಲ ಹಾಗೂ ಅನುವಾದಿತ ಗ್ರಂಥಗಳಂತೂ ಅಸಂಖ್ಯಾತ. ಒಟ್ಟಿನಲ್ಲಿ ಇದು ವಿಶ್ವದ ಏಕೈಕ ಸಾಮಾನ್ಯ ಭಾಷೆಯಾಗುವಷ್ಟು ಉಜ್ವಲ ಭವಿಷ್ಯದಿಂದ ಪ್ರಗತಿ ಹೊಂದುತ್ತಿರುವ ಭಾಷೆ.

(ಈ ಲೇಖನದಲ್ಲಿ ಬಳಸಿರುವ ಸಂಕ್ಷಿಪ್ತ ರೂಪಗಳು:
ಇಂ. ನ = ಇಂಗ್ಲಿಷಿನ ಅಥವಾ ಇಂಗ್ಲೆಂಡಿನ,
ಅಮೆ. ದ = ಅಮೆರಿಕದ).

Bibliography

1. Encyclopaedia Britannica
2. Oxford Junior Encyclopaedia
3. Everyman's Encyclopaedia
4. Oxford Dictionary of English Literature
5. The Story of Language–Mario Pei
6. A Common Language–British & American English. (A dialogue between Prof Quirk and Prof. Marckwardt, broadcast from B. B. C. & V. O. A.)

1 ಲಾವಣಿ : ಒಂದು ಸ್ಪಷ್ಟನೆ

ಜನಪದಗೀತಸಾಹಿತ್ಯವು ಕಥನಾತ್ಮಕ ಹಾಗೂ ಭಾವಗೀತಾತ್ಮಕವಾದುದು. "ಕಥನಾತ್ಮಕ ಗೀತೆಗಳನ್ನೆಲ್ಲ ಲಾವಣಿಗಳೆಂದು ಕರೆಯುಬಹುದು"– ಎಂದು ಪ್ರಾ. ಜೀ. ಶಂ. ಪ. ಅವರು ತಮ್ಮ "ಜನಪದ ಕಾವ್ಯಕಥೆಗಳು" ಕೃತಿಯ ಪ್ರಸ್ತಾವನೆಯಲ್ಲಿ ಹೇಳಿ,

1. ಕರಪಾಲದವರ ಕಥೆಗಳು
2. ಕಂಸಾಳೆ ಕಥೆಗಳು–ಗುಡ್ಡರ ಕಥೆಗಳು
3. ಮಂಟೆಸ್ವಾಮಿ ಕಥೆಗಳು–ನೀಲಗಾರರ ಕಥೆಗಳು
4. ಜುಂಜಪ್ಪನ ಕಥೆಗಳು
5. ಹೆಂಗಸರ ಹಾಡ್ಕತೆಗಳು

ಎಂಬ ಶೀರ್ಷಿಕೆಗಳಲ್ಲಿ ಅನೇಕ ಕಥನಗೀತಗಳಿಂದ ಸರಸವಾದ ಗದ್ಯ ಕಥೆಗಳನ್ನು ಬಿಡಿಸಿದ್ದಾರೆ.

ಇಲ್ಲಿ ವಿವೇಚಿಸಬೇಕಾದುದು ಈ ಮೇಲ್ಕಂಡ ವರ್ಗದ ಜನರ ಹಾಡುಗಳನ್ನೆಲ್ಲ 'ಲಾವಣಿ' ಎಂದು ಕರೆಯುಬಹುದೇ ? ಎಂಬುದು. ಶ್ರೀಯುತರು "Ballad ಎಂಬ ಮಾತಿಗೆ ಸಂವಾದಿಯಾಗಿ ಈಗಾಗಲೇ ಕನ್ನಡದಲ್ಲಿ ಬಳಕೆಗೆ ಬಂದಿರುವ 'ಲಾವಣಿ' ಎಂಬ ಮಾತನ್ನೇ ಕಂಠಸ್ಥ ಸಂಪ್ರದಾಯದ ಎಲ್ಲ ಹಾಡಿನ ರೂಪದ ಕಥೆಗಳಿಗೂ ಅನ್ವಯಿಸಬಹುದಾಗಿದೆ. ಲಾವಣಿಯಲ್ಲಿ ಭಾವಗೀತಾತ್ಮಕ ರಚನೆಗಳು ಅಲ್ಪಸ್ವಲ್ಪ ಕಂಡು ಬಂದರೂ ಕಥಾ ಸಾಹಿತ್ಯಕ್ಕೆ ಹೆಚ್ಚಾಗಿ ಜಾನಪದ ಪರಂಪರೆಯಲ್ಲಿ ಈ ಮಾತು ಪ್ರಯೋಗವಾಗುತ್ತಾ ಬಂದಿದೆ. 'ಪಿರಿಯಾಪಟ್ಟಣದ ಲಾವಣಿ', 'ಸರ್ಜಪ್ಪ ನಾಯಕನ ಲಾವಣಿ' ಮುಂತಾದುವುಗಳನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು" ಎಂಬ ವಿವರಣೆಯನ್ನೇನೋ ಕೊಟ್ಟು ಕಥಾತ್ಮಕ ಗೀತೆಗಳನ್ನೆಲ್ಲ 'ಲಾವಣಿ' ಎಂದು ಕರೆಯುಬಹುದು ಎಂದು ಸೂಚಿಸುತ್ತಾರೆ. ಆದರೆ ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯದಲ್ಲಿ 'ಲಾವಣಿ' ಬಹುಕಾಲದಿಂದಲೂ ಒಂದು ಸ್ವತಂತ್ರ ಪ್ರಕಾರವಾಗಿ ಶ್ರೀಮಂತವಾಗಿ ತನ್ನದೇ ಆದ ಕೆಲವು ಲಕ್ಷಣಗಳನ್ನು ಕಟ್ಟಿಕೊಂಡು ಬೆಳೆದುಬಂದಿದೆ. ಅವು ಹೀಗಿವೆ :

1. ಲಾವಣಿಗಳಲ್ಲಿ ಎರಡು ಪ್ರಕಾರ. ಒಂದು, ಬಯಲು ಲಾವಣಿ, ಇನ್ನೊಂದು, ಮೇಳ ಲಾವಣಿ.

2 ಬಯಲು ಲಾವಣಿಗಳನ್ನು ಕಾಲಲ್ಲಿ ಗೆಜ್ಜೆಕಟ್ಟಿಕೊಂಡು, ಬರಿಗೈಯಿಂದ ಚಿಟಕಿ ನುಡಿಸುತ್ತ ಭಾವಭಂಗಿಯಿಂದ ಒಬ್ಬನೇ ಹಾಡುತ್ತಾನೆ. ಮೇಳ ಲಾವಣಿಯಲ್ಲಿ ಮುಮ್ಮೇಳದಲ್ಲಿ ಒಬ್ಬ, ಹಿಮ್ಮೇಳದಲ್ಲಿ ಕನಿಷ್ಠಪಕ್ಷ ಇಬ್ಬರು ಇದ್ದು ದಪ್ಪ, ತುಂತುಣಿ, ತಾಳ ಮೊದಲಾದ ವಾದ್ಯಗಳನ್ನು ಬಳಸುತ್ತಾರೆ.

3. ಮೇಳಲಾವಣಿಗಳಲ್ಲಿ ಕೆಲವೊಮ್ಮೆ ಎರಡು ಪಕ್ಷಗಳು ಸ್ಪರ್ಧೆಗೆ ನಿಲ್ಲುತ್ತವೆ. ಸ್ತ್ರೀ ಪರವಾದ ಪಕ್ಷ ನಾಗೇಶಿ (ಕಲ್ಗಿ). ಪುರುಷಪರವಾದ ಪಕ್ಷ ಹರದೇಶಿ (ತುರಾಯಿ).

4. ನಾಗೇಶಿ ಪಕ್ಷದವರು ಸರಸ್ವತಿ ಸ್ತುತಿಯಿಂದ, ಹರದೇಶಿ ಪಕ್ಷದವರು ಗಣಪತಿಸ್ತುತಿಯಿಂದ ಲಾವಣಿ ಪ್ರಾರಂಭಿಸುವರು.

5. ಆರಂಭದ ಹಾಡು 'ಸಖಿ', ಕೊನೆಯ ಹಾಡು 'ಖ್ಯಾಲಿ' ಎನಿಸಿಕೊಳ್ಳುತ್ತದೆ. ಮಧ್ಯದ ಹಾಡುಗಳೇ ಲಾವಣಿಗಳು. "ಒಂದು ಲಾವಣಿಯಲ್ಲಿ ಮೂರೋ ನಾಲ್ಕೋ ಅಥವಾ ಹೆಚ್ಚೋ ಚೌಕಗಳಿರುತ್ತವೆ. ಚೌಕದಲ್ಲಿ ಕೆಲವು ಏರು ನುಡಿಗಳು, ಆಮೇಲೆ ಕೆಲವು ಇಳಿವು ನುಡಿಗಳು. ಮುಗಿದ ಬಳಿಕ ಬರುವ ಏರು ನುಡಿಗಳಿಗೆ ಹೊಂದಿ ಪಲ್ಲವಿ ಬರುವುದು...ಲಾವಣಿಯ ಕೊನೆಯಲ್ಲಿ ಕವಿಯ ಹೆಸರು, ಊರು, ಉಪಾಸ್ಯದೇವತೆಯ ಹೆಸರು ಕಾಣಸಿಗುವುದು."

ಹೀಗೆ ಸರ್ವತೋಭದ್ರ ಲಕ್ಷಣ ಕಟ್ಟಿಕೊಂಡು ಸರ್ವತೋಮುಖವಾಗಿ ಬಹುಕಾಲದಿಂದಲೂ ಬೆಳೆದು ಬಂದ ಪ್ರಕಾರವೊಂದರ ಹೆಸರನ್ನು ಬೇರೆ ಬೇರೆ ಲಕ್ಷಣಗಳುಳ್ಳ ಎಲ್ಲ ಪ್ರಕಾರದ ಕಥನಾತ್ಮಕ ಗೀತಗಳಿಗೆ ಆರೋಪಿಸುವುದರಿಂದ ಹೊಸಗೊಂದಲವನ್ನು ಹುಟ್ಟಿಸಿದಂತಾಗುತ್ತದೆ. ಇದರಿಂದ ಉತ್ತರ ಕರ್ನಾಟಕದ ಲಾವಣಿ ಪ್ರಕಾರದ 'ವ್ಯಾಪ್ತಿ' ಯನ್ನು ಸಡಿಲಾಗಿ (loose) ಪ್ರಯೋಗಿಸಿದ ದೋಷ ಬರುತ್ತದೆ.

ಎರಡನೆಯದಾಗಿ ಉತ್ತರ ಕರ್ನಾಟಕದಲ್ಲಿ ಕಂಬಿಯ ಹಾಡಿನ ಪೂಜ್ಯರಾದ ಜಂಗಮರು, ಡೊಳ್ಳಿನ ಹಾಡಿನ ಕುರುಬರು. ಗೊಂದಲ ಹಾಡಿನ ಗೊಂದಲಿಗರು. ಎಲ್ಲಮ್ಮನ ಹಾಡಿನ ಚೌಡಕಿಯವರು. ಕರ್ಬಲ ಹಾಡಿನ ಮುಸಲ್ಮಾನರು. ಗೌರಿ–ಸೀಗಿ ಹಾಡಿನ ಗೌರವಸ್ಥ ಹೆಣ್ಣುಮಕ್ಕಳು ಹೇಳುವ ಕಥಾತ್ಮಕ ಹಾಡುಗಳನ್ನು ಲಾವಣಿಗಳೆಂದೂ. ಹೇಳುವವರನ್ನು ಲಾವಣಿಕಾರರೆಂದೂ ಕರೆದರೆ ತಮಗೆ ಅಪಮಾನವೆಂದು ಅವರು ಭಾವಿಸುತ್ತಾರೆ.

ಆದಕ್ಕಾಗಿ ಜನಪದಸಾಹಿತ್ಯವನ್ನು ವೈಜ್ಞಾನಿಕವಾಗಿ ವರ್ಗೀಕರಿಸಬೇಕಾದ, ಹೆಸರಿಸಬೇಕಾದ ಈ ಕಾಲದಲ್ಲಿ ಶ್ರೀ. ಜೀ. ಶಂ. ಪ. ಅವರು ಈ ಹೊಸಪ್ರಯೋಗ ದಿಂದ ಮುಂದಿನ ಸಂಶೋಧಕರಿಗೆ ತಿಳಿದೂ ತಿಳಿದೂ ಹೊಸದೊಂದು ತೊಡಕನ್ನು ಹುಟ್ಟಿಸಿ ಕೊಟ್ಟಂತಾಗಿದೆ. ಏನೆಲ್ಲದಕ್ಕೂ ಇಂಗ್ಲಿಷಿನ ಬೆನ್ನುಹತ್ತಿ ಅಲ್ಲಿರುವ ಪ್ರಕಾರಗಳಿಗೆ, ಹೆಸರುಗಳಿಗೆ ನಮ್ಮಲ್ಲಿಯ ಪ್ರಕಾರಗಳನ್ನು, ಹೆಸರುಗಳನ್ನು ಹೊಂದಿಸಿ ನೋಡುವ ಜುಲುಮೆಯ ಪ್ರಯತ್ನವನ್ನು ಬಿಟ್ಟುಕೊಟ್ಟು ನಮ್ಮ ಜನಪದ ಸಾಹಿತ್ಯವನ್ನು ನಮ್ಮ ಪರಂಪರೆಯಲ್ಲಿ ನೋಡುವುದು ಲೇಸು. ಒಂದು ವೇಳೆ ಇಂಗ್ಲಿಷ್ Ballad ಗಳಿಗೆ ಸಮಾನವಾಗಿ ನಮ್ಮಲ್ಲಿರುವ ಹಾಡುಗಳಿಗೆ ಕನ್ನಡ ಹೆಸರು ಕೊಡು ವುದಿದ್ದರೆ ಜಾನಪದ ವಿಶಿಷ್ಟ ಪ್ರಕಾರಕ್ಕೆ ಸೀಮಿತವಾಗಿರುವ 'ಲಾವಣಿ' ಎಂಬ ಪದವನ್ನು ಬಿಟ್ಟು ಅವರು ಬೇರೊಂದು ಪದವನ್ನು ಸೃಷ್ಟಿಸಲಿ. ಇಲ್ಲವಾದರೆ Ballad ದ ಒಂದು ಪ್ರಭೇದವೆನಿಸುವ 'ಲಾವಣಿ' ಯನ್ನೇ Ballad ಗೆ ಸಂವಾದಿ ಯಾಗಿ ಬಳಸಿದಂತಾಗುತ್ತದೆ.

ಎಂ. ಎಂ. ಕಲಬುರ್ಗಿ

2 ಕಾವ್ಯಾವಲೋಕನದ ಒಂದು ಪದ್ಯ

ನಾಗವರ್ಮನ ಕಾವ್ಯಾವಲೋಕನದ ಕೆಲವು ಪದ್ಯಗಳು ನಾನಾ ದೃಷ್ಟಿಗಳಿಂದ ಗಮನಾರ್ಹವಾಗಿವೆಯೆಂಬುದನ್ನು ವಿದ್ವಾಂಸರೆಲ್ಲ ಬಲ್ಲರು. ಅವುಗಳಲ್ಲಿ ಕೆಳಗಿನ ಪದ್ಯ ಪರಿಶೀಲನಾರ್ಹವೆಂದು ತೋರುತ್ತದೆ:

ಪಾರಾವಾರಂ ತುಹಿನಕಿರಣಂ ಕುಂದೆ ಕುಂದಿತ್ತು ಮತ್ತಂ
ತೋರೊಂದೋರೊಂದಮೃತ ಕಳೆಯುಂ ಪೆರ್ಚೆ ಪೆರ್ಚಲ್ ತಗುಳ್ದ
ತ್ತಾರುಂ ಮಕ್ಕಳ್ಗೆ ಎಜಗುವನಿತಂ ಬಂಧುಗಳ್ಗೋಯುರೊಳ್ ಪೊ
ಕ್ಕಾರಯ್ಯಾಗಳ್ ತನಯಜನಿತ ಸ್ನೇಹಮಾರ್ಗಂ ಬಲಿಷ್ಠಂ ॥
(ಕಾವ್ಯಾವಲೋಕನಂ, ಪದ್ಯ 910)

ಈ ಪದ್ಯದ ಸ್ಥೂಲಾರ್ಥ:

ಚಂದ್ರನು ಕುಂದಲು ಕಡಲು ತಾನೂ ಕುಂದಿತ್ತು. ಮತ್ತೆ ಹಾಗೆಯೇ ಒಂದೊಂದೇ ಚಂದ್ರಕಾಂತಿಯೂ ಹೆಚ್ಚಲು ತಾನೂ ಹೆಚ್ಚಾಗಲು ತೊಡಗಿತು. ಯಾರೇ ಆಗಲಿ ಮಕ್ಕಳಿಗೆ '**ಎಜಗು**'ವಷ್ಟು ಬಂಧುಗಳಿಗೆ '**ಓಯುರೊಳ್**' ಹೊಕ್ಕು ಪರಾಮರ್ಶಿಸುವಾಗ ಮಕ್ಕಳಿಂದ ಉಂಟಾದ ಸ್ನೇಹ ಯಾರಿಗೂ ಬಲಿಷ್ಠ. ಇದರಲ್ಲಿ ಕಾರಕ್ಕರಗಳಲ್ಲಿ ಗುರುತಿ

ಸಿರುವ ಮಾತುಗಳು ವಿಮರ್ಶೆಗೆ ಅರ್ಹ. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ–ಕನ್ನಡ ನಿಘಂಟನ್ನು ಸಿದ್ಧಪಡಿಸುತ್ತಿದೆ. ವಾಸ್ತವವಾಗಿ ಇದುವರೆಗಿನ ಎಲ್ಲ ನಿಘಂಟುಗಳಿಗಿಂತ ಇದೇ ಪ್ರಮಾಣಭೂತ ಶ್ರೇಷ್ಠ ನಿಘಂಟು. ಇದನ್ನು ಕನ್ನಡ ನಿಘಂಟುಗಳ ರಾಜ ಎಂದು ಧಾರಾಳವಾಗಿ ಕರೆಯಬಹುದು. ಈ ನಿಘಂಟಿನ ಸ್ವರಗಳ ಸಂಪುಟ ಹೊರಬಂದಿದೆ. ಅದರಲ್ಲಿ ಎಱಗು$_1$ ಶಬ್ದಕ್ಕೆ ಕೊಟ್ಟಿರುವ ಅರ್ಥಗಳಿಂತಿವೆ: 1) ಬಾಗು, ನಮಸ್ಕಾರಮಾಡು. ಅಡ್ಡಬೀಳು. 2) ಬೀಳು 3) ಮೇಲೆ ಬೀಳು, ಮುತ್ತು, ಆವರಿಸು. 4) (ಮೇಲೆ ಬಿದ್ದು) ಹೊಡೆ, ಬಡಿ (ರೇಗು ಶಬ್ದ ರೂಪಗೊಂಡಿರುವುದು ಇದರಿಂದ). ಇವುಗಳಿಗೆ ಪ್ರಯೋಗಗಳನ್ನಿತ್ತಿದ್ದಾರೆ.

ಕಾವ್ಯಾವಲೋಕನದ ಪದ್ಯದಲ್ಲಿ ಪ್ರಯೋಗವಾಗಿರುವ ಶಬ್ದಕ್ಕೆ ಈ ಅರ್ಥಗಳು ಹೊಂದಿಕೊಳ್ಳುವುದಿಲ್ಲ.

ಅದೇ ಕನ್ನಡ ನಿಘಂಟಿನಲ್ಲಿ ಎಱಗು$_2$ ಎಂಬ ಇನ್ನೊಂದು ಶಬ್ದಕ್ಕೆ ಮೂರ್ಖತನ, ದಡ್ಡತನ ಎಂಬರ್ಥವಿದೆ. ಇಲ್ಲಿಗೆ ಅದೂ ಹೊಂದುವುದಿಲ್ಲ.

ಕಾವ್ಯಾವಲೋಕನದ ಈ ಪ್ರಯೋಗ ಪರಿಷತ್ತಿನ ನಿಘಂಟಿನ ಶಬ್ದ ಸಂಗ್ರಹಕ್ಕೆ ಸಿಕ್ಕದೆ ನುಸುಳಿಬಿಟ್ಟಿದೆ. 'ಶಬ್ದಪಾರಮಾರ್ಗಮಶಕ್ಯಂ' ಎಂಬ ಕೇಶಿರಾಜನ ಮಾತಿಗೆ ಇದೂ ಒಂದು ಉದಾಹರಣೆ.

ಕಾವ್ಯಾವಲೋಕನದ ಪ್ರಯೋಗದಲ್ಲಿ ಎಱಗು ಶಬ್ದಕ್ಕೆ ಇರುವ ಅರ್ಥ ಪ್ರೀತಿ. ಎಱಗು ಶಬ್ದಕ್ಕಿರುವ ಈ ಅರ್ಥವನ್ನು ಮಾನ್ಯ ಮಾಡುವುದಕ್ಕೆ ಸಹಾಯಕ ಅಂಶವಿದೆ. ಎಱಕ ಎಂಬ ಶಬ್ದವೇ ಅದು. ಎಱಕ ಮತ್ತು ಎಱಗು ಎಂಬೆರಡು ಶಬ್ದಗಳೂ ಜ್ಞಾತಿ ಶಬ್ದಗಳು. ಎಱಕ$_1$ ನಾಮಪದ (ಭಾವನಾಮ). ಎಱಗು ಕ್ರಿಯಾಪದ. ಎಱಕ ಶಬ್ದಕ್ಕೆ ಪ್ರೀತಿ. ಪ್ರೇಮ, ಅನುರಾಗ ಎಂಬ ಅರ್ಥ ಉಂಟು. ಇದಕ್ಕೆ ಪಂಪಭಾರತ ಮೊದಲಾದ ಕಾವ್ಯಗಳಲ್ಲಿ ಪ್ರಯೋಗಗಳಿವೆ: ಎಱಕದವ ಎಂದರೆ ಪ್ರೀತಿಪಾತ್ರ. ನಲ್ಲ. ಇನಿಯ ಎಂದರ್ಥ. ಎಱಕ$_2$ ಶಬ್ದಕ್ಕೆ ಬಾಗುವುದು. ನಮಸ್ಕರಿಸುವುದು ಎಂಬರ್ಥವಿದೆ.

ಪರಿಷತ್ತು ಸಿದ್ಧಪಡಿಸುತ್ತಿರುವ ಕನ್ನಡ ನಿಘಂಟಿನಲ್ಲಿ ಎಱಕ$_1$ ಶಬ್ದಕ್ಕೆ ನಿಷ್ಪತ್ತಿ ಭಾಗದಲ್ಲಿ ಶುದ್ಧ ಪ್ರಶ್ನಾರ್ಥಕ ಚಿಹ್ನೆಯಿದೆ.

ಆದರೆ ಎಱಕ ಎಂಬುದು ದ್ರಾವಿಡ (ದೇಶ್ಯ) ಶಬ್ದವೆಂದು ಭಾವಿಸಲವಕಾಶವಿದೆ. ಈ ಭಾವನೆಯನ್ನು ಕಾವ್ಯಾವಲೋಕನದ ಎಱಗು ಶಬ್ದ ಪುಷ್ಟೀಕರಿಸುತ್ತದೆ: ಎಱಗು→ ಎಱಕ. ಎಸಗು→ಎಸಕ. ಪೊಂಗು→ಪೊಂಕ. ಮರುಗು→ಮರುಕ ಮೊದಲಾದ ಮಾದರಿಗಳನ್ನು ನೆನಪಿಗೆ ತಂದುಕೊಳ್ಳಬಹುದು.

ಆದುದರಿಂದ ನಿಘಂಟಿನ ಅನುಬಂಧ ಸಿದ್ಧಪಡಿಸುವಾಗ ಈ ತಿದ್ದುಪಡಿಯನ್ನು ಸೂಚಿಸಬಹುದು. ಇನ್ನು ಸಂದೇಹ ಉಳಿಸಿಕೊಳ್ಳುವುದಿದ್ದಲ್ಲಿ ಎಱಕ$_1$ ಶಬ್ದದ ನಿಷ್ಪತ್ತಿ

ಭಾಗದಲ್ಲಿ ದೇಶ್ಯ ಶಬ್ದವೆಂದಾದರೂ ತೋರಿಸಿ. ಜೊತೆಗೆ ಪ್ರಶ್ನಾರ್ಥಕ ಚಿಹ್ನೆಯನ್ನೂ ಇಟ್ಟುಕೊಳ್ಳಬಹುದು.

ಹಾಗೆಯೇ ಎಜಿಗು ಶಬ್ದಗಳ ಕೆಳಗೆ ಎಜಿಗು$_3$ ಎಂದು ಮತ್ತೊಂದು ಮುಖ್ಯ ಉಲ್ಲೇಖ ಕೊಟ್ಟು ಅದರ ಕೆಳಗೆ ಕಾವ್ಯಾವಲೋಕನದ ಮೇಲಿನ ಪ್ರಯೋಗವನ್ನು ಕೊಡಬೇಕೆಂದೂ ತೋರುತ್ತದೆಯಾದರೂ ಇಲ್ಲಿ ಸಂದೇಹಗಳಿವೆ. ಎಜಿಗು$_1$ ಶಬ್ದದ ಕೆಳಗೇ ಅದಕ್ಕೆ ಇರುವ ಉಳಿದ ಅರ್ಥಗಳ ಜೊತೆಗೆ ಪ್ರೀತಿ, ವಾತ್ಸಲ್ಯ ಎಂಬ ಈ ಅರ್ಥವನ್ನೂ ಕೊಡಬಹುದು. ಏಕೆಂದರೆ ಎಜಿಗು$_3$ ಎಂಬುದಾಗಿ ಒಂದು ಪ್ರತ್ಯೇಕ ಮುಖ್ಯ ಉಲ್ಲೇಖ ಕೊಡುವುದಕ್ಕೆ ಕೆಲವು ಅಡಚಣೆಗಳಿವೆ. ಮುಖ್ಯವಾಗಿ ಜ್ಞಾತಿಭಾಷೆಗಳಲ್ಲಿ ಜ್ಞಾತಿರೂಪಗಳು ದೊರೆಯುವುದಿಲ್ಲ. ಎರಡನೆಯದಾಗಿ ಎಜಿಂಗು→ಎಜಿಗು→ಎರಗು (→ರೇಗು) ಎಂಬಂತೆ ಈ ಶಬ್ದದ ರೂಪದಲ್ಲಿನ ವಿಕಾಸವನ್ನು ಗುರುತಿಸಬಹುದು. ಅದರಂತೆ ಈ ಶಬ್ದದ ಅರ್ಥವಿಕಾಸ ಕೂಡ ಮೂಲಾರ್ಥದ ಛಾಯೆಗಳನ್ನನುಸರಿಸಿ ಬೆಳೆದು ಬಂದ ಪರಿ ಇಂತಿದೆ: ಬಾಗು ಎಂಬುದು ಮೂಲಾರ್ಥ. ಅದು ಭಕ್ತಿ ಗೌರವ ವಿಶ್ವಾಸ ಸೂಚಕ ಕ್ರಿಯೆಯೆಂಬಂತೆ ವಿಶಾಲವಾಯಿತು. ಅದರಿಂದಾಗಿ ನಮಸ್ಕರಿಸು ಎಂಬರ್ಥ ಉಂಟಾಯಿತು. ಸಾಷ್ಟಾಂಗ ನಮಸ್ಕಾರವಿರುವುದರಿಂದ ಅಡ್ಡಬೀಳು ಎಂಬರ್ಥಕ್ಕೆಡೆಯಾಯಿತು. ಅಲ್ಲಿಂದ ಅದರ ಮೂಲಾರ್ಥ ಮರೆಯಾಗತೊಡಗಿ 'ಬೀಳು' ಎಂಬಷ್ಟೇ ಅರ್ಥದಲ್ಲಿ ಬಳಕೆಯಾಗತೊಡಗಿತು. ಬೀಳುವಾಗಿನ ಮನೋಧರ್ಮವನ್ನನುಸರಿಸಿ ಮುಂದೆ ಆ ಶಬ್ದಕ್ಕೆ ಮೇಲೆ ಬೀಳು, ಕಡೆಗೆ 'ರೇಗು' ಎಂಬರ್ಥಗಳಾದುವು. ಹೀಗೆ ಒಂದು ಶಬ್ದದ ಅರ್ಥ ಕಾಲಾಂತರದಲ್ಲಿ ನಾನಾ ಪರಿಯಾಗಿ ಬೇರೆಯಾಗುವುದಕ್ಕೆ ಶಬ್ದಾರ್ಥ ವಿಜ್ಞಾನದಲ್ಲಿ ಉದಾಹರಣೆಗಳಿವೆ.

ಎಜಿಗು ಶಬ್ದಕ್ಕೆ ಇದ್ದ 'ಬಾಗು, ಭಕ್ತಿ, ಗೌರವ, ವಿಶ್ವಾಸ' ಎಂಬರ್ಥಗಳ ಬೆನ್ನ ಹಿಂದೆಯೇ ವಾತ್ಸಲ್ಯ. ಪ್ರೀತಿ, ಅಕ್ಕರೆ, ಮಮತೆ ಎಂಬರ್ಥ ಉಂಟಾಗಿರಬೇಕು. ಭಕ್ತಿ ಭಾವದಲ್ಲಿ ಸ್ನೇಹಭಾವ, ವಾತ್ಸಲ್ಯಭಾವ ಮೊದಲಾದ ಪರಿಗಳು ಇರುವುದನ್ನು ನೆನೆಯಬಹುದು. ಮಕ್ಕಳಿಗೆ ತಂದೆತಾಯಿಗಳು ಪದಶಃ ಕೂಡ ಬಾಗ(ಎಜಿಗ)ಬೇಕಲ್ಲವೆ! ಅದರಿಂದಾಗಿ ಈ ಅರ್ಥವಿಕಾಸಕ್ಕೆಡೆಯಾಗಿರಬಹುದು.

ಕಾರಕ್ಷರಗಳಲ್ಲಿ ಗುರುತಿಸಿರುವ ಎರಡನೆಯ ಶಬ್ದ 'ಒಯುರೊಳ್" ಎಂಬುದು. ಹಾಗೆಂದರೇನು? ಒಯುರೊಳಗೆ = ಪ್ರೀತಿಪಟ್ಟವರಲ್ಲಿ ಎಂಬರ್ಥ ಹೇಳಬಹುದು. ಇದೊಂದು ಸಮಾಸ ಶಬ್ದ, ಅನುಮಾನವಿಲ್ಲ. ಇದರಲ್ಲಿರುವ ಕಡೆಯ (ಬದ್ಧ) ಆಕೃತಿಮಾ ಒಳ್ ಎಂಬುದು. ಅದನ್ನು ಪ್ರತ್ಯೇಕಿಸಿ ಅದರ ಮುಂದಿನ (ಮುಕ್ತ) ಶಬ್ದದ ಜೊತೆಗೆ ಸೇರಿಸಿ ಓದಬೇಕು. ಆಗ ಪದ್ಯದ ಅರ್ಥ ಹೆಚ್ಚು ಸ್ಪಷ್ಟವಾಗಿ ಭಾವ ವೆಗ್ಗಳಿಸುತ್ತದೆ.

ಈಗ ಓಯರೊಳ್ ಶಬ್ದದ ವಿಭಾಗ ಹಾಗೂ ಮೂಲಾರ್ಥ ನಿಚ್ಚಳವಾಗುತ್ತದೆ. ಓಯರ್ ಎಂಬುದು ಒಳ್ ಆಕೃತಿಮಾವನ್ನು ಜೇರ್ಪಡಿಸಿದ ಮೇಲೆ ನಿಲ್ಲುತ್ತದೆ. ಅಂದರೆ ಬಂಧುಗಳ್ಗೆ ಓಯರ್, ಒಳ್ಪೊಕ್ಕು ಆರಯ್ವಾಗಳ್ ಎಂಬಂತೆ ಓದಿಕೊಳ್ಳಬೇಕು. ಆದರೆ ಇಲ್ಲಿಯೂ ಸಂದೇಹಗಳಿವೆ: ಒಳ್ಪೊಕ್ಕು ಎಂಬ ಸಮಾಸ ಸರಿಯೆ? ಒಳಪೊಕ್ಕು ಎಂಬ ಪ್ರಯೋಗವಿದೆ.

ಓ ಎಂಬುದು ಪ್ರೀತ್ಯರ್ಥದ ಮೂಲಧಾತು. ಇದು ಕ್ರಿಯಾಪದ. ಓಪು ಎಂಬುದು ನಾಮಪದ: ಓಪ. ಓಪಳ್. ಓವು ಇತ್ಯಾದಿ ಶಬ್ದಗಳನ್ನೂ ಪರಾಮರ್ಶಿಸ ಬಹುದು.

ಓ ಧಾತುಗೆ ನಿಷೇಧಾರ್ಥಕ ಪ್ರತ್ಯಯ-ಅ-ಸೇರಿ ಓಯ ಆಗುತ್ತದೆ. ಓ+-ಅ- =ಓಯ — ಇದು ಏಕವಚನ ನಿಷೇಧಾರ್ಥಕ ಮಧ್ಯಮ ಪುರುಷ ರೂಪ. ಇದರ ಬಹುವಚನ ರೂಪವೇ ಮೇಲಿನ ಓಯರ್: ಓ+-ಅ-+-ಅರ್ = ಓಯರ್ — ಇದೊಂದು ಅಪರೂಪ ಶಬ್ದಕೂಡ. ಆದುದರಿಂದ ಇದನ್ನು ಕೂಡ ನಿಘಂಟಿನ ಅನುಬಂಧದಲ್ಲಿ ಮುಖ್ಯ ಉಲ್ಲೇಖವಾಗಿ ಇಲ್ಲವೇ ಮುಖ್ಯ ಉಲ್ಲೇಖದ ಕೆಳಗೆ ಕೊಡಬೇಕು.

ಈಗ ಕಾವ್ಯಾವಲೋಕನದ ಪದ್ಯ ಭಾವ ನಿರುಕಾಗುತ್ತದೆ: ಕಡಲು ತಿಂಗಳು ಕುಂದಲು ತಾನೂ ಕುಂದಿತ್ತು. ಅದರಂತೆ ಒಂದೊಂದೇ ತಿಂಗಳ್ಕಳಗು ಹೆಚ್ಚುತ್ತಾ ಬಂದಂತೆ ತಾನೂ ಹೆಚ್ಚಾಗತೊಡಗಿತು. ಯಾರೇ ಆಗಲಿ ಮಕ್ಕಳಿಗೆ ಪ್ರೀತಿ (ಎಜಗು) ತೋರುವಂತೆ ಬಂಧುಗಳಿಗೆ ಪ್ರೀತಿ ತೋರರು (ಓಯರ್). ಒಳಪೊಕ್ಕು ಆರಯ್ವಾಗ (ಲೋಕದಲ್ಲಿ) ಮಕ್ಕಳಿಂದ ಉಂಟಾಗುವ ಸ್ನೇಹ ಯಾರಿಗೇ ಆಗಲಿ ಗಟ್ಟಿಯಾದುದು.

ಹಂಪ. ನಾಗರಾಜಯ್ಯ

3 ಸಾಂಗತ್ಯ–ಷಟ್ಪದ

"ತ್ರಿಪದಿ: ಅದರ ಸ್ವರೂಪ ಮತ್ತು ಇತಿಹಾಸ" ಎಂಬ ಸುಪ್ರೌಢ ಪ್ರಬಂಧದಲ್ಲಿ ಡಾ. ಎಂ. ಚಿದಾನಂದಮೂರ್ತಿ ಅವರು ಆನುಷಂಗಿಕವಾಗಿ 'ಸಾಂಗತ್ಯ' ರಚನೆಯನ್ನು ಕುರಿತು ಕೆಲವು ಮಾತುಗಳನ್ನಾಡಿರುವರು [1]: "ಸಾಂಗತ್ಯ ಬಹು ಈಚಿನ ಮಟ್ಟು; ನಾಗವರ್ಮ ಜಯಕೀರ್ತಿಯರಿಗೆ ಅದು ತಿಳಿಯದು. ನಮಗೆ ತಿಳಿದಮಟ್ಟಿಗೆ ಮೊದಲ ಸಾಂಗತ್ಯ ಕೃತಿ ಸು. 1410ರಲ್ಲಿದ್ದ ದೇವರಾಜನ 'ಸೊಬಗಿನ ಸೋನೆ'.

1 ಸಂಶೋಧನ ತರಂಗ, ಪು. 240.

ಆದ್ದರಿಂದ ಸಾಂಗತ್ಯವು ಹದಿನಾಲ್ಕನೇ ಶತಮಾನದ ಉತ್ತರಾರ್ಧದಲ್ಲಿ ಉಗಮಗೊಂಡಿರಬೇಕು". ಶ್ರೀ ಟಿ. ವಿ. ವೆಂಕಟಾಚಲ ಶಾಸ್ತ್ರಿ ಅವರೂ ಇದೇ ಅಭಿಪ್ರಾಯವನ್ನು ಪ್ರತಿಧ್ವನಿಸಿರುವರು [2]. 'ಸೊಬಗಿನ ಸೋನೆ', 'ಸಾಂಗತ್ಯ'—ಈ ಎರಡೂ ಒಂದೇಯೇ ಬೇರೆ ಬೇರೆಯೇ ಎಂಬ ಜಿಜ್ಞಾಸೆಯನ್ನು ಬದಿಗಿರಿಸಿ, 'ಸಾಂಗತ್ಯ' ಶೈಲಿಯ ಪ್ರಾಚೀನತೆಯನ್ನು ಕುರಿತು ಮಾತ್ರ ಇಲ್ಲಿ ಪ್ರಸ್ತಾಪಿಸಿದೆ.

ತ್ರಿಪದೀ ಛಂದಸ್ಸು ಒಂದು ಸಾವಿರದ ಐನೂರು ವರ್ಷಗಳ ಹಿಂದೆಯೇ ಕನ್ನಡ ಜನಪದದಲ್ಲಿ ಬಳಕೆಯಲ್ಲಿದ್ದಿತು. ಕ್ರಿ. ಶ. 700 ರ ಒಂದು ಶಾಸನದಲ್ಲಿ ಮೂಡಿಬಂದಿರುವ ತ್ರಿಪದಿಗಳ [3] ಕಾವ್ಯಗುಣವನ್ನು ಅವಲೋಕಿಸಿದರೆ ಆ ಕಾಲವು ಕನ್ನಡ ಸಾಹಿತ್ಯದ ಅರುಣೋದಯದ ಸಮಯ ಎಂದೆನಿಸದಿರದು. ಅಲ್ಲಿಂದೀಚೆಗೆ ಕನ್ನಡ ಸಾಹಿತ್ಯದ ಸ್ವರೂಪವೇ ವ್ಯತ್ಯಾಸ ಹೊಂದುತ್ತಾ ಬಂದಿತು. ಶಾಸನ ಸಾಹಿತ್ಯದಲ್ಲಿಯೂ ಸಹಜ ಸಾಹಿತ್ಯದಲ್ಲಿಯೂ ತ್ರಿಪದೀ ವೃತ್ತಗಳ ಬಳಕೆ ಎಷ್ಟು ಕಡಮೆಯಾಯಿತೆಂದರೆ ಅವು ಎಲ್ಲೆಲ್ಲಿವೆಯೆಂದು ಹುಡಿಕಿಕೊಂಡು ಹೋಗಬೇಕಾಯಿತು. ಅಂದಿನ ಮಂದಿಯ ಸಂಸ್ಕೃತ ವ್ಯಾಮೋಹದ ದುಷ್ಪರಿಣಾಮವಿದು. ಆದರೂ ಜನತೆಯ ಮೇಲೆ ಅದರ ಪ್ರಭಾವ ಇಳಿಮುಖವಾಗಲಿಲ್ಲ. ಜನರ ನಾಲಗೆಯ ಮೇಲೆ ನಲಿದಾಡುತ್ತಲೇ ಇದ್ದಿತು ಅದು. ಮತ್ತೆ, ಜನತೆಯ ಕವಿ ಸರ್ವಜ್ಞನು ಬಂದು ತ್ರಿಪದಿಯನ್ನು ಉದ್ಧರಿಸಿ ಅದಕ್ಕೆ ಲಿಖಿತ ಸಾಹಿತ್ಯದಲ್ಲಿ ಸಮುಚಿತ ಸ್ಥಾನ ಮಾನ ಪ್ರತಿಷ್ಠೆಗಳನ್ನು ತಂದುಕೊಟ್ಟನು.

ಸಾಂಗತ್ಯದ ಸಂಗತಿಯೂ ಹೀಗೆಯೇ ಇಂತಹುದೇ ಆಗಿರಬೇಕು. ಹಾಡುವುದಕ್ಕೆಂದೇ ಮಾಡಿದ ಈ ಛಂದಸ್ಸು ಶಾಸನಪ್ರಪಂಚವನ್ನಾಗಲೀ ಸಾಹಿತ್ಯಕ್ಷೇತ್ರವನ್ನಾಗಲೀ ಆಗ ಪ್ರವೇಶ ಮಾಡುವುದಾಗಲಿಲ್ಲ ಎಂದು ತೋರುತ್ತದೆ. ಅಂಶಗಣಘಟಿತ (ಆರು ವಿಷ್ಣುಗಣ ಒಂದು ಬ್ರಹ್ಮ ಮೊದಲರ್ಧದಲ್ಲಿ, ಉತ್ತರಾರ್ಧದಲ್ಲಿಯೂ ಹಾಗೆಯೇ) ವಾಗಿರುವ ಈ ಪದ್ಯಜಾತಿಯ ಗಣಗಳು ಎಂದೆಂದೂ ಮಾತ್ರಾಗಣಕ್ಕೆ ಪರಿವರ್ತನೆಯಾಗಲಿಲ್ಲ. ಇದರದ್ದು ಕಾಲಕ್ಕೆ ತಕ್ಕಂಥ ತಾಳವಲ್ಲ. ಇಂತಹ ಅಂಶಗಣಘಟಿತ ಹೊಸ ವೃತ್ತವೊಂದು ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿ, ವಚನಗಳು, ರಗಳೆ, ಮಾತ್ರಾಗಣ ಘಟಿತ ಷಟ್ಪದಿಗಳು ಅತಿಶಯವಾಗಿ ಪ್ರಚುರಗೊಂಡ ಕಾಲದಲ್ಲಿ. ಉಗಮಗೊಳ್ಳುವುದು ಅಸಂಭವನೀಯ. ಇದು ಬಹುಕಾಲದಿಂದಲೂ ಯಕ್ಷಗಾನಗಳಲ್ಲಿ, ಹಾಡುಗಬ್ಬಗಳಲ್ಲಿ. ಹಾಡುಹಸೆಗಳಲ್ಲಿ, ವೀರಗಾಥಾಗಳಲ್ಲಿ ಮುಗಮುಗಿಸುತ್ತಿದ್ದಿರಬೇಕೆಂದು ತೋರುವುದು.

ಈ ಪದ್ಯಜಾತಿಗೆ 'ಸಾಂಗತ್ಯ' ಎಂಬುದಲ್ಲದೆ ಬೇರಾವುದಾದರೂ ಹೆಸರಿದ್ದಿತೆ? ಹದಿನೈದನೇ ಶತಮಾನದಿಂದ ಈತನಕ ಈ ಛಂದಸ್ಸಿನಲ್ಲಿ ರಚಿತವಾಗಿರುವ ಕೃತಿಗಳಲ್ಲಿ,

2 ಕನ್ನಡ ಛಂದಸ್ಸು, ಪು. 70.

3 ಬಾದಾಮಿಯ ಬಳಿಯ ಒಂದು ಶಾಸನ: ಕಪ್ಪೆ ಅರಭಟ್ಟನನ್ನು ಕುರಿತದ್ದು

ಇವರ ಹೆಸರು ಒಂದೇ ಆಗಿಲ್ಲ: ಸಂಗತಿ (ನೇಮಿಜಿನೇಶ ಸಂಗತಿ). ಸಾಂಗತ್ಯ, ಸಂಗೀತ (ಕುಮಾರ ರಾಮನ ಸಾಂಗತ್ಯ, ರಾಮನ ಸಂಗೀತ)—ಹೀಗೆ ಬೇರೆ ಬೇರೆ ಹೆಸರುಗಳಿವೆ 'ಸಾಂಗತ್ಯ ಕೃತಿ'ಗಳನ್ನು ಪ್ರತಿಮಾಡಿರುವ ಲಿಪಿಕಾರರು. ಮೊದಲಲ್ಲಿ ತಮ್ಮ ಇಷ್ಟದೈವವನ್ನು ನೆನೆದು ತಾವು ಪ್ರತಿ ಮಾಡುತ್ತಿರುವ ಕೃತಿಯ ನಾಮ ನಿರ್ದೇಶನ ಮಾಡಿ ಅನಂತರ. ॥ರಾಗ॥ ಸಾಂಗತ್ಯ॥ ಎಂದು ಬರೆದಿರುತ್ತಾರೆ[4]. 'ರಾಮನಾಥ ಚರಿತೆ' ಎಂಬ ಐತಿಹಾಸಿಕ ಸುಂದರ ಕೃತಿಯನ್ನು ಬರೆದಿರುವ ನಂಜುಡನು ಇದಕ್ಕೆ 'ಪದ ಕವಿತೆ' 'ಪದಕೃತಿ' ಎಂದು ಕರೆದಿರುವನು[5]. ಆದುದರಿಂದ 'ಸಾಂಗತ್ಯ' ಎಂಬುದು ಮುಖ್ಯವಾಗಿ, ಹಾಡಿನ ಒಂದು ಧಾಟಿ, ಒಂದು ಮಟ್ಟು ಎಂದೂ ಆ ಮಟ್ಟಿನಲ್ಲಿ. ಏಕದಾರಿ ಅಥವಾ ಕಿನ್ನರಿಗಳ ಹಿನ್ನೆಲೆಯಲ್ಲಿ ಹಾಡಬಹುದಾಗಿದ್ದ ಎಲ್ಲ ಕೃತಿಗಳಿಗೂ ಸಾಂಗತ್ಯ ಕೃತಿಗಳು ಎಂದು ಕರೆಯುವುದು ರೂಢಿಗೆ ಬಂದಿರಬೇಕೆಂದೂ ಊಹಿಸಬೇಕಾಗುತ್ತದೆ. ಸಾಹಿತ್ಯ ಸಂಗೀತಗಳ ಸಾಮರಸ್ಯವೇ 'ಸಾಂಗತ್ಯ' ಎಂಬುದೂ ಅನುಭವವೇದ್ಯ.

ಹಾಗಾದರೆ ಛಂದೋ ದೃಷ್ಟಿಯಿಂದ ಇದಕ್ಕೆ ಬೇರೊಂದು ಹೆಸರಿರಬೇಕಲ್ಲವೇ? ಅದು ಯಾವುದಿರಬಹುದು? ಹದಿನಾರನೆಯ ಶತಮಾನದಲ್ಲಿದ್ದ ಕಿಕ್ಕೇರಿಯಾರಾಧ್ಯ ನಂಜುಂಡನು 'ಭೈರವೇಶ್ವರ ಕಾವ್ಯ'ವನ್ನು ಮಾಡಿ ಮುಗಿಸುವಾಗ,

ವಿ ವಿ
ಗುರು ಸೋಮ। ನಾಥನ
ವಿ ವಿ
ಕರುಣದಿಂ। ಭೈರವೇ
ವಿ ವಿ ಬ್ರ
ಶ್ವರನ ಚ। ರಿತೆ ಪಂಚ। ಸಂಧಿ
ವಿ ವಿ
ವರವೃತ್ತ। ವೈದು ಸಾ
ವಿ ವಿ
ವಿರದ ಮೇ।ಲಿನ್ನೂರು
ವಿ ಬ್ರ
ಭರಿತ ಷ।ಟ್ಪದವಿದು।ಗಣನೆ

V—161

ಎಂದು. ಈ ಛಂದಸ್ಸಿಗೆ 'ಷಟ್ಪದ' ಎಂದು ಕರೆದಿದ್ದಾನೆ. ಈ ಕೃತಿಯನ್ನು ಅಚ್ಚು ಹಾಕಿಸಿರುವ ಶ್ರೀ ಶಿವಬಸವಸ್ವಾಮಿಗಳು ಪ್ರತಿಪದವನ್ನೂ ಆರು ಪಾದಗಳಾಗಿ ಎಂಗಡಿಸಿ ಅಚ್ಚು ಹಾಕಿಸಿರುವುದು ಸೂಕ್ತವಾಗಿಯೇ ಇದೆ. ಇದೇ ಕಾವ್ಯದ ಇನ್ನೊಂದು ಪದ:

---

4 ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದ 'ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ' ಸಂ, 1, 2, 3, 4.

5 ರಾಮನಾಥ ಚರಿತೆ; ಸಂ. II ಪು. I

ವಿ ವಿ
ಕಿರಾಣ ಕೆ|ನಲು ದೇವ

ವಿ ವಿ
ಗಿರಿಜೆಯ|ಮುಡಿಗಲು

ವಿ ವಿ ಬ್ರ
ನರಳೊಂದ|ಕೊಟ್ಟು ತಾ|ಪ್ರೋಗೆ

ವಿ ವಿ
ಧರಣೀಶ| ತಾಯ ತ

ವಿ ವಿ
ನ್ರರಸಿ ಪಂ|ಕ ಜಗಂಧಿ

ವಿ ವಿ ಬ್ರ
ಗಿರಿಮಿತ್ರ|ಸುತಿಮಿಂದು|ತಿರಲು

I—235

ಕಾವ್ಯದ ಪ್ರತಿಪದ್ಯದ ರಚನೆಯೂ ಹೀಗೆಯೇ. ಚಿಕ್ಕೇರಿಯಾರಾಧ್ಯ ನಂಜುಂಡದೇವನ ಈ ಕವಿತೆ ಸರಳವೂ ಸುಂದರವೂ ಆಗಿರುವುದಲ್ಲದೆ ನೂರಾರು ಕಥಾಸಂದರ್ಭಗಳನ್ನೊಳಗೊಂಡಿದೆ. ಅವನಿಗೆ ಶೈವ ವೀರಶೈವ ಸಂಸ್ಕೃತಿ ಪುರಾಣ ಇತಿಹಾಸ ಸಿದ್ಧಾಂತಗಳ ಪರಿಚಯವಿದ್ದಿತೆಂಬುದು ಅವನ 'ಕಾವ್ಯ'ವನ್ನು ಅಭ್ಯಾಸ ಮಾಡಿದವರಿಗೆ ಗೊತ್ತಾಗುತ್ತದೆ. ಅವನ ಕಾವ್ಯದ ಆಧಾರದ ಮೇಲೆಯೆ ಸುಮಾರು ಕ್ರಿ. ಶ. 1600ರಲ್ಲಿ ಸಿದ್ಧಲಿಂಗ ಶಿವಯೋಗಿ ಎಂಬುವನು 'ಭೈರವೇಶ್ವರ ಪುರಾಣ' ಎಂಬ ಚಂಪೂಕಾವ್ಯವನ್ನು ರಚಿಸಿದ್ದಾನೆ. ಈ ಕಾವ್ಯದ 'ಕಥಾಸೂತ್ರ' ಎಂಬ ವಾಕ್ಯಗಳಿಗೆ 'ರತ್ನಾಕರ' ಎಂಬ ವ್ಯಾಖ್ಯಾನವನ್ನು ಶಾಂತಲಿಂಗದೇಶಿಕ (1672)ನು ರಚಿಸಿದ್ದಾನೆ. ಇದಕ್ಕೆ ವೀರಶೈವ ಕಥಾರತ್ನಕೋಶ ಎಂದರೂ ಸಲ್ಲುವುದು. ಆದುದರಿಂದ ಇವನ ಮಾತಿಗೆ ತೂಕವುಂಟು. ಇನ್ನಿಬ್ಬರು ವೀರಶೈವ ಕವಿಗಳು ಇವನ ಪದಪದ್ಧತಿಯನ್ನೇ ಅನುಕರಿಸಿ ಎರಡು ಕೃತಿಗಳನ್ನು ರಚಿಸಿರುವರು. ಅವರಲ್ಲೊಬ್ಬ, 'ಕರಸ್ಥಲದ ನಾಗಲಿಂಗ ಚರಿತೆ'ಯನ್ನು ರಚಿಸಿರುವ ರುದ್ರಕವಿ. ಇನ್ನೊಬ್ಬ 'ಸತ್ಯೇಂದ್ರ ಚೋಳ ಚರಿತೆ'ಯ ಶಾಂತಕವಿ. ಇವರಿಬ್ಬರ ಪದ ರಚನೆಯೂ ಚಿಕ್ಕೇರಿಯ ನಂಜುಂಡನ ಪದಗಳ ರಚನೆಯನ್ನೇ ಸಂಪೂರ್ಣವಾಗಿ ಹೋಲುವುದು. 'ಕರಸ್ಥಲದ ನಾಗಲಿಂಗನ ಚರಿತೆ'[6]ಯ ಒಂದು ಪದ—

ರು ವಿ
ಶರ ಕುಸುಮ|ಭಾಮಿನಿ

ಬ್ರ ವಿ
ಪರಿವ|ರ್ಧಿನಿಭೋಗ

ವಿ ರು
ಮೆರೆವ ವಾ|ರ್ಧಕ ಷಟ್ಪದ|ವೆಂಬ

---

6 ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ. ಸಂ. 1, ಪು. 237

ವಿ ವಿ
ವರ ಕೃತಿ।ಗಳ ಮುಂದೆ
ವಿ ವಿ
ಶರ ಷಟ್ಪ।ದಿ ಗಳನು
ವಿ ವಿ ಬ್ರ
ಸರಿಗೆಂದು।ಕಥೆಯ ನೊ।ರೆವೆನು

I—7

ಅದೇ ಕೃತಿಯ ಇನ್ನೊಂದು ಪದ.

ರು ವಿ
ಇಂದು ಧರ।ನಿಂದಲಿ
ವಿ ವಿ
ಬಂದು ನಾ।ಗಯ್ಯನು
ರು ವಿ ವಿ
ತಂದೆ ಗುರು।ಶಾಂತನ।ಕರೆ ದೊಯ್ವ
ವಿ ವಿ
ಅಂದದ।ಕೃತಿಯನು
ವಿ ವಿ
ಇಂದು ಲಾ।ಲಿಸಿ ವರ್ಗೆ
ವಿ ವಿ ಬ್ರ
ಸಂದೇಹ।ವಿಲ್ಲ ಮು।ಕ್ತಿಗಳು [7]

ಮೊದಲನೆಯ ಪದದಲ್ಲಿ 'ಶರಷಟ್ಪದಿ' ಹೆಸರಿರುವುದು. ಆದರೆ ತುಂಬ ದೋಷಯುಕ್ತ ವಾಗಿರುವುದು. ಅದು ಕವಿಯೇ ಬರೆದುದೋ ಲಿಪಿಕಾರ ಬರೆದು ಸೇರಿಸಿದುದೋ ಅದರ ಶುದ್ಧ ಪಾಠ ದೊರೆಯುವವರೆಗೂ ಏನೂ ಹೇಳುವಂತಿಲ್ಲ. ಎರಡನೆಯ ಪದವನ್ನು ನೋಡಿದರೆ ಈತನ 'ಶರಷಟ್ಪದಿ'ಗೂ ನಂಜುಂಡನ 'ಷಟ್ಪದ'ಕ್ಕೂ ವ್ಯತ್ಯಾಸವಿಲ್ಲವೆಂಬುದು ತಾನೇ ಗೊತ್ತಾಗುವುದು. 'ಸತ್ಯೇಂದ್ರ ಚೋಳ ಚರಿತೆ'ಯ ಅಂತ್ಯದಲ್ಲಿ.

ವಿ ವಿ
ಶರಷಟ್ಪ।ದಿಯ ಸಾ
ವಿ ವಿ
ವಿರದರು।ನೂರ ಮೇ
ವಿ ವಿ ಬ್ರ
ಲರುವತ್ತು।ರುಂದ್ರ ಸಂಧಿ। ಯೊಳು
ವಿ ವಿ
ಪರಿಪೂರ್ಣ।ಸತ್ಯೇಂದ್ರ
ವಿ ವಿ
ಚೋಳ ಚಾ।ರಿತ್ರವ
ವಿ ವಿ ಬ್ರ
ಸೊರೆದೀಶ್ವ।ರಗೆ ಸಮ।ರ್ಪಿಸುವೆ [8]

---

7 ಸೂಚಿ, ಸಂ. 1, ಪು. 233.

8 ಅದೇ; ಸಂ. 4 ; ಪು. 632.

ಎಂಬ ಪದ್ಯವಿದೆ. ಅಲ್ಲಿಯ ಪದ್ಯಗಳೂ ನಂಜುಂಡದೇವನ ಷಟ್ಪದಗಳೇ. ಆದರೆ ಈ ಪದ್ಯ ಒಂದು ಮಾತ್ರ ಕವಿಕೃತವೊ ಅಲ್ಲವೊ ಎಂಬ ಸಂದೇಹ. ಐದನೆಯ ಪಾದದಲ್ಲಿ ಪ್ರಾಸ ಬೇರೆ ಇಲ್ಲ.

ರೂಪ್ರಕವಿ ಶಾಂತರಿಬ್ಬರೂ ನಂಜುಂಡನ 'ಷಟ್ಪದ'ಕ್ಕೆ 'ಶರಷಟ್ಪದಿ' ಎಂದೇಕೆ ಕರೆದರು? ಆ ಪದ್ಯಗಳು ಅವರೇ ರಚಿಸಿದುವೆ? ಪ್ರಕ್ಷಿಪ್ತವೆ? ಎಂಬ ಪ್ರಶ್ನೆಯನ್ನು ಬದಿಗಿರಿಸಿ ಅವರಿಬ್ಬರೂ 'ಷಟ್ಪದ'ದಲ್ಲಿ ಕಾವ್ಯರಚನೆ ಮಾಡಿರುವರೆಂಬುದನ್ನು ಮಾತ್ರ ನಾವೀಗ ಅಂಗೀಕರಿಸಬಹುದು.

'ಷಟ್ಪದ' ಎಂಬ ಮಾತು ಒಂದು ವೃತ್ತದ ಹೆಸರಾಗಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿರುವುದು ಒಂದೆರಡು ಕಡೆ ಮಾತ್ರ. ನಾಗವರ್ಮನ ಛಂದೋಂಬುಧಿಯ ಪರಿಷ್ಕೃತ ಪಾಠದಲ್ಲಿ 'ಷಟ್ಪದಿ' ಎಂಬ ಮಾತು ಎರಡು ಕಡೆ ಇದೆ: ಪ್ರಥಮಾಧಿಕಾರದಲ್ಲಿ ಪದ್ಯಜಾತಿಗಳ ಹೆಸರನ್ನು ಹೇಳುವಾಗ ಒಂದು ಸಲ, ಪಂಚಮಾಧಿಕಾರದಲ್ಲಿ 'ಷಟ್ಪದಿ'ಯ ಲಕ್ಷಣ ಲಕ್ಷ್ಯಗಳನ್ನು ಹೇಳುವಾಗ ಇನ್ನೊಂದು ಸಲ. ಆದರೆ ಅದು ಷಟ್ಪದ ಅಲ್ಲ. ತೀ.ನಂ.ಶ್ರೀ ಅವರು ಈ ಬಗೆಗೆ "(ಅಮ್ಮಿನ ಬಾವಿಯ) ಶಾಸನದಲ್ಲಿ ಈ ಪದ್ಯಜಾತಿಯನ್ನು "ಷಟ್ಪದ" ಎಂದು ಕರೆದಿದೆ. 'ಸುಕುಮಾರ ಚರಿತ' ದಲ್ಲಿ "ಷಟ್ಪದ" ಎಂಬ ರೂಪವೇ ಉಂಟು. ತೆಲುಗಿನ ಮೂರು ಗ್ರಂಥಗಳಲ್ಲೂ ಅದೇ "ಷಟ್ಪದ" ಎಂಬುದೇ ಕಾಣ ಬರುತ್ತದೆ. ಜಯಕೀರ್ತಿಯ 'ಛಂದೋನು ಶಾಸನ'ದಲ್ಲಿ "ಷಟ್ಪದಿಕಾ" ಎಂದು ಬಂದಿದೆ. 'ಮದನ ತಿಲಕ' 'ಸಂಗೀತ ರತ್ನಾಕರ'ಗಳಲ್ಲಿ ಷಟ್ಪದಿ ಎಂಬ ರೂಪ ಗೋಚರವಾಗುತ್ತದೆ. ನಾಗವರ್ಮನ ಛಂದೋಂಬುಧಿಯ ಪ್ರಚಲಿತ ಪಾಠದಲ್ಲಿ "ಷಟ್ಪದಿ" ಎಂದು ದೊರೆಯುತ್ತದೆ; ಆದರೆ ಮೊದಲಿಗೆ "ಷಟ್ಪದ" ಎಂದು ಇದ್ದಿರುವುದು ಅಸಂಭವವಲ್ಲ. ಹಾಗಾದರೆ ಈ ಶಬ್ದದ ಮೂಲ ರೂಪ ಯಾವುದು?—ಸದ್ಯಕ್ಕೇನೋ, "ಷಟ್ಪದ" ಎಂಬ ಅಕಾರಾಂತದ ಕಡೆಗೇ ಸಂಭಾವ್ಯತೆ ಓಲುತ್ತದೆ" ಎಂದಿರುವರು.[9] ಆದರೆ ಇವರು ಹೇಳುವ "ಷಟ್ಪದ"ಕ್ಕೂ ನಂಜುಂಡದೇವನ ಷಟ್ಪದಕ್ಕೂ ಕೊಂಚ ವ್ಯತ್ಯಾಸವುಂಟು. ನಾಗವರ್ಮಾದಿಗಳು ಹೇಳುವ "ಷಟ್ಪದ"ದ ಪೂರ್ವಾರ್ಧ ಉತ್ತರಾರ್ಧಗಳ ತುದಿಯಲ್ಲಿ ರುದ್ರಗಣ ಬರಬೇಕು. ನಂಜುಂಡನ 'ಷಟ್ಪದ'ದ ಪೂರ್ವಾರ್ಧ ಉತ್ತರಾರ್ಧಗಳ ತುದಿಯಲ್ಲಿ ಬ್ರಹ್ಮಗಣವಿರುತ್ತದೆ. ಅಂತೂ "ಷಟ್ಪದ" "ಷಟ್ಪದಿ"—ಎರಡೂ ಒಂದೇ ಎಂಬ ತಪ್ಪು ಕಲ್ಪನೆ ಬಹುಕಾಲಕ್ಕೆ ಹಿಂದೆಯೇ ಉಂಟಾಗಿರಬೇಕೆಂದು ತೋರುತ್ತದೆ.

ಚಂದ್ರರಾಜನ (ಸು. ೧೦೨೫) 'ಮದನ ತಿಲಕ'ದ,

ಅಂಗನ್ಯಪಾಯುತಿ ತುಂಗಭುಜಂ ಕಲಿ ಯಂಗಿತ ಶಿಕ್ಷಿತಸಂದುಂದುಭಂ
ಲಿಂಗಜದೊಂಗತ ಭೃಂಗಕಚಂ ಕಲಿ ಮಂಗಳಲಕ್ಷಣಯುಕ್ತಸಿವಂ
ಸಂಗರ ಕೇಸರಿ ಸಂಗಗುಣಂ ಬಲಿ ಭೃಂಗರದಕ್ಷನು ಪಾಯುತನುಂ
ಸಂಗದ ಸನ್ಮತಿ ರಂಗವಹಂ ಸಲೆ ಭಂಗಿಯನೀಕ್ಷಿಸಿ ಪಾಟಿಸ್ಪದಂ

9 ಸಮಾಲೋಕನ; ಪು. 222-233.

— ಈ ಪದ್ಯ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆ ಪರಿಚಯವಿದ್ದುದೆ. "ಇದುವೆ ಎಡೆಯಕ್ಕರವುಂ ಕಿರಿಯಕ್ಕರವುಂ ಚೋಪದಿಗೆಯುಂ (ಪಾ. ಚೌಪದಿಕೆಯುಂ) **ಎರಡು ಷಟ್ಪದಿಯುಂ** ತ್ರಿಪದೋನ್ನತಿಯುಂ. ವಲ್ಲಮುಖಿಯುಂ. ರಾಟಮುಂ (ಪಾ. ತ್ರೋಟಕಮುಂ)........ಇಂದುಮುಖಿಯುಂ ಮೊದಲಾಗೆ 84 ವೃತ್ತಮುಂ ಟಾ (ಪಾ. ಪಾ) ದ ಮುರಜಬಂಧಮುಂ ಗೋಮೂತ್ರಿಕೆಯುಮಕ್ಕುಂ"—ಎಂದು ಚಂದ್ರರಾಜನೇ ಹೇಳಿದ್ದಾನೆ. ಈಗ ನಮಗೆ ಮುಖ್ಯವಾಗಿ ಬೇಕಾದುದು ಷಟ್ಪದ (ದಿ) ಯ ವಿಷಯ. "ಎರಡು ಷಟ್ಪದಿ" ಎಂದರೆ ಒಂದೆ ಬಗೆಯ ಎರಡು ಷಟ್ಪದಿಗಳೆ? ಬೇರೆ ಬೇರೆ ಬಗೆಯ ಎರಡೆರಡು ಷಟ್ಪದಿಗಳೆ? ಕಿರಿಯಕ್ಕರದ ಮಾತನ್ನೇ ತೆಗೆದು ಕೊಂಡರೆ.

ವಿ ವಿ ರು
ಇಂಗಿತ।ಶಿಕ್ಷಿತ।ನಿಂದುಯಶಂ

ವಿ ವಿ ರು
ಮಂಗಳ।ಲಕ್ಷಣ।ಯುಕ್ತನಿವಂ

ವಿ ವಿ ರು
ಭೃಂಗರ।ದಕ್ಷನು।ವಾಯತನುಂ

ವಿ ವಿ ರು
ಭಂಗಿಯ।ನೀಕ್ಷಿಸಿ।ರೇಚನೃಪಂ

— ಇದು ಒಂದು ಕಿರಿಯಕ್ಕರ.

ವಿ ವಿ ರು
ಅಂಗನೃ।ಪಾಯತಿ।ತುಂಗಭುಜಂ

ವಿ ವಿ ರು
ಪಿಂಗಜ।ದೊಂಗತ।ಭ್ರುಂಗಕಚಂ

ವಿ ವಿ ರು
ಸಂಗರ।ಕೇಸರಿ।ಸಂಗಗುಣಂ

ವಿ ವಿ ರು
ಸಂಗದ।ಸನ್ಮತಿ।ರಂಗವಹಂ

ಇದು ಮತ್ತೊಂದು ಕಿರಿಯಕ್ಕರ. ಹೀಗೆಯೇ "ಅಂಗನೃಪಾಯತಿ" ಎಂಬ ಪದ್ಯದಿಂದ ಎರಡು ಚೌಪದಿಕೆಗಳನ್ನು ಬಿಡಿಸಿಕೊಳ್ಳಬಹುದು. ಆದರೂ ಈ ವೃತ್ತದಲ್ಲಿ ಎರಡು ಕಿರಿಯಕ್ಕರಗಳಿವೆ. ಎರಡು ಚೌಪದಿಕೆಗಳಿವೆ ಎಂದು ಕವಿ ಸೂಚಿಸಿರುವುದಿಲ್ಲ. ಆದುದರಿಂದ "ಎರಡು ಷಟ್ಪದಿಯುಂ" ಎಂಬುದಕ್ಕೆ ಎರಡು ಬಗೆಯ ಷಟ್ಪದಿಗಳು ಎಂದು ಅರ್ಥೈಸಬೇಕಾಗುತ್ತದೆ. ಅವುಗಳಲ್ಲೊಂದು.

ವಿ ವಿ
ಅಂಗ ನೃ|ಪಾ ಯುತಿ
ವಿ ವಿ
ತುಂಗ ಭು|ಜಂ ಕಲಿ
ವಿ ವಿ ರು
ಯಿಂಗಿತ|ಶಿಕ್ಷಿತ|ಸಿಂದು ಯಶಂ
ವಿ ವಿ
ಓಂಗಜ|ದೊಂಗತ
ವಿ ವಿ
ಭೃಂಗ ಕ|ಚಂ ಕಲಿ
ವಿ ವಿ ರು
ಮಂಗಳ|ಲಕ್ಷಣ|ಯುಕ್ತನಿವಂ

— ಇದು ನಾಗವರ್ಮನು ಹೇಳುವ ಎಲ್ಲ ಲಕ್ಷಣಗಳುಳ್ಳದು. ಉತ್ತರಾರ್ಧದಲ್ಲಿಯೂ ಇಂತಹುದೇ ಇನ್ನೊಂದಿದೆ. ಇನ್ನೊಂದು ಬಗೆಯು 'ಷಟ್ಪದಿ',

ವಿ ವಿ
ಅಂಗ ನೃ|ಪಾಯುತಿ
ವಿ ವಿ
ತುಂಗ ಭು|ಜಂ ಕಲಿ
ವಿ ವಿ ಬ್ರ
ಯಿಂಗಿತ|ಶಿಕ್ಷಿತ|ಸಿಂದು
ವಿ ವಿ
ಓಂಗಜ|ದೊಂಗತ
ವಿ ವಿ
ಭೃಂಗ ಕ|ಚಂ ಕಲಿ
ವಿ ವಿ ಬ್ರ
ಮಂಗಳ|ಲಕ್ಷಣ|ಯುಕ್ತ

ಇಂತಹ ಇನ್ನೊಂದು. ಉತ್ತರಾರ್ಧದಿಂದ ಹೊರಡುವುದು. ನಾಗವರ್ಮನ ಷಟ್ಪದಿಯು ರುದ್ರಗಣದ ಸ್ಥಾನದಲ್ಲಿ ಇಲ್ಲಿ ಬ್ರಹ್ಮಗಣ ಬಂದಿದೆ. ಇದೇ ಕಿಕ್ಕೇರಿಯಾರಾಧ್ಯ ನಂಜುಂಡನು ಬಳಸಿರುವ 'ಷಟ್ಪದ'. ಚಂದ್ರರಾಜನ ಕಾಲದಲ್ಲಿಯೇ 'ಷಟ್ಪದ' 'ಷಟ್ಪದಿ' ಗಳಲ್ಲಿನ ಅರ್ಥವ್ಯತ್ಯಾಸ ಮಾಯವಾಗಿದ್ದಿತೆಂದು ತೋರುವುದು. ಆದುದರಿಂದಲೇ ಆತನು 'ಷಟ್ಪದ'ವನ್ನೂ 'ಷಟ್ಪದಿ' ಎಂದು ಕರೆದಿರಬಹುದು. ಈ ಮಾತಿಗೆ ಸಂಬಂಧ ಪಟ್ಟಂತೆ, ರನ್ನನ, 'ಗದಾಯುದ್ಧ'ದಲ್ಲಿ ಬರುವ ಒಂದು 'ಷಟ್ಪದಿ'ಯು ಜೂರು ದಾರಿ-ದೋರುವುದೇನೋ ನೋಡುವ. ಈ ದಿಸೆಯಲ್ಲಿ ಕೊಂಚ ದೀರ್ಘವಾಗಿ ವಿಚಾರ ಮಾಡುವ ಅಗತ್ಯವೂ ಉಂಟು.

'ಗದಾಯುದ್ಧ ಕಾವ್ಯ'ವನ್ನು ಎಂ. ಎ. ರಾಮಾನುಜಯ್ಯಂಗಾರ್ಯರು 1925ರಲ್ಲಿ ಎರಡನೆಯ ಸಲ ಪರಿಷ್ಕರಿಸಿ ಅಚ್ಚುಹಾಕಿಸಿರುವರು (ಮೊದಲ ಮುದ್ರಣ 1895).

ಅವರು ಪರಿಷ್ಕೃತ ಮುದ್ರಣಕ್ಕೆ 'ಕ' 'ತ' ಎಂಬ ಎರಡು ಪ್ರತಿಗಳನ್ನು ಉಪಯೋಗಿಸಿ ಕೊಂಡಿರಬೇಕೆಂದು ಗೊತ್ತಾಗುತ್ತದೆ. ಅದೇ ಈಗ ನಮಗೆ ದೊರೆಯುವ ಅಧಿಕೃತ ಮುದ್ರಣ. ಆ 'ಮುದ್ರಣ'ದ 9ನೆಯ ಸಂಧಿಯ 21ನೆಯ ಪದ್ಯವಾಗಿ 'ಮಾತ್ರಾ ಸಮಕ ಷಟ್ಪದಿ' ಇರುವುದು. ಅದರ ಅನೇಕ ಅಕ್ಷರಗಳು ಲೋಪವಾಗಿವೆ. 'ತ' ಪ್ರತಿಯಲ್ಲಿ 21-22 ನೆಯ ಪದ್ಯ ಇಲ್ಲವೆಂದೂ ಅವಕ್ಕೆ ಬದಲಾಗಿ

ಹಾ ಕುರು ಕುಲ ಚೂಡಾ ಮಣಿ।
ಹಾ ಕುರು ಕುಲ ಚಕ್ರವರ್ತಿ ಹಾ ಸಕಲ ಧರಿ॥

ಶ್ರೀಕಾಂತ ನಿನ್ನುಮಂ ಪರ।
ಲೋಕಕ್ಕಟ್ಟಿದನೆ ಕಾಯ್ದು ಮಾಯ್ದು ವಿಧಾತ್ರಂ॥

ಎಂಬ ಪದ್ಯವು 3ನೆಯ ಆಶ್ವಾಸದಲ್ಲಿ 80ನೆಯ ಪದ್ಯವಾಗಿ ಬಂದಿದೆಯೆಂದೂ ಗೊತ್ತಾಗುತ್ತದೆ. ಇದು 'ಮಾತ್ರಾ ಸಮಕ ಷಟ್ಪದಿ' ಇರುವಲ್ಲಿಲ್ಲ. ಆದುದರಿಂದ ಪಾಠಾಂತರವೆಂದೂ ಪರಿಗಣಿಸುವಂತಿಲ್ಲ. 'ಕ' ಒಂದರಲ್ಲಿಯೆ 'ಮಾತ್ರಾ ಸಮಕ ಷಟ್ಪದಿ' ಹರುಕು ಮುರುಕಾಗಿಯಾದರೂ ಸಿಕ್ಕಿರುವುದು. ಅದು ಪ್ರಕ್ಷಿಪ್ತವೆನ್ನಲೂ ಯಾವ ಆಧಾರಗಳೂ ಇಲ್ಲ. 'ಕ' ಪ್ರತಿಗೆ ಮೂಲವಾಗಿದ್ದ ಮಾತೃಕೆಯಲ್ಲಿಯೇ ಈ ವೃತ್ತ ಮುಕ್ಕಾಗಿದ್ದಿರಬೇಕು. 'ಮಾತ್ರಾಸಮಕ ಷಟ್ಪದಿ' ಎಂಬುದು ಮಾತ್ರ ಸ್ಫುಟವಾಗಿದ್ದಿರಬೇಕು. ಆದುದರಿಂದ 'ಕ' ಪ್ರತಿಯನ್ನು ಸಿದ್ಧಪಡಿಸಿದ ಲಿಪಿಕಾರ 'ಮಾತ್ರಾಸಮಕ ಷಟ್ಪದಿ'ಯನ್ನೇ ಕಟ್ಟಿಕೊಂಡು ತುಂಬ ತೊಳಲಾಡಿ ಕಡೆಗೆ ತನ್ನ ದೇಣಿಗೆಯನ್ನೂ ಸಲ್ಲಿಸಿ ಪದ್ಯವನ್ನು ಹೇಗೋ 'ಪೂರ್ತಿ' ಮಾಡಿರಬಹುದು. ರಾಮಾನುಜಯ್ಯಂಗಾರ್ಯರ ಪರಿಷ್ಕೃತ ಮುದ್ರಣದ ಆಧಾರದಿಂದ 'ಕ' ಪ್ರತಿಯ ಪಾಠವನ್ನು ಹೀಗೆ ಪುನರ್ನಿರ್ಮಿಸಬಹುದು.

ಮಾತ್ರಾಸಮಕ ಷಟ್ಪ ದಿ? :

ಹಾ ಕುರು ಕುಲ ಮೂಲ ಸ್ತಂಭಾ।
ಹಾ ಕುರು ಕುಲ ಮೃಗರಾಜಾ।
ಹಾ ಕುರು ನೃಪ ವತ್ಸಾ ಹೃದ್ವ್ಯಸನ ಭಂಜನ॥

ಹಾ ನೃಪ ಮಕುಟಾನತ ಚರಣಾ।
ಹಾ ಸಕಲ ನೃಪ ಪೂಜಿತಾ।
ಹಾ × × × ಟ ಪನ್ನಗ ಕೇತೂ

ಈ ಷಟ್ಪದಿ, ಆರು ಸುವಿಖ್ಯಾತ ಷಟ್ಪದಿಗಳು ಹುಟ್ಟಿದಂದು. ವಚನ ರಗಳೆ ಇಲ್ಲದಂದು ಮಾಡಿದುದೆಂಬುದನ್ನು ಮರೆಯಬಾರದು. ಆ ಕಾಲದಲ್ಲಿದ್ದುದು, ನಾಗವರ್ಮ ಹೇಳುವಂತೆ ಒಂದೆ ಷಟ್ಪದಿ, ಚಂದ್ರರಾಜ ಹೇಳಿ ತೋರಿಸಿರುವಂತೆ ಎರಡು ಷಟ್ಪದಿ. ಆ 'ಷಟ್ಪದಿ'ಗಳ ಯಾವುದಾದರೂ ಒಂದು ಪಾದಕ್ಕೆ ಮೇಲಿನ ವೃತ್ತದ ಯಾವುದಾದರೂ ಪಾದ ಹವಣಾದೀತೇ ಎಂಬುದನ್ನು ಪರಿಶೀಲಿಸಿದರೆ, ಅಂಥಾದ್ದು ಸಿಕ್ಕುವುದು ಒಂದೇ ಒಂದು ಪಾದ,

ವಿ ವಿ ಬ್ರ
ಹಾ ಕುರು।ಕುಲ ಮೃಗ।ರಾಜಾ

ನಾಗವರ್ಮನು ಹೇಳದಿರುವ, ಚಂದ್ರರಾಜ ಮಾತ್ರ ಬರೆದಿರುವ 'ಷಟ್ಪದ'ದ ಮೂರನೆಯ ಪಾದವನ್ನು ಹೋಲುವುದಲ್ಲವೆ ಈ ಪಾದ? ಸಾಂಗತ್ಯದ ಎರಡನೆಯ ಪಾದವನ್ನು ಹೋಲುವುದಿಲ್ಲವೆ? ಈ ಪದ್ಯದಲ್ಲಿ ಯಮಕಾಲಂಕಾರವಿರುವುದರಿಂದ ಮೊದಲ ಎರಡು ಪಾದಗಳ ಆದಿಯಲ್ಲಿ 'ಹಾ ಕುರು ಕುಲ' ಎಂಬ ಮಾತುಗಳೂ ಮತ್ತಿನ ಎರಡು ಪಾದಗಳ ಆದಿಯಲ್ಲಿ 'ಹಾ ಕುರು ನೃಪ' ಎಂಬಕ್ಷರಗಳೂ ಇರಬೇಕೆಂಬ ಊಹೆ ಸರಿಯಾದರೆ

ವಿ ವಿ ಬ್ರ ಬ್ರ
ಹಾ ಕುರು।ಕುಲ ಮೂ।ಲ ಸ್ತಂ।ಭಾ [+ಹಾ]
ವಿ ವಿ ಬ್ರ
ಹಾ ಕುರು।ಕುಲ ಮೃಗ।ರಾಜಾ
ವಿ ವಿ ವಿ ವಿ
ಹಾ ಕುರು।ನೃಪ ವ[ಸು।ಹೃಜ್ಜ]ನ।ಭಂಜನ
ವಿ ವಿ ಬ್ರ
ಹಾ ಕುರು।ನೃ[ಪ ನಾ]ಗ।ಕೇತು

ಎಂಬ 'ಸಾಂಗತ್ಯ'ವಾಗುವುದು. ಸಾಂಗತ್ಯದ ಒಂದು ಮೂರನೆಯ ಪಾದಗಳನ್ನು ಎರಡೆರಡುಮಾಡಿ ಪ್ರಾಸವಿಟ್ಟರೆ ಚಂದ್ರರಾಜನು ಹೇಳುವ ಒಂದು 'ಷಟ್ಪದ'ವಾಗುವುದು ವಿಷ್ಣುಗಣದ ಸ್ಥಾನದಲ್ಲಿ ಬ್ರಹ್ಮಗಣ ಬರಬಹುದು. ಅದೇನು ದೋಷವಲ್ಲ.

ಈ ವೃತ್ತದ ಒಂದು ಮೂರನೆಯ ಪಾದಗಳಲ್ಲಿ ಸಮಾನಸಂಖ್ಯೆಯ (16) ಮಾತ್ರೆಗಳಿವೆ. ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಸಮಾನಸಂಖ್ಯೆಯ (12) ಮಾತ್ರೆಗಳಿವೆ. ಆದುದರಿಂದ ಈ ವೃತ್ತಕ್ಕೆ 'ಮಾತ್ರಾಸಮಕ ಷಟ್ಪದಿ' ಎಂದು ಕರೆದರೋ ಏನೋ ತಿಳಿಯದು. 'ಮಾತ್ರಾಸಮಕ ಷಟ್ಪದ' ಎಂಬುದೇ ಅದರ ಸರಿಯಾದ ರೂಪ ವಾಗಿದ್ದಿರಬೇಕು. ಲಿಪಿಕಾರರು ಅದನ್ನು 'ಷಟ್ಪದಿ' ಎಂದು ತಿದ್ದಿರಬಹುದು. 'ಷಟ್ಪದ ಎಂದರೆ ಆರು ಪಾದಗಳುಳ್ಳದ್ದು ಎಂಬ ತಿಳುವಳಿಕೆ ಪ್ರಾಚೀನರಲ್ಲಿರಲಿಲ್ಲವೆಂದು ತೋರುತ್ತದೆ. ಕಮಲ ಕುಮುದ. ಭ್ರಮರ ವಿಲಸಿತ, ಮತ್ತ ಮಯೂರ, ವನ ಮಯೂರ—ಇವೆಲ್ಲ ವೃತ್ತಗಳ ಹೆಸರುಗಳು. ಆಯಾ ವೃತ್ತದ ಸ್ವರೂಪವನ್ನೇನು ಹೇಳುವುದಿಲ್ಲ. ಅಂತೆಯೆ 'ಷಟ್ಪದ'.

'ಷಟ್ಪದ' ಎಂಬ ಹೆಸರು ಚಂದ್ರರಾಜನ ಕಾಲಕ್ಕೆ 'ಷಟ್ಪದಿ' ಎಂಬರ್ಥದಲ್ಲಿ ಬಳಕೆಯಾಗುತ್ತಿದ್ದುದರಿಂದಲೇ ಮೇಲೆ ಹೇಳಿದ ಶಾಸನಕಾರನೂ ಸನತ್ಕುಮಾರ ಚರಿತೆಯ ಕರ್ತೃವೂ 'ಷಟ್ಪದ' ಎಂಬ ಮಾತನ್ನೇ ಬಳಸಿರಬೇಕು. ಹನ್ನೊಂದು ಹನ್ನೆರಡು

ಹದಿಮೂರು ಹದಿನಾಲ್ಕನೆಯ ಶತಮಾನಗಳಲ್ಲಿ ಅಂಶಗಣಘಟಿತವಾದ 'ಷಟ್ಪದಿ'ಯ ಪ್ರಸ್ತಾಪವಾಗಲಿ 'ಷಟ್ಪದ'ದ ಪ್ರಸ್ತಾಪವಾಗಲಿ ಬರುವ ಸಂದರ್ಭವಿರಲಿಲ್ಲ. ಅನಂತರ. ಮಾತ್ರಾಗಣಸಮನ್ವಿತವಾದ, ಆರುಪಾದಗಳ ವೃತ್ತಕ್ಕೆ ಷಟ್ಪದಿ ಎಂಬ ಹೆಸರೂ ಅಂಶಗಣ ಘಟಿತವಾದ ನಾಲ್ಕುಪಾದಗಳ ಷಟ್ಪದಕ್ಕೆ ಸಾಂಗತ್ಯ ಎಂಬ ಹೆಸರೂ ಬಿದ್ದಿರಬೇಕು. ನಂಜುಂಡದೇವ, ಶಾಂತ, ರುದ್ರರು 'ಷಟ್ಪದ' ಎಂದರೆ ಆರುಪಾದಗಳುಳ್ಳ ಸಾಂಗತ್ಯವೆಂದು ಭ್ರಮಿಸಿ ಸಾಂಗತ್ಯಕ್ಕೇ ಒಳಪ್ರಾಸವಿಟ್ಟು 'ಷಟ್ಪದ'—ಎಂದು ಕರೆದಿರಬೇಕೆಂದು ಊಹಿಸ ಬಹುದು. ಈ ಊಹೆ ಸರಿಯೋ, ತಪ್ಪೋ, ಸಾಂಗತ್ಯವಂತೂ ಹತ್ತನೆಯ ಶತಮಾನದಲ್ಲಿದ್ದ ಷಟ್ಪದದ ಪುನರಾವತಾರ. ಅದು ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿ ಹಠಾತ್ತನೆ ಒಡಮೂಡಲಿಲ್ಲ.

ಎಚ್. ದೇವೀರಪ್ಪ

ಪಂಪನನ್ನು ಕುರಿತ ವಿಚಾರ ಸಂಕಿರಣ

ಸ್ವಾಗತ ಭಾಷಣ : ಜಿ. ಎಸ್. ಶಿವರುದ್ರಪ್ಪ

ಬೆಂಗಳೂರು ವಿಶ್ವವಿದ್ಯಾಲಯವು ಏರ್ಪಡಿಸಿರುವ ಕವಿ ಪಂಪನನ್ನು ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಲು ದಯೆಯಿಟ್ಟು ಒಪ್ಪಿ ಬಂದಿರುವ, ಮೈಸೂರು ರಾಜ್ಯದ ವಿದ್ಯಾಮಂತ್ರಿಗಳಾದ ಶ್ರೀ ಎ. ಆರ್. ಬದರಿನಾರಾಯಣ ಅವರಿಗೆ,

ಈ ಸಮಾರಂಭದ ಅಧ್ಯಕ್ಷರಾದ, ಮಾನ್ಯ ಉಪಕುಲಪತಿ ಡಾ. ಎಚ್. ನರಸಿಂಹಯ್ಯನವರಿಗೆ,

ಕಳೆದ ವರ್ಷದ ವಿಚಾರ ಸಂಕಿರಣದಲ್ಲಿ ಓದಲಾದ ಲೇಖನಗಳ ಸಂಗ್ರಹವಾದ "ಕನ್ನಡ ನಾಟಕ : ಪರಂಪರೆ ಮತ್ತು ಪ್ರಯೋಗ" ಎಂಬ ಕೃತಿಯನ್ನು ಬಿಡುಗಡೆ ಮಾಡಲಿರುವ, ರಿಜಿಸ್ಟ್ರಾರ್ ಶ್ರೀ ಎಚ್. ವಿ. ಶ್ರೀರಂಗರಾಜು ಅವರಿಗೆ,

ಪಂಪನನ್ನು ಕುರಿತ ಈ ವಿಚಾರ ಸಂಕಿರಣದ ಅಂಗವಾಗಿ ಏರ್ಪಡಿಸಲಾಗಿರುವ ವಸ್ತುಪ್ರದರ್ಶನದ ಉದ್ಘಾಟಕರಾದ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ. ಜಿ. ನಾರಾಯಣ ಅವರಿಗೆ,

ಈ ವಿಚಾರ ಸಂಕಿರಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಒಪ್ಪಿ ಬಂದಿರುವ ಲೇಖಕರಿಗ, ವಿದ್ವಾಂಸರಿಗೆ ಮತ್ತು ಸಹೃದಯರಾದ ನಿಮ್ಮೆಲ್ಲರಿಗೆ, ಹಾರ್ದಿಕವಾದ ಸ್ವಾಗತವನ್ನು ಬಯಸುತ್ತೇನೆ.

ಕನ್ನಡ ಅಧ್ಯಯನ ಕೇಂದ್ರ ನಡೆಸುತ್ತಿರುವ ವಿಚಾರ ಸಂಕಿರಣಗಳಲ್ಲಿ ಇದು ಮೂರನೆಯದು. 1971ನೆ ಮಾರ್ಚ್ ತಿಂಗಳಲ್ಲಿ "ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು" ಎಂಬ ವಿಷಯವನ್ನು ಕುರಿತು, 1972ನೆ ಫೆಬ್ರವರಿಯಲ್ಲಿ "ಕನ್ನಡ ನಾಟಕ : ಪರಂಪರೆ ಮತ್ತು ಪ್ರಯೋಗ" ಎಂಬ ವಿಷಯವನ್ನು ಕುರಿತು ವಿಚಾರ ಸಂಕಿರಣಗಳು ನಡೆದಿವೆ. ಹಿಂದಿನ ಎರಡು ಸಂಕಿರಣಗಳು ಸಮಕಾಲೀನ ಕಾವ್ಯ ಹಾಗೂ ರಂಗಭೂಮಿಯನ್ನು ಕುರಿತದ್ದು. ಈಗ ಏರ್ಪಡಿಸಿದ ಸಂಕಿರಣವಾದರೋ ಸಾವಿರ ವರ್ಷಕ್ಕೆ ಹಿಂದಿನ, ಕನ್ನಡದ ಮಹತ್ವದ ಕವಿ ಪಂಪನನ್ನು ಕುರಿತದ್ದು.

'ಪಸರಿಪ ಕನ್ನಡಕ್ಕೆ ಒಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂದು, ಹದಿನಾಲ್ಕನೆಯ ಶತಮಾನದ ಕವಿಯೊಬ್ಬ, ಪಂಪನನ್ನು ಕುರಿತ ಆಡಿದ ಮಾತು ಉತ್ಪ್ರೇಕ್ಷೆಯಲ್ಲ ಎಂದು ಇಂದಿಗೂ ನಮಗೆ ತೋರುತ್ತದೆ. 'ಪಂಪನಿಂದ ಕುವೆಂಪು

ವರೆಗ' ಎಂಬ ಸಾಹಿತ್ತಿಕ ನಾಣ್ಣುಡಿ, ಪ್ರಾಸಕ್ಕೆ ಹೇಳಿದ್ದೇನೊ ಎಂದು ಕೆಲವರಿಗೆ ಅನ್ನಿಸಿದರೂ, ಯಥಾರ್ಥವಾದ ಮಾತಾಗಿದೆ. ಪಂಪ. ಇಂದಿಗೂ, ಕನ್ನಡದ ಆದಿಕವಿ, ಅಗ್ರ ಕವಿ.

ಸಾವಿರ ವರ್ಷದಷ್ಟು ಹಿಂದಿನ ಈ ಕವಿಯನ್ನು ಕುರಿತು, ಹತ್ತನೆಯ ಶತಮಾನದ ಈ ಕವಿಯನ್ನು ಕುರಿತು, ಇಪ್ಪತ್ತನೆ ಶತಮಾನದ ನಾವು ವಿಚಾರ ಸಂಕಿರಣವನ್ನು ಏರ್ಪಡಿಸುವ ಅಗತ್ಯವಿದೆಯೆ ಎಂಬ ಪ್ರಶ್ನೆ ಅರ್ಥವಿಲ್ಲದ್ದು. ಸಾಹಿತಿ, ನಿಜವಾದ ಸಾಹಿತಿ ಯಾವ ಒಂದು ಶತಮಾನಕ್ಕೆ ಸೀಮಿತವಾದವನಲ್ಲ. ಅದರಲ್ಲೂ ಪಂಪ ಚರಿತ್ರೆಯ ದೃಷ್ಟಿಯಿಂದ ಹತ್ತನೆ ಶತಮಾನಕ್ಕೆ ಎಣಿಕೆಯಾದರೂ, ಅವನು ತನ್ನ ಸತ್ವದಿಂದ ಎಲ್ಲ ಕಾಲದವನಾಗಿದ್ದಾನೆ. ಕನ್ನಡ ಸಾಹಿತ್ಯದ ಪ್ರಥಮ ನವೋದಯಕ್ಕೆ, ಪಂಪನೆ ಪ್ರೇರಕ. ಕನ್ನಡ ಸಾಹಿತ್ಯಕ್ಕಿರುವ ಸಾವಿರ ವರ್ಷದ ಇತಿಹಾಸದಲ್ಲಿ ಪಂಪ, ಈ ಪರಂಪರೆಯ ಹೆಡೆಯ ಮಣಿ. ಪಂಪನಿಂದ ಹಿಡಿದು ಇಂದಿನ ತನಕ, ಆವನ ಪ್ರಭಾವಗಳು, ಅವನ ಆಲೋಚನೆಗಳು ಹರಿದು ಬಂದಿವೆ. ಕನ್ನಡ ಸಾಹಿತ್ಯ ಎಂದರೆ ಆಧುನಿಕ ಸಾಹಿತ್ಯವಷ್ಟೇ ಅಲ್ಲ; ಸಾವಿರ ವರ್ಷದ ಹಿನ್ನೆಲೆಯೂ ಮುಖ್ಯ. ಕನ್ನಡ ಭಾಷೆ, ಪಂಪ ಬರೆದ ಭಾಷೆ, ರನ್ನ-ಜನ್ನ, ರಾಘವಾಂಕ–ಹರಿಹರ, ಶರಣರು–ದಾಸರು, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರರಂಥ ಕವಿಗಳು ಬಳಸಿದ ಭಾಷೆ. ಈ ಭಾಷೆಯಲ್ಲಿ ಸಾವಿರ ವರ್ಷ ನಡೆದ ಸಾಧನೆಯ ಅರಿವಿಲ್ಲದ ವಿದ್ಯಾರ್ಥಿಯ ಓದು ಅಪೂರ್ಣ. ಇದರ ಪರಿಚಯವಿಲ್ಲದ ಸಾಹಿತಿ ಕಣ್ಣಿದ್ದೂ ಕುರುಡ. ಈ ಪರಂಪರೆಯೊಂದಿಗೆ ಬೆಸೆದುಕೊಳ್ಳಲಾರದ 'ಅನಾಥ'ರನ್ನು ಹೇಗೆ ಕನಿಕರಿಸಬೇಕೋ ತಿಳಿಯದು'!

ನಮ್ಮ ಅರ್ಧ ಶತಮಾನದ ಹೊಸಗನ್ನಡ ಸಾಹಿತ್ಯದ ಧೋರಣೆಗಳನ್ನು ನೋಡಿದರೆ, ಎರಡು ತಲೆಮಾರುಗಳು ಕಾಣುತ್ತವೆ. ಇವುಗಳಲ್ಲಿ ಹೊಸಗನ್ನಡ ಸಾಹಿತ್ಯದ ಆದ್ಯರಾದ ಹಿರಿಯ ಸಾಹಿತಿಗಳೆಲ್ಲರೂ ತಾವು ಪಶ್ಚಿಮದಿಂದ ಎಷ್ಟೇ ಪ್ರೇರಣೆಯನ್ನು ಪಡೆದರೂ, ತಾವು ಬರೆಯುತ್ತಿರುವುದು ಭಾರತೀಯ ಪರಿಸರದಲ್ಲಿ, ಕನ್ನಡ ಪರಂಪರೆಯಲ್ಲಿ ಎಂಬುದನ್ನು ತಮ್ಮ ಬದುಕು-ಬರಹಗಳ ಮೂಲಕ ಖಚಿತಪಡಿಸಿದ್ದಾರೆ. ಆದರೆ ಈಚೆಗಿನ ತಲೆಮಾರಿನವರ ಧೋರಣೆ ಬದಲಾಗಿದೆ. ತಾವು ಬರೆಯುತ್ತಿರುವುದು ಭಾರತೀಯ ಪರಿಸರದಲ್ಲಿ, ಕನ್ನಡ ಪರಂಪರೆಯಲ್ಲಿ ಎನ್ನುವುದನ್ನು ಬದುಕು-ಬರಹಗಳ ಮೂಲಕ ಖಚಿತ ಪಡಿಸದೆ ಇರುವುದೇ ಇವರ ವೈಶಿಷ್ಟ್ಯ! ಕನ್ನಡದಲ್ಲಿ ಬರೆಯುವ ಸಾಹಿತಿ ಪಂಪ, ರನ್ನ, ಕುಮಾರವ್ಯಾಸಾದಿಗಳನ್ನು ಓದದಿದ್ದರೂ ನಷ್ಟವಿಲ್ಲ: ಓದದೆ ಇದ್ದರೂ ಸಾಹಿತ್ಯ ನಿರ್ಮಿತಿ ಸಾಧ್ಯ – ಎಂದು ಹಲವರ ವಾದ. ನಿಜ. ಏನನ್ನಾದರೂ ಬರೆಯುವುದಕ್ಕೆಂದೇ ಯಾರೂ ಯಾರನ್ನೂ ಓದುವುದಿಲ್ಲ; ಓದಬಾರದು. ಕನ್ನಡ ಸಾಹಿತ್ಯವನ್ನು ಮೊದಲಿಂದ ಇಲ್ಲಿನ ತನಕ ಓದಿಕೊಂಡವರು ಮಾತ್ರ ಕನ್ನಡದಲ್ಲಿ ಸಾಹಿತಿಗಳಾಗುತ್ತಾರೆಂದು ನಾವು ತಿಳಿದಿಲ್ಲ. ಆದರೆ ಸೃಜನಾತ್ಮಕ ಸಾಮರ್ಥ್ಯವುಳ್ಳ ಸಾಹಿತಿಗೆ,

ಕಾಳಿದಾಸ, ಭಾಸ, ಭವಭೂತ್ಯಾದಿಗಳ, ಪಂಪ-ರನ್ನ, ಹರಿಹರ-ಕುಮಾರವ್ಯಾಸಾದಿಗಳ ಪರಿಚಯ ಯಾಕೆ ಬೇಡ ? ಅಗತ್ಯವಾಗಿ ಬೇಕು. ಯಾಕೆಂದರೆ, ಈ ಎಲ್ಲ ದೊಡ್ಡ ಕವಿಗಳು ಯಾವ ಸಂಸ್ಕೃತಿ ಹಾಗೂ ಭಾಷೆಗಳ ಸಂದರ್ಭದಲ್ಲಿ ಕೆಲಸ ಮಾಡಿದ್ದಾರೆಯೋ ಅದೇ ಪರಂಪರೆಯ ಸಂದರ್ಭದಲ್ಲಿ ಈತನೂ ಕೆಲಸ ಮಾಡುವ ಕಾರಣ, ಈತನಿಗೆ, ಎಂದರೆ ಸಮಕಾಲೀನ ಸಾಹಿತಿಗೆ ಆ ಪರಂಪರೆಯ ಪರಿಜ್ಞಾನ ಖಂಡಿತ ಬೇಕು. ಈ ಪಾರಂಪಾರಿಕ ಹಿನ್ನೆಲೆಯಿಲ್ಲದೆಯೂ ನಾವು ಬರೆಯಬಲ್ಲೆವು ಎನ್ನುವವರನ್ನು ಕುರಿತು ಏನು ಹೇಳಬೇಕೋ ತಿಳಿಯದು. ಆದರೆ, ಅದೇ ಜನ ಕಾಮ್ಯು, ಕಾಫ್ಕ, ಇಲಿಯಟ್, ಎಸ್ರಾ ಫೌಂಡ್ ಮೊದಲಾದವರು ಬರೆದದ್ದನ್ನು ಯಾಕೆ ಓದುತ್ತಾರೆ ? ಅವರು ಸಮಕಾಲೀನ ಹಾಗೂ ಸಮೀಪ ಕಾಲದವರೆಂದೇ ? ಅವರಲ್ಲಿ ತಮ್ಮ ಹೃದಯಕ್ಕೆ ಹತ್ತಿರವಾದ ಭಾವನೆಗಳಿವೆ ಎಂದೇ ? ಅವರಂತೆ ತಾವು ಬರೆದರೆ ತಾವು ಆಧುನಿಕರಾಗುತ್ತೇವೆ ಎಂದೇ ? ಈ ಎಲ್ಲವೂ ಇರಬಹುದು. ಅಂದರೆ, ಇವರೂ ಯಾವುದೋ ಒಂದು ಪರಂಪರೆಯನ್ನು ಒಪ್ಪಿಕೊಂಡವರೆ ಎಂದಾಯಿತು. ಅವರಾರನ್ನೂ ಓದಿಕೊಳ್ಳದೆಯೂ ತಾವು ಬರೆಯಬಲ್ಲೆವೆಂದು ಇವರಾರೂ ಹೇಳಿದಂತೆ ಕಾಣೆವು. ಸಾಹಿತಿಗೆ ತನ್ನ ಸಮಕಾಲೀನವಾದದ್ದು ಹೇಗೋ ತನ್ನ ಹಿಂದಿನದೂ ಅಷ್ಟೇ ಮುಖ್ಯವಲ್ಲವೆ ? ಹೀಗಿರುವಾಗ ಸಮಕಾಲೀನವಾದ ಅನ್ಯ ದೇಶೀಯವಾದ ಪರಂಪರೆಯ ಪ್ರಭಾವ ಮಾತ್ರ ಬೇಕು; ತನ್ನದೇ ಆದ ಪರಿಸರದ ಪಾರಂಪಾರಿಕ ಹಿನ್ನೆಲೆ ಮಾತ್ರ ಯಾಕೆ ಬೇಡ ? ಷೇಕ್ಸ್‌ಪಿಯರ್, ಮಿಲ್ಟನ್, ಕಾಮ್ಯು, ಕಾಫ್ಕ ಇವರ ಸಾಹಿತ್ತಿಕ ಪರಂಪರೆ ಎಷ್ಟರ ಮಟ್ಟಿಗೆ ನಮ್ಮ ಲೇಖಕರಿಗೆ ಸಂಬಂಧಪಟ್ಟದ್ದೊ, ಅದಕ್ಕಿಂತಲೂ ಮಿಗಿಲಾಗಿ ಪಂಪನಿಂದ ಮೊದಲಾಗಿ ಅನೇಕ ಮಹತ್ವದ ಕವಿಗಳಿಂದ ಕೂಡಿದ ಕನ್ನಡ ಸಾಹಿತ್ಯ ಪರಂಪರೆ ನಮ್ಮ ಸಾಹಿತಿಗಳಿಗೆ ಸಂಬಂಧಪಟ್ಟದ್ದು. ಅವರು ಬೇಕು, ಇವರು ಬೇಡ ಎಂದರೆ ಏನರ್ಥ ? ಇವರು ನಮ್ಮ ಈ ಪರಂಪರೆ ಬೇಡ ಎನ್ನುವುದಕ್ಕೆ ಕಾರಣಗಳನ್ನು ಊಹಿಸುವುದಾದರೆ, ಈ ಕನ್ನಡ ಕಾವ್ಯ ಪರಂಪರೆ ಅಂಥ ಮೌಲಿಕವಾದದ್ದಲ್ಲ, ಅದರ ಪರಿಚಯವಿಲ್ಲದಿದ್ದರೆ ಏನೂ ನಷ್ಟವಿಲ್ಲ ಎಂಬ ತಪ್ಪು ಕಲ್ಪನೆಯೇ ಅವುಗಳಲ್ಲಿ ಪ್ರಧಾನವಾದದ್ದಿರಬಹುದೇ? ಇರಬಹುದೇ ಏನು. ಬಹು ಮಂದಿ ಭಾವಿಸಿರುವುದೆ ಹಾಗೆ ! ಏನೂ ಕಷ್ಟಪಡದೆ. ಏನನ್ನೂ ಓದದೆ, ತಮ್ಮ ಹಿಂದಿನ ಸಾಹಿತ್ಯದಲ್ಲಿ ಏನೂ ಇಲ್ಲ ಎನ್ನುವ 'ಬುದ್ಧಿ ಜೀವಿ' ಗಳಿಂದ ತುಂಬಿ ಹೋಗಿದೆ ನಮ್ಮ ಇಂದಿನ ಸಮಕಾಲೀನ ಸಾಹಿತ್ಯ. ಕನ್ನಡ ಸಾಹಿತಿ ತನ್ನದಲ್ಲದ ಅನ್ಯ ದೇಶೀಯವಾದ ಪ್ರೇರಣೆಗಳನ್ನು ಪಡೆಯುವುದು ತಪ್ಪಲ್ಲ ; ಆದರೆ ಅದರ ಜತೆಗೆ ತನ್ನ ಪರಿಸರದ ಸಾಹಿತ್ತಿಕ ಪರಂಪರೆಯ ಪ್ರಜ್ಞೆಯಲ್ಲಿ ಬೇರೂರದ ಹೊರತು ಸತ್ವಯುತವಾದ ಹಾಗೂ ಸಮತೂಕದ ಸಾಹಿತ್ಯವನ್ನು ಅವನು ನಿರ್ಮಿಸಲಾರ. ಈ ದೃಷ್ಟಿಯಿಂದ ಕನ್ನಡದಲ್ಲಿ ಅಧ್ಯಯನ ನಡೆಸುವ ವಿದ್ಯಾರ್ಥಿಗೆ, ಕನ್ನಡದಲ್ಲಿ ತನ್ನ ವಿಶಿಷ್ಟಾಭಿವ್ಯಕ್ತಿಯನ್ನು ರೂಪಿಸಿಕೊಳ್ಳುವ ಸಾಹಿತಿಗೆ, ಕನ್ನಡ ಭಾಷೆಯ ಬಗ್ಗೆ ಕಳಕಳಿಯಿಂದ ಮಾತನಾಡುವ ಮುಂದಾಳು

ಗಳಿಗೆ ತಾವು ನಿಂತ ನೆಲದ ಗುಣದ ಬಗ್ಗೆ, ತಕ್ಕಷ್ಟು ಅರಿವಿರುವುದು ಅವಶ್ಯಕ. ಇಂಥ ಪಾರಂಪರಿಕ ಹಿನ್ನೆಲೆಯ ಪ್ರಥಮ ಪ್ರತಿನಿಧಿಯಾಗಿದ್ದಾನೆ ಕವಿ ಪಂಪ. ಕನ್ನಡದ ಪರಂಪರೆಯ ಪ್ರಮುಖ ಕವಿಗಳನ್ನು ಕುರಿತು ಆಗಾಗ ಇಂಥ ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಸಾಹಿತಿಗಳನ್ನು, ವಿದ್ಯಾರ್ಥಿಗಳನ್ನು, ವಿದ್ವಾಂಸರನ್ನು ಕಲೆ ಹಾಕಿ ವಿಚಾರ ವಿನಿಮಯಕ್ಕೆ ಎಷ್ಟೆಷ್ಟು ಅವಕಾಶಗಳನ್ನು ಕಲ್ಪಿಸಿದರೆ, ಅಷ್ಟಷ್ಟು ನಮ್ಮ ಜನಕ್ಕೆ. ತಮ್ಮ ಬೆನ್ನ ಹಿಂದಿನ ಬೆಳಕು ಏನೆಂಬುದರ ಪರಿಚಯವಾದೀತು. ಇಂಥ ಒಂದು ವಾತಾವರಣವನ್ನು ನಿರ್ಮಾಣ ಮಾಡುವುದರಲ್ಲಿ, ಈಗ ಏರ್ಪಟ್ಟಿರುವ ಈ ವಿಚಾರ ಸಂಕಿರಣ ಒಂದು ನಮ್ರವಾದ ಪ್ರಯತ್ನ ಮಾತ್ರ.

ಇಂಥ ವಿಚಾರ ಸಂಕಿರಣಗಳಿಂದ ಆಗುವ ಪ್ರಯೋಜನ ಇನ್ನೂ ಒಂದಿದೆ: ಅದೆಂದರೆ, ಸಮಕಾಲೀನರಾದ, ಭಿನ್ನ ಮನೋಧರ್ಮದ ವಿವಿಧ ಲೇಖಕರನ್ನು ಒಂದು ವೇದಿಕೆಯ ಮೇಲೆ ತರುವುದು : ಮುಕ್ತ ಮನಸ್ಸಿನ ಚರ್ಚೆಗಳಿಗೆ ಅವಕಾಶ ಮಾಡಿಕೊಡುವುದು. ವಿಮರ್ಶೆಯ ಬೆಳವಣಿಗೆಗೆ ತಕ್ಕ ವಾತಾವರಣವನ್ನು ನಿರ್ಮಿಸುವುದು.

ಈಚೆಗೆ ಕೆಲವರು, ತಿಳಿದೊ ತಿಳಿಯದೆಯೋ, ಕನ್ನಡದಲ್ಲಿ ವಿಮರ್ಶೆ ಬೆಳೆಯುತ್ತಾ ಇಲ್ಲ, ಈ ದಿಕ್ಕಿನಲ್ಲಿ ವಿಶ್ವವಿದ್ಯಾಲಯಗಳು ಏನೂ ಕೆಲಸ ಮಾಡುತ್ತಿಲ್ಲ ಎಂದು ಆಕ್ಷೇಪಿಸುತ್ತಾರೆ. ಈ ಬಗೆಯ ಆಕ್ಷೇಪಣೆ, ಕನ್ನಡ ವಿಮರ್ಶನ ಕ್ಷೇತ್ರದಲ್ಲಿ ನಡೆಯಬೇಕಾದಷ್ಟು ಕೆಲಸ ನಡೆದಿಲ್ಲ ಎಂಬ ಅತೃಪ್ತಿಯನ್ನು ಸೂಚಿಸುತ್ತದೆಯೇ ಹೊರತು. ಅಭಾವವನ್ನು ಸೂಚಿಸುತ್ತದೆಂದು ನಾವು ಭಾವಿಸುವುದಿಲ್ಲ. ಕನ್ನಡ ನಾಡಿನ ಮೂರು ವಿಶ್ವ-ವಿದ್ಯಾಲಯಗಳು ಕನ್ನಡ ವಿಮರ್ಶೆಯ ಬೆಳವಣಿಗೆಯಲ್ಲಿ ಮೌಲಿಕವಾದ ಪಾತ್ರ ವಹಿಸಿವೆ ಎಂಬುದು ವಿಶ್ವವಿದ್ಯಾಲಯದ ಪ್ರಸಾರಾಂಗಗಳು ಈ ವಿಷಯವನ್ನು ಕುರಿತು ಏರ್ಪಡಿಸಿದ ವಿಶೇಷೋಪನ್ಯಾಸ ಮಾಲೆಯ ಪುಸ್ತಕಗಳನ್ನು, ಮತ್ತು ಶ್ರೇಷ್ಠ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸಿರುವ ವಿಮರ್ಶೆಗೆ ಸಂಬಂಧಿಸಿದ ಕೃತಿಗಳನ್ನು ನೋಡಿದರೆ ತಿಳಿದೀತು. ವಿಮರ್ಶೆಯ ಬೆಳವಣಿಗೆಗೆ ಆಧಾರಭೂತವಾದ ಹಿನ್ನೆಲೆಯ ಕೆಲಸ ಈ ವಿಶ್ವವಿದ್ಯಾಲಯಗಳಿಂದ ಗಣನೀಯವಾದ ಪ್ರಮಾಣದಲ್ಲಿ ನಡೆದಿದೆ. ಭಾರತೀಯ ಕಾವ್ಯ ಮೀಮಾಂಸೆಗೆ ಸಂಬಂಧಪಟ್ಟ ಕೆಲಸ, ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಗೆ ಸಂಬಂಧಪಟ್ಟ ಕೆಲಸ ಮತ್ತು ಸಮಕಾಲೀನ ವಿಮರ್ಶೆಗೆ ಸಂಬಂಧಪಟ್ಟ ಕೆಲಸ ಈ ಐವತ್ತು ವರ್ಷಗಳಲ್ಲಿ ಎಷ್ಟು ನಡೆದಿದೆ ಎಂಬುದನ್ನು ಸಮಕಾಲೀನ ಸಾಹಿತಿಗಳು ಗಮನಿಸಬೇಕು. ಅದಾವುದನ್ನೂ ಗಮನಿಸುವ ಔದಾರ್ಯವಿಲ್ಲದ ಜನ, ವಿಶ್ವವಿದ್ಯಾಲಯಗಳು ಕನ್ನಡ ವಿಮರ್ಶೆಯ ಬೆಳವಣಿಗೆಗೆ ಏನೂ ಕೆಲಸ ಮಾಡಿಲ್ಲ ಎನ್ನುವುದು ಅರ್ಥವಿಲ್ಲದ, ಒಂದು ಕೂಗು ಮಾತ್ರ. ಕೆಲವರಿಗೆ ಭ್ರಮೆ : ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಸಂಬಂಧಪಟ್ಟ ಎಲ್ಲ ಕೆಲಸವೂ ಇದೀಗ ತಮ್ಮಿಂದಲೇ ತಮ್ಮವರಿಂದಲೇ ಆರಂಭವಾಗುತ್ತಿದೆ ಎಂದು. ಅಂಥವರು ಮಾಡುತ್ತಿರುವ ಕೆಲಸ ಮೌಲಿಕವಾದದ್ದೇ ಇರಬಹುದೆಂಬ ಗೌರವವನ್ನು ಸೂಚಿಸಿಯೂ, ಅಂಥ

ವರನ್ನು ನಾವು ಕೇಳಿಕೊಳ್ಳುತ್ತೇವೆ : ಸ್ವಾಮಿ, ಸ್ವಲ್ಪ ಹಿಂದಕ್ಕೆ ತಿರುಗಿ ನೋಡಿ ; ಕನ್ನಡದಲ್ಲಿ ಏನೇನೂ ಕೆಲಸವಾಗಿಲ್ಲ ಎಂಬ ಪಲ್ಲವಿಯನ್ನು ಸ್ವಲ್ಪ ನಿಲ್ಲಿಸಿ. ದಯಮಾಡಿ ನಡೆದು ಬಂದ ದಾರಿಯ ಕಡೆ ಹೊರಳಿ ನೋಡಿ. ನಿಮಗೂ ಹಿಂದೆ, ಮತ್ತು ನಿಮ್ಮ ಸುತ್ತಮುತ್ತಲೂ– ತಕ್ಕಷ್ಟು ಕೆಲಸ ನಡೆದಿದೆ, ನಡೆಯುತ್ತಿದೆ. ಆದರೆ ನೀವು ಯಾವುದನ್ನು ವಿಮರ್ಶೆ ಎಂದು ಭಾವಿಸಿದ್ದೀರೋ ಅಂಥದು ಆಗಿಯೇ ಇಲ್ಲವೆಂದು ನೀವು ತಿಳಿದಿದ್ದರೆ, ದಯಮಾಡಿ ನಿಮ್ಮ ಸಲಹೆ ಸೂಚನೆಗಳನ್ನು ಕೊಡಿ. ಒಟ್ಟಿಗೆ ಕೂತು ಕೆಲಸ ಮಾಡೋಣ, ಯಾಕೆಂದರೆ ನಾವು ಎಲ್ಲಿದ್ದರೂ ಕನ್ನಡ ಜನ. ಕನ್ನಡ ಸಾಹಿತ್ಯದ ಬಗ್ಗೆ ಶ್ರದ್ಧೆಯುಳ್ಳ ಜನ. ಆಗಬೇಕಾದ ಕೆಲಸ ಏನೆಂಬುದನ್ನು ಹೇಳಿ; ಆಗಿರುವ ಕೆಲಸದ ಕಡೆ ಉದ್ದೇಶಪೂರ್ವಕವಾಗಿ ಕಣ್ಣು ಮುಚ್ಚಬೇಡಿ. ಪಂಪ ಹೇಳಿದ ಮನುಷ್ಯತ್ವದ ಸೂತ್ರ ಇದು : ಚಾಗದ, ಭೋಗದ, ಅಕ್ಕರದ, ಗೇಯದ, ಗೊಟ್ಟಿಯ ಅಲಂಪಿನ ಇಂಪುಗಳ್ಗೆ ಆಗರಮಾದ ಮಾನಿಸರೆ ಮಾನಿಸರ್. ಇವುಗಳಲ್ಲಿ 'ಗೊಟ್ಟಿಯ ಅಲಂಪಿನ ಇಂಪುಗಳ್ಗೆ' ಆಗರವಾದರೆ ಮಾತ್ರ, ಎಲ್ಲ ಒಟ್ಟಿಗೆ ಗೋಷ್ಠಿಯಾಗಿ, ಮೇಳ ವಾಗಿ ಕೂಡಿಕೊಂಡು ಸಂತೋಷದಿಂದ ಕೆಲಸ ಮಾಡಿದರೆ ಮಾತ್ರ ನಾವು 'ಭಿನ್ನವಿದ್ದೂ ಬೆರೆಯಬಹುದು' ಹೊಸತೇನನ್ನಾದರೂ ತೆರೆಯಬಹುದು.

ಇಂದು ಇಲ್ಲಿ 'ಗೊಟ್ಟಿಯ ಅಲಂಪಿನ ಇಂಪುಗಳ್ಗೆ ಆಗರ'ವಾದ ಸಂದರ್ಭದಲ್ಲಿ ನಾವಿದ್ದೇವೆ–ಪಂಪನ ಹೆಸರಿನಲ್ಲಿ. ಇಂಥ ಗೋಷ್ಠಿಗಳನ್ನೇರ್ಪಡಿಸುವ ನಮಗೆ ನಿರಂ ತರ ಪ್ರೋತ್ಸಾಹದ ಬೆಂಬಲವಾಗಿರುವ ಬೆಂಗಳೂರು ವಿಶ್ವವಿದ್ಯಾಲಯಕ್ಕೆ, ಕೃತಜ್ಞತೆಗ ಳನ್ನು ಸಲ್ಲಿಸಿ, ಮತ್ತೊಮ್ಮೆ ತಮ್ಮೆಲ್ಲರನ್ನೂ ಸ್ವಾಗತಿಸಿ, ಇಂದಿನ ಕಾರ್ಯಕ್ರಮವನ್ನು ನೆರವೇರಿಸಿಕೊಡಬೇಕೆಂದು, ಅಧ್ಯಕ್ಷರಾದ ಡಾ. ಎಚ್. ನರಸಿಂಹಯ್ಯನವರನ್ನು ಕೇಳಿಕೊಳ್ಳುತ್ತೇನೆ.

ಸಂಕ್ಷಿಪ್ತ ವರದಿ

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು, 1973 ನೆ ಮಾರ್ಚ್ 26, 27, 28 ರಂದು, ಕನ್ನಡದ ಆದಿ ಕವಿಯೂ ಅಗ್ರ ಕವಿಯೂ ಆದ ಪಂಪನನ್ನು ಕುರಿತು ಒಂದು ವಿಚಾರ ಸಂಕಿರಣವನ್ನು, ಸೆನೆಟ್ ಭವನದಲ್ಲಿ ಏರ್ಪಡಿಸಿತ್ತು.

ಮಾರ್ಚ್ 26 ನೆ ಬೆಳಿಗ್ಗೆ ಹತ್ತೂವರೆ ಗಂಟೆಗೆ, ಮೈಸೂರು ರಾಜ್ಯದ ಮಾನ್ಯ ವಿದ್ಯಾ ಮಂತ್ರಿಗಳಾದ ಶ್ರೀ ಎ. ಆರ್. ಬದರಿನಾರಾಯಣ ಅವರು ಈ ಸಂಕಿರಣ ವನ್ನು ಉದ್ಘಾಟಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಶ್ರೀ ಎಚ್. ವಿ. ಶ್ರೀರಂಗ ರಾಜು ಅವರು, ಇದೇ ಅಧ್ಯಯನ ಕೇಂದ್ರ ಕಳೆದ ವರ್ಷ ಫೆಬ್ರವರಿಯಲ್ಲಿ ಏರ್ಪಡಿಸಿದ ನಾಟಕವನ್ನು ಕುರಿತ ವಿಚಾರ ಸಂಕಿರಣದಲ್ಲಿ ವಿವಿಧ ಲೇಖಕರಿಂದ ಮಂಡಿತವಾದ

ಲೇಖನಗಳ ಸಂಕಲನ, 'ಕನ್ನಡ ನಾಟಕ : ಪರಂಪರೆ ಮತ್ತು ಪ್ರಯೋಗ' ಎಂಬ ಪುಸ್ತಕವನ್ನು ಬಿಡುಗಡೆ ಮಾಡಿದರು. ಕನ್ನಡ ನಾಟಕವನ್ನು ಕುರಿತ ಈ ಪುಸ್ತಕ, ಕನ್ನಡ ರಂಗಭೂಮಿಯನ್ನು ಅರ್ಧ ಶತಮಾನಕ್ಕೂ ಮಿಕ್ಕು ಚೈತನ್ಯಗೊಳಿಸಿದ ದಿವಂಗತ ಗುಬ್ಬಿ ವೀರಣ್ಣನವರ ನೆನಪಿಗೆ ಅರ್ಪಿತವಾಗಿದೆ. ಪಂಪನನ್ನು ಕುರಿತು, ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಭಂಡಾರದಲ್ಲಿ ವ್ಯವಸ್ಥೆಗೊಳಿಸಲಾದ ಸಣ್ಣ ವಸ್ತುಪ್ರದರ್ಶನದ ಉದ್ಘಾಟನೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರಿ ಜಿ. ನಾರಾಯಣ ಅವರು ನೆರವೇರಿಸಿದರು. ವಿಚಾರ ಸಂಕಿರಣದಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು, ಉಪಕುಲಪತಿ ಡಾ. ಎಚ್. ನರಸಿಂಹಯ್ಯನವರು ವಹಿಸಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಪಂಪನನ್ನು ಕುರಿತ ವಿಚಾರ ಸಂಕಿರಣ ನಾಲ್ಕು ವಿಚಾರಗೋಷ್ಠಿಗಳಲ್ಲಿ ಹರಹಿಕೊಂಡಿತ್ತು. ತಾ 26-3-73 ರ ಮಧ್ಯಾಹ್ನದ ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಆರ್. ಸಿ. ಹಿರೇಮಠ ಅವರೂ, ತಾ 27-3-73 ರ ಬೆಳಗಿನ ಗೋಷ್ಠಿಯ ಅಧ್ಯಕ್ಷತೆಯನ್ನು ಮಾನಸಗಂಗೋತ್ರಿಯಲ್ಲಿ ಜೈನಾಲಜಿಯ ಪ್ರಾಧ್ಯಾಪಕರಾಗಿರುವ ಡಾ. ಎ. ಎನ್. ಉಪಾಧ್ಯೆಯವರೂ, 27-3-73 ರ ಮಧ್ಯಾಹ್ನದ ಗೋಷ್ಠಿಯ ಅಧ್ಯಕ್ಷತೆಯನ್ನು. ಶ್ರೀ ವಿ. ಸೀತಾರಾಮಯ್ಯನವರೂ, ಮತ್ತು 28-3-73 ರ ಬೆಳಗಿನ ಗೋಷ್ಠಿಯ ಅಧ್ಯಕ್ಷತೆಯನ್ನು, ಮೈಸೂರು ವಿಶ್ವವಿದ್ಯಾಲಯದ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾದ ಡಾ. ಎಲ್. ಬಸವರಾಜು ಅವರೂ ವಹಿಸಿ ಸುಗಮವಾಗಿ ನಡೆಯಿಸಿ ಕೊಟ್ಟರು. ಪಂಪನ ಕೃತಿಗಳನ್ನು ಹಲವು ಬಗೆಯ ನಿಟ್ಟಿನಿಂದ ನೋಡಿದ. ಒಟ್ಟು ಹದಿನಾಲ್ಕು ಲೇಖನಗಳನ್ನು ವಿವಿಧ ವಿದ್ವಾಂಸರು. ವಿಮರ್ಶಕರು ಮಂಡಿಸಿದರು. ವಿಶೇಷ ಆಹ್ವಾನಿತರಾಗಿ ಹಾಗೂ ವೀಕ್ಷಕರಾಗಿ ಬಂದ ಅನೇಕ ಸಾಹಿತಿಗಳು, ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಪಾಲುಗೊಂಡ ಈ ಸಂಕಿರಣದಲ್ಲಿ, ಒಂದೊಂದು ಪ್ರಬಂಧದ ಮೇಲೂ ಸಾಕಷ್ಟು ಚರ್ಚೆ ಪ್ರತಿಚರ್ಚೆಗಳು ನಡೆದು. ಪಂಪನನ್ನು ಕುರಿತ ಒಳ್ಳೆಯ ವಿಚಾರ ವೇದಿಕೆಯೊಂದು ನಿರ್ಮಿತವಾಯಿತು.

ವಿಚಾರ ಸಂಕಿರಣದ ಮೊದಲ ಹಾಗೂ ಎರಡನೆಯ ದಿನ ಸಂಜೆ. ಏಳು ಗಂಟೆಗೆ ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಶಾಲೆಯ ಪ್ರದರ್ಶನಾಲಯದಲ್ಲಿ, ಮೈಸೂರು ಸರ್ಕಾರದ ವಾರ್ತಾ ಇಲಾಖೆಯವರ ಕೃಪೆಯಿಂದ 'ಕವಿದರ್ಶನ' ಮತ್ತು 'ಸಂಸ್ಕೃತಿ ದರ್ಶನ'ವನ್ನು ಕುರಿತ ಸಾಕ್ಷ್ಯಚಿತ್ರಗಳ ಪ್ರದರ್ಶನವಿತ್ತು. ಮೂರನೆಯ ದಿನ 28-3-73ರಂದು ಸಂಜೆ ಐದೂಕಾಲು ಗಂಟೆಗೆ, ಒಂದು ಕವಿ ಸಮ್ಮೇಳನ, ಶ್ರೀ ಕೆ. ಎಸ್. ನರಸಿಂಹಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಂಕಿರಣದಲ್ಲಿ ಓದಿ ಚರ್ಚಿತವಾದ ಹದಿನಾಲ್ಕು ಲೇಖನಗಳನ್ನು ಅದರ ಮೇಲೆ ಎದ್ದ ಉಚಿತವಾದ ಪ್ರಶ್ನೆ ಹಾಗೂ ಲೇಖಕರ ಉತ್ತರಗಳ ಸಮೇತ ಇಷ್ಟರಲ್ಲೇ ಪ್ರಕಟಿಸಲಾಗುವುದು. ಈ ಕೃತಿ ಪಂಪನನ್ನು ಕುರಿತ ಉತ್ತಮ ಆಧಾರ ಗ್ರಂಥವಾಗುವುದರ ಜತೆಗೆ ಕನ್ನಡ ವಿಮರ್ಶಾ ಸಾಹಿತ್ಯಕ್ಕೆ ಒಳ್ಳೆಯ ಕೊಡುಗೆಯೂ ಆಗುವುದರಲ್ಲಿ ಸಂದೇಹವಿಲ್ಲ.

* *

ಕನ್ನಡ ಅಧ್ಯಯನ ಕೇಂದ್ರ ಮಾಲೆ ಪ್ರಕಟಣೆಗಳು

1.	ವರ್ಣನಾತ್ಮಕ ವ್ಯಾಕರಣ	ಹೆಚ್. ಎಸ್. ಬಿಳಿಗಿರಿ
2.	ತಿಮ್ಮಪ್ಪದಾಸರ ಅರ್ಜನ	ಸಂ: ಎಂ. ವಿ. ಸೀತಾರಾಮಯ್ಯ
3.	ಸಂಶೋಧನ ತರಂಗ. ಭಾಗ 2	ಎಂ. ಚಿದಾನಂದಮೂರ್ತಿ
4.	ವಿಜ್ಞಾನ ಮತ್ತು ಸಮಾಜ	ವಿವಿಧ ಲೇಖಕರು
5.	ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ	ವಿವಿಧ ಲೇಖಕರು
6.	ಪ್ರಾಯೋಗಿಕ ವಿಮರ್ಶೆ	ಸಂ: ಜಿ. ಎಸ್. ಶಿವರುದ್ರಪ್ಪ ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ
7.	ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು	ಸಂ: ಜಿ. ಎಸ್. ಶಿವರುದ್ರಪ್ಪ
8.	ಲಾವಣಿಗಳು	ಸಂ: ಕೆ. ಮರುಳಸಿದ್ದಪ್ಪ
9.	ವಾಕ್ಯ ಮಾಣಿಕ್ಯ ಕೋಶ	ಸಂ: ಜಿ. ಎಸ್. ಶಿವರುದ್ರಪ್ಪ ಎಸ್. ವಿದ್ಯಾಶಂಕರ್
10.	ಸಾಹಿತ್ಯ ವಾರ್ಷಿಕ 1971	ಸಂ: ಜಿ. ಎಸ್. ಶಿವರುದ್ರಪ್ಪ
11.	ಲಕ್ಷಾಪತಿ ರಾಜನ ಕಥೆ	ಸಂ: ಚಂದ್ರಶೇಖರ ಕಂಬಾರ
12.	ಮಾತಾಡು ಲಿಂಗವೇ	ಸಂ: ಚಂದ್ರಶೇಖರ ಕಂಬಾರ
13.	ಕನ್ನಡ ನಾಟಕ: ಪರಂಪರೆ ಮತ್ತು ಪ್ರಯೋಗ	ಸಂ: ಜಿ. ಎಸ್. ಶಿವರುದ್ರಪ್ಪ

ಈ ಸಂಚಿಕೆಯ ಲೇಖಕರು

1	ಕೆ. ಎಸ್. ನರಸಿಂಹಸ್ವಾಮಿ	397, ಒಂದನೆ ಬ್ಲಾಕ್, ಜಯನಗರ ಬೆಂಗಳೂರು 560011
2	ಡಾ. ರಂ. ಶ್ರೀ. ಮುಗಳಿ	ಯು. ಜಿ. ಸಿ. ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು 560009
3	ಸಿ. ರಾಮನಾಥನ್	ರೀಡರ್, ಸಂಸ್ಕೃತ ವಿಭಾಗ ಆಚಾರ್ಯ ಪಾಠಶಾಲಾ ಕಾಲೇಜ್ ಎನ್. ಆರ್. ಕಾಲೋನಿ ಬೆಂಗಳೂರು 560019
4	ನಾಗಲಕ್ಷ್ಮಿ ಹರಿಹರೇಶ್ವರ	ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560009
5	ಡಾ. ಬಿ. ಕೃಷ್ಣಸ್ವಾಮಿ ಅಯ್ಯಂಗಾರ್	ರೀಡರ್, ಕೇಂದ್ರೀಯ ಹಿಂದಿ ಸಂಸ್ಥಾನ ಆಗ್ರಾ 5
6	ಮೇಗರವಳ್ಳಿ ರಮೇಶ್	ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮೇಗರವಳ್ಳಿ (ತೀರ್ಥಹಳ್ಳಿ ತಾಲ್ಲೂಕ್)
7	ಡಾ. ಟಿ. ಕೆ. ಲಕ್ಷ್ಮಣ್	ಅರ್ಥಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560009
8	ಶಶಿಧರ ಕುಲಕರ್ಣಿ	1063/110, ಒಂದನೆ ಮೇನ್ ಏಳನೆ ಕ್ರಾಸ್, ವಿದ್ಯಾರಣ್ಯಪುರಂ ಮೈಸೂರು 570004
9	ಡಾ. ಎಂ. ಚಿದಾನಂದಮೂರ್ತಿ	ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560009

10	ಜಯ ಸುದರ್ಶನ	745, 37 'ಎ' ಕ್ರಾಸ್ 4ನೆ 'ಟಿ' ಬ್ಲಾಕ್ ಜಯನಗರ ಬೆಂಗಳೂರು 560011
11	ಎನ್. ಬಾಲಸುಬ್ರಮಣ್ಯ	'ಇ' ಬ್ಲಾಕ್, 406, ಕರ್ಜನ್ ರೋಡ್ ಅಪಾರ್ಟ್‌ಮೆಂಟ್ಸ್, ನವದೆಹಲಿ-1
12	ಎನ್. ವಿ. ಭಾಗ್ಯಲಕ್ಷ್ಮಿ	387, ವೈಯಾಲಿಕಾವಲ್ ಷೆಡ್ ಏರಿಯಾ ಮಲ್ಲೇಶ್ವರಂ, ಬೆಂಗಳೂರು 560003
13	ದೇವರಕೊಂಡರೆಡ್ಡಿ	ಕನ್ನಡ ಅಧ್ಯಾಪಕ, ಜೂನಿಯರ್ ಕಾಲೇಜ್ ಗುಂಡ್ಲುಪೇಟೆ
14	ಡಾ. ಬ. ನಂ. ಬೋಳೇಗೌಡ	ಪ್ರಾಣಿಶಾಸ್ತ್ರ ವಿಭಾಗ ಮಾನಸಗಂಗೋತ್ರಿ ಮೈಸೂರು-570006
15	ಡಾ. ಹೆಚ್. ವಿ. ಶ್ರೀನಿವಾಸಮೂರ್ತಿ	ಇತಿಹಾಸ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560009
16	ಎಸ್. ವಿ. ಭಟ್	ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು 560003
17	ಎಸ್. ಕೃಷ್ಣಭಟ್	ಇಂಗ್ಲೀಷ್ ವಿಭಾಗ ಆಚಾರ್ಯ ಪಾಠಶಾಲಾ ಕಾಲೇಜ್ ಬೆಂಗಳೂರು 560019
18	ಡಾ. ಎಂ. ಎಂ. ಕಲಬುರ್ಗಿ	ರೀಡರ್ ಕನ್ನಡ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ-3
19	ಹಂಪ ನಾಗರಾಜಯ್ಯ	ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560009
20	ಶ್ರೀ ಹೆಚ್. ದೇವೀರಪ್ಪ	52, 'ಹರಿಹರ', ಕಾರ್ಡ್ ರಸ್ತೆ ಹೊಸಹಳ್ಳಿ, ಬಡಾವಣೆ (ವಿಜಯನಗರ) ಬೆಂಗಳೂರು 560040

ಪ್ರಚಾರೋಪನ್ಯಾಸ ಮಾಲೆಯ ಪುಸ್ತಕಗಳು

1. ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2. ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3. ಭಯ–ಸರಳ ವಿಶ್ಲೇಷಣೆ	ಎಂ. ಶಿವರಾಂ
4. ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5. ಶಾಂತಿನಾಥ ಕವಿ	ಕಮಲಾ ಹಂಪನಾ
6. ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
7. ಬಯಲಾಟಗಳು	ಚಂದ್ರಶೇಖರ ಕಂಬಾರ
8. ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
9. ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
10. ಉಪಭಾಷೆ	ಕೃಷ್ಣ ಪರಮೇಶ್ವರ ಭಟ್ಟ
11. ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
12. ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚನ್ನಬಸಪ್ಪ
13. ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
14. ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
15. ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
16. ವಿವಾಹ ಪದ್ಧತಿಗಳು	ಎಸ್. ಕೆ. ರಾಮಚಂದ್ರರಾವ್
17. ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
18. ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿ ಶೆಟ್ಟಿ
19. ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
20. ದೂರ ದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
21. ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
22. ಕುರುಡು	ಎಸ್. ಟಿ. ಪುಟ್ಟಣ್ಣ
23. ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
24. ಕ್ಷಯ	ಎಂ. ಬಸವರಾಜೆ ಅರಸು
25. ಮೂತ್ರಪಿಂಡದ ಕೆಲವು ರೋಗಗಳು	ಎಂ. ಬಸವರಾಜೆ ಅರಸು
26. ಉಕ್ಕು: ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
27. ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
28. ಅಂತರ್ಜಲ	ಸಿ. ನಾಗಣ
29. ಪಂಪ	ತ. ಸು. ಶಾಮರಾಯ

ಬೆಂಗಳೂರು
ವಿಶ್ವವಿದ್ಯಾಲಯದ ಪ್ರಕಟಣೆಗಳ ವಿವರಗಳಿಗೆ
ದಯವಿಟ್ಟು ವ್ಯವಹರಿಸಿ :

ಕೋ - ಆರ್ಡಿನೇಟರ್
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - 560039

ಈಸ್ಟ್ಮನ್ ಪ್ರೆಸ್, ಬೆಂಗಳೂರು - 56002